ಸಂವಾದ

ಅಕ್ಟೋಬರ್ 2003 ರೂ. 20/- ಮಾಸ ಪತ್ರಿಕೆ



ಮುಖಾಮುಖಿ

ಪವಿತ್ರ ಗೋವು ಖಾದಿ ಧರಿಸುತ್ತಿದೆಯೇ ?

ಜಾಗತಿಕ ಗ್ರಾಮಕ್ಕೆ ಗೌಡ ಯಾರು ?

ಸಂವಾದ

ಮಾಸ ಪತ್ರಿಕೆ

ಸಂಪುಟ 1 ಸಂಚಿಕೆ 11
ಅಕ್ಟೋಬರ್ 2003

ಸಂಪಾದಕ :
ಇಂದೂಧರ ಹೊನ್ನಾಪುರ

ನೆರವು:
ಕೆ.ಪಿ. ದೊಡ್ಡಿ ಶಿವರಾಂ
ಹಾಲ್ಕುರಿಕೆ ಶಿವಶಂಕರ್
ಸುಬ್ಬು ಹೊಲೆಯಾರ್

ವಿಳಾಸ : ಸ್ಫೂರ್ತಿಧಾಮ
ಅಂಜನಾನಗರ, ಮಾಗಡಿರಸ್ತೆ,
ವಿಶ್ವನೀಡಂ ಅಂಚೆ
ಬೆಂಗಳೂರು - 560 091
ದೂರವಾಣಿ: 3287943 / 3281667

PRINTED AND PUBLISHED BY
S.R. GOVINDU
ON BEHALF OF SPOORTHIDHAMA
ANJANANAGAR, MAGADI ROAD
VISHWANEEDAM POST
BANGALORE - 560 091
PHONE : 3287932, 3281667

EDITOR :
INDUDHARA HONNAPURA

ಒಳ ಪುಟಗಳಲ್ಲಿ

- ಪತ್ರಗಳು 3
- ಮೇರಾ ಭಾರತ್ ಮಹಾನ್ 4
- ಅಂತರಂಗ 5
- ಬದುಕುವುದರಲ್ಲಿದೆ ಜೀವನದ ಅರ್ಥ 6
- ಜಾಗತಿಕ ಗ್ರಾಮಕ್ಕೆ ಗೌಡ ಯಾರು? 8
  - ಡಾ|| ರಂಗರಾಜ ವನದುರ್ಗ
- ಗಾಂಧಿ-ಅಂಬೇಡ್ಕರ್ ಮುಖಾಮುಖಿ 10
  - ಸಿ.ಬಿ. ಹೊನ್ನಯ್ಯ
- ಮುಖ್ಯವಾಹಿನಿಯೆಡೆಗೆ ದಲಿತರು 14
  - ಡಾ|| ಎಂ. ಮಹದೇವ
- ಚರಿತ್ರೆ ಪುನರ್ರಚನೆ ಮತ್ತು ಮಹಿಳೆ 16
  - ಡಾ|| ಬಸವರಾಜ ಸಬರದ
- ದಲಿತ್ ಡೈರಿ: 18
  - ಚಂದ್ರಭಾನ್ ಪ್ರಸಾದ್

- ಆರ್ಥಿಕ ಕ್ರಾಂತಿಯ ಹೊಸ ಪ್ರತಿಧ್ವನಿ 22
  - ವೆಂಕಟೇಶ್ ಆತ್ರೇಯ
- ಪವಿತ್ರ ಗೋವು ಖಾದಿ ಧರಿಸುತ್ತಿದೆಯೇ? 24
  - ದಾಸನೂರು ಕೂಸಣ್ಣ
- ದುರ್ಬಲ ರೋಗಿಗಳ ಧರ್ಮದ ಬಡಬಡಿಕೆ 28
  - ಸ್ವಾಮಿ ವಿವೇಕಾನಂದ
- ತಾರ್ಕಿಕ ಧರ್ಮ V/s ಅತಾರ್ಕಿಕ ಧರ್ಮ 32
  - ಗೇಲ್ ವೋಂವಿಡ್ತ್
- ಭಾರತದ ನ್ಯಾಯ ಉತ್ತಮವಾಗಿದೆಯೇ? 40
  - ರಾಜೀವ್ ಧವನ್

ಕವನಗಳು:

- ಅವ್ವ 13
- ಆಶಯ 35
- ಹೀಗೊಂದು ಪ್ರಭಾತ 36
- ಹಿಂದೂ ನಾವೆಲ್ಲಾ ಒಂದು 37

ಮುಖಪುಟ ವಿನ್ಯಾಸ: ರಾಥೋಡ್

ಜನತೆಯನ್ನು ಬಡಿದೆಬ್ಬಿಸುವ ಪ್ರಯತ್ನ

ಮಾನ್ಯ ಸಂಪಾದಕರೆ,

'ಸಂವಾದ'ಮಾಸಪತ್ರಿಕೆಯ ಎರಡೂ ಸಂಚಿಕೆಗಳನ್ನು ಓದಿರುವೆ. ಒಂದು ಸಂಚಿಕೆಯಿಂದ ಇನ್ನೊಂದು ಸಂಚಿಕೆಯಲ್ಲಿನ ವಿಷಯಗಳಲ್ಲಿ ಗಮನಾರ್ಹ ಉತ್ತಮ ಬದಲಾವಣೆ ಎದ್ದು ಕಾಣುತ್ತದೆ. ಇದ್ದದ್ದನ್ನು ಇದ್ದಂತೆ ಹೇಳುವ, ದೇಶ ವಿಭಜನಾ ಶಕ್ತಿ, ಸಮೂಹ ಮತ್ತು ವ್ಯಕ್ತಿಗಳನ್ನು ಖಂಡಿಸುವ ನಿಮ್ಮ ಜಾಯಮಾನ, ಯಾವುದೇ ವಿರೋಧದ ನಡುವೆ ನಿಲ್ಲದೇ ಸಾಗುತ್ತಿರಲಿ. ಜಾತಿ, ಧರ್ಮ, ಭಾಷೆ-ಇವುಗಳನ್ನು ಬಂಡವಾಳ ಮಾಡಿಕೊಂಡು ದೇಶವನ್ನು ವಿಭಜನೆ ಮಾಡುತ್ತಿರುವ ದುಷ್ಟ ಶಕ್ತಿ- ಸಂಘಟನೆಗಳಿಂದಾಗಿ

ಜನತೆಯ ಎದುರು ಕರಾಳಛಾಯೆಯೇ ಕವಿದಂತಿದೆ. ಇನ್ನು ಆರ್ಥಿಕ ಸುಧಾರಣೆ, ಜಾಗತೀಕರಣ ನೀತಿಯಿಂದಾಗಿ ಜನಸಾಮಾನ್ಯ, ಬಡ ಮತ್ತು ಮಧ್ಯಮ ವರ್ಗದ ಜನತೆ ದಿನೇದಿನೇ ನಿರ್ಗತಿಕರಾಗುತ್ತ ಹೋಗುತ್ತಿರುವುದು ವಿಷಾದನೀಯ. ಇಂತಹ ಪ್ರಸ್ತುತ ಪರಿಸ್ಥಿತಿಯಲ್ಲಿ ರಾಷ್ಟ್ರೀಯತೆ, ರಾಷ್ಟ್ರೀಯ ಏಕತೆಯನ್ನು ಸಾರುವ, ಈ ನಿಟ್ಟಿನಲ್ಲಿ ಜನತೆಯನ್ನು ಬಡಿದೆಬ್ಬಿಸುವ ಪ್ರಯತ್ನ ಮಾಡಿದೆ, ಮಾಡುತ್ತಿದೆ ನಿಮ್ಮ ಪತ್ರಿಕೆ. ಇನ್ನೂ ಅರ್ಥಪೂರ್ಣ, ವೈವಿಧ್ಯಮಯ ವಿಷಯಗಳು ಬರುತ್ತಿರಲಿ. ನಿಮಗೆ ವಂದನೆಗಳು, ಅಭಿನಂದನೆಗಳು

ಇ.ಎಸ್. ಅಂಬ್ಲರ್,
ಚಿಕ್ಕಮಗಳೂರು ಜಿಲ್ಲೆ

ರಿಯಾಲಿಟಿ ಪ್ರತಿಬಿಂಬಿಸುವ ಪತ್ರಿಕೆ

ಪ್ರೀತಿಯ ಸಂಪಾದಕರೇ,

ಎರಡು ತಿಂಗಳ ಹಿಂದೆ ಬೆಂಗಳೂರಿನಲ್ಲಿ ನಡೆದ ಪತ್ರಿಕಾ ಚಳುವಳಿಯ ವಾರ್ಷಿಕ ದಿನಾಚರಣೆ ಸಮಾರಂಭದ ಸಮಯದಲ್ಲಿ ಗೆಳೆಯ ಕೆ.ಸಿ. ಶಿವರಾಮರವರು 'ಸಂವಾದ' ಪತ್ರಿಕೆಯೊಂದನ್ನ ನನ್ನ ಕೈಗಿಟ್ಟರು. ಅದನ್ನ ಓದಿ ಸಮಾಜದ ರಿಯಾಲಿಟಿಯನ್ನ ಪ್ರತಿಬಿಂಬಿಸುವ ಪತ್ರಿಕೆಯೊಂದು ಈ ನಾಡಿನಲ್ಲಿ ಉದಯವಾಯಿತೆಂದು ಸಂತೋಷಪಟ್ಟೆ. ಈ ನೆಲದ ಶೋಷಿತ ಬಹುಸಂಖ್ಯಾತ ವರ್ಗಗಳ ಸಮಸ್ಯೆಗಳ ವಿವಿಧ ಮಗ್ಗುಲುಗಳನ್ನ ಬುದ್ಧಿಜೀವಿಗಳ ಬರಹಗಳು ಮತ್ತು ದೃಷ್ಟಿಕೋನಗಳು 'ಸಂವಾದ' ಪತ್ರಿಕೆಯ ಉದ್ದೇಶ ಮತ್ತು ಗುರಿಯನ್ನ ಎತ್ತಿ ತೋರಿಸುವಂತಿವೆ. ಈಗಲಾದರೂ ಇಂತಹ ಒಂದು ಪತ್ರಿಕೆ ಉದಯವಾಯಿತಲ್ಲ ಎಂದು ಭಾವಿಸುತ್ತಾ, ಇದಕ್ಕೋಸ್ಕರ ಹಗಲಿರುಳು ಶ್ರಮಿಸುತ್ತಿರುವ ಪತ್ರಿಕೆಯ ಗೆಳೆಯರಿಗೆ ಅಭಿನಂದಿಸಿ. ಪತ್ರಿಕೆ ಉತ್ತಮ ಭವಿಷ್ಯವನ್ನು ಪಡೆಯಲಿ ಎಂದು ಆಶಿಸುತ್ತೇನೆ.

ಡಾ. ಗುರುಲಿಂಗಯ್ಯ ಎಂ.,
ಮಂಗಳೂರು

ಮಹತ್ವದ ದಾಖಲೆ

ಆತ್ಮೀಯ ಬಂಧು ಹೊನ್ನಾಪುರ ಅವರಿಗೆ ವಂದನೆಗಳು,

'ಸಂವಾದ' ನೊಂದ ಜನಾಂಗದ ಮಹತ್ವದ ದಾಖಲೆಯಾಗಿದೆ. ತಮ್ಮ ಸಂಪಾದಕೀಯಗಳು (ಅಂತರಂಗ) ಪ್ರಸ್ತುತ ಸಮಸ್ಯೆಗಳಿಗೆ ಹಿಡಿದ ಕನ್ನಡಿಯಂತಿವೆ. ಇದು ಹೀಗೇ ಮುಂದುವರಿಯಲಿ.

ಡಾ|| ಬಸವರಾಜ ಸಬರದ,
ಗುಲಬರ್ಗಾ

ವಿಶಿಷ್ಟ ಪತ್ರಿಕೆ

ಮಾನ್ಯ ಇಂದೂಧರರಿಗೆ ನಮಸ್ಕಾರಗಳು,

'ಸಂವಾದ' ತನ್ನ ವಿಶಿಷ್ಟತೆಗಾಗಿ ಇಷ್ಟವಾಯಿತು. ಬಂಡವಾಳಶಾಹಿ ಫ್ಯಾಸಿಸ್ಟ್ ಶೋಷಣಾ ವಿಷಗಾಳಿಯಿಂದ ಹೊರಬರಲು ಜನಸಾಮಾನ್ಯ ತುಡಿಯುತ್ತಿದ್ದಾನೆ. ಆ ತುಡಿತಕ್ಕೆ ಪುಷ್ಠಿ ನೀಡಿ ಬೆಳೆಸಲು ಇಂದು 'ಸಂವಾದ'ದಂತಹ ಪತ್ರಿಕೆಗಳು ಅತೀ ಜರೂರಾಗಿ ಬೇಕಾಗಿದೆ. ಹಾಗೇ ಯುವ ಭಾವನೆಗಳಿಗೆ ವೇದಿಕೆಯಾಗಿ ಕೂಡಾ.

ಶ್ರೀಶ ಉಡುಪ, ಕಾರ್ಕಳ

ಪ್ರಸ್ತುತ ಸಂವಾದ

ಪ್ರಿಯ ಸಂಗಾತಿ ಶ್ರೀ ಇಂದೂಧರ ಹೊನ್ನಾಪುರ ಅವರಿಗೆ,
ಪ್ರೀತಿಯ ನಮಸ್ಕಾರಗಳು.

'ಸಂವಾದ'ವನ್ನು ಆರಂಭದಿಂದಲೂ ಗಮನಿಸುತ್ತಿರುವೆ. ಇದು ಇಂದು ಹುಟ್ಟುಹಾಕುತ್ತಿರುವ ವೈಚಾರಿಕ ಚಿಂತನೆಯ ವಾಗ್‌ಯುದ್ಧ ಅತ್ಯಂತ ಪ್ರಸ್ತುತವಾಗಿದೆ.

ಬೆರಳೆಣಿಕೆಯ ಸಾಹಿತ್ಯ ಮತ್ತು ವೈಚಾರಿಕ ಪತ್ರಿಕೆಗಳಲ್ಲಿ ಇಂದು 'ಸಂವಾದ'ಕ್ಕೂ ಸಾಂಸ್ಕೃತಿಕ ಜಾಗ ಸಿಕ್ಕಿದೆ. ಆದ್ದರಿಂದ ಪ್ರಗತಿಪರರೆಲ್ಲರೂ ಖುಷಿ ಪಡಬೇಕಾದ ಸಂಗತಿ.

ಎಪ್ಪತ್ತು ಮತ್ತು ಎಂಭತ್ತರ ದಶಕದ ಕರ್ನಾಟಕವನ್ನು ಮತ್ತೊಮ್ಮೆ ಸೃಷ್ಟಿಸುವ ಶಕ್ತಿ ಬಿಸಂವಾದಕ್ಕೆ ಲಭಿಸಲೆಬುಂದೇ ನನ್ನಂಥವರ ನಿರೀಕ್ಷೆ. ಅಂಬೇಡ್ಕರ್, ಮಾರ್ಕ್ಸ್ ಮತ್ತು ಲೋಹಿಯಾ ಚಿಂತಕರ ಚಿಂತನೆಗಳು ಮತ್ತೆ ಸಮಾವೇಶಗೊಳ್ಳಬೇಕಾಗಿದೆ.

ಇರಬಹುದಾದ ಮಿತಿಗಳನ್ನು ಮೀರುತ್ತಲೇ ಜೀವಪರ ನೆಲೆಗಳನ್ನು ಪ್ರೀತಿಸಬೇಕಿದೆ. ಜೊತೆಗೆ ಜೀವವಿರೋಧಿ ನೆಲೆಗಳನ್ನು ವಿರೋಧಿಸಬೇಕಿದೆ. ಏಕಕಾಲಕ್ಕೆ ನಡೆಸಬೇಕಾದ ಈ ಸ್ನೇಹ ಮತ್ತು ಸಂಘರ್ಷಗಳು 'ಸಂವಾದ'ಕ್ಕೆ ಶಕ್ತಿ ತುಂಬಲಿ.

ಡಾ|| ರಂಗರಾಜ ವನದುರ್ಗ,
ಕುವೆಂಪು ವಿ.ವಿ., ಶಿವಮೊಗ್ಗ

ಮೂಕ ನೋವಿಗೂ ದನಿಯಾಗಲಿ

ಪ್ರೀತಿಯ ಇಂದೂಧರ ಹೊನ್ನಾಪುರ,

'ಸಂವಾದ' ಗಟ್ಟಿದನಿಯ ದಿಟ್ಟಪತ್ರಿಕೆ. ಶೋಷಿತ ಜಗತ್ತಿನ ಎಲ್ಲ ದನಿಗಳೂ ಇದರಲ್ಲಿವೆ. ಅಮಾಯಕ, ಅನಕ್ಷರಸ್ಥ ಹೆಣ್ಣುಮಕ್ಕಳ ಮೂಕ ನೋವಿಗೂ ಈ ಪತ್ರಿಕೆ ದನಿಯಾಗಲಿ ಅಂತ ಹಾರೈಕೆ. ಒಡೆದು ಹೋಳಾಗಿರುವ ದಲಿತ ಗುಂಪುಗಳನ್ನು ಒಗ್ಗೂಡಿಸುವ ಖರೇ ಕಳಕಳಿಯ ಪ್ರಯತ್ನವನ್ನೂ 'ಸಂವಾದ' ಮಾಡಬೇಕೆಂದು ನನ್ನ ಕಕ್ಕುಲತೆಯ ಕೋರಿಕೆ.

ಪತ್ರಿಕೆಗೆ ಎಲ್ಲ ಶುಭ ಮತ್ತು ಯಶಸ್ಸುಗಳಿರಲಿ.

ಗೀತಾ ನಾಗಭೂಷಣ, ಗುಲಬರ್ಗಾ

ಶ್ರಮಕ್ಕೆ ನಮಸ್ಕಾರ

ಇಂದೂಧರ ಹೊನ್ನಾಪುರರವರಿಗೆ,

ನೀವು ತರುತ್ತಿರುವ 'ಸಂವಾದ' ಮಾಸಪತ್ರಿಕೆಗಳನ್ನು ಸ್ನೇಹಿತರಿಂದ ಪಡೆದು ಓದುತ್ತಿದ್ದೆ. ಎಲ್ಲಾ ಲೇಖನಗಳು ವಿಚಾರ ಪೂರ್ಣ ಲೇಖನಗಳು. ನಿಮ್ಮ ಶ್ರಮಕ್ಕೆ ನಮಸ್ಕಾರಗಳು. ಮುಂದಿನ ಸಂಚಿಕೆಯಿಂದ ಪತ್ರಿಕೆಯನ್ನು ನನ್ನ ವಿಳಾಸಕ್ಕೆ ಕಳುಹಿಸಿಕೊಡಿ. ಚಂದಾದಾರನಾಗಲು ನೂರು ರೂ.ಗಳನ್ನು ಎಂ.ಓ ಮಾಡುತ್ತೇನೆ.

ಎಸ್. ಸಿದ್ದರಾಜು, ಮೈಸೂರು

ಸುಳ್ಳು ಜಾತಿ ಪತ್ರ : ನಾಲ್ವರ ಸೀಟು ರದ್ದು

ಬೆಂಗಳೂರು, ಸೆ. 22 : ಸಿಇಟಿ ಸೀಟು ಆಯ್ಕೆ ಪ್ರಕ್ರಿಯೆ ವೇಳೆ ಸುಳ್ಳು ಜಾತಿ ಪ್ರಮಾಣ ಪತ್ರ ಒದಗಿಸಿ ವೈದ್ಯಕೀಯ ಸೀಟು ಗಳಿಸಿಕೊಂಡಿದ್ದ ನಾಲ್ವರು ಅಭ್ಯರ್ಥಿಗಳ ಸೀಟುಗಳನ್ನು ರದ್ದುಗೊಳಿಸಲಾಗಿದೆ.

ರೇಣುಕಾ ಪ್ರಸಾದ್ ಎ.ಆರ್., ನವಿಕಲಾ ಕೆ., ಅಭಿಲಾಶ್ ಮತ್ತು ಸುಬ್ರಹ್ಮಣ್ಯ ಸುಳ್ಳು ಜಾತಿ ಪ್ರಮಾಣ ಪತ್ರ ನೀಡಿದವರಾಗಿದ್ದಾರೆ. ಈ ನಾಲ್ಕು ಸೀಟುಗಳನ್ನು ಕ್ಯಾಷ್ಯುವೆಲ್ ಸೀಟು ಆಯ್ಕೆ ಪ್ರಕ್ರಿಯೆ ವೇಳೆ ವಿತರಿಸಲಾಗುವುದು ಎಂದು ಸಿಇಟಿ ಮೂಲಗಳು ತಿಳಿಸಿವೆ.

ಕ್ಯಾಷ್ಯುವೆಲ್ ಹಂತದ ಸೀಟುಗಳು: ಮಂಗಳವಾರದಿಂದ ಕ್ಯಾಷ್ಯುವೆಲ್ ಹಂತದ ಸೀಟುಗಳ ಆಯ್ಕೆ ಪ್ರಕ್ರಿಯೆ ಆರಂಭವಾಗಲಿದೆ. ಕರ್ನಾಟಕ ವೈದ್ಯಕೀಯ ರ್‍ಯಾಂಕು, ಒಂದರಿಂದ 5,000ದ ವರೆಗಿನ ಅಭ್ಯರ್ಥಿಗಳು ಲಭ್ಯವಿರುವ ಸೀಟುಗಳ ಆಯ್ಕೆ ಪ್ರಕ್ರಿಯೆಯಲ್ಲಿ ಭಾಗವಹಿಸಬಹುದು ಎಂದು ಸಿಇಟಿ ಮೂಲಗಳು ತಿಳಿಸಿವೆ.

(ಜನವಾಹಿನಿ)

ದಲಿತ ಮಹಿಳೆಗೆ ಅವಮಾನ

ಹೊಳೆನರಸೀಪುರ, ಸೆ.23 : ತಾಲೂಕಿನ ಅಂಕವಳ್ಳಿ ಗ್ರಾಮದಲ್ಲಿ ದಲಿತ ಮಹಿಳೆ ಲಕ್ಷ್ಮಿ ಎಂಬಾಕೆಯನ್ನು ಥಳಿಸಿ ಸೀರೆ ಎಳೆದು ಅವಮಾನಗೊಳಿಸಲಾಗಿದೆ.

ಈ ಗ್ರಾಮದ ಬಿಸಿ ಊಟ ವ್ಯವಸ್ಥೆಗೆ ದಲಿತ ಮಹಿಳೆ ರಾಧಾಮಣಿ ಎಂಬಾಕೆಯನ್ನು ಅಡಿಗೆ ಸಹಾಯಕಿಯಾಗಿ ನೇಮಕ ಮಾಡಿಕೊಳ್ಳಬೇಕು ಎನ್ನುವ ಆದೇಶ ಇದ್ದರೂ ಇದೇ ಗ್ರಾಮದ ರಮೇಶ್, ಜೈಕುಮಾರ, ಶಿವಪ್ಪ ಅಣ್ಣಾಜಿ ಮತ್ತಿತರರು ಇದಕ್ಕೆ ವಿರೋಧ ವ್ಯಕ್ತಪಡಿಸಿದ್ದರು.

ಈ ಸಂಬಂಧ ರಾಧ ಅವರ ತಾಯಿ ಲಕ್ಷ್ಮಿ ಎಂಬಾಕೆ ಈ ಗುಂಪಿನವರನ್ನು ಪ್ರಶ್ನಿಸಿ ತಮ್ಮ ಮಗಳನ್ನು ನೇಮಕ ಮಾಡಿಕೊಳ್ಳಲು ಆಗ್ರಹಿಸಿದ್ದಕ್ಕೆ ಆಕೆಯನ್ನು ನಿಂದಿಸಲಾಗಿತ್ತು.

(ಜನವಾಹಿನಿ)

ಮಹಿಳೆಯರ ಶೋಷಣೆಗೆ ಕೊನೆ ಇಲ್ಲ

ನವ ದೆಹಲಿ, ಸೆ. 21 - ಕೇವಲ ನೂರಾರು ರೂಪಾಯಿಗಳಿಗಾಗಿ ಲೈಂಗಿಕ, ಮಾನಸಿಕ ಶೋಷಣೆಗೆ ಒಳಗಾಗಿರುವ 12 ವರ್ಷ ವಯಸ್ಸಿನ ಮೀನಾಕ್ಷಿಗೆ (ಹೆಸರು ಬದಲಾವಣೆ ಮಾಡಲಾಗಿದೆ), ಸುರಕ್ಷತೆ ಹಾಗೂ ಭದ್ರತೆ ಇಲ್ಲವಾಗಿವೆ.

ತಮ್ಮದೇ ತಪ್ಪು ಇಲ್ಲದ ನತದೃಷ್ಟ ಮಕ್ಕಳಲ್ಲಿ ಆಕೆಯೂ ಒಬ್ಬಳಾಗಿದ್ದಾಳೆ. ಪ್ರತಿವರ್ಷ ನಾಲ್ಕು ದಶಲಕ್ಷಕ್ಕೂ ಹೆಚ್ಚು ಮಹಿಳೆಯರು ಮತ್ತು ಮಕ್ಕಳು ಕಳ್ಳಸಾಗಣೆಗೆ ಒಳಗಾಗುತ್ತಾರೆ ಎಂದು ಮಾನವ ಕಳ್ಳಸಾಗಣೆ ತಡೆಯುವಿಕೆ ಮತ್ತು ಪುನರ್ವಸತಿಗಾಗಿ ದುಡಿಯುತ್ತಿರುವ ಸರ್ಕಾರೇತರ ಸಂಸ್ಥೆಯ ಅಂದಾಜು ತಿಳಿಸಿದೆ.

ಜಾಗತಿಕವಾಗಿ ಮಾದಕ ವಸ್ತು ಮತ್ತು ಶಸ್ತ್ರಾಸ್ತ್ರ ಕಳ್ಳಸಾಗಣೆ ನಂತರ ಮಾನವ ಕಳ್ಳಸಾಗಣೆಯು ಮೂರನೇ ಅತಿದೊಡ್ಡ ದಾದುದಾಗಿದ್ದು ಏಳು ಶತಕೋಟಿ ಡಾಲರ್ ಮೌಲ್ಯದ್ದಾಗಿದೆ ಎಂದು ಬಾಲಾಪರಾಧಿಗಳಿಗೆ ನ್ಯಾಯ ಒದಗಿಸುವ ಸರ್ಕಾರೇತರ ಸಂಸ್ಥೆಯಾದ 'ಪ್ರಯಾಸ್'ನ ರಾಜೀವ್ ಕೆ. ಹಾಲ್ದಾರ್ ತಿಳಿಸಿದ್ದಾರೆ.

ನಾಲ್ಕು ದಶಲಕ್ಷ ಮಂದಿ ಮಾನವ ಕಳ್ಳಸಾಗಣೆಗೆ ಒಳಗಾಗುತ್ತಿದ್ದು ಇವರಲ್ಲಿ ಶೇ. 40ರಷ್ಟು ಜನರು 18 ವರ್ಷಕ್ಕಿಂತ ಒಳಗಿನವರಾಗಿದ್ದಾರೆ ಎಂದೂ ಅವರು ಹೇಳಿದ್ದಾರೆ.

(ಸಂಯುಕ್ತ ಕರ್ನಾಟಕ)

ಮೇರಾ ಭಾರತ್ ಮಹಾನ್

ಸರಕಾರಿ ನೌಕರರ ರಜೆಗಳು ಇಲ್ಲಿ ಮಾರಾಟಕ್ಕಿವೆ!

ಬೆಂಗಳೂರು, ಸೆ.22: ಕೇವಲ ಐವತ್ತು ರೂ.ಗಳನ್ನು ಪಾವತಿ ಮಾಡಿದರೆ ಸಾಕು ಎರಡು ದಿನಗಳ ರಜೆ ಸುಲಭವಾಗಿ ದೊರಕುತ್ತದೆ. ಇದಕ್ಕೆ ಇನ್ನೆರಡು ಸರಕಾರಿ ರಜೆ ಸಿಗುತ್ತದೆ. ಒಟ್ಟು ನಾಲ್ಕು ದಿನ ರಜೆಯ ಮಜೆ ಅನುಭವಿಸಬಹುದು!

ಒಟ್ಟಾರೆ ಇದರರ್ಥ ಸರಕಾರಿ ನೌಕರರ ರಜೆಗಳು ಇಲ್ಲಿ ಮಾರಾಟಕ್ಕಿವೆ.

ಮಂಡ್ಯದಲ್ಲಿ ಸೆ.26ರಂದು ನಡೆಯುವ ರಾಜ್ಯ ಸರಕಾರಿ ನೌಕರರ ಸಮಾವೇಶದಲ್ಲಿ ಭಾಗವಹಿಸುವವರಿಗೆ ಎರಡು ದಿನಗಳ ವಿಶೇಷ ಕರ್ತವ್ಯ (ಒಒಡಿ) ಸೌಲಭ್ಯ ನೀಡಲಾಗುತ್ತದೆ. ಇದಕ್ಕೆ ಐವತ್ತು ರೂ.ಗಳ ನೋಂದಣಿ ಶುಲ್ಕ ಪಾವತಿ ಮಾಡಬೇಕು ಅಷ್ಟೇ.

ವಾಸ್ತವವಾಗಿ ಸಮ್ಮೇಳನದಲ್ಲಿ ಭಾಗವಹಿಸುವ ನೌಕರರು ಸಮ್ಮೇಳನ ನಡೆಯುವ ಸ್ಥಳದಲ್ಲಿ ಒಒಡಿ ಪ್ರಮಾಣಪತ್ರ ಪಡೆಯಬೇಕು. ಆಗ ನೌಕರರು ನಿಜಕ್ಕೂ ಸಮ್ಮೇಳನದಲ್ಲಿ ಭಾಗವಹಿಸಿದ್ದಾರೆ ಎಂಬುದು ಖಾತರಿಯಾಗುತ್ತದೆ.

ಆದರೆ ಈಗ ನೌಕರರು ಐವತ್ತು ರೂ.ಪಾವತಿ ಮಾಡುತ್ತಿದ್ದಂತೆ ಒಒಡಿ ಪ್ರಮಾಣಪತ್ರ ನೀಡಲಾಗುತ್ತಿದೆ. ಒಂದರ್ಥದಲ್ಲಿ ಇದು ರಜೆಗಳ ಮಾರಾಟದಂತೆ ಸರಕಾರ ನೀಡುವ ಒಒಡಿ ಸೌಲಭ್ಯದ ದುರುಪಯೋಗ ಕೂಡ ಆಗಿದೆ ಎಂಬ ಆರೋಪ ಕೇಳಿ ಬರುತ್ತಿದೆ.

ನೌಕರರ ಸಂಘದ ಪದಾಧಿಕಾರಿಗಳು ನೌಕರರ ಬಳಿಯಲ್ಲಿ ಮೊದಲೆ ನೀವು ಸಮ್ಮೇಳನದಲ್ಲಿ ಭಾಗವಹಿಸದಿದ್ದರೂ ಪರವಾಗಿಲ್ಲ, ಐವತ್ತು ರೂ. ಪಾವತಿ ಮಾಡಿದರೆ ಸಾಕು. ನಿಮಗೆ ಇಲ್ಲೆ ದಾಖಲೆ ನೀಡಲಾಗುತ್ತದೆ ಎಂದು ಹೇಳಿಯೆ ಹಣ ಪಡೆಯುತ್ತಿದ್ದಾರೆ.

ಆದರೆ ಇದಕ್ಕೆ ನೀಡುವ ರಸೀದಿಗಳ ಬಗ್ಗೆ ಅನೇಕ ನೌಕರರು ಅನುಮಾನ ವ್ಯಕ್ತಪಡಿಸಲಾರಂಭಿಸಿದ್ದಾರೆ. ಆದರೆ ಇನ್ನೂ ಕೆಲವರು ನಾಲ್ಕು ದಿನ ರಜೆ ಅನುಭವಿಸಬಹುದೆಂಬ ಕಾರಣಕ್ಕಾಗಿ ಐವತ್ತು ರೂ. ವೆಚ್ಚ ಮಾಡಲು ಹಿಂದೇಟು ಹಾಕುತ್ತಿಲ್ಲ. ನಾಲ್ಕು ದಿನ ರಜೆ ಸಿಗುವಾಗ ಐವತ್ತು ರೂ. ವೆಚ್ಚವಾದರೆ ಏನಂತೆ. ನಾಲ್ಕು ದಿನ ನಮ್ಮ ಕೆಲಸ ಮಾಡಿಕೊಳ್ಳಬಹುದು ಎಂಬ ಅಭಿಪ್ರಾಯ.

(ಜನವಾಹಿನಿ)

ಯುವ ಪ್ರೇಮಿಗಳ ಆತ್ಮಹತ್ಯೆ

ನೆಲಮಂಗಲ, ಸೆ. 26 : ಬೆಂಗಳೂರಿನ ಖಾಸಗಿ ಕಾರ್ಖಾನೆಗಳಲ್ಲಿ ಕೆಲಸ ನಿರ್ವಹಿಸುತ್ತಿದ್ದ ಅಂತರ್‌ಜಾತಿಯ ತರುಣ ಯುವ ಪ್ರೇಮಿಗಳು ಮೊದಲು ವಿಷ ಪ್ರಾಶನ ಮಾಡಿ ನಂತರ ಯುವತಿ ಧರಿಸಿದ್ದ ದಾವಣಿಯಿಂದ ಇಬ್ಬರು ಕುತ್ತಿಗೆಗೆ ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ದಾಬಸ್ ಪೇಟೆ ಪೊಲೀಸ್ ಠಾಣೆ ವ್ಯಾಪ್ತಿಯ ಬೀರಗೊಂಡನಹಳ್ಳಿಯಲ್ಲಿ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಮೃತರನ್ನು ಬೀರಗೊಂಡನಹಳ್ಳಿಯ ಯುವಕ ಅಶೋಕ್ ಕುಮಾರ್ (24), ಕಾಮಾಕ್ಷಿ ಪಾಳ್ಯದ ಆಶಾ (18) ಎಂದು ಗುರ್ತಿಸಲಾಗಿದೆ.

ಅಂತರ್‌ಜಾತಿ ವಿವಾಹಕ್ಕೆ ಪೋಷಕರು ಅಡ್ಡಿಪಡಿಸಬಹುದು ಎಂಬ ಶಂಕೆಯಿಂದ ಈ ರೀತಿಯ ಆತ್ಮಹತ್ಯೆ ಮಾಡಿಕೊಂಡಿರ ಬಹುದು ಎಂದು ಪೊಲೀಸರು ತಿಳಿಸಿದ್ದಾರೆ.

(ಕನ್ನಡ ಪ್ರಭ)

ಅಂತರಂಗ

ವಿಕೃತ ಮನಸ್ಸಿನ ನಸುಗುನ್ನಿ



'ಭಾರತ ಒಂದು ಕಾಡಿನಂತಿದೆ. ನಾಗರಿಕ ಜೀವನ ನಡೆಸಲು ಸಾಧ್ಯವಾಗುವಂತೆ ಭಾರತವನ್ನು ಬದಲಾಯಿಸಬೇಕಾಗಿದೆ'. ಅಂಬೇಡ್ಕರ್ ಅವರು 1956ರ ಅಕ್ಟೋಬರ್ 14ರಂದು ಹೇಳಿದ ಮಾತಿದು.

ಅಂಬೇಡ್ಕರ್ ಬೌದ್ಧಧಮ್ಮ ಸ್ವೀಕರಿಸಿದ ಸಂದರ್ಭದಲ್ಲಿ ಹೇಳಿದ ಈ ಮಾತನ್ನು 47 ವರ್ಷಗಳ ನಂತರ ಮತ್ತಷ್ಟು ಒತ್ತು ಕೊಟ್ಟು ಹೇಳಬೇಕಾದ ಅನಿವಾರ್ಯತೆ ಈಗ ಇದೆ. ಏಕೆಂದರೆ ಈ ನಲವತ್ತೇಳು ವರ್ಷಗಳಲ್ಲಿ ಕಾಡು ಗೊಂಡಾರಣ್ಯವಾಗಿ ಬೆಳೆದಿದೆ. ನರಭಕ್ಷಕರು-ರಕ್ತಪಿಪಾಸುಗಳು ಇಡೀ ಕಾಡನ್ನು ಆವರಿಸಿಕೊಂಡಿದ್ದು, ಸಹಜ ಮಾನವರು ಉಸಿರಾಡಲೂ ಕಷ್ಟವಾಗುತ್ತಿದೆ!

ತೊಗಾಡಿಯಾ-ಸಿಂಘಾಲ್‌ಗಳಂಥ ಘೋಷಿತ ನರಭಕ್ಷಕರಿಗಿಂತ ವಾಜಪೇಯಿ-ಅಡ್ವಾಣಿಗಳಂಥ ಗೋಮುಖವ್ಯಾಘ್ರಗಳು ಹೆಚ್ಚು ಅಪಾಯಕಾರಿಗಳಾಗಿದ್ದಾರೆ. ಭೈರಪ್ಪ ಅವರಂಥ ನಸುಗುನ್ನಿಗಳಂತೂ ಇಡೀ ಮನುಕುಲಕ್ಕೇ ವಿಷಪ್ರಾಶನ ಮಾಡಿಸಲು ತುದಿಗಾಲ ಮೇಲೆ ನಿಂತಿದ್ದಾರೆ. ಸಾಹಿತ್ಯ-ಸಂಸ್ಕೃತಿ-ಧರ್ಮದ ಹೆಸರಿನಲ್ಲಿ ಮಾನವೀಯತೆಯ ಮೇಲೆ ನಡೆಯುತ್ತಿರುವ ಧಾಳಿ ಅತ್ಯಂತ ಭೀಕರವಾಗುತ್ತಿದೆ.

'ಬೌದ್ಧಧಮ್ಮ ಜೀವವಿರೋಧಿಯಾಗಿದೆ ಹಾಗೂ ವೈದಿಕ ಧರ್ಮ ಜೀವಪರವಾಗಿದೆ' ಎಂದು ಭೈರಪ್ಪ ಎನ್ನುವ ಸಾಂಸ್ಕೃತಿಕ ಭಯೋತ್ಪಾದಕ ಸಾಹಿತಿ ಹೇಳಿದ್ದಕ್ಕಾಗಿ ಇಷ್ಟೆಲ್ಲ ಪೂರ್ವಪೀಠಿಕೆ ನೀಡಬೇಕಾಗಿದೆ. ಎಪ್ಪತ್ತರ ದಶಕದಿಂದಲೂ ತನ್ನ ಕೃತಿಗಳ ಮೂಲಕ ಮಾನವೀಯತೆಯ ಮೇಲೆ ನಿರಂತರ ಹಲ್ಲೆ ಮಾಡುತ್ತಲೇ ಬಂದಿರುವ ಈ ಭೈರಪ್ಪ, ಶಂಕರಾಚಾರ್ಯರ ವಾರಸುದಾರಿಕೆ ವಹಿಸಿರುವ ಬಗ್ಗೆ ಇಡೀ ನಾಡಿಗೇ ತಿಳಿದಿದೆ. ಆದರೆ ಬೌದ್ಧ ಧಮ್ಮವನ್ನು ಜೀವವಿರೋಧಿ ಎನ್ನುವ ಮೂಲಕ ಆತ ತಾನೆಷ್ಟು ಕುಬ್ಜ ಎನ್ನುವುದನ್ನು ನಿಖರವಾಗಿ ಸಾಬೀತುಗೊಳಿಸಿದ್ದಾರೆ.

ಭೈರಪ್ಪನವರ ಇಡೀ ಸಾಹಿತ್ಯವೇ ಜೀವವಿರೋಧಿ ನೆಲೆಗಳಿಂದ ತುಂಬಿದೆ. ವಿಕಾರ-ವಿಕೃತಿ-ಕಾಮಕೇಳಿ-ನಿರಾಶವಾದ-ಧರ್ಮಭ್ರಷ್ಟತೆ ಅನೈತಿಕತೆ- ಇವೇ ಅವರ ಕೃತಿಗಳ ಬಂಡವಾಳ. ವಿಕೃತ ಮನಸ್ಸುಗಳನ್ನಷ್ಟೆ ಸಂತೃಪ್ತಗೊಳಿಸುವ ಭೈರಪ್ಪ, ನಾಡಿನ ಅತ್ಯಂತ ಕುಖ್ಯಾತ ಸಾಹಿತಿ. ಜನರನ್ನು ದಾರಿತಪ್ಪಿಸುವ ಕೆಲಸವನ್ನು ಬಹುಜಾಣ್ಮೆಯಿಂದ ತಮ್ಮ ಕೃತಿಗಳ ಮೂಲಕ ಸಾಧಿಸುತ್ತಿದ್ದಾರೆ. ಅದರ ಮುಂದುವರೆದ ಭಾಗವೇ ಬೌದ್ಧಧಮ್ಮದ ಬಗೆಗಿನ ಅವರ ಆರೋಪ.

ಬೌದ್ಧಧಮ್ಮ ಭಾರತದಿಂದ ಹೊರಹೋಗಲು ಅದರ ತತ್ವಗಳು ಜೀವಪರವಾಗಿಲ್ಲದಿರುವುದೇ ಕಾರಣ ಎನ್ನುವ ಭೈರಪ್ಪನವರಿಗೆ, ವೈರಾಗ್ಯ ಮತ್ತು ಬದುಕಿನ ನಡುವಿನ ಕನಿಷ್ಟ ತಿಳುವಳಿಕೆ ಕೂಡ ಇಲ್ಲದಿರುವುದು ಸ್ಪಷ್ಟವಾಗುತ್ತದೆ. 'ಆಸೆಯೇ ದುಃಖಕ್ಕೆ ಕಾರಣ' ಎಂದ ಬುದ್ಧನ ಮಾತು ವೈರಾಗ್ಯವಾದರೆ, 'ಅಲ್ಲಿರುವುದು ನಮ್ಮನೆ-ಇಲ್ಲಿರುವುದು ಸುಮ್ಮನೆ' ಎನ್ನುವ ಪಲಾಯನವಾದ ಏನೆನ್ನಿಸುತ್ತದೆಂದು ಬಲ್ಲವರೇ ಹೇಳಬೇಕು. ಬದುಕು ನಶ್ವರ-ಮಿಥ್ಯೆ ಅಂದೆಲ್ಲ ಬೊಗಳೆ ಬಿಟ್ಟ ಶಂಕರಾಚಾರ್ಯರ ವೈದಿಕ ಧರ್ಮದಲ್ಲಿ ಜೀವಪರವಾದ ಯಾವ ಅದ್ಭುತವನ್ನು ಭೈರಪ್ಪ ಗುರುತಿಸಿದರೋ ಅವರೇ ಹೇಳಬೇಕು!

ಭೈರಪ್ಪನವರು ಪ್ರತಿಪಾದಿಸಿದ ವೈದಿಕಧರ್ಮ ಇಡೀ ಬದುಕನ್ನೇ ನಿಷ್ಚೇಷ್ಟಿತಗೊಳಿಸುವ ವಿಕೃತ ಧರ್ಮ. ಎಲ್ಲ ಜೀವಪರ ನೆಲೆಗಳ ನಾಶಪಡಿಸುವ, ಜೀವಪರ ಆಶಯಗಳನ್ನು ವಿಧ್ವಂಸಗೊಳಿಸುವ ನಯವಂಚಕರ ಧರ್ಮ. ಬೌದ್ಧ-ಮುಸ್ಲಿಂ-ಕ್ರೈಸ್ತ ಮೊದಲಾದ ಯಾವುದೇ ಧರ್ಮಗಳಲ್ಲಿಲ್ಲದ ಅಪಾರ ಅಂಧಶ್ರದ್ಧೆ, ಮೂಢನಂಬಿಕೆ, ಆಷಾಡಭೂತಿತನ, ವಂಚನೆ ತುಂಬಿರುವ ಧರ್ಮ ವೈದಿಕ ಧರ್ಮ. ಇಡೀ ಜಗತ್ತೇ ವೈದಿಕಧರ್ಮದ ಒಳಸುಳಿಗಳನ್ನು ಅರಿತು ಅದನ್ನು ತಿರಸ್ಕರಿಸಿರುವಾಗ ಬೆರಳೆಣಿಕೆಯ ವೈದಿಕರ ಪರವಾಗಿ ಭೈರಪ್ಪ ವಾದಿಸುತ್ತಿರುವುದು ಹಾಸ್ಯಾಸ್ಪದವಾಗಿದೆ.

ಬೌದ್ಧಧಮ್ಮ ಮತ್ತು ಇತರೆ ಧರ್ಮಗಳ ನಡುವೆ ಅಪಾರ ಅಂತರವಿದೆ. ವೈದಿಕ ಧರ್ಮವೂ ಸೇರಿದಂತೆ ಪ್ರಪಂಚದ ಎಲ್ಲ ಧರ್ಮಗಳು ಮನಸ್ಸು ಮತ್ತು ದೇವರ ನಡುವಿನ ಸಂಬಂಧಕ್ಕೆ ಹೆಚ್ಚು ಒತ್ತುಕೊಟ್ಟಿವೆ. ಬೌದ್ಧಧಮ್ಮ ಈ ಕಪೋಲ ಕಲ್ಪಿತ ವಿಚಾರವನ್ನು ತಿರಸ್ಕರಿಸುತ್ತದೆ. ದೇವರು ಮತ್ತು ಆತ್ಮದ ಕಲ್ಪನೆಗೆ ಬೌದ್ಧಧಮ್ಮದಲ್ಲಿ ಅವಕಾಶವೇ ಇಲ್ಲ. ಪ್ರಪಂಚದ ಪ್ರತಿಯೊಂದು ಆಗು-ಹೋಗುಗಳಿಗೂ ಕಾರ್ಯಾಕಾರಣ ಸಂಬಂಧವನ್ನು ಗುರುತಿಸಿ, ಅದರ ನೆಲೆಯಲ್ಲಿ ಪರಿಹಾರ ಕಂಡುಕೊಳ್ಳುವುದು ಬೌದ್ಧಧಮ್ಮದ ಅಂತಃಸತ್ವ. ದುಃಖಪೀಡಿತರ ಉನ್ನತಿಯೇ ಬೌದ್ಧಧಮ್ಮದ ಮೂಲತತ್ವ. ಆದಿ-ಮಧ್ಯ-ಅಂತ್ಯದಲ್ಲಿ ಕಲ್ಯಾಣ ಸಾಧಿಸುವುದೇ ಅದರ ಗುರಿ. ಇಂಥ ಧರ್ಮದಲ್ಲಿ ಜೀವವಿರೋಧಿ ಅಂಶಗಳನ್ನು ಕಂಡುಕೊಂಡ ಮನಸ್ಸುಗಳಿಗೆ ಏನೆನ್ನಬೇಕು.

ಬೌದ್ಧಧಮ್ಮ ಎಷ್ಟು ಜೀವಪರವಾಗಿತ್ತು ಎಂಬುದಕ್ಕೆ ಆ ಕಾಲದ ಸಾಮಾಜಿಕ ಬದುಕನ್ನೇ ಅವಲೋಕಿಸಬೇಕು. ಇಡೀ ಜಗತ್ತಿನಲ್ಲೇ ಅತ್ಯಂತ ಸಮೃದ್ಧ ಸಮಾಜ ಬುದ್ಧನ ಕಾಲದಲ್ಲಿತ್ತು. ಜನ ಅತ್ಯಂತ ನೆಮ್ಮದಿಯ ಜೀವನ ನಡೆಸುತ್ತಿದ್ದರು. ಆಗಿನ ಭಾರತೀಯ ಸಮಾಜ ಇಡೀ ಪ್ರಪಂಚಕ್ಕೆ ಆದರ್ಶವಾಗಿತ್ತು. ಮುಸ್ಲಿಮರ ಆಕ್ರಮಣ ಹಾಗೂ ಶಂಕರಾಚಾರ್ಯ ಪಡೆಯ ಗುಂಡಾಗಿರಿಯಿಂದಾಗಿ ಕ್ರಮೇಣ ಬೌದ್ಧ ಧಮ್ಮ ನಶಿಸುತ್ತಾ ಹೋದಂತೆ ಇಡೀ ಭಾರತ ನಿರ್ಗತಿಕವಾಗುತ್ತಾ ಬಂತು. ಬಡತನ-ದಾರಿದ್ರ್ಯಗಳು ತುಂಬಿಕೊಂಡವು. ಅವೈಜ್ಞಾನಿಕ ಆಚಾರಗಳೇ ವೈಚಾರಿಕ ತತ್ವಗಳಾಗಿ ಇಡೀ ಸಮಾಜ ಅವನತಿಯತ್ತ ಸಾಗಿತು. ಇತಿಹಾಸ ಬಲ್ಲ ಎಲ್ಲರೂ ತಿಳಿದಿರುವ ಈ ತತ್ವಗಳು ಭೈರಪ್ಪನವರ ವೈದಿಕ ಜಾಣ್ಮೆಗೆ ಹೊಳೆಯದಿರುವುದು ಎಂಥ ಸೋಜಿಗ!

ಬೌದ್ಧಧಮ್ಮದಲ್ಲಿ ಆಷಾಡಭೂತಿತನಕ್ಕೆ ಅಶಕಾಶವಿಲ್ಲ. ಮೇಲು ಕೀಳಿನ ಅಸಮಾನತೆಗೆ ಜಾಗ ಇಲ್ಲ. ಸದಾ ಪರಿವರ್ತನೆಗೆ ಒಡ್ಡಿಕೊಳ್ಳುವ, ಔದಾರ್ಯತೆ ಇರುವುದು ಬೌದ್ಧಧಮ್ಮದಲ್ಲಿ ಮಾತ್ರ. ಸಮಾಜದ ಸ್ಥಾಪಿತ ಹಿತಾಸಕ್ತಿಗಳು ಹಾಗೂ ಯಥಾಸ್ಥಿತಿವಾದಿಗಳ ವ್ಯಾಪ್ತಿಯನ್ನು ಮೀರಿ ಬೆಳೆದ, ಜನ ಭಾಷೆಯಲ್ಲಿ ಜನರ ನೋವಿಗೆ ಸ್ಪಂದಿಸಿದ ಧರ್ಮ ಅದು. ಭೈರಪ್ಪನವರ ಜಾತಿರೋಗಗ್ರಸ್ಥ ಮನಸ್ಸಿಗೆ ಅಥವಾ ಜಾಣ ಕುರುಡು ಕಣ್ಣಿಗೆ ಇದು ಕಾಣಿಸದಿದ್ದರೆ ಅದಕ್ಕೆ ಮರುಕಪಡಬೇಕಷ್ಟೆ.

ಭೈರಪ್ಪನವರಂಥವರು ಏನೇ ಬೊಗಳೆಬಿಟ್ಟರೂ ಬೌದ್ಧಧಮ್ಮದ ಔನ್ನತ್ಯ ಕಡಿಮೆಯಾಗುವುದಿಲ್ಲ. ಅದು ಜಾಗತಿಕ ಧರ್ಮ. ಬೆರಳೆಣಿಕೆಯ ಪುರೋಹಿತರ ಕುಹಕ ನುಡಿಗಳಿಗೆ ತಿರಸ್ಕಾರವೇ ಯೋಗ್ಯ! ಜಗತ್ತಿನ ಮೊದಲ ಸಮಾಜ ವಿಜ್ಞಾನಿ ಬುದ್ಧ.

○ ಇಂದೂಧರ ಹೊನ್ನಾಪುರ
ಸಂಪಾದಕ

ಸಾಲ, ಬರಗಾಲ ಮತ್ತು ಆತ್ಮಹತ್ಯೆ :

ಬದುಕುವುದರಲ್ಲಿದೆ ಜೀವನದ ಅರ್ಥ

> **ದೇಶದ ಬೆನ್ನೆಲುಬು ನಮ್ಮೆಲ್ಲರ ಅನ್ನದಾತ ಎಂದೆಲ್ಲಾ ಹೊಗಳಿಸಿಕೊಳ್ಳುತ್ತಿದ್ದ ರೈತರು, ಒಂದು ಕಡೆ ಜಾಗತೀಕರಣದ ನೀತಿಗಳು, ಮತ್ತೊಂದು ಕಡೆ ರೈತರ ಹೆಸರಿನಲ್ಲೇ ಅಧಿಕಾರಕ್ಕೆ ಬಂದ ಸರ್ಕಾರಗಳ ಆತಂಕಕಾರಿ ಕಾರ್ಯಕ್ರಮಗಳಿಂದಾಗಿ ತಲ್ಲಣಗೊಂಡಿದ್ದಾರೆ. ಅಷ್ಟೇ ಅಲ್ಲ ನೇಣಿಗೆ ಗೋಣು ಕೊಡುವುದರ ಮೂಲಕ ಸಾವಿಗೆ ಶರಣಾಗುತ್ತಿದ್ದಾರೆ. ಇಂತಹ ಸಂಕಷ್ಟದ ಸಂದರ್ಭದಲ್ಲಿ, ರೈತ ಸಮುದಾಯಕ್ಕೆ ಆತ್ಮಸ್ಥೈರ್ಯ ತುಂಬುವ ಕೆಲಸವನ್ನು ನಾವೆಲ್ಲರೂ ಮಾಡಬೇಕಾಗಿದೆ. ಸಾವೇ ಎಲ್ಲಾ ತಲ್ಲಣಗಳಿಗೂ ಅಂತಿಮ ಮಾರ್ಗವಲ್ಲ ಎಂದು ಸಾರಿ ಹೇಳಬೇಕಾಗಿದೆ.**
>
> **○ ಜಿ. ಪಾಂಡುನಾಯಕ್**

ಕಳೆದ ಎರಡು ವರ್ಷಗಳಿಂದ ಸಾಕಷ್ಟು ಮಳೆಯಾಗದೆ ದೇಶಾದ್ಯಂತ ಬರಗಾಲ ಬಡಿದಿದೆ. ಮಳೆಯ ನೀರನ್ನೇ ಅವಲಂಬಿಸಿರುವ ಬಹುಸಂಖ್ಯಾತ ರೈತರು ಮಳೆ ಬೆಳೆ ಇಲ್ಲದೇ ಕಷ್ಟ ಪಡುತ್ತಿದ್ದಾರೆ. ಗೋವುಗಳಿಗೆ ಸಾಕಷ್ಟು ಮೇವು ಸಿಗದೇ ಬಳಲುತ್ತಿರುವಾಗ ಬಡ ರೈತರು ಅವುಗಳನ್ನು ಕಸಾಯಿಖಾನೆಗೆ ಮಾರುತ್ತಿದ್ದಾರೆ. ಗೋಹತ್ಯೆಯಾಗಬಾರದೆಂದು ಹೇಳುವ ಸಂಘ ಸಂಸ್ಥೆಗಳು ಮತ್ತು ಸರ್ಕಾರ ಸಾಕಷ್ಟು ಮೇವು ಸರಬರಾಜು ಮಾಡುತ್ತಿಲ್ಲ, ಇದು ಮೂಕ ಪ್ರಾಣಿಗಳ ಪಾಡಾದರೆ ಬಡ ರೈತರ ಸ್ಥಿತಿ ತೀರಾ ಗಂಭೀರವಾಗಿದೆ. ಬಹಳಷ್ಟು ರೈತರು ವ್ಯವಸಾಯಕ್ಕಾಗಿ ಬೀಜ, ಗೊಬ್ಬರ ಮತ್ತು ಕೀಟನಾಶಕಗಳನ್ನು ಕೊಳ್ಳಲು ಖಾಸಗಿ ಹಣಕಾಸುದಾರರಿಂದ ಹೆಚ್ಚು ಬಡ್ಡಿದರದಲ್ಲಿ ಸಾಲ ಪಡೆದಿರುತ್ತಾರೆ. ರಾಷ್ಟ್ರೀಕೃತ ಬ್ಯಾಂಕುಗಳು ವರ್ಷಕ್ಕೆ ಶೇಕಡ 10 ರಿಂದ 12ರೂ. ಬಡ್ಡಿ ದರದಲ್ಲಿ ಸಾಲ ನೀಡಿದರೆ ಖಾಸಗಿಯವರು ತಿಂಗಳಿಗೆ ಶೇಕಡ 5ರೂಪಾಯಿಯಂತೆ ವರ್ಷಕ್ಕೆ ಶೇ. 60 ರೂಪಾಯಿ ಬಡ್ಡಿ ನಿಗದಿ ಪಡಿಸುತ್ತಾರೆ. ಅಂದರೆ ಬ್ಯಾಂಕಿನಲ್ಲಿ ಒಂದು ಲಕ್ಷ ರೂಪಾಯಿ ಸಾಲ ಪಡೆದರೆ ವರ್ಷಕ್ಕೆ ಸುಮಾರು ಹತ್ತು ಸಾವಿರ ರೂಪಾಯಿ ಬಡ್ಡಿಯಾಗುತ್ತದೆ. ಅದೇ ಒಂದು ಲಕ್ಷವನ್ನು ಖಾಸಗಿ ಸಂಸ್ಥೆ/ಅಥವಾ ವ್ಯಕ್ತಿಗಳಿಂದ ಪಡೆದರೆ ವರ್ಷಕ್ಕೆ ಸುಮಾರು ಅರವತ್ತು ಸಾವಿರ ರೂಪಾಯಿ ಬಡ್ಡಿಯಾಗುತ್ತದೆ. ಈ ಗುಂಡಾಗಿರಿ ಹಣಕಾಸು ಸಂಸ್ಥೆಗಳು ಸಮಯಕ್ಕೆ ಸರಿಯಾಗಿ ಬಡ್ಡಿ ಕೊಡದವರನ್ನು ಹಿಂಸಿಸಿ ಅವಮಾನಿಸುವಾಗ ಸಹಿಸಲಾಗದವರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಕಳೆದ ಒಂದು ವರ್ಷದಲ್ಲಿ ಕರ್ನಾಟಕದ ಸುಮಾರು 200 ಮಂದಿ ರೈತರು ಜೀವ ಕಳೆದುಕೊಂಡು ಮಡದಿ ಮಕ್ಕಳನ್ನು ತಬ್ಬಲಿಯಾಗಿಸಿದ್ದಾರೆ.

ಈ ಖಾಸಗಿ ಸಂಸ್ಥೆಗಳ ಬಡ್ಡಿದರವನ್ನು ನಿಯಂತ್ರಿಸಲು ಸರ್ಕಾರ ಕ್ರಮ ಕೈಗೊಂಡಿಲ್ಲ, ರಾಷ್ಟ್ರೀಕೃತ ಬ್ಯಾಂಕುಗಳು ಕೊಡುವ ಸಾಲವನ್ನು ಹಿಂತಿರುಗಿಸಬಾರದೆಂದು ಸ್ಥಳೀಯ ರಾಜಕಾರಿಣಿಗಳು ರೈತರಿಗೆ ಹೇಳಿಕೊಡುವುದರಿಂದ ಬಹಳಷ್ಟು ರೈತರ ಬ್ಯಾಂಕ್ ಸಂಬಂಧ ಮೊದಲ ಸಾಲವೊಂದರಿಂದಲೇ ಮುಗಿಯುತ್ತದೆ. ಹಳ್ಳಿಯ ಹಣಕಾಸುದಾರರು ಬಲಿಷ್ಠರು. ರಾಜಕಾರಿಣಿಗಳು ಮತ್ತು ಗ್ರಾಮದ ಮುಖಂಡರೆಲ್ಲ ಇವರನ್ನು ಬೆಂಬಲಿಸುತ್ತಾರೆ. ಗ್ರಾಮೀಣ ಜನರ ಸಂಘ ಸಂಸ್ಥೆಗಳಾದ ರೈತ ಸಂಘವಾಗಲಿ ಅಥವಾ ದಲಿತ ಸಂಘರ್ಷ ಸಮಿತಿಯಾಗಲಿ ಸಾಲಕ್ಕೆ ಸಿಕ್ಕಿಕೊಂಡ ರೈತರ ಸಹಾಯಕ್ಕೆ ಬರುತ್ತಿಲ್ಲ, ಈ ಅಸಹಾಯಕ ಸ್ಥಿತಿಯಲ್ಲಿ ಬಡರೈತರು ಆತ್ಮಹತ್ಯೆಗೆ ಮುಂದಾಗುತ್ತಿದ್ದಾರೆ. ನಿರಪರಾಧಿ ಬಡ ರೈತರು ತಮ್ಮ ಆತ್ಮಮೂಲ್ಯ ಪ್ರಾಣವನ್ನು ಕಳೆದು ಕೊಳ್ಳುವುದರ ಜೊತೆಗೆ ಅವಲಂಬಿತ ಹೆಂಡತಿ ಮಕ್ಕಳನ್ನು ಬೀದಿ ಪಾಲು ಮಾಡುತ್ತಿದ್ದಾರೆ. ಈ ಕೆಳಕಂಡ ಕ್ರಮಗಳನ್ನು ಕೈ ಗೊಂಡರೆ ರೈತರ ಸಾವುಗಳನ್ನು ತಪ್ಪಿಸಬಹುದು.

1) ಯಾವುದೇ ಹಣಕಾಸುದಾರನು ರಾಷ್ಟ್ರೀಕೃತ ಬ್ಯಾಂಕುಗಳು ನಿಗದಿಪಡಿಸುವ ಬಡ್ಡಿದರಕ್ಕಿಂತ ಹೆಚ್ಚು ಸಾಲ ನೀಡುವುದನ್ನು ನಿಷೇಧಿಲು ಸರ್ಕಾರ ಶಾಸನವನ್ನು ರೂಪಿಸಿ ಜಾರಿಗೊಳಿಸಬೇಕು.

2) ಕಿರುಕುಳಕ್ಕೊಳಗಾಗುವ ರೈತರಿಗೆ ಪೊಲೀಸ್ ರಕ್ಷಣೆ ಮತ್ತು ಕಿರುಕಳ ಕೊಡುವವರಿಗೆ ಕಠಿಣ ಶಿಕ್ಷೆಯಾಗಬೇಕು.

3) ರಾಷ್ಟ್ರೀಕೃತ ಬ್ಯಾಂಕಿನ ಸಾಲ ಹಿಂತಿರುಗಿಸುವುದರಿಂದ ಕಡಿಮೆ ಬಡ್ಡಿದರದಲ್ಲಿ ಮತ್ತೆ ಪಡೆಯಬಹುದಾದ್ದರಿಂದ ಈ ಬಗ್ಗೆ ರೈತರಲ್ಲಿ ಸೂಕ್ತ ಅರಿವು ಮೂಡಿಸಬೇಕು.

4) ಹುಟ್ಟಿದ್ದು ಕಷ್ಟಸುಖಗಳನ್ನು ಸಹಿಸಿ ಬದುಕಲು, ಆತ್ಮಹತ್ಯೆ ಮಾಡಿಕೊಳ್ಳುವುದು, ಮಡದಿ-ಮಕ್ಕಳನ್ನು ಬೀದಿಪಾಲು ಮಾಡುವುದು ಹೇಡಿತನ ಎಂಬ ನಿಜಾಂಶವನ್ನು ರೈತರಲ್ಲಿ ಮನವರಿಕೆ ಮಾಡಿಕೊಡಬೇಕು.

ಯುಗಾದಿ ಹಬ್ಬದಲ್ಲಿ ಕಹಿ ಬೇವು ಮತ್ತು ಸಿಹಿ ಬೆಲ್ಲವನ್ನು ಸವಿಯುವಂತೆ ಕಷ್ಟ ಮತ್ತು ಸುಖಗಳೆರಡನ್ನು ಹೊಂದಿರುತ್ತದೆ ನಿಜ. ಕಷ್ಟವಿರಲಿ ಅಥವಾ ಸುಖವಿರಲಿ ಬದುಕುವುದರಲ್ಲಿದೆ ಜೀವನದ ಮಹತ್ವ ಆತ್ಮಹತ್ಯೆಯಲ್ಲಲ್ಲ. ಮೂಕ ಪ್ರಾಣಿಗಳಾಗದೇ ನಾವು ಮಾನವರಾಗಿ ಹುಟ್ಟಿದ್ದು ಮಹಾಪುಣ್ಯ. ಕಷ್ಟಗಳಿರಬಹುದು ಆದರೆ ಸುಖವನ್ನು ಸವಿಯಲು ಬೇರ್‍ಯಾವ ಜೀವಿಗಳಿಗೂ ಇಲ್ಲದಷ್ಟು ಅವಕಾಶಗಳು ಮನುಷ್ಯರಾದ ನಮಗಿದೆ. ವಾಸಿಯಾಗದಂತಹ ಕಾಯಿಲೆ ಬಂದಾಗ ಸಾವನ್ನು ತಡೆಯುವುದು ನಮ್ಮ ಕೈಯಲ್ಲಿಲ್ಲ ನಿಜ. ಆದರೆ ಸಾಲಗಾರನಿಗೆ ಅಥವಾ ಬಡತನಕ್ಕೆ ಹೆದರಿ ಆತ್ಮಹತ್ಯೆ ಮಾಡಿಕೊಳ್ಳುವುದು ವೀರತನವಲ್ಲ. ದೇಶದ ರಕ್ಷಣೆಗಾಗಿ ಹೋರಾಡಿ ಮಡಿವ ಸೈನಿಕರು, ಇತರರ ಪ್ರಾಣ ಉಳಿಸಲು ಹೋಗಿ ತಮ್ಮ ಪ್ರಾಣವನ್ನೇ ಕಳೆದು ಕೊಳ್ಳುವವರು ಅಥವಾ ಬಾಲ್ಯ, ಯೌವ್ವನ ಮತ್ತು ವೃದಾಪ್ಯಗಳನ್ನೆಲ್ಲಾ ಅನುಭವಿಸಿ ಸ್ವಾಭಾವಿಕ ಮರಣ ಹೊಂದುವವರ ಜೀವನದಲ್ಲಿ ಅರ್ಥವಿದೆ. ಆದರೆ ಸಾಲಕ್ಕೆ ಅಥವಾ ಬರಗಾಲಕ್ಕೆ ಹೆದರಿ ಆತ್ಮಹತ್ಯೆ ಮಾಡಿಕೊಳ್ಳುವುದು ತೀರ ಹೇಡಿತನ. ಕಳೆದೆರಡು ವರ್ಷಗಳಲ್ಲಿ ಕರ್ನಾಟಕ ರಾಜ್ಯವಷ್ಟೆ ಅಲ್ಲ ಇಡೀ ದೇಶವೇ ಭೀಕರ ಬರಗಾಲವನ್ನು ಎದುರಿಸುತ್ತಿದೆ. ಆದರೆ ಈ ಕಾರಣಕ್ಕಾಗಿ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದು ಕರ್ನಾಟಕ ಮತ್ತು ಆಂಧ್ರ ಪ್ರದೇಶದಲ್ಲಿ ಮಾತ್ರ. ಒಬ್ಬ ರೈತನ ಆತ್ಮಹತ್ಯೆಯ ಸುದ್ದಿ ಮತ್ತೊಬ್ಬ ರೈತನ ಆತ್ಮಹತ್ಯೆಗೆ ಪ್ರೇರೇಪಣೆ ಯಾಗುತ್ತಿದೆ. ಆತ್ಮಹತ್ಯೆ ಆರ್ಥಿಕ ಸಮಸ್ಯೆಯಲ್ಲ ಇದೊಂದು ಮಾನಸಿಕ ಸಮಸ್ಯೆ. ಮನಶಾಸ್ತ್ರಜ್ಞರು ಮತ್ತು ನುರಿತ ಸಮಾಜ ಸೇವಕರು ಆತ್ಮಹತ್ಯೆಗಳನ್ನು ತಡೆಯಲು ಸಲಹೆ ನೀಡಬಲ್ಲರು.

ಒಂದು ಕ್ಷಣ ಯೋಚಿಸಿ ನೋಡಿ, ಆತ್ಮಹತ್ಯೆ ಮಾಡಿಕೊಳ್ಳುವವರ ಜೀವನ ಸತ್ತ ದಿನವೇ ಮುಕ್ತಾಯವಾಗುತ್ತದೆ. ಆದರೆ ಹಗಲಿರುಳು ಪ್ರೀತಿ ಮಮತೆಯಿಂದ ಕಂಡ ಮಡದಿ ಮಕ್ಕಳ ಜೀವನವೊಂದು ನರಕ ಯಾತನೆಯಾಗಿ ಬಿಡುತ್ತದೆ. ಸಾವಿನೊಡನೆ ಸಾಲ ತೀರುವುದಿಲ್ಲ, ಅಸಹಾಯಕ ಮಡದಿ-ಮಕ್ಕಳು ಸಾಲಗಾರರ ಕಿರುಕುಳಕ್ಕೆ ಬಲಿಯಾಗುತ್ತಾರೆ. ನಿಜವಾದ ಶೂರತನ, ಬದುಕುಳಿದು ಕಷ್ಟಕಾರ್ಪಣ್ಯಕಳನ್ನೆದುರಿ ಸುವುದರಲ್ಲಿದೆ, ಹೆದರಿ ಸಾಯುವುದರಲ್ಲಲ್ಲ. ಪ್ರತಿಯೋರ್ವ ವ್ಯಕ್ತಿಯೂ ತನ್ನ ಜೀವನದಲ್ಲಿ ಉತ್ತಮ ಧ್ಯೇಯವೊಂದನ್ನು ರೂಪಿಸಿಕೊಂಡು ಅದರ ಸಾಧನೆಯಲ್ಲಿ ಅರ್ಥ ಕಾಣಬೇಕು. ಪ್ರತಿವ್ಯಕ್ತಿಯ ಬದುಕಿನಲ್ಲೂ ಅತ್ಯಮೂಲ್ಯ ಅರ್ಥಗಳಿವೆ. ಆದರೆ ಆ ಅರ್ಥಗಳನ್ನು ಕಂಡುಕೊಂಡು ಬದುಕುವುದು ಪ್ರತಿಯೊಬ್ಬ ವ್ಯಕ್ತಿಯ ಜವಾಬ್ದಾರಿ. ವ್ಯಕ್ತಿ

ಬದುಕಿರಲು ಬೇಕಾಗಿರುವುದು ಶ್ರೀಮಂತಿಕೆಯಲ್ಲ ಬದಲಿಗೆ ಜೀವನದ ಅರ್ಥ. ನಮಗಿಂತ ಹೆಚ್ಚು ಕಷ್ಟಕಾರ್ಪಣ್ಯಗಳಿಂದ ಕುರುಡ-ಕುಂಟರು, ಬಿಕ್ಷೆ ಬೇಡುವ ದಾರಿದ್ರ್ಯರೂ ಅಥವಾ ಕಾಯಿಲೆಯಿಂದ ನರಳುವ ರೋಗಿಗಳು ತಮ್ಮ ಜೀವನದ ಅತ್ಯಮೂಲ್ಯ ಅರ್ಥಗಳನ್ನು ಮನಗಂಡು ಬದುಕುತ್ತಿದ್ದಾರೆ. ಜೀವನ ಪೂರ್ತಿ ಕಕ್ಕಸು ಮನೆ ತೊಳೆಯುವ ವ್ಯಕ್ತಿಯ ಅಥವಾ ನ್ಯಾಯಾಲಯದಿಂದ ಮರಣ ದಂಡನೆಗೊಳಗಾದವ ರನ್ನು ಗಲ್ಲಿಗೇರಿಸುವ ವ್ಯಕ್ತಿಯ ಕೆಲಸದಲ್ಲೂ ಅಮೂಲ್ಯ ಅರ್ಥಗಳಿವೆ. ಕಕ್ಕಸು ಮನೆ ತೊಳೆಯುವ ವ್ಯಕ್ತಿ ಇತರರ ಜೀವನದಲ್ಲಿ ಶುಭ್ರತೆ ತಂದು ರೋಗರುಜಿನಗಳನ್ನು ತಡೆಯುತ್ತಾನೆ, ಹಾಗೆಯೇ ಶಿಕ್ಷಿತರನ್ನು ಗಲ್ಲಿಗೇರಿಸಿ ಕೊಲ್ಲುವ ವ್ಯಕ್ತಿ ಕಾನೂನಿನ ಆದೇಶವನ್ನು ಅನುಷ್ಠಾನ ಗೊಳಿಸುತ್ತಾನೆ. ಹೀಗೆ ಪ್ರತಿ ವ್ಯಕ್ತಿಯೂ ತಮ್ಮ ಜೀವನದ ಅತ್ಯಮೂಲ್ಯ ಅರ್ಥಗಳನ್ನು ಕಂಡುಕೊಂಡಾಗ ಮಾತ್ರ ಬದುಕಲು ಸ್ಫೂರ್ತಿಸಿಗುತ್ತದೆ. ಹಸಿವು ಅಥವಾ ಬಡತನದ ಬಗ್ಗೆ ಬರಿ ಚಿಂತಿಸಿದರೆ ಪರಿಹಾರವಾಗದು ಜೊತೆಗೆ ಇದನ್ನು ಹೋಗಲಾಡಿಸಲು ಕಾರ್ಯ ಪ್ರವೃತ್ತರಾಗಬೇಕು. ಉದಾಹರಣೆಗೆ ಬರಗಾಲ ಬಂದಾಗ ಹಳ್ಳಿಯಿಂದ ನಗರಕ್ಕೆ ವಲಸೆ ಬಂದು ಕೂಲಿ ಕೆಲಸ ಮಾಡುತ್ತಿರುವವರು ಹಸಿವನ್ನು ಹೋಗಲಾಡಿಸುವುದರ ಜೊತೆಗೆ ಜೀವನ ಮಟ್ಟವನ್ನು ಸಹ ಸುಧಾರಿಸಿ ಕೊಳ್ಳುತ್ತಿದ್ದಾರೆ.

'ಹಾಸಿಗೆ ಇದ್ದಷ್ಟು ಮಾತ್ರ ಕಾಲು ಚಾಚು' ಎಂಬ ಗಾದೆ ಮಾತು ನೆನಪಿರಲಿ. ಸಾಲ ಮಾಡುವ ಮೊದಲು ಪರಿಣಾಮಗಳ ಅರಿವಿರಲಿ. ಸಾಲ ಮಾಡದೆಯೂ ವ್ಯವಸಾಯ ಮಾಡಬಹುದೆಂಬುದಂತು ಕಟು ಸತ್ಯ. ಆದ್ದರಿಂದ ಸಾಲ ಮಾಡಲು ಒಂದಿಷ್ಟು ಇತಿಮಿತಿ ಇರಲಿ. ಸರ್ಕಾರಿ ಮತ್ತು ಸಹಕಾರಿ ಬ್ಯಾಂಕುಗಳು ಕಡಿಮೆ ಬಡ್ಡಿ ದರದಲ್ಲಿ ಸಾಲ ನೀಡುತ್ತವೆ. ಬರಗಾಲವಾದರೆ ಬಡ್ಡಿ ಮನ್ನಾ ಮಾಡಬಹುದು ಅಥವಾ ಆ ವರ್ಷ ಸಾಲ ಹಿಂತಿರುಗಿಸಬೇಕಾಗಿಲ್ಲ ಎಂದು ಸರ್ಕಾರ ಘೋಷಿಸ ಬಹುದು. ಆದ್ದರಿಂದ ಖಾಸಗಿ ವ್ಯಕ್ತಿ/ಸಂಸ್ಥೆಗಳಲ್ಲಿ ಸಾಲಕ್ಕೆ ಕೈ ಹಾಕಬೇಡಿ. ಬ್ಯಾಂಕುಗಳು ಸಾಲ ನಿರಾಕರಿಸಿದರೆ ಮಂತ್ರಿ-ಶಾಸಕರ ಮತ್ತು ರೈತ ಸಂಘದವರ ಸಹಾಯ ಪಡೆಯಿರಿ. 'ಹನಿಹನಿ ಗೂಡದ್ರೆ ಹಳ್ಳ' ಎಂಬುದು ನೆನಪಿರಲಿ. ಪಸಲು ಚೆನ್ನಾಗಿ ಬಂದು ಲಾಭ ಗಳಿಸುವಾಗ ಒಂದಿಷ್ಟು ಹಣ ಉಳಿಸಿ. ಈ ಉಳಿತಾಯ ಮಾಡಿದ ಹಣ ಬರಗಾಲದಲ್ಲಿ ಸಹಾಯಮಾಡುತ್ತದೆ. ಬರಗಾಲದಿಂದ ಸಾಲದ ಸಂಕಟಕ್ಕೆ ಸಿಕ್ಕವರೆಲ್ಲಾ ಸೇರಿ ಸಂಘವೊಂದನ್ನು ಕಟ್ಟಿಕೊಳ್ಳಿ. ಖಾಸಗಿ ಹಣಕಾಸು ಸಂಸ್ಥೆ/ವ್ಯಕ್ತಿಗಳು ಕಿರುಕುಳ ಕೊಡುವುದನ್ನು ಒಮ್ಮತದಿಂದ ತಡೆದು ಹಿಮ್ಮೆಟ್ಟಿಸಿ. ಬರಗಾಲ ಬಂದಿದ್ದು ಪ್ರಕೃತಿಯ ವಿಕೋಪ. ಇದರಲ್ಲಿ ನಿಮ್ಮದೇನು ತಪ್ಪಿಲ್ಲವಾದ್ದರಿಂದ ನಿಮ್ಮ ನಿರಪರಾಧಿ ಜೀವಕ್ಕೆ ಆತ್ಮಹತ್ಯೆಯ ಶಿಕ್ಷೆಕೊಡುವುದು ಮಹಾಪರಾಧ. ●

ಅಂತರ್ಜಾತಿ ವಿವಾಹ - ಒಂದು ಚಿಂತನೆ

ನಮ್ಮ ಸಮಾಜದ ದುರಂತವೆಂದರೆ ಸ್ವಾತಂತ್ರ್ಯ ಸಿಕ್ಕಿ ಅರ್ಧ ಶತಮಾನ ಕಳೆದರೂ ಇಂದಿಗೂ ಹಲವರು ವ್ಯಕ್ತಿಯನ್ನು ಆತನ ಯೋಗ್ಯತೆಯಿಂದ ಅಳೆಯದೆ ಜಾತಿಯತೆಯಿಂದ ಅಳೆಯುತ್ತಾರೆ. ಇಂದು ಬೆಂಗಳೂರಿ ನಂತಹ ಹೈಟೆಕ್ ಸಿಟಿಯಲ್ಲಿಯೂ ಅಸ್ಪೃಶ್ಯತೆ ಕಾಣ ಸಿಗದಿದ್ದರೂ ಮೇಲುಜಾತಿ, ಕೀಳುಜಾತಿ ಎಂಬ ಭಾವನೆ ಹೆಚ್ಚಿನ ಜನರಲ್ಲಿ ಇದೆ.

ಇಂದು ದಲಿತನೊಬ್ಬ ಒಳ್ಳೆಯ ಸ್ಥಾನದಲ್ಲಿದ್ದರೆ ಆತನನ್ನು ತನ್ನ ಕೆಲಸಕ್ಕಾಗಿ ಅರಸುತ್ತಾ ಬರುವವರು ಅನೇಕ ಮಂದಿ. ಆಗ ಈತ ದಲಿತ ಎಂಬ ಭಾವನೆ ಇರುವುದಿಲ್ಲ ತನ್ನ ಕೆಲಸ ಪೂರ್ಣವಾದರೆ ಸಾಕು ಎಂಬ ಭಾವನೆ. ಅದೇ ದಲಿತ ಒಂದು ಸಾಮಾನ್ಯ ವ್ಯಕ್ತಿಯಾದರೆ ಆತನನ್ನು ಯಾರೂ ಗಣನೆಗೆ ತೆಗೆದುಕೊಳ್ಳುವುದಿಲ್ಲ. ಹಿಂದಿನಿಂದ ಆತನಿಗೆ ದಲಿತ ಎಂಬ ಹಣೆಪಟ್ಟಿ ನೀಡುತ್ತಾರೆ. ಇಂದಿಗೂ ಹಲವು ಕಚೇರಿಗಳಲ್ಲಿ ದಲಿತರಿಗೆ ಮೇಲಾಧಿಕಾರಿಗಳ ಕಿರುಕುಳ ಇದ್ದೆ ಇರುತ್ತದೆ. ದಲಿತನೊಬ್ಬ ಏನೂ ಸಾಧನೆ ಮಾಡಿದರೂ ಆತನಿಗೆ ಪ್ರೋತ್ಸಾಹವಿರುವುದಿಲ್ಲ. ಆತನನ್ನು ಎಲ್ಲಿ ಕೆಳಗೆ ತಳ್ಳಲು ಅವಕಾಶ ಸಿಗುತ್ತದೆ ಎಂದು ಕಾಯುವ ಜನರೇ ಅಧಿಕ.

ನಮ್ಮ ಸಮಾಜ ಇಂದು ವೇಗದಿಂದ ಬದಲಾವಣೆ ಆಗುತ್ತಿದ್ದರೂ ಜಾತಿಯತೆ ಮಾತ್ರ ಬದಲಾವಣೆ ಆಗುತ್ತಿಲ್ಲ. ಜಾತಿರಹಿತ ಸಮಾಜದ ಬದಲು ಇಂದು ಜಾತಿಮಯ ಸಮಾಜ ಆಗುತ್ತಿದೆ. ಇಂದು ಎಷ್ಟೋ ಕಡೆಗಳಲ್ಲಿ ದಲಿತರಿಗೆ ಮನೆ ಒಳಗೆ, ದೇವಾಲಯಗಳಿಗೆ ಪ್ರವೇಶವೇ ನೀಡುವುದಿಲ್ಲ.

ಕೆಲವೇ ದಿನಗಳ ಹಿಂದೆ ಕರ್ನಾಟಕ ಸರ್ಕಾರದ ಅಕ್ಷರ ದಾಸೋಹ ಕಾರ್ಯಕ್ರಮದ ಅಡಿಯಲ್ಲಿ ಕೆಳಜಾತಿಯವರು ಮಾಡಿದ ಅಡುಗೆ ಎಂಬ ಕಾರಣಕ್ಕೆ ಘರ್ಷಣೆಯೂ ಉಂಟಾಗಿದೆ. ಇದು ಇಂದಿನ ಜಾತಿ ಪದ್ಧತಿಯ ಕ್ರೂರ ಮುಖವನ್ನು ಬಯಲಿಗೆಳೆದಿದೆ.

ಬುದ್ಧ, ಬಸವಣ್ಣ, ಕನಕದಾಸರು, ಕುವೆಂಪು ಹೀಗೆ ಪ್ರತಿಯೊಬ್ಬರೂ ಜಾತಿಪದ್ಧತಿಯನ್ನು ಖಂಡಿಸುತ್ತಾ ಬಂದಿದ್ದಾರೆ. ಬಸವಣ್ಣ ತನ್ನ ವಚನದಲ್ಲಿ ಜಾತಿ ಪರಿಕಲ್ಪನೆಯನ್ನು ಖಂಡಿಸಿದ್ದಾರೆ. ಮಾತ್ರವಲ್ಲ ಬ್ರಾಹ್ಮಣ ಹುಡುಗಿಯನ್ನು ಅಸ್ಪೃಶ್ಯವರನಿಗೆ ವಿವಾಹ ಮಾಡಿಸಿ ಸಮಾಜಕ್ಕೆ ಮಾದರಿಯಾದರು.

ಲೋಹಿಯಾ, ಅಂಬೇಡ್ಕರ್ ಅವರು ದೇಶ ಜಾತಿಯತೆ ಯಿಂದ ರೋಗಗ್ರಸ್ಥವಾಗಿದ್ದು ಇದರಿಂದ ಪಾರಾಗ ಬೇಕಾದರೆ ಅಂತರ್ಜಾತಿ ವಿವಾಹ ಹೆಚ್ಚಬೇಕು ಎಂದು ಹೇಳಿದ್ದಾರೆ. ಇವರೆಲ್ಲಾ ಹೇಳಿರುವುದು ನಿಜ. ಜಾತಿ ಪದ್ಧತಿ ಕಡಿಮೆಯಾಗಬೇಕಾದರೆ, ಜಾತಿ ಕಲಹ ನಿಲ್ಲಬೇಕಾದರೆ ಇಂದಿನ ಯುವಪೀಳಿಗೆ ಅಂತರ್ಜಾತಿ ವಿವಾಹ ಆಗಬೇಕು. ಆದರೆ ಇಂದು ಕೆಳಜಾತಿಯ ಯುವಕರು ಮೇಲುಜಾತಿಯ ಯುವತಿಯನ್ನು ಮದುವೆ ಆಗುವುದನ್ನು ಹೆಚ್ಚಾಗಿ ಕಾಣುತ್ತೇವೆ. ಈ ಹೆಣ್ಣು ಮಕ್ಕಳು ಆತನ ಉದ್ಯೋಗ ಇಲ್ಲವೇ ಆರ್ಥಿಕ ಅಂತಸ್ತನ್ನು ನೋಡಿ ಮದುವೆ ಆಗುತ್ತಾರೆ.

ಮೇಲುಜಾತಿಯ ಯುವಕರು ಕೆಳಜಾತಿಯ ಹೆಣ್ಣು ಮಕ್ಕಳನ್ನು ಮದುವೆ ಆಗಲು ಹಿಂದುಮುಂದು ನೋಡುತ್ತಾರೆ. ಇದರಿಂದ ಸಮಾಜದಲ್ಲಿ ಬದಲಾವಣೆ ಆಗಲು ಖಂಡಿತಾ ಸಾಧ್ಯವಿಲ್ಲ.

ಇಂದು ದಲಿತ ಯುವಕನೊಬ್ಬ ಉತ್ತಮ ಸ್ಥಾನದಲ್ಲಿದ್ದರೆ ಮೇಲುಜಾತಿಯ ಹುಡುಗಿಯರಿಗೆ ಜಾತಿ ಲೆಕ್ಕಕ್ಕೆ ಬರುವುದಿಲ್ಲ. ಅದೇ ದಲಿತ ಯುವತಿಯೊಬ್ಬಳು ಉತ್ತಮ ಸ್ಥಾನದಲ್ಲಿದ್ದರೆ ಆಕೆಗೆ ಜಾತಿ ಅಡ್ಡ ಬರುತ್ತದೆ. ಆಕೆ ಅದೇ ಜಾತಿಯ ಹುಡುಗನನ್ನು ಹುಡುಕಬೇಕಾಗುತ್ತದೆ. ಬೇರೆ ಜಾತಿಯ ಹುಡುಗನನ್ನು ಮದುವೆ ಆದರೆ ಕೆಲವೇ ದಿನಗಳಲ್ಲಿ ಆಕೆ ಮಾನಸಿಕ ಯಾತನೆಯನ್ನು ಅನುಭವಿಸಬೇಕಾಗುತ್ತದೆ.

ಇಂದು ಅಂತರ್ಜಾತಿಯ ವಿವಾಹಗಳನ್ನು ಇಷ್ಟಪಡುವವರು ಪ್ರೇಮಿಗಳು ಮಾತ್ರ. ಜಾತಿ ಮತವನ್ನು ಮೀರಿ ಮದುವೆ ಆಗುತ್ತಾರೆ. ಅಲ್ಲಿ ಅವರಿಗೆ ಅನೇಕ ವಿರೋಧಗಳು ಕಂಡು ಬರುತ್ತವಾದರೂ ಇಂತಹವರನ್ನು ಗೌರವದಿಂದ ಕಾಣಬೇಕು. ಇದರಿಂದ ವರದಕ್ಷಿಣೆ ಯಂತಹ ಸಾಮಾಜಿಕ ಪಿಡುಗನ್ನು ದೂರ ಮಾಡ ಬಹುದು.

ಇನ್ನೊಂದು ದುರಂತವೆಂದರೆ ನಮ್ಮ ಸುಶಿಕ್ಷಿತ ಯುವಕರು ಮೀಸಲಾತಿಯಿಂದಲೋ ಇಲ್ಲವೆ ಸ್ವಸಾಮರ್ಥ್ಯದಿಂದಲೊ ಮೇಲೆ ಬರುತ್ತಾರೆ. ತಾವು ಉನ್ನತ ಸ್ಥಿತಿಗೆ ಬಂದಾಗ ಜಾತಿಯನ್ನು ಹೇಳಲು ನಾಚಿಕೆಪಡುತ್ತಾರೆ. ಮೇಲುಜಾತಿಯ ಹೆಣ್ಣುಮಕ್ಕಳನ್ನು ವಿವಾಹವಾಗಲು ಬಯಸುತ್ತಾರೆ. ಈ ರೀತಿಯ ಅಂತರ್ಜಾತಿ ವಿವಾಹ ಒಂದು ಉತ್ತಮವಾದ ಬೆಳವಣಿಗೆ. ಅಂತೆಯೇ ದಲಿತ ಹೆಣ್ಣು ಮಕ್ಕಳನ್ನು ಮೇಲ್ಜಾತಿ ಯುವಕರು ಮದುವೆಯಾಗಬೇಕು.

ಹೆಚ್ಚಿನ ದಲಿತ ಹೆಣ್ಣುಮಕ್ಕಳು ಅಂತರ್ಜಾತಿ ವಿವಾಹಕ್ಕೆ ಭಯಪಡುತ್ತಾರೆ. ಮುಂದೆ ಅಪಾಯವಿದೆ ಎಂಬುದು ಅವರಿಗೆ ಮೊದಲೇ ಗೊತ್ತಿರುತ್ತದೆ. ಇದು ಪ್ರತಿಯೊಂದು ದಲಿತ ವಿದ್ಯಾವಂತ ಯುವತಿಯರ ಸಮಸ್ಯೆಯಾಗಿದೆ.

ಇದಕ್ಕೆ ಪರಿಹಾರವೆಂದರೆ ದಲಿತರಲ್ಲಿಯೇ ಅನೇಕ ಒಳಜಾತಿಗಳಿವೆ. ಇವರಲ್ಲಿಯೇ ಸುಶಿಕ್ಷಿತ ದಲಿತ ಯುವಕರು ಸುಶಿಕ್ಷಿತ ದಲಿತ ಯುವತಿಯರನ್ನು ಮದುವೆ ಆಗುವ ಪದ್ಧತಿ ಹೆಚ್ಚಾಗಬೇಕು. ಅಲ್ಲದೆ ಮೇಲ್ಜಾತಿ ಯುವಕರು ದಲಿತ ಯುವತಿಯರೊಂದಿಗೆ ವಿವಾಹ ಸಂಬಂಧ ಬೆಳೆಸಬೇಕು.

ಆಗ ಮಾತ್ರ ಜಾತಿ ಪದ್ಧತಿ ಕಡಿಮೆ ಆಗಬಹುದು. ಅಲ್ಲದೆ ನಮ್ಮ ನಾಯಕರು ಕಂಡ ಕನಸು ನನಸಾಗಬಹುದು.

○ ವಿಮಲಾಕ್ಷಿ

ಜಾಗತಿಕ ಗ್ರಾಮಕ್ಕೆ ಗೌಡ ಯಾರು?

ಇಂದಿನ ಬಹುತೇಕ ಚಿಂತಕರ ಚರ್ಚೆ-ಚಿಂತನೆಗಳು 'ಜಾಗತೀಕರಣ'ವನ್ನು ಕೇಂದ್ರೀಕರಿಸಿಕೊಂಡಿವೆ. ಈ ಕುರಿತಂತೆ ಅಂಥವರ ವಾದ-ವಿವಾದಗಳಲ್ಲಿ ಹತ್ತಾರು ಪರಿಭಾಷೆ ಮತ್ತು ಪರಿಕಲ್ಪನೆಗಳು ಹುಟ್ಟಿಕೊಂಡಿವೆ. ಕಾರಣ, ಜಾಗತೀಕರಣದ ಮೈ, ಕೈ, ಮುಖ, ಮಗ್ಗುಲುಗಳು ತುಂಬಾ ವ್ಯಾಪಕವಾಗಿವೆ. ಆದ್ದರಿದಲೇ ಅದಕ್ಕೆ ಎರಡು ಮುಖಗಳಿರುವುದು ಸ್ಪಷ್ಟವಾಗಿದೆ. ಒಂದು, ಭೌತಿಕ ಮುಖವಾದರೆ; ಇನ್ನೊಂದು ಸಾಂಸ್ಕೃತಿಕ ಮುಖ. ಭೌತಿಕ ಮುಖದಲ್ಲಿ ರಾರಾಜಿಸುವ ಅನೇಕ ವಸ್ತುಗಳಿವೆ. ಇಂಥ ವಸ್ತುಗಳ ಮೂಲಕ ತೃತೀಯ ರಾಷ್ಟ್ರವನ್ನು ಪ್ರವೇಶಿಸುವ ಜಾಗತೀಕರಣ, ನಿಧಾನವಾಗಿ ಅಲ್ಲಿಯ ಸಾಂಸ್ಕೃತಿಕ ಜಗತ್ತನ್ನು ದುರ್ಬಲಗೊಳಿಸುತ್ತದೆ. ಅಂದರೆ, ಈ ದುರ್ಬಲದ ಪ್ರಕ್ರಿಯೆ ತುಂಬಾ ಅಪಾಯಕಾರಿಯಾದುದು. ಇದು ಸ್ಥಳೀಯ ತಳಿಗಳನ್ನು ಅವಮಾನಿಸಿ, ಅಲಕ್ಷಿಸಿ, ಅಪಮಾನಿಸುವ ಮೂಲಕ ಅವುಗಳನ್ನು ಹತಾಸೆಯ ಹಂತಕ್ಕೆ ನೂಕುತ್ತದೆ. ಆಗ ಅಸಹಾಯಕ ಸ್ಥಿತಿಯಲ್ಲಿರುವ ಆ ಸಂಸ್ಕೃತಿಗಳು ಸವಾಲು ಸ್ವೀಕರಿಸುವ ಬದಲು ಸೋಲನ್ನು ಒಪ್ಪಿಕೊಳ್ಳುತ್ತವೆ. ಆತಂಕದ ವಿಚಾರ ವೆಂದರೆ, ಇಂಥ ಸೋಲುಗಳ ಸ್ವೀಕಾರ ಮೊದಲು ಆರಂಭ ವಾಗುವುದೇ ದಲಿತರಲ್ಲಿ. ಆದ್ದರಿಂದ, 'ಜಾಗತೀಕರಣವು ದಲಿತರ ಪರವೇ?' ಎಂದು ಕೇಳುವ ಕೆಲವರ ಪ್ರಶ್ನೆಯಲ್ಲಿ ಅರ್ಥವಿದೆ, ಚರ್ಚೆಯಿದೆ.

ಆರಂಭದಲ್ಲಿ ಹೇಳಿದಂತೆ ಇಂದು ಜಾಗತೀಕರಣವನ್ನು ಅರ್ಥೈಸುವಲ್ಲಿ ಅನೇಕ ಪರಿಭಾಷೆಗಳು ಹುಟ್ಟಿಕೊಂಡಿವೆ. ಅದರಲ್ಲಿ ಒಂದು 'ಜಾಗತೀಕರಣವೆಂದರೆ - ಇಡೀ ಜಗತ್ತೇ ಒಂದು ಗ್ರಾಮವಾಗುವುದು'. ಸರಿ, ಹಾಗಾದರೆ ಈ ಗ್ರಾಮಕ್ಕೆ ಗೌಡ ಯಾರು?. ಖಂಡಿತಾ ನಾವಲ್ಲ .ಅಮೇರಿಕಾದ ಬುಷ್ ಈ ಗ್ರಾಮಕ್ಕೆ ಗೌಡನಾಗುತ್ತಾನೆ. ಆಶ್ಚರ್ಯವೆಂದರೆ, ದಲಿತರಿಗೆ ಈಗಾಗಲೇ ಈ ಊರಲ್ಲಿ ಒಬ್ಬ ಗೌಡ ಇದ್ದಾನೆ. ಅವನ ದಬ್ಬಾಳಿಕೆ ತಾಳಿಕೊಳ್ಳುವುದೇ ಸಾಕಾಗಿದೆ. ಈಗ ಮತ್ತೊಬ್ಬ ಗೌಡ ಬೇರೆ. ಇವನ ದಾಳಿ-ದಂಡೆಯಾತ್ರೆಯಲ್ಲಿ ಖಂಡಿತಾ ದಲಿತರು ಬೇರು ಕತ್ತರಿಸಿದ ಮರವಾಗುತ್ತಾರೆ. ಏಕೆಂದರೆ, ಪ್ರೊ. ಬರಗೂರು ರಾಮಚಂದ್ರಪ್ಪನವರು ಹೇಳುವಂತೆ, ಸ್ಥಳೀಯ ಗೌಡ ಭಯೋತ್ಪಾದಕನಾದರೆ; ವಿದೇಶಿ ಗೌಡ ಯುದ್ಧೋತ್ಪಾದಕ. ಇವರಿಬ್ಬರನ್ನು ಏಕಕಾಲಕ್ಕೆ ವಿರೋಧಿಸುವ ಇಲ್ಲವೆ ಇವರಿಬ್ಬರಿಂದ ಏಕಕಾಲಕ್ಕೆ ಪಾರಾಗುವ ಪರಿಸ್ಥಿತಿ ಇಂದು ದಲಿತರ ಪಾಲಿಗಿದೆ. ಇದು ದಲಿತರಿಂದ ಸಾಧ್ಯವೆ? ಬಹುದೊಡ್ಡ ಪ್ರಶ್ನೆ.

ಯಾವಾಗಲೂ ಜಾಗತೀಕರಣ ಪ್ರಭುತ್ವದ ಪರ. ಸಾಮ್ರಾಜ್ಯಶಾಹಿಯ ಅಂತರಂಗವನ್ನು, ವಸಾಹತುಶಾಹಿಯ ಬಹಿರಂಗವನ್ನು ಹೊಂದಿರುವಂತದ್ದು. ಹಾಗಾಗಿ ಇದು ಸದಾ ದಾಳಿ, ದರೋಡೆ, ದಂಗೆ, ಯುದ್ಧ ವಿಜಯ-ದಿಗ್ವಿಜಯ ಗಳನ್ನೇ ನಂಬಿರುತ್ತದೆ. ಇಂಥ ವಿಜಯದ ವಿರುದ್ಧ ಬರುವ ಎಲ್ಲಾ ಶಕ್ತಿಗಳನ್ನು ಹತೋಟಿಗೆ ತೆಗೆದುಕೊಳ್ಳುವ, ಇಲ್ಲವೆ ಅರಗಿಸಿಕೊಳ್ಳುವ ಆನೆಬಲ ಅದಕ್ಕಿದೆ. ಹಾಗಾಗಿ, ರಾಜಶಾಹಿ, ಸಾಮ್ರಾಜ್ಯಶಾಹಿ, ವಸಾಹತುಶಾಹಿ, ಜಾಗತಿಕಶಾಹಿಗಳೆಲ್ಲ ಒಂದೇ ಶ್ರೇಣಿಯ ವಿಜಯಿಗಳು. ಇಂಥ ವಿಜಯಿಗಳಲ್ಲಿ ಶಾಮೀಲಾದ ಕವಿಗಳು 'ವಿಕ್ರಮಾರ್ಜುನ ವಿಜಯ', 'ಸಾಹಸಭೀಮವಿಜಯ', 'ಕೆಳದಿ ನೃಪವಿಜಯ'ದಂಥ ವಿಜಯೀ ಕಾವ್ಯಗಳನ್ನು ಬರೆದರು. ಅಪ್ಪಿತಪ್ಪಿಯೂ 'ಏಕಲವ್ಯವಿಜಯ', 'ಕರ್ಣವಿಜಯ', 'ಶಂಬೂಕ ವಿಜಯ'ಗಳನ್ನು ಬರೆಯಲಿಲ್ಲ, ಏಕೆಂದರೆ, ಅಪಜಯ ಹೊಂದಿದವರಲ್ಲಿ ದ್ರಾವಿಡರು, ಶೂದ್ರರು, ಶೋಷಿತರು, ದಲಿತರು, ಬಹುಸಂಖ್ಯಾತರಾಗಿದ್ದರು. ಆದರೆ, ವಿಜಯಕ್ಕಿಂತ ಅಪಜಯದವರಲ್ಲಿ ಅನೇಕ ತವಕ-ತಲ್ಲಣಗಳಿವೆ. ಆಸೆ-ಆಕಾಂಕ್ಷೆಗಳಿವೆ. ಅವಮಾನ, ಅಪಮಾನ, ಶಿಕ್ಷೆ-ಸೆರೆವಾಸದ ಅನುಭವಗಳಿವೆ. ಇದು ದಲಿತರ ಬದುಕೇ ಆಗಿದೆ.

> 'ಜಾಗತೀಕರಣವೆಂದರೆ - ಇಡೀ ಜಗತ್ತೇ ಒಂದು ಗ್ರಾಮವಾಗುವುದು'. ಸರಿ, ಹಾಗಾದರೆ ಈ ಗ್ರಾಮಕ್ಕೆ ಗೌಡ ಯಾರು?. ಖಂಡಿತಾ ನಾವಲ್ಲ. ಅಮೇರಿಕಾದ ಬುಷ್ ಈ ಗ್ರಾಮಕ್ಕೆ ಗೌಡನಾಗುತ್ತಾನೆ. ಆಶ್ಚರ್ಯವೆಂದರೆ, ದಲಿತರಿಗೆ ಈಗಾಗಲೇ ಈ ಊರಲ್ಲಿ ಒಬ್ಬ ಗೌಡ ಇದ್ದಾನೆ. ಅವನ ದಬ್ಬಾಳಿಕೆ ತಾಳಿಕೊಳ್ಳುವುದೇ ಸಾಕಾಗಿದೆ. ಈಗ ಮತ್ತೊಬ್ಬ ಗೌಡ ಬೇರೆ. ಇವನ ದಾಳಿ-ದಂಡೆಯಾತ್ರೆಯಲ್ಲಿ ಖಂಡಿತಾ ದಲಿತರು ಬೇರು ಕತ್ತರಿಸಿದ ಮರವಾಗುತ್ತಾರೆ. ಏಕೆಂದರೆ ಸ್ಥಳೀಯ ಗೌಡ ಭಯೋತ್ಪಾದಕನಾದರೆ; ವಿದೇಶಿ ಗೌಡ ಯುದ್ಧೋತ್ಪಾದಕ.
>
> ○ ಡಾ. ರಂಗರಾಜ ವನದುರ್ಗ

ದಲಿತ ಮತ್ತು ಶೋಷಿತ ಜಾತಿ-ಜನಾಂಗಗಳನ್ನು ಸೋಲಿಸುವ ಮೂಲಕ ಗೆದ್ದ ರಾಜ-ರಾಣಿಯರ ಕಥೆಗಳನ್ನು ನಾವಿಂದು ಶ್ರೇಷ್ಠ ಕಾವ್ಯಗಳೆಂದು ಒಪ್ಪಿಕೊಳ್ಳುವುದಾದರೆ, ಪರೋಕ್ಷವಾಗಿ ಸಾಮ್ರಾಜ್ಯಶಾಹಿಯನ್ನು ಆ ಮೂಲಕ ಜಾಗತೀಕರಣವನ್ನು ಒಪ್ಪಿಕೊಂಡಂತೆಯೇ ಸರಿ. ಆದ್ದರಿಂದಲೇ ಇರಬೇಕು, ತಳವರ್ಗಗಳು ಮಂಟೇಸ್ವಾಮಿ, ಮಾದೇಶ್ವರ, ಎತ್ತಪ್ಪ ಜುಂಜಪ್ಪರ ಮೂಲಕ ಮಹಾಕಾವ್ಯಗಳಲ್ಲಿ; ಸಂಗೊಳ್ಳಿ ರಾಯಣ್ಣ, ಸರ್ಜಪ್ಪನಾಯಕ, ವೆಂಕಟಪ್ಪನಾಯಕರ ಮೂಲಕ ಲಾವಣಿಗಳಲ್ಲಿ ಪ್ರಭುತ್ವದ ವಿರುದ್ಧ ಕಿಡಿಕಾರಿವೆ. ಒಂದು ರೀತಿಯಲ್ಲಿ ಅಂದಿನ ಜಾಗತೀಕರಣವನ್ನು ಈ ರೀತಿ ವಿರೋಧಿಸಿವೆ. ಆದರೆ, ಇಂದಿನ ಜಾಗತೀಕರಣ ಹಾಗೂ ಅದರೊಂದಿಗೆ ಶಾಮೀಲಾದ ಸಂಸ್ಕೃತಿಗಳ ಅಹಂಕಾರವನ್ನು ವಿರೋಧಿಸಲು ಆಗುತ್ತಿಲ್ಲ, ಏಕೆಂದರೆ, ಅದು ಅಬಲ ಆಕೃತಿಗಳನ್ನು ಹೊಡೆದುರುಳಿಸುವಲ್ಲಿ ಹಲವು ತಂತ್ರಗಳನ್ನು ಹಾಗೂ ಪವರ್ ಪಾಲಿಟಿಕ್ಸ್‌ನ್ನು ಬಳಸಿಕೊಳ್ಳುತ್ತದೆ. ಇಲ್ಲಿ ರಾಮಾಯಣದ ರಾಮನನ್ನೇ ತೆಗೆದುಕೊಳ್ಳಬಹುದು. ರಾವಣನನ್ನು ಕೊಲ್ಲುವ ಮೂಲಕ ಲಂಕಾವನ್ನು ವಶಪಡಿಸಿಕೊಳ್ಳುವಲ್ಲಿ ರಾಮ ಬಳಸಿಕೊಂಡ ತಂತ್ರ ಸಹೋದರನನ್ನು ಸೀಳಿ ಆಳುವುದೇ ಆಗಿದೆ. ಈ ರೀತಿ ಗೆದ್ದ ರಾಜ್ಯದ ಸಿಂಹಾಸನಕ್ಕೆ ಸಹಕರಿಸಿದ ವಿಭೀಷಣನನ್ನು ತರಲಾಗಿದೆ. ಇದೇ ತರಹ ಇಂದು ಅಮೇರಿಕಾ ತಾನು ಗೆದ್ದ ಅಫಘಾನಿಸ್ತಾನಕ್ಕೆ ಕರ್ಜೈನನ್ನು ತಂದು ಕೂಡಿಸಿದೆ. ಒಂದರ್ಥದಲ್ಲಿ ಕೈಗೊಂಬೆ ಸರ್ಕಾರದ ಮೂಲಕ ತನ್ನ ಉತ್ಪಾದನೆಯ ವಸ್ತುಗಳಿಗೆ ಅಲ್ಲಿ ರಹದಾರಿ ಕಲ್ಪಿಸಿಕೊಳ್ಳುವುದೇ ಆಗಿದೆ. ಇಂಥ ವಸ್ತು-ವಿಶೇಷಗಳು ಬೀಜದ ಮೂಲಕ ಬಂದು ಅಲ್ಲಿಯ ಭೂಮಿಯನ್ನೇ ಬರಡಾಗಿಸಿವೆ. ಮಾಧ್ಯಮದ ಮೂಲಕ ಅಲ್ಲಿಯ ಸಂಸ್ಕೃತಿಯನ್ನೇ ನಾಶಪಡಿಸಿವೆ. ಕಸಿಯ ಮೂಲಕ . ಅಲ್ಲಿಯ ಹಸು, ಕುರಿ-ಕೋಳಿ, ನಾಯಿ-ನರಿಗಳನ್ನೇ ಬದಲಾಯಿಸಿವೆ. ಬೆಳೆದ ಬೆಳೆಗೆ ಬೆಲೆಯನ್ನೇ ಇಲ್ಲದಂತೆ ಮಾಡಿವೆ. ಸಾಂಪ್ರದಾಯಿಕ ಜ್ಞಾನಕೋಶಗಳನ್ನು ಬರಿದು ಮಾಡಿವೆ. ಈ ಎಲ್ಲಾ ದುಷ್ಪರಿಣಾಮಗಳು ಮೊದಲು ಘಟಿಸುವುದೇ 'ಇಲ್ಲದವರ ಮೇಲೆ'. 'ಉಳ್ಳವರು' ಇದರಿಂದ ಹೇಗಾದರೂ ಪಾರಾಗುತ್ತಾರೆ. ಇವು ದಲಿತರ ಮೇಲಿನ ಮೊದಲ ಶಾಕ್‌ಗಳು.

ಮೊನ್ನೆ ಇರಾಕ ಮೇಲೆ ನಡೆದ ಅಮೇರಿಕಾದ ದಾಳಿಯನ್ನೇ ಪರಿಶೀಲಿಸಬಹುದು. ಇರಾಕ ದೇಶ ರಾಸಾಯನಿಕ ಅಸ್ತ್ರಗಳನ್ನು ಹೊಂದಿದೆ ಎಂಬ ಕಾರಣಕ್ಕೆ ಅಮೇರಿಕಾ ಭಯಂಕರ ಬಾಂಬುಗಳ ಮೂಲಕ ಆ ದೇಶದ ಮೇಲೆ ದಾಳಿ ಮಾಡಿತು. ದಾಳಿಯಿಂದ ತತ್ತರಿಸಿದ ದೇಶವನ್ನು ಅಮೇರಿಕಾ ವಶಪಡಿಸಿಕೊಂಡಿತು. ಇದು ಸಹ ಥೇಟ್ ನಮ್ಮ ಹಲಗಲಿ ಬೇಡರ ಮೇಲಿನ ಆಕ್ರಮಣದಂತಿದೆ. ಹಲಗಲಿಯ ಬೇಡರು ಆಯುಧಗಳನ್ನು ಹೊಂದಿದ್ದಾರೆ ಎಂಬ ಕಾರಣಕ್ಕೆ ಅಂದಿನ ಬ್ರಿಟೀಷರು ಇಡೀ ಹಲಗಲಿ ಗ್ರಾಮವನ್ನೇ ಸುಟ್ಟು ಹಾಕಿದರು. ಸೆರೆಸಿಕ್ಕ ಬೇಡರನ್ನು ಮುದೋಳ್ ಬೀದಿಯಲ್ಲಿ ಬಹಿರಂಗವಾಗಿಯೇ ಗಲ್ಲಿಗೇರಿಸಿದರು. ಅಂದರೆ, ಅವತ್ತಿನ ವಸಾಹತುಗಾರ ಬ್ರಿಟೀಷರು ಮತ್ತು ಇವತ್ತಿನ ಜಾಗತಿಕ ಅಮೇರಿಕನ್ನರು ಮಾಡಿದ ದಾಳಿ ಒಂದು ರೀತಿಯಲ್ಲಿ ಒಂದೇ ತೆರನಾಗಿದೆ. ತಮ್ಮ ಪವರ್ ಪಾಲಿಟಿಕ್ಸ್‌ನ್ನು ವಿಸ್ತರಿಸಿಕೊಳ್ಳುವ ಮೂಲಕ ಅಲ್ಲಿಯ ಅಬಲ ಸಂಸ್ಕೃತಿಗಳನ್ನು ಆರ್ಥಿಕವಾಗಿ, ರಾಜಕೀಯವಾಗಿ, ಸಾಂಸ್ಕೃತಿಕವಾಗಿ ಖರೀಸುವುದೇ ಆಗಿದೆ. ಇಲ್ಲಿಯು ಸಹ

ಮೊದಲ ಖರೀದಿ ದಲಿತರೇ ಆಗಿರುತ್ತಾರೆಂದರೆ ಆಶ್ಚರ್ಯಪಡಬೇಕಿಲ್ಲ.

ಒಮ್ಮೆ ಪ್ರೊ. ಚಂಪಾ ಅವರು ತಮಾಷೆಗಾಗಿ ಮಾತಾಡುತ್ತ 'ಕುಲವೃತ್ತಿ ಮತ್ತು ಜಾತಿ ವ್ಯವಸ್ಥೆಗಳು ಜಾಗತೀಕರಣದಿಂದ ನಾಶವಾಗುವುದಾದರೆ, ಅಂಥ ಜಾಗತೀಕರಣವನ್ನು ನಾವೇಕೆ ಸ್ವಾಗತಿಸಬಾರದು?' ಅಂದಿದ್ದರು. ಖಂಡಿತಾ ಈ ತಮಾಷೆಯ ಮಾತಿನಲ್ಲಿ ಗಂಭೀರತೆಯೂ ಇದೆ. ಮೊಗಳ್ಳಿ ಗಣೇಶ್ ಅವರ ತರ್ಕಗಳು ಸಹ ಇದನ್ನೇ ಅಭಿವೃದ್ಧಿ ಪಡಿಸಿವೆ. ಅಂದರೆ, ಜಾಗತೀಕರಣದ ಲಾಭಗಳು ದಲಿತರಿಗೂ ಲಭಿಸಲೆಂಬುದು ಇವರ ಕಾಳಜಿ. ಫ್ರಿಜ್ಜು ಫ್ಯಾನು, ಫೋನು, ಟೀವಿ, ಟೇಬಲ್ಲುಗಳೆಲ್ಲ ದಲಿತರಿಗೂ ಬೇಕು. ಕೈಯಲ್ಲಿ ಮೊಬೈಲು, ಕಾಲಲ್ಲಿ ಕಾರು, ಅಮೇರಿಕದಲ್ಲಿ ಉದ್ಯೋಗ ಇವರಿಗೂ ಅನಿವಾರ್ಯವೇ. ಇದರಲ್ಲಿ ಖಂಡಿತಾ ಯಾರದೂ ಎರಡು ಅಭಿಪ್ರಾಯ ಇರಲಾರದು. ಆದರೆ, ಅಮೇರಿಕಾ ಕೇಳುವ ಜ್ಞಾನ ಮತ್ತು ಅದರೊದಿಗೆ ಪೈಪೋಟಿ-ನೀಡುವ ಶಕ್ತಿ ದಲಿತರಿಗೆ ಸಾಧ್ಯವೆ? ಈ ಪ್ರಶ್ನೆಗೆ ನಿರುದ್ಯೋಗ, ಅರೆ ಉದ್ಯೋಗಗಳು ಇಂದು ಉತ್ತರವಾಗಿವೆ. ಇಂದು ಭಾರತದಲ್ಲಿ ಬೀಡುಬಿಟ್ಟಿರುವ ಬೃಹತ್ ಉದ್ದಿಮೆಗಳಲ್ಲಿ ಎಷ್ಟು ಜನ ದಲಿತರಿಗೆ ಉದ್ಯೋಗ ಸಿಕ್ಕಿದೆ. ಇದು ಬೆರಳೆಣಿಕೆಯನ್ನೂ ಮೀರದು. ಸಣ್ಣಪುಟ್ಟ ವಿಪ್ರೋ, ಇನ್‌ಫೋಸಿಸ್, ಜಿಂದಾಲ್‌ನಂಥ ಖಾಸಗಿ ಕಂಪನಿಗಳಲ್ಲಿ ಇಂದಿಗೂ ಹಲವು ದಲಿತರಿಗೆ ದಾರಿ ಸಿಕ್ಕಿಲ್ಲ. ಇಲ್ಲಿ ಪ್ರತಿಭೆ, ದಕ್ಷತೆ, ಮೆರಿಟ್‌ನಂಥ ಹತ್ಯಾರಗಳು ದಲಿತರನ್ನು ಇರಿದು ಹಾಕುತ್ತಲೇ ಇವೆ. ಆಗ ಮೊಗಳ್ಳಿಯವರು ಕೇಳುವ ಜಾಗತೀಕರಣದ ಲಾಭಗಳು ದಲಿತರಿಗೆ ಕೇವಲ ಭ್ರಮೆಯ ಭಾವನೆಗಳಾಗುತ್ತವೆ, ಅಷ್ಟೇ.

ವಿಶೇಷವೆಂದರೆ, ಇಂದು ಕೆಲವು ದಲಿತರು ಜಾಗತೀಕರಣದಲ್ಲಿ ತಮಗೆ ಭವ್ಯ ಭವಿಷ್ಯವಿದೆಯೆಂದು ನಂಬಿದ್ದಾರೆ. ಇನ್ನು ಕೆಲವರು ಪರಂಪರೆಯಲ್ಲಿ ತಮಗೆ ಭವ್ಯ ಇತಿಹಾಸವಿದೆಯೆಂದು ಹಂಬಲಿಸುತ್ತಿದ್ದಾರೆ. ಅಚ್ಚರಿಯ ಸಂಗತಿಯೆಂದರೆ, ಇವರಿಬ್ಬರೂ, ವರ್ತಮಾನದಲ್ಲಿ ಬೇರು ಬಿಡುತ್ತಿಲ್ಲ. 'ಭೂತ' ಮತ್ತು 'ಭವಿಷ್ಯತ್ತು'ಗಳು ಇವತ್ತಿನ ದಲಿತರಿಗೆ ಒಂದೊಂದು ತುದಿಯ ಅಲೆಗಳಾಗುತ್ತಿವೆ. ಅಂದರೆ, ಅನಕ್ಷರಸ್ಥ ದಲಿತರು ಪರಂಪರೆ ಕಡೆ ಪಯಣಿಸುತ್ತಿದ್ದರೆ, ಅಕ್ಷರಸ್ಥ ದಲಿತರು ಜಾಗತೀಕರಣದತ್ತ ನಡೆಯುತ್ತಿದ್ದಾರೆ. ಜಾಗತೀಕರಣದಲ್ಲಿ ತಮ್ಮನ್ನು ತೆರೆದುಕೊಳ್ಳುತ್ತಿರುವ ದಲಿತರು 'ಪರಂಪರೆಯಲ್ಲಿ ತಮಗಾದ ಮಾಯದ ಗಾಯ ವನ್ನು ಮರೆಯಲು ಜಾಗತೀಕರಣದಲ್ಲಿ ಮುಲಾಮು ಹುಡುಕುತ್ತಿದ್ದೇವೆ ಎನ್ನುತ್ತಿದ್ದಾರೆ. ಜಾತಿ, ಕುಲ, ಗೋತ್ರ ಕರಗಿಸುವ ಶಕ್ತಿ ಜಾಗತೀಕರಣಕ್ಕಿರುವುದ ರಿಂದ ಕುಲಕಸುಬುಗಳು ಹುಟ್ಟುಹಾಕಿರುವ ನೋವು ಗಳನ್ನು ಮರೆಯಬೇಕಾಗಿದೆ' ಎನ್ನುತ್ತಿದ್ದಾರೆ. ಇದು ಚರ್ಚಾರ್ಹ ವಾದುದೆ. ಆದರೆ, ಅತ್ತ ಉದ್ದಿಮೆಗಳಲ್ಲಿ ಉದ್ಯೋಗವಿಲ್ಲ; ಇತ್ತ ಕುಲಕಸುಬು ಕೈಯಲ್ಲಿ ಇಲ್ಲ ಎನ್ನುವ ಸ್ಥಿತಿ ದಲಿತರಿಗೆ ಸೃಷ್ಟಿಯಾಗಿರುವುದನ್ನು ಅಲ್ಲಗೆಳೆಯ ಲಾಗದು.

ಜಾಗತೀಕರಣದ ಫಲವಾಗಿ ಇದ್ದ ಸಣ್ಣಪುಟ್ಟ ಗುಡಿ ಕೈಗಾರಿಕೆಗಳು ಒಕ್ಕಲೆದ್ದು ಹೋಗಿವೆ. ಕೂಲಿಗಾಗಿ ಒಡ್ಡುವ ಕೈಗಳ ಸಂಖ್ಯೆ ಹೆಚ್ಚಾಗುತ್ತಲೇ ಇದೆ. ಕಂಪ್ಯೂಟರ್, ಖಾಸಗೀಕರಣಗಳು ಮೊದಲು ಕತ್ತರಿಸಿ ಹಾಕಿದ್ದೇ ಇಂಥ ದುಡಿವ ಕೈಗಳನ್ನ. ನೂರು ಕೈಗಳ ಬದಲು ಇಂದು ಸರ್ಕಾಕ್ಕೆ ಒಂದು ಕಂಪ್ಯೂಟರ್ ಇದ್ದರೆ ಸಾಕು. ಹಾಗಾಗಿ, ಅವರ ಕೈ ಕಂಪ್ಯೂಟರ್ ಮೇಲೆ ಇದ್ದರೆ ಸಾಕು; ಕಾಲು ಅಮೇರಿಕಾದಲ್ಲಿರುತ್ತವೆ.

ಇದೇ ಸಂದರ್ಭದಲ್ಲಿ, ತೃತೀಯ ರಾಷ್ಟ್ರದ ಶೋಷಿತ/ ದಲಿತ ಕುಟುಂಬಗಳಲ್ಲಿ ಹಲವು ತಲ್ಲಣಗಳಿವೆ. ಕೈಗಳು ಕೂಲಿ ಕಳೆದುಕೊಂಡಿವೆ. ಮನಸ್ಸುಗಳು ಮಾರಾಟ ವಾಗುತ್ತಿವೆ, ಅಕ್ಷರಗಳು ಹೈಟೆಕ್‌ಗೊಳ್ಳುತ್ತಿವೆ. ಇಂಥ ಸಂದರ್ಭದಲ್ಲಿ ದಲಿತರಿಗೆ ಖಂಡಿತಾ ಜಾಗತೀಕರಣ ವರವಾಗದು. ●

ಸಂವಾದ

ಚಂದಾ ವಿವರ

'ಸಂವಾದ' ಚಂದಾ ದರವನ್ನು ಅಕ್ಟೋಬರ್ 2003ರಿಂದ ಅನ್ವಯಿಸುವಂತೆ ಈ ಕೆಳಗಿನಂತೆ ಪರಿಷ್ಕರಿಸಲಾಗಿದೆ. ಚಂದಾ ವಿಶೇಷಾಂಕಗಳನ್ನು ಒಳಗೊಂಡಿರುತ್ತದೆ.

ಬಿಡಿ ಪ್ರತಿ ರೂ. 20/-	ಒಂದು ವರ್ಷಕ್ಕೆ	ಮೂರು ವರ್ಷಕ್ಕೆ	ಐದು ವರ್ಷಕ್ಕೆ
1. ವಿದ್ಯಾರ್ಥಿಗಳು ಹಾಗೂ ಪ್ರಗತಿಪರ ಸಂಘಟನೆಗಳ ಕಾರ್ಯಕರ್ತರಿಗೆ *	ರೂ. 150/-	ರೂ. 400/-	ರೂ. 650/-
2. ನೌಕರರು ಮತ್ತು ಇತರೆ ವೃತ್ತಿ ಪರರಿಗೆ	ರೂ. 200/-	ರೂ. 500/-	ರೂ. 800/-
3. ಸಂಘ-ಸಂಸ್ಥೆಗಳು, ಅಧಿಕಾರಿಗಳು ಹಾಗೂ ಉದ್ಯಮಿಗಳಿಗೆ	ರೂ. 240/-	ರೂ. 600/-	ರೂ. 1000/-
4. ವಿಶೇಷ ಹಿತೈಷಿ ಚಂದಾದಾರರಿಗೆ	ರೂ. 500/-	ರೂ. 1500/-	ರೂ. 2500/-

ಅಜೀವ ಚಂದಾ ರೂ. 5000/- (ಒಂದು ಬಾರಿ ನೀಡಿಕೆ)
ಪೋಷಕ ಚಂದಾ ರೂ. 10,000/- (ಒಂದು ಬಾರಿ ನೀಡಿಕೆ)

** ವಿದ್ಯಾರ್ಥಿಗಳು ಹಾಗೂ ಪ್ರಗತಿಪರ ಸಂಘಟನೆಗಳ ಕಾರ್ಯಕರ್ತರಿಗೆ ನೀಡುವ ರಿಯಾಯತಿ ಚಂದಾ ಪಡೆಯಲು ಸಂಬಂಧಿಸಿದ ಶಾಲಾ-ಕಾಲೇಜು ಅಥವಾ ಸಂಘ ಸಂಸ್ಥೆಯ ದೃಢೀಕರಣ ಪತ್ರ ಒದಗಿಸಬೇಕು.*

ವಿ.ಸೂ.: ಬೆಂಗಳೂರು ನಗರ ವ್ಯಾಪ್ತಿಯ ಹೊರಗಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ಅಂಚೆ ಮೂಲಕ ನೇರವಾಗಿ ಚಂದಾ ಕಳಿಸುವವರು ಎಂ.ಓ ಅಥವಾ ಡಿ.ಡಿ. ಮೂಲಕ ಮಾತ್ರ ಕಳುಹಿಸಬೇಕು. ಎಂ. ಓ ಅಥವಾ ಡಿ.ಡಿ.ಯನ್ನು **'ಸಂಪಾದಕರು, ಸಂವಾದ'** ಹೆಸರಿಗೆ ಮಾತ್ರ ಕಳುಹಿಸಬೇಕು. ಯಾವುದೇ ಕಾರಣಕ್ಕೂ ವೈಯಕ್ತಿಕ ಹೆಸರಿನಲ್ಲಿ ಕಳುಹಿಸಬಾರದು.

ಚಂದಾ ಕಳುಹಿಸಬೇಕಾದ ವಿಳಾಸ :
ಸಂಪಾದಕರು, 'ಸಂವಾದ' ಮಾಸಪತ್ರಿಕೆ,
ಸ್ಫೂರ್ತಿಧಾಮ, ಅಂಜನಾನಗರ,
ವಿಶ್ವನೀಡಂ ಅಂಚೆ, ಬೆಂಗಳೂರು - 560 091

ಚಂದಾದಾರರಲ್ಲಿ ಮನವಿ

'ಸಂವಾದ'ವನ್ನು ಪ್ರತಿ ತಿಂಗಳ 13ರಂದು ಅಂಚೆಗೆ ಹಾಕಲಾಗುತ್ತದೆ. ಎಷ್ಟೇ ತಡವಾದರೂ ಆಯಾ ತಿಂಗಳ 20ನೇ ತಾರೀಖಿನ ಒಳಗೆ ಅದು ತಮಗೆ ತಲುಪುತ್ತದೆ. ಹಾಗೇನಾದರೂ 20ರ ಒಳಗಾಗಿ ತಮಗೆ ಪತ್ರಿಕೆ ಸಿಗದಿದ್ದರೆ, ದಯವಿಟ್ಟು ನಿಮ್ಮ ಮನೆ ವ್ಯಾಪ್ತಿಗೆ ಬರುವ ಅಂಚೆ ಕಚೇರಿಯಲ್ಲಿ ಒಮ್ಮೆ ವಿಚಾರಿಸಿ- ಸಾಧ್ಯವಾದರೆ ಪತ್ರಿಕೆ ತಲುಪದಿರುವ ಬಗೆಗೆ ಲಿಖಿತ ದೂರು ನೀಡಿ, ಪ್ರತಿಯೊಂದನ್ನು ನಮಗೆ ಕಳುಹಿಸಿ. ಅದರ ಆಧಾರದ ಮೇಲೆ ಇಲ್ಲಿನ ಅಂಚೆ ಕಚೇರಿಯಲ್ಲಿ ನಾವು ವಿಚಾರಿಸಿ, ಪತ್ರಿಕೆ ಸಕಾಲಕ್ಕೆ ತಲುಪುವಂತೆ ವ್ಯವಸ್ಥೆ ಮಾಡುತ್ತೇವೆ.

- ಸಂಪಾದಕ

ದೇಶೀವಾದದ ನೆಲೆಗಳ ಹಿನ್ನೆಲೆಯಲ್ಲಿ

ಗಾಂಧಿ-ಅಂಬೇಡ್ಕರ್ ಮುಖಾಮುಖಿ

ಗಾಂಧೀಜಿ ಮತ್ತು ಅಂಬೇಡ್ಕರ್ ಸಮಕಾಲೀನರು. ಒಂದೇ ಕಾಲಘಟ್ಟದಲ್ಲಿ ಭಾರತದ ರಾಜಕೀಯ-ಸಾಮಾಜಿಕ ಕ್ಷೇತ್ರಗಳ ಉನ್ನತಿಗಾಗಿ ಶ್ರಮಿಸಿದವರು. ಆದರೆ ಇತ್ತೀಚೆಗೆ ಅನೇಕರ ಮಾತುಗಳಲ್ಲಿ ಈ ಇಬ್ಬರು ಮೇರು ವ್ಯಕ್ತಿಗಳೂ ಪರಸ್ಪರ ದ್ವೇಷಿಗಳು ಎಂಬಂತೆ ಬಿಂಬಿಸಲಾಗುತ್ತಿದೆ. ವೈಚಾರಿಕವಾಗಿ ಇಬ್ಬರ ನಡುವೆ ಭಿನ್ನಾಭಿಪ್ರಾಯಗಳು ಇದ್ದುವಾದರೂ ಯಾರೂ ಪರಸ್ಪರರನ್ನು ಶತ್ರುಗಳಂತೆ ಕಾಣುತ್ತಿರಲಿಲ್ಲ. ಅಂಬೇಡ್ಕರ್ ಮತ್ತು ಗಾಂಧೀಜಿಯವರು ಹೊಂದಿದ್ದ ವಿಚಾರಗಳ ಮೇಲೆ ಬೆಳಕು ಚೆಲ್ಲುವ ಪ್ರಯತ್ನವಾಗಿ, ಗಾಂಧೀಜಿಯವರ ಜನ್ಮದಿನಾಚರಣೆಯ ಸಂದರ್ಭದಲ್ಲಿ ಈ ಲೇಖನವನ್ನು ಪ್ರಕಟಿಸುತ್ತಿದ್ದೇವೆ.

○ ಸಿ.ಬಿ. ಹೊನ್ನಯ್ಯ



ಇಂಡಿಯಾದಂಥ ದೇಶ, ಬಹುಸಂಸ್ಕೃತಿಗಳ ದೇಶ. ಆದ್ದರಿಂದ, ಅದರಿಂದ ಹುಟ್ಟುವ ದೇಶೀವಾದವು ವಿಭಿನ್ನನೆಲೆಗಳ ತಾಣವಾಗಿರುತ್ತದೆ. ಅದು ಏಕಕಾಲದಲ್ಲಿ ಸ್ವದೇಶಿವಾದ, ಸ್ಥಳೀಯವಾದ, ಪ್ರಾಂತೀಯವಾದ ಇವುಗಳ ಸಮಗ್ರತೆಯ ದೃಷ್ಟಿಯಿಂದ ರಾಷ್ಟ್ರೀಯವಾದ ವಾಗಿರುತ್ತದೆ. ಹಾಗೆಯೇ ಜಾತಿಯ ನೆಲೆಗಳಿಂದಲೂ ಅದು ವಿಭಿನ್ನವಾಗಿರುತ್ತದೆ. ಜಾತಿಯಿಂದ ಪುರಸ್ಕರಿಸ್ಪಟ್ಟ ಸ್ಪರ್ಶಮೂಲದವರಿಗೆ ಈ ದೇಶೀಯವಾದ ಒಂದು ರೀತಿಯಲ್ಲಿ ಕಂಡರೆ, ಜಾತಿಯಿಂದ ತಿರಸ್ಕರಿಸ್ಪಟ್ಟ ಅಸ್ಪೃಶ್ಯ ಮೂಲದವರಿಗೆ ಇನ್ನೊಂದು ರೀತಿಯಲ್ಲಿ ಕಾಣುತ್ತದೆ. ಹಾಗೆಂದ ಮಾತ್ರಕ್ಕೆ ಈ ಭಿನ್ನನೆಲೆಗಳು ದೇಶೀಯವಾದಕ್ಕೆ ವಿರುದ್ಧ ಪ್ರಕ್ರಿಯೆಗಳೆಂದು ತಿಳಿಯಬೇಕಾಗಿಲ್ಲ, ಅವುಗಳು ಏಕತೆಯಲ್ಲಿ ವಿವಿಧತೆಯನ್ನು ಪ್ರತಿಪಾದಿಸುವ ರಾಷ್ಟ್ರೀಯ ವಾದವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಇಂಡಿಯಾದೇಶದ ಚರಿತ್ರೆಯ ಎರಡು ದಿಗ್ಗಜಗಳಾದ ಗಾಂಧೀಜಿ ಮತ್ತು ಅಂಬೇಡ್ಕರ್‌ರವರ ಚಿಂತನೆಯ ನೆಲೆಗಳಲ್ಲಿ ಈ ದೇಶೀ ವಾದವನ್ನು ಇಲ್ಲಿ ವಿವರಿಸಲು ಪ್ರಯತ್ನ ಮಾಡುತ್ತೇನೆ.

ಗಾಂಧೀಜಿಯ ದೇಶೀಯವಾದ ಹಿಂದೂಧರ್ಮದ ಸನಾತನಸಂಸ್ಕೃತಿಗಳ ವೈಭವೀಕರಣದ ಸಿದ್ಧಮಾದರಿಯ ನೆಲೆಯಿಂದ ಹೊರಡುತ್ತದೆ. ಗುಡಿಕೈಗಾರಿಕೆ, ಗ್ರಾಮ-ಸ್ವರಾಜ್ಯ, ಗ್ರಾಮೋದ್ಯೋಗ, ಚರಕ, ಸ್ವದೇಶಿ ವಸ್ತುಗಳ ಬಳಕೆ ಮದ್ಯಪಾನ ನಿರೋಧ, ಪ್ರಾಣಬಲಿ ನಿಷೇಧ, ಬ್ರಹ್ಮಚರ್ಯ ಮತ್ತು ಸರಳ ಜೀವನ ಇನ್ನೂ ಮುಂತಾದ ಪಡಿಹಚ್ಚಿನಲ್ಲಿ ಇವುಗಳು ಅವರ ಕಣ್ಣಿನ ಬೆಳಕಾಗಿದ್ದವು. ಆ ಬೆಳಕು ಗಾಂಧೀಜಿಯವರ ರಾಷ್ಟ್ರೀಯವಾದದ 'ಸ್ವಾತಂತ್ರ್ಯ ಚಳುವಳಿ'ಯ ಮುಂಬೆಳಕೂ ಆಗಿತ್ತು. ಈ ರೀತಿಯ ಬೆಳಕಿನ ಹಿನ್ನೆಲೆಯಲ್ಲಿ ಗಾಂಧೀಜಿಯವರು ಈ ದೇಶದ ದಲಿತರ, ಕೆಳಜಾತಿ-ವರ್ಗಗಳ, ಅಲ್ಪಸಂಖ್ಯಾತರ ಹಾಗೂ ಮಹಿಳೆಯ ಸಂಪೂರ್ಣ ಅಭಿವೃದ್ಧಿಯನ್ನು, ಸಮಾನತೆ, ಸ್ವಾತಂತ್ರ್ಯವನ್ನು ಬಯಸಿದ್ದರು. ಅಲ್ಲದೆ ಅವುಗಳ ನಂಬಿಕೆ ಆಚರಣೆಗಳ ಕಾರ್ಯರೂಪದ ಹೋರಾಟದ ಗಾಲಿಯಲ್ಲಿ ಗಾಂಧೀಜಿಯವರು ಧುಮುಕಿದ್ದರು. ಇಂತಹ ಗಾಲಿಯಲ್ಲಿ ನಿಂತ ಗಾಂಧೀಜಿಯವರು ಆಧುನೀಕರಣವನ್ನು ಕುರಿತು ತಮ್ಮ 'ಹಿಂದೂ ಸ್ವರಾಜ್' ಪತ್ರಿಕೆಯಲ್ಲಿ 'ಪಾಶ್ಚಾತ್ಯ ನಾಗರೀಕತೆಯು ಅದು ಸೈತಾನಿನಾಗರೀಕತೆ, ಅದರಲ್ಲಿನ ರೈಲು ಪ್ರಯಾಣ, ಹಡಗುಪ್ರಯಾಣ, ಆಸ್ಪತ್ರೆಗಳು ಪಾಪದ ಕೂಪದ ಕೇಂದ್ರಗಳು. ಈ ಐವತ್ತು ವರ್ಷಗಳಲ್ಲಿ ನಾವು ಕಲಿತಿರುವುದನ್ನು ತೊರೆಯುವುದರಿಂದಲೇ ಭಾರತ ಉದ್ಧಾರವಾಗಲು ಸಾಧ್ಯ'. ಎಂದು ಬರೆಯುತ್ತಾರೆ. ಈ ಸ್ಪಷ್ಟ ನಿಲುವಿನೊಂದಿಗೆ ಗಾಂಧೀಜಿಯವರು ಆಧುನೀಕರಣದ ವಿರೋಧಿಗಳಾಗಿ, ಹಿಂದೂ ಸನಾತನ ಸಂಸ್ಕೃತಿಗಳ ವಕ್ತಾರರಾಗಿ ತಮ್ಮ ಮನಸ್ಥಿತಿಯ ಭಾರತವನ್ನು ಮೈತುಂಬಾ ಹೊದ್ದುಕೊಂಡಿದ್ದರೆಂದು ಗೊತ್ತಾಗುತ್ತದೆ. ಈ ನೆಲೆ ಗಾಂಧೀಜಿಯವರ ಮನಸ್ಥಿತಿಯ ದೇಶಿಯ ನೆಲೆಯನ್ನು ವಿವರಿಸಿಕೊಳ್ಳುತ್ತದೆ.

ಹಿಂದೂಧರ್ಮದ ವರ್ಣಾಶ್ರಮ ಪದ್ಧತಿಗಳು ಭಾರತ ದೇಶದ ಶೇಕಡ 80% ರಷ್ಟು ಜಾತಿ ಜನಾಂಗಗಳನ್ನು ಅಸ್ಪೃಶ್ಯರನ್ನಾಗಿ ಮಾಡಿಕೊಂಡಿದ್ದವು. ಅಷ್ಟೇ ಅಲ್ಲದೆ ಅವರ ಸ್ವಾತಂತ್ರ್ಯ, ಸಮಾನತೆ, ಸಹೋದರತ್ವ ಮುಂತಾದ ಮಾನವೀಯ ಸಂಬಂಧಗಳನ್ನು ಕಿತ್ತುಕೊಂಡು ನಾಯಿ, ನರಿ, ಕತ್ತೆಗಳಿಗಿಂತಲೂ ಅತ್ಯಂತ ಹೀನಾಯವಾಗಿ ಕಂಡಿದ್ದವು. ಇಂತಹ ದೇಶೀಯ ಧರ್ಮದ ನೆಲೆಯಲ್ಲಿಯೇ ಗಾಂಧೀಜಿಯವರು 'ಸ್ವತಂತ್ರ ಭಾರತ'ದ ಜಾತ್ಯಾತೀತ ಸಮಾಜವನ್ನು ಕಟ್ಟಲು ಕರೆಕೊಟ್ಟಿದ್ದರು. ಆದರೆ ಅವರ ನಿಲುವು ಎರಡಕ್ಕೆ ಬಿಟ್ಟ ಕರುವಿನಂತೆ ಇದ್ದಿತು. ಅದು ಬ್ರಿಟಿಷ್ ಸಾಮ್ರಾಜ್ಯಶಾಹಿಯಿಂದ ಭಾರತದ ಸ್ವರಾಜ್ಯವನ್ನು ಬಿಟ್ಟು ಕೊಡಲಾರದ, ಈ ಕಡೆ ಹಿಂದೂ ಸನಾತನ ಸಂಸ್ಕೃತಿಯನ್ನು ಬಿಟ್ಟುಕೊಡಲಾರದ ನಿಲುವಿನ ಭಾಗವಾಗಿತ್ತು. ಈ ನಿಲುವಿನಲ್ಲಿ ಗಾಂಧೀಜಿಯನ್ನು ಅವರದೇ ಆದ ಮಿತಿಯಲ್ಲಿ ಅರ್ಥಮಾಡಿಕೊಂಡು ಸುಮ್ಮನಾದರು. ಅದು ದಲಿತರಿಗೆ ಕೆಳಜಾತಿ-ವರ್ಗಗಳಿಗೆ, ಅಲ್ಪಸಂಖ್ಯಾತರಿಗೆ ಮತ್ತು ಮಹಿಳೆಯ ಗ್ರಹಿಕೆಗಳಿಗೆ ನೇತಾತ್ಮಕವಾಗಿ ಕಾಣಿಸಿಕೊಂಡರೆ ಆಶ್ಚರ್ಯ ಪಡಬೇಕಾಗಿಲ್ಲ. ಏಕೆಂದರೆ ಹಿಂದೂ ವರ್ಣಾಶ್ರಮ ಪದ್ಧತಿಗಳನ್ನು ಒಪ್ಪಿಕೊಂಡೇ ಅಸ್ಪೃಶ್ಯತೆಯನ್ನು ತೊಡೆದು ಹಾಕಿ ಭಾರತದ ರಾಜಕೀಯ, ಸಾಮಾಜಿಕ, ಆರ್ಥಿಕ ಸ್ವಾತಂತ್ರ್ಯ- ಸಮಾನತೆಗೆ ಕರೆಕೊಡುವ ವಿಚಾರ ಈ ರೀತಿ ಕಂಡುಬರುತ್ತದೆ.

ಗಾಂಧೀಜಿಯ ನಾಯಕತ್ವದ 'ಸ್ವಾತಂತ್ರ್ಯ ಚಳುವಳಿ'ಯು ಹಿಂದೂ ಸಂಪ್ರದಾಯವಾದಿ ಉದಾರ ವಾದಿ ಚಿಂತನೆಗಳ ಚಿಲುಮೆಯ ಆಗರವಾಗಿತ್ತು. ಅವುಗಳ ಮೂಲಕವೇ ಬ್ರಿಟಿಷ್ ಸಾಮ್ರಾಜ್ಯಶಾಹಿಯಿಂದ ರಾಜಕೀಯ ಸ್ವಾತಂತ್ರ್ಯವನ್ನು ಪಡೆಯಲು ಯಶಸ್ವಿ

ಯಾಯಿತು. ವಿಪರ್ಯಾಸವೆಂದರೆ ಈ ಯಶಸ್ಸಿಗೆ ಗಾಂಧೀಜಿಯವರು ಹಿಂದೂ ಧರ್ಮದ ಸನಾತನ ಸಂಸ್ಕೃತಿಗಳ ತತ್ವಸಿದ್ಧಾಂತಗಳನ್ನು ಅಸ್ತ್ರವನ್ನಾಗಿ ಮಾಡಿಕೊಳ್ಳಲಿಲ್ಲ ವೆಂದು, ಅದರ ಬದಲಾಗಿ ಮಹಾವೀರನ ಜೈನಧರ್ಮದ ವೈಪರಿತ್ಯ ತತ್ವಸಿದ್ಧಾಂತಗಳಾದ ಉಪವಾಸ, ಅಹಿಂಸಾ ತತ್ವ, ಸತ್ಯಾಗ್ರಹ, ಅಸಹಕಾರ, ಬಹಿಷ್ಕಾರ ಮುಂತಾದ ಪ್ರಬಲ ಅಸ್ತ್ರಗಳನ್ನು ಪ್ರಯೋಗಿಸಿ ಈ ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟ ರೆಂಬುದನ್ನು ಯಾರೂ ಮರೆಯಬಾರದು. ಈ ಏಟ್ಟಿನಲ್ಲಿ ಭಾರತಕ್ಕೆ ಸ್ವಾತಂತ್ರ್ಯವನ್ನು ತಂದುಕೊಡು ವಲ್ಲಿ ಗಾಂಧೀಜಿಯವರಿಗೆ ಹಿಂದೂಸನಾತನ ಸಂಸ್ಕೃತಿ ಗಳು ಪ್ರಯೋಜನಕ್ಕೆ ಬರಲಿಲ್ಲವೆಂಬ ಸತ್ಯವನ್ನು ಹಿಂದೂ ಸನಾತನಿಗಳು ಅರ್ಥಮಾಡಿಕೊಳ್ಳಬೇಕಾಗಿದೆ. ಈ ಚಾರಿತ್ರಿಕ ಸತ್ಯ ಗಾಂಧೀಜಿಯವರಿಗೆ ಮೊದಲೇ ಗೊತ್ತಿತ್ತು, ಆದ್ದರಿಂದಲೇ ಗಾಂಧೀಜಿಯವರು ಭಾರತದ ವಿವಿಧ ಜಾತಿ, ಧರ್ಮ, ಪಂಗಡ ಸಂಸ್ಕೃತಿಗಳನ್ನು ಮೋಡಿ ಮಾಡುವಂತಹ 'ಮೋಡಿಗಾರ'ನಾಗಿ ಜೈನಧರ್ಮದ ತತ್ವ ಸಿದ್ಧಾಂತಗಳನ್ನು ಅಸ್ತ್ರವಾಗಿ ಬಳಸಿಕೊಂಡಿದ್ದು ಎನಿಸುತ್ತದೆ. ಹಾಗೆಯೇ ಈ ಅಸ್ತ್ರಗಳಿಂದ ಈ ದೇಶದ ಶ್ರಮಜೀವಿಗಳ ಬೆವರು ದುಡಿಮೆಯ ಕೂಲಿಯನ್ನು ದೋಚಿಕೊಂಡು ಆರ್ಥಿಕ ಸಾಮಾಜಿಕ ಅಸಮಾನತೆಗೆ ಕಾರಣರಾದ ಬೂರ್ಜ್ವಾ ಮೂಲ ಭೂತವಾದಿಗಳ ಭೂಮಾಲೀಕತ್ವ, ಜಮೀನ್ದಾರ ಪದ್ಧತಿ, ಬಂಡವಾಳಶಾಹಿ ವ್ಯವಸ್ಥೆಯ ವಿರುದ್ಧ ಒಮ್ಮೆಯಾದರೂ ಕ್ರಿಯಾಶೀಲವಾಗಿ ಪ್ರಯೋಗಿಸಲಿಲ್ಲ, ಮತ್ತು ಆ ವ್ಯವಸ್ಥೆಯನ್ನು ಕುರಿತು ಪ್ರಶ್ನೆಯನ್ನೂ ಮಾಡಲಿಲ್ಲ. ಇದು ಗಾಂಧೀಜಿಯವರ ಮಿತಿ ಇರಬಹುದು. ಆದರೆ ಗಾಂಧೀಜಿಯವರ ಈ ದಿಕ್ಕಿನಿಂದಲೂ ಚಳುವಳಿಯಲ್ಲಿ ಸ್ಥಾನಕಲ್ಪಿಸಿಕೊಟ್ಟು ಕ್ರಿಯಾಶೀಲರಾಗಿದ್ದಾರೆ. ಬಹುಶಃ ಭಾರತದ ಚಿತ್ರಣವೇ ಬೇರೆಯಾಗಿ ಕಂಗೊಳಿಸುತ್ತಿತ್ತೆಂದು ತೋರಿಸುತ್ತದೆ.

ಈ ರೀತಿಯ ಆಲೋಚನೆಗಳ ಹಿನ್ನೆಲೆಯಲ್ಲಿ ಗಾಂಧೀಜಿ ದೇಶೀವಾದದ ನೆಲೆ ಇಪ್ಪತ್ತೊಂದನೆಯ ಶತಮಾನದಲ್ಲಿ ಆಧುನಿಕತೆಯ ವಿಜ್ಞಾನ, ತಂತ್ರಜ್ಞಾನ, ವೈಚಾರಿಕತೆ, ವೈಜ್ಞಾನಿಕತೆಗಳ ಮಧ್ಯಸಿಕ್ಕಿ ಜರ್ಜರಿತವಾಗುತ್ತಿವೆ. ಹಾಗೆಂದ ಮಾತ್ರಕ್ಕೆ ಗಾಂಧೀಜಿಯವರ ವಿಚಾರಧಾರೆಗಳು ಅಪ್ರಸ್ತುತವಾಗುತ್ತವೆಂದು ಅರ್ಥವಲ್ಲ, ಅಂದರೆ ಇಂದು ಭಾರತ ಆಧುನೀಕರಣ ಪಾಶ್ಚಾತ್ಯೀಕರಣ, ಜಾಗತೀಕರಣ (ಹೈಟೆಕ್ ಸಂಸ್ಕೃತಿ)ಗಳ ನಾಗಾಲೋಟದಲ್ಲಿ ಗಾಂಧೀಜಿಯ ಯಾವ ವಿಚಾರಧಾರೆಗಳು ಉಳಿಯುವ ಸ್ಥಿತಿಯಲ್ಲಿ ಇಲ್ಲ, ಏಕೆಂದರೆ ಆ ವಿಚಾರಗಳು ವೈಚಾರಿಕ ವೈಜ್ಞಾನಿಕ ನಿಲುವುಗಳಿಗೆ ತಾಳಿಕೆಯಾಗುತ್ತಿಲ್ಲ, ಆದ್ದರಿಂದ ಅವೆಲ್ಲವೂ ಪಾಶ್ಚಾತ್ಯೀಕರಣದಲ್ಲಿ ಪರಿವರ್ತನೆ, ರೂಪಾಂತರಗಳಾಗಿ ಮಾರ್ಪಡುತ್ತಿವೆ. ಈ ರೀತಿಯ ಪ್ರಕ್ರಿಯೆ ಆಧುನಿಕತೆಯ ನಿರಂತರ ಸತ್ಯ ಸಂಗತಿಗಳು, ಇವುಗಳನ್ನು ಯಾರೂ ತಡೆಯಲಾರರು. ಈ ಮಾದರಿಗಳು ಅತ್ಯಗತ್ಯವಾಗಿ ಸಾವಿರಾರು ವರ್ಷಗಳಿಂದ ತುಳಿತಕ್ಕೊಳಪಟ್ಟ ದಲಿತರಿಗೆ, ಕೆಳಜಾತಿಗಳಿಗೆ, ಮಹಿಳೆಯರಿಗೆ ಅವರ ಸಾಮಾಜಿಕ, ಆರ್ಥಿಕ ಸಮಾನತೆಗಾಗಿ ಬೇಕೆಬೇಕಾಗಿದೆ. ಆ ಮೂಲಕ 'ಮುಟ್ಟುವ', 'ಮುಟ್ಟಿಸಿ ಕೊಳ್ಳುವ' ಸಂಸ್ಕೃತಿಯೊಂದು ರೂಪಗೊಳ್ಳಲು ಸಾಧ್ಯವಾಗುತ್ತದೆ. ಈ ಹಿನ್ನೆಲೆಯಲ್ಲಿ ಇಂದು ಆಧುನೀಕರಣ, ಪಾಶ್ಚಾತ್ಯೀಕರಣ, ಜಾಗತೀಕರಣಗಳು ಗಾಂಧೀಜಿಯವರ ವಿಚಾರಧಾರೆಗಳಿಗೆ ವಿಭಿನ್ನವಾಗಿ ದಲಿತರನ್ನೊಳಗೊಂಡಂತೆ ಎಲ್ಲಾ ಜಾತಿ ಜನಾಂಗಗಳನ್ನು ಬಹು ದೂರಕ್ಕೆ ಕರೆದುಕೊಂಡು ಹೋಗಿ ಅನೇಕ ಬದಲಾವಣೆಗಳನ್ನು ಉಂಟುಮಾಡುತ್ತಿವೆ. ಅವರಲ್ಲಿ ವೈಚಾರಿಕತೆ, ವೈಜ್ಞಾನಿಕ ಮನೋಭಾವಗಳನ್ನು ಉಂಟುಮಾಡಿ ತಲ್ಲಣಗಳಿಗೂ ಕಾರಣವಾಗುತ್ತಿವೆ. ಅದನ್ನು ನಾವು ದೇಶಕ್ಕೆ ಸ್ವಾತಂತ್ರ್ಯಬಂದ ಈ ಐವತ್ತೈದು ವರ್ಷಗಳಲ್ಲಿ ಕಾಣುತ್ತಿದ್ದೇವೆ. ಈ ಬೆಳವಣಿಗೆಗಳನ್ನು ದಲಿತ, ಕೆಳಜಾತಿ ವರ್ಗಗಳ, ಮಹಿಳೆಯರ ಪಾಲಿಗೆ ಪ್ರಾರಂಭದ ಹಂತವಾಗಿ ಮಾತ್ರ ಗುರುತಿಸಿಕೊಳ್ಳಬೇಕಾಗಿದೆ.

ಡಾ. ಬಾಬಾಸಾಹೇಬ್ ಅಂಬೇಡ್ಕರ್‌ರವರು ಜಾತಿಯಿಂದ ಅಸ್ಪೃಶ್ಯರಾದ್ದರಿಂದ ಅವರಲ್ಲಿ ಹುಟ್ಟುವ ದೇಶಿವಾದದ ನೆಲೆ, ಮಹಾತ್ಮ ಗಾಂಧೀಜಿಯವರ ದೇಶಿಯವಾದದ ನೆಲೆಗೆ ಸಂಪೂರ್ಣವಾಗಿಯೇ ವಿಭಿನ್ನಸ್ವರೂಪದ ಆಲೋಚನೆಯ ಮಾದರಿಯಾಗಿ ಕಾಣಿಸಿಕೊಳ್ಳುತ್ತದೆ. ಈ ಇಬ್ಬರು ನಾಯಕರು ಸಮಕಾಲೀನರಾದರೂ ಅವರ ಆಲೋಚನೆ, ಹುಟ್ಟಿದ ಪರಿಸರ, ಬೆಳೆದ ಹಿನ್ನೆಲೆಯಲ್ಲಿ ಭಿನ್ನತೆಗೆ ಕಾರಣಗಳನ್ನು ಹುಡುಕಿ ಕಟ್ಟಿಕೊಳ್ಳುತ್ತವೆ. ಸ್ಪರ್ಶ ಮೂಲದಿಂದ ಬಂದ ಗಾಂಧೀಜಿಯರವಿಗೆ ಸಹಜವಾಗಿ ಹಿಂದೂಧರ್ಮದ ಸನಾತನ ಸಂಸ್ಕೃತಿಗಳು ಆದರ್ಶ ವೈಭವೀಕರಣವಾಗಿ ಕಂಡು ಬಂದರೆ, ಅಂಬೇಡ್ಕರ್‌ರವರಿಗೆ ತನ್ನನ್ನು, ತನ್ನ ಜನಾಂಗವನ್ನು ಮಡಿಮೈಲಿಗೆಯಿಂದ ಅತ್ಯಂತ ಕೀಳಾಗಿ, ನಾಯಿ, ನರಿಗಳಿಗಂತಲೂ ನಿಕೃಷ್ಟವಾಗಿ, ಅನಾಗರೀಕವಾಗಿ ಕಾಣುವ, ಕಾಡುವ ಸನಾತನ ಹಿಂದೂ ಧರ್ಮ ಸಂಸ್ಕೃತಿಗಳು ಸಹಜವಾಗಿಯೇ ತಿರಸ್ಕಾರಕ್ಕೆ ಕಾರಣವಾಗುತ್ತದೆ.

ಡಾ. ಬಾಬಾಸಾಹೇಬ್ ಅಂಬೇಡ್ಕರ್‌ರವರು ಜಾತಿಯಿಂದ ಅಸ್ಪೃಶ್ಯರಾದ್ದರಿಂದ ಅವರಲ್ಲಿ ಹುಟ್ಟುವ ದೇಶಿವಾದದ ನೆಲೆ, ಮಹಾತ್ಮ ಗಾಂಧೀಜಿಯವರ ದೇಶಿಯವಾದದ ನೆಲೆಗೆ ಸಂಪೂರ್ಣವಾಗಿಯೇ ವಿಭಿನ್ನ ಸ್ವರೂಪದ ಆಲೋಚನೆಯ ಮಾದರಿಯಾಗಿ ಕಾಣಿಸಿಕೊಳ್ಳುತ್ತದೆ. ಈ ಇಬ್ಬರು ನಾಯಕರು ಸಮಕಾಲೀನರಾದರೂ ಅವರ ಆಲೋಚನೆ, ಹುಟ್ಟಿದ ಪರಿಸರ, ಬೆಳೆದ ಹಿನ್ನೆಲೆಯಲ್ಲಿ ಭಿನ್ನತೆಗೆ ಕಾರಣಗಳನ್ನು ಹುಡುಕಿ ಕಟ್ಟಿಕೊಳ್ಳುತ್ತವೆ. ಸ್ಪರ್ಶ ಮೂಲದಿಂದ ಬಂದ ಗಾಂಧೀಜಿಯರವಿಗೆ ಸಹಜವಾಗಿ ಹಿಂದೂಧರ್ಮದ ಸನಾತನ ಸಂಸ್ಕೃತಿಗಳು ಆದರ್ಶ ವೈಭವೀಕರಣವಾಗಿ ಕಂಡು ಬಂದರೆ, ಅಂಬೇಡ್ಕರ್‌ರವರಿಗೆ ತನ್ನನ್ನು, ತನ್ನ ಜನಾಂಗವನ್ನು ಮಡಿಮೈಲಿಗೆಯಿಂದ ಅತ್ಯಂತ ಕೀಳಾಗಿ, ನಾಯಿ, ನರಿಗಳಿಗಂತಲೂ ನಿಕೃಷ್ಟವಾಗಿ, ಅನಾಗರೀಕವಾಗಿ ಕಾಣುವ,ಕಾಡುವ ಸನಾತನ ಹಿಂದೂ ಧರ್ಮ ಸಂಸ್ಕೃತಿಗಳು ಸಹಜವಾಗಿಯೇ ತಿರಸ್ಕಾರಕ್ಕೆ ಕಾರಣವಾಗುತ್ತದೆ. ಅದರ ಬಗ್ಗೆ ಅಂಬೇಡ್ಕರ್ ಹೀಗೆ ಪ್ರತಿಕ್ರಿಯಿಸುತ್ತಾರೆ. 'ಹಿಂದೂಧರ್ಮದಲ್ಲಿ ಧರ್ಮ ಎನ್ನುವುದೇ ಇಲ್ಲ, ಅದು ಕೇವಲ ಪೂಜಾರಿಗಳು, ಧಾರ್ಮಿಕ ಮುಖಂಡರು ಭೋಜನಕ್ಕಾಗಿ, ವ್ಯಾಪಾರ ಮಾಡುವುದಕ್ಕಾಗಿ ಲೈಸೆನ್ಸ್ ಪಡೆದ ಸಂಸ್ಥೆ ಮಾತ್ರ. ಕುಡಿಯಲು ನೀರು ಕೊಡದ, ಕೊನೆಯಪಕ್ಷ ದೇವರನ್ನು ನೋಡಲು ಬಿಡದ ಧರ್ಮ ಧರ್ಮವೇ ಅಲ್ಲ, ಪಾಪದ ಕೊಚ್ಚೆಯರಾಶಿ. ಅಂತಹುದನ್ನು ಧರ್ಮವೆಂದು ಕರೆಯ ಬಾರದು. ನೀವು ವಿದ್ಯಾವಂತರಾಗುವುದನ್ನು ನಿಷೇಧಿಸಿ, ನಿಮ್ಮ ಭೌತಿಕ ಸುಖಗಳನ್ನೆಲ್ಲ ಸರ್ವ ನಾಶಮಾಡಿದ ಧರ್ಮದಲ್ಲಿ ನೀವು ಒಂದು ಕ್ಷಣ ಕೂಡಾ ಇರಬಾರದು. ಸಹಜ ಮಾನವರ ಪ್ರೇಮ, ಕನಿಕರ ತೋರಿಸದ ಧರ್ಮ ಧರ್ಮವೇ ಅಲ್ಲ, ಪ್ರಾಣಿಗಳನ್ನು ಕೊಂದರೆ ಪಾಪ ಎಂದು ತನ್ನ ಅನುಯಾಯಿಗಳಿಗೆ ತಿಳಿಸುತ್ತ ಸಮಾನ ಮಾನವರನ್ನು ಕ್ರೂರವಾಗಿ ಹಿಂಸಿಸುವುದನ್ನು ನಿಜವಾಗಿಯೂ ಧರ್ಮವೆನ್ನಬೇಕಿಃ ಕೂಡದು. ಬರೀ ಮೋಸ ವಂಚನೆ' ಎಂದು ಹಿಂದೂಧರ್ಮ ಸಿದ್ಧಾಂತಗಳನ್ನು ಅತ್ಯಂತ ತಿರಸ್ಕಾರದ ಭಾವನೆಯಿಂದಲೇ ತುಂಡರಿಸಲು ಕರೆಕೊಡುತ್ತಾರೆ. ಈ ಕರೆಯ ಘರ್ಜನೆಯ ನೋವಿಗೆ, ಶತಮಾನದ ಸಿಟ್ಟಿನ ಸಿಡಿಲಿಗೆ ಈ ದೇಶದ ಹಿಂದೂ ಸನಾತನವಾದ ಕಾರಣವಾಗಿದೆ ಎಂಬುದನ್ನು ಅಲ್ಲಗೆಳೆಯಲಾಗುವುದಿಲ್ಲ.

ಅಂಬೇಡ್ಕರ್‌ರವರ ಆರ್ಥಿಕ, ಸಾಮಾಜಿಕ ಚಿಂತನೆಗಳು ಗಾಂಧೀಜಿಯ ಆರ್ಥಿಕ, ಸಾಮಾಜಿಕ ಚಿಂತನೆಗಳಿಗೆ ಭಿನ್ನವಾದವುಗಳು. ಅಂಬೇಡ್ಕರ್ ತಮ್ಮದೇ ಆದ ಆಲೋಚನೆ, ಚಿಂತನೆಗಳ ಕ್ರಮದಲ್ಲಿ ಗಾಂಧೀಜಿಯವರ ವೃತ್ತಿಪರ ಗುಡಿಕೈಗಾರಿಕೆ, ಸ್ವದೇಶಿವಸ್ತುಗಳ ಉತ್ಪನ್ನಗಳ ಮಾದರಿಯ ಹಂಚಿಕೆಗಳನ್ನು ಅವೈಜ್ಞಾನಿಕ ಚಿಂತನೆಗಳೆಂದು ವಿರೋಧಿಸುತ್ತಾರೆ. ಕೈಗಾರೀಕರಣ, ನಗರೀಕರಣ, ವೈಚಾರಿಕತೆ, ವೈಜ್ಞಾನಿಕತೆಗಳ ಹಿನ್ನೆಲೆಯ ಚಿಂತನೆಯ ಬೆಳಕಿನಲ್ಲಿ ಕಾಣುತ್ತಾರೆ. ಪಾಶ್ಚಾತ್ಯ

ನಾಗರೀಕತೆಯ ಅಸ್ತ್ರ ಕೇಂದ್ರಗಳು, ಹಡಗು ಪ್ರಯಾಣ, ರೈಲುಪ್ರಯಾಣ, ಸಾರಿಗೆ-ಸಂಪರ್ಕ ಸಾಧನಗಳ ಮೂಲಕವೇ ಈ ದೇಶದ ಆರ್ಥಿಕ, ಸಾಮಾಜಿಕ ಸಮಾನತೆಗಳ ಪ್ರಗತಿ ಸ್ವಾವಲಂಬನೆ ಸಾಧ್ಯವೆಂಬ ಚಾರಿತ್ರಿಕ ಸತ್ಯವನ್ನು ಪ್ರತಿಪಾದಿಸುತ್ತಾರೆ. ಆ ಮೂಲಕವೇ ಈ ದೇಶದ ಶೋಷಿತವರ್ಗಗಳ ಅಭಿವೃದ್ಧಿ, ಸ್ವಾತಂತ್ರ್ಯ, ಸಮಾನತೆಯನ್ನು ಮನಗಂಡವರಾಗಿದ್ದರು. ಹಾಗೆಯೇ ಅಂಬೇಡ್ಕರ್‌ರವರ ರಾಜಕೀಯ ಪ್ರಜಾಸತ್ತಾತ್ಮಕ ಚಿಂತನೆಗಳು ಈ ಭಾವನೆಗಳ ಆಧಾರದ ಮೇಲೆಯೇ ಕಟ್ಟಲ್ಪಟ್ಟದ್ದವು. ಇದಾವುದೇ ಚಿಂತನೆಗಳನ್ನು ಕಾಣದ ಗಾಂಧೀಜಿಯ ನಾಯಕತ್ವದ ಸ್ವಾತಂತ್ರ್ಯ ಚಳುವಳಿಯು ಭಾರತದ ಬ್ರಿಟಿಷ್ ಸಾಮ್ರಾಜ್ಯಶಾಹಿಗಳ ವಿರುದ್ಧ ರಾಜಕೀಯ ಅಧಿಕಾರಕ್ಕಾಗಿ ನಡೆಸಿದ ಸ್ವಾತಂತ್ರ್ಯ ಸಮರದ ಲಾಭದ ಬಗೆಗೆ ಅಂಬೇಡ್ಕರ್‌ರವರು ಸಂಪೂರ್ಣ ನಂಬಿಕೆಯನ್ನು ಕಳೆದುಕೊಂಡವರಾಗಿದ್ದರು. ಏಕೆಂದರೆ ಬ್ರಿಟಿಷ್ ಸಾಮ್ರಾಜ್ಯಶಾಹಿಗಳಿಂದ ಪಡೆದುಕೊಳ್ಳುವ ಈ ರಾಜಕೀಯ ಅಧಿಕಾರಗಳು ಭಾರತದ ದೇಶೀಯ ಸಾಮ್ರಾಜ್ಯಶಾಹಿ ಧೋರಣೆಯ ಕೈಗಳಿಗೆ ಹಸ್ತಾಂತರವಾಗಿ ಅವರ ಭದ್ರಕೋಟೆಯಲ್ಲಿಯೇ ಬಂಧಿಯಾಗುತ್ತದೆಂಬ ಸತ್ಯವನ್ನು ಸ್ವಾತಂತ್ರ್ಯ ಚಳುವಳಿಯ ಸಂದರ್ಭದಲ್ಲಿ ಅರಿತುಕೊಂಡವರಾಗಿದ್ದರು. ಆದ್ದರಿಂದಲೇ ಇದರ ಸತ್ಯದ ವಾಸನೆಯನ್ನು ಕಂಡ ಅಂಬೇಡ್ಕರ್‌ರವರ ಸ್ವಾತಂತ್ರ್ಯ ಚಳುವಳಿಯು ನಡೆಯುವ ಸಂದರ್ಭದಲ್ಲಿಯೇ ಬ್ರಿಟಿಷರಿಂದ ದಕ್ಕುವ ರಾಜಕೀಯ ಸ್ವಾತಂತ್ರ್ಯಕ್ಕಿಂತ ದೇಶೀಯ ಸಾಮ್ರಾಜ್ಯಶಾಹಿಗಳಿಂದ ದಕ್ಕಿಸಿಕೊಳ್ಳುವ ಸಾಮಾಜಿಕ ಸ್ವಾತಂತ್ರ್ಯಕ್ಕೆ ಪ್ರಾಶಸ್ತ್ಯನೀಡಿದ್ದರು. ಅದಕ್ಕಾಗಿಯೇ ಸಿಕ್ಕಿದ ರಾಜಕೀಯ ಅವಕಾಶಗಳನ್ನು ಪಡೆದುಕೊಂಡು ಅಂಬೇಡ್ಕರ್‌ರವರು ಈ ದೇಶದ ದೇಶೀಯ-ವಿದೇಶಿಯ ಸಾಮ್ರಾಜ್ಯ ಶಾಹಿಗಳ ನಿರಂತರ ಶೋಷಣೆ, ದಬ್ಬಾಳಿಕೆಗಳ ವಿರುದ್ಧ ಹೋರಾಟಕ್ಕೆ ಇಳಿದರು. ಅವರ ಗುಲಾಮಗಿರಿಗೆ ಒಳಗಾಗಿದ್ದ ದಲಿತರ, ಕೆಳಜಾತಿವರ್ಗಗಳನ್ನು ಸಂಘಟಿಸಿ ಏಕಕಾಲದಲ್ಲಿ ಬ್ರಿಟಿಷ್ ಸಾಮ್ರಾಜ್ಯಶಾಹಿಗಳ ಮತ್ತು ದೇಶೀಯಸಾಮ್ರಾಜ್ಯಶಾಹಿಗಳ ವಿರುದ್ಧ ಸಾಮಾಜಿಕ, ರಾಜಕೀಯ ಹೋರಾಟ ಕಟ್ಟಿದರು.

ಈ ಮಧ್ಯೆ ದೇಶೀಯ ಸಂಪ್ರದಾಯವಾದಿ, ಉದಾರವಾದಿಗಳ ರಾಷ್ಟ್ರೀಯ ಕಾಂಗ್ರೆಸ್ಸಿನ ರಾಜಕೀಯ ದಳ್ಳುರಿಯಲ್ಲಿ ಸಿಕ್ಕಿ ಅಂಬೇಡ್ಕರ್ ತತ್ತರಿಸಿಹೋಗಿದ್ದರು. ಉಳ್ಳವರ ರಾಜಕೀಯ ಚದುರಂಗದಾಟದಲ್ಲಿ ಒಬ್ಬರೇ ಈಜಲು ಸಾಧ್ಯವಾಗದೆ ಇಕ್ಕಟ್ಟಿನ ಪರಿಸ್ಥಿತಿಯಲ್ಲಿ ದಲಿತರಿಗೆ ಸಿಕ್ಕಬೇಕಾಗಿದ್ದ ಪ್ರತ್ಯೇಕ ಮತದಾನದ ಹಕ್ಕುಗಳನ್ನು ಪಡೆಯಲು ಸಾಧ್ಯವಾಗದೇ ತನ್ನ ಜನಾಂಗದ ಹಿತರಕ್ಷಣೆಗೆ ಕಟ್ಟುಬಿದ್ದು ಕಣ್ಣೀರಿನ ಕಡಲಿನಲ್ಲಿ ರಾಜಿ ಮಾಡಿಕೊಂಡರು. ವಿಪರ್ಯಾಸವೆಂದರೆ, ಅಂಬೇಡ್ಕರ್ ಅದೇ ವ್ಯವಸ್ಥೆಯಲ್ಲಿ ಸ್ವತಂತ್ರ ಭಾರತದ ಪ್ರಪ್ರಥಮ ಕಾನೂನುಮಂತ್ರಿಯೂ ಆದರು. ಮತ್ತು ಸ್ವತಂತ್ರ ಭಾರತದ ಸಂವಿಧಾನ ರಚನೆಯ ಪಿತಾಮಹರೂ ಆದರು. ಆದರೆ ಅಂಬೇಡ್ಕರ್‌ರವರ ಇಂತಹ ಇಕ್ಕಟ್ಟಿನ ಸಂದರ್ಭಗಳನ್ನು ಅರ್ಥಮಾಡಿಕೊಳ್ಳಲಾರದ ಈ ದೇಶದ ವಿಚಾರವಂತರು ಅಂಬೇಡ್ಕರ್‌ರವರು ಪಡೆದುಕೊಂಡ ಅವಕಾಶಗಳನ್ನು ಬೆರಳುಮಾಡಿ ತೋರಿಸುವಲ್ಲಿ ಮುಂದಾಗುತ್ತಾರೆ. ಆದರೆ ಅಂಬೇಡ್ಕರ್‌ರವರ ಜಾತಿಯ ಅವಮಾನದ ಸಂಕಟ, ಸ್ವಾಭಿಮಾನದ ತಳಮಳದ ಸಂಕೋಲೆ, ದಲಿತರಿಗೆ ರಕ್ಷಣೆಗೊಡುವ ಜವಾಬ್ದಾರಿ-

ದೇಶೀಯ ಸಂಪ್ರದಾಯವಾದಿ, ಉದಾರವಾದಿಗಳ ರಾಷ್ಟ್ರೀಯ ಕಾಂಗ್ರೆಸ್ಸಿನ ರಾಜಕೀಯ ದಳ್ಳುರಿಯಲ್ಲಿ ಸಿಕ್ಕಿ ಅಂಬೇಡ್ಕರ್ ತತ್ತರಿಸಿಹೋಗಿದ್ದರು. ಉಳ್ಳವರ ರಾಜಕೀಯ ಚದುರಂಗದಾಟದಲ್ಲಿ ಒಬ್ಬರೇ ಈಜಲು ಸಾಧ್ಯವಾಗದೆ ಇಕ್ಕಟ್ಟಿನ ಪರಿಸ್ಥಿತಿಯಲ್ಲಿ ದಲಿತರಿಗೆ ಸಿಕ್ಕಬೇಕಾಗಿದ್ದ ಪ್ರತ್ಯೇಕ ಮತದಾನದ ಹಕ್ಕುಗಳನ್ನು ಪಡೆಯಲು ಸಾಧ್ಯವಾಗದೇ ತನ್ನ ಜನಾಂಗದ ಹಿತರಕ್ಷಣೆಗೆ ಕಟ್ಟುಬಿದ್ದು ಕಣ್ಣೀರಿನ ಕಡಲಿನಲ್ಲಿ ರಾಜಿ ಮಾಡಿಕೊಂಡರು. ವಿಪರ್ಯಾಸವೆಂದರೆ, ಅಂಬೇಡ್ಕರ್ ಅದೇ ವ್ಯವಸ್ಥೆಯಲ್ಲಿ ಸ್ವತಂತ್ರ ಭಾರತದ ಪ್ರಪ್ರಥಮ ಕಾನೂನುಮಂತ್ರಿಯೂ ಆದರು. ಮತ್ತು ಸ್ವತಂತ್ರ ಭಾರತದ ಸಂವಿಧಾನ ರಚನೆಯ ಪಿತಾಮಹರೂ ಆದರು. ದೇಶ ದಕ್ಕಿಸಿಕೊಂಡ ಈ ರಾಜಕೀಯ ಸ್ವಾತಂತ್ರ್ಯದ ವ್ಯವಸ್ಥೆಯಲ್ಲಿ ಅಂಬೇಡ್ಕರ್‌ರವರಿಗೆ ಸಂಪೂರ್ಣ ನಂಬಿಕೆಯಿರಲಿಲ್ಲ. ಈ ದೇಶದ ದಲಿತರ, ಶೋಷಿತರ, ಕೆಳಜಾತಿವರ್ಗಗಳಿಗೆ ಈ ರಾಜಕೀಯ ವ್ಯವಸ್ಥೆಯಿಂದ ಪೂರ್ಣ ಪ್ರಮಾಣದ ಸ್ವಾತಂತ್ರ್ಯ, ಸಮಾನತೆ, ಗೌರವಗಳು ಅವರಿಗೆ ಸಿಕ್ಕುವುದಿಲ್ಲವೆಂಬ ಅನುಮಾನ ಅಂಬೇಡ್ಕರನ್ನು ಕಾಡುತ್ತಿತ್ತು. ಆದ್ದರಿಂದಲೇ ಅಂಬೇಡ್ಕರ್‌ರವರು ಸಂವಿಧಾನವನ್ನು ಭಾರತದ ರಾಜ್ಯಾಂಗಕ್ಕೆ ಒಪ್ಪಿಸುವಾಗ, ಅತ್ಯಂತ ನೋವಿನಿಂದ, ದೇಶದ ಶೋಷಿತರ ಮುಂದೆ ಧ್ವಂಸಮಾಡಬಹುದಾದ ಮಾತುಗಳನ್ನು ಆಡುತ್ತಾರೆ.

ಮುಂತಾದ ತಲ್ಲಣಗಳ ಸೂಕ್ಷ್ಮ ವಿಚಾರಗಳ ಪರಿಸ್ಥಿತಿಯಲ್ಲಿ ಅಂಬೇಡ್ಕರ್‌ರವರು ಈ ವ್ಯವಸ್ಥೆಯಲ್ಲಿ ಪಡೆದುಕೊಂಡ ಅವಕಾಶಗಳನ್ನು ಅರ್ಥಮಾಡಿಕೊಳ್ಳಬೇಕಾಗಿದೆ ಎನಿಸುತ್ತದೆ. ದೇಶ ದಕ್ಕಿಸಿಕೊಂಡ ಈ ರಾಜಕೀಯ ಸ್ವಾತಂತ್ರ್ಯದ ವ್ಯವಸ್ಥೆಯಲ್ಲಿ ಅಂಬೇಡ್ಕರ್‌ರವರಿಗೆ ಸಂಪೂರ್ಣ ನಂಬಿಕೆಯಿರಲಿಲ್ಲ. ಈ ದೇಶದ ದಲಿತರ, ಶೋಷಿತರ, ಕೆಳಜಾತಿವರ್ಗಗಳಿಗೆ ಈ ರಾಜಕೀಯ ವ್ಯವಸ್ಥೆಯಿಂದ ಪೂರ್ಣಪ್ರಮಾಣದ ಸ್ವಾತಂತ್ರ್ಯ, ಸಮಾನತೆ, ಗೌರವಗಳು ಅವರಿಗೆ ಸಿಕ್ಕುವುದಿಲ್ಲವೆಂಬ ಅನುಮಾನ ಅಂಬೇಡ್ಕರನ್ನು ಕಾಡುತ್ತಿತ್ತು. ಆದ್ದರಿಂದಲೇ ಅಂಬೇಡ್ಕರ್‌ರವರು ತಾವು ಕಷ್ಟಪಟ್ಟು ಬರೆದ ಸಂವಿಧಾನವನ್ನು ಭಾರತದ ರಾಜ್ಯಾಂಗಕ್ಕೆ ಒಪ್ಪಿಸುವಾಗ, ಅತ್ಯಂತ ನೋವಿನಿಂದ, ಅಷ್ಟೇ ಜವಾಬ್ದಾರಿ ಯಿಂದ ಸಂವಿಧಾನವನ್ನು ಈ ದೇಶದ ಶೋಷಿತರು ಮುಂದೆ ಧ್ವಂಸಮಾಡಬಹುದಾದ ಮಾತುಗಳನ್ನು ಆಡುತ್ತಾರೆ. 'ಜನವರಿ 26ರ 1950ರಂದು ನಾವು ರಾಜಕೀಯ ಸಮಾನತೆಯತ್ತಲೂ-ಆರ್ಥಿಕ, ಸಾಮಾಜಿಕವಾಗಿ ಅಸಮಾನತೆಗಳ ದಿಕ್ಕಿನತ್ತಲೂ ಹೆಜ್ಜೆ ಇಟ್ಟೆವು. ಪರಸ್ಪರ ವಿರುದ್ಧವಾದ ಈ ಅಂತರಗಳು ಅತ್ಯಂತ ಶೀಘ್ರವಾಗಿ ಕೊನೆಗಾಣಬೇಕು. ಇಲ್ಲದಿದ್ದಲ್ಲಿ ಅಸಮಾನತೆಗಳಿಂದ ಕುಗ್ಗಿ ಹೋಗಿರುವ ವರ್ಗಗಳು ಎಷ್ಟೋ ಶ್ರಮಪಟ್ಟು ಈ ರಾಜ್ಯಾಂಗಸಭೆ ಸೃಷ್ಟಿಸಿರುವ ರಾಜಕೀಯ ಪ್ರಜಾಸತ್ತಾತ್ಮಕ ವ್ಯವಸ್ಥೆಯನ್ನೇ ಧ್ವಂಸಮಾಡಬಲ್ಲವು'. ಎಂದು ಭವಿಷ್ಯ ನುಡಿದು, ಎಲ್ಲರನ್ನು ದಂಗುಬಡಿಸುತ್ತಾರೆ. ಸಂವಿಧಾನ ರಚನಾ ಸಂದರ್ಭದಲ್ಲಿ ಅಂಬೇಡ್ಕರ್ ಎಂಥಹ ಸಂಕಟ, ತಳಮಳಗಳ ಮಧ್ಯಸಿಕ್ಕಿ ನಲುಗಿ ಹೋಗಿದ್ದರು ಎಂಬುದಕ್ಕೆ ಈ ಮಾತುಗಳೇ ಸಾಕ್ಷಿಯಾಗಿ ನಿಲ್ಲುತ್ತವೆ. ಇದರಿಂದಲೇ ಗೊತ್ತಾಗುತ್ತದೆ ಅಂಬೇಡ್ಕರ್ ರವರಿಗೆ ಈ ರಾಜಕೀಯ ವ್ಯವಸ್ಥೆಯಲ್ಲಿ ಪೂರ್ಣ ಪ್ರಮಾಣದ ನಂಬಿಕೆ ಇರಲಿಲ್ಲವೆಂಬುದು. ಅದನ್ನೂ ಈ ದೇಶದ ಪ್ರಜ್ಞಾವಂತರು ಅರ್ಥಮಾಡಿಕೊಳ್ಳಬೇಕಾಗಿದೆ.

ಅಂಬೇಡ್ಕರ್‌ರವರ ರಾಜಕೀಯ ಪ್ರಜಾಸತ್ತಾತ್ಮಕ ಸಂವಿಧಾನವೇ ವಿಭಿನ್ನ ಆಲೋಚನೆಯ ಪ್ರಜಾಪ್ರಭುತ್ವ ಸರ್ಕಾರವಾಗಿತ್ತು. ನನ್ನ ದೃಷ್ಟಿಯಲ್ಲಿ ಪ್ರಜಾಪ್ರಭುತ್ವವೆಂದರೆ ರಕ್ತಪಾತರಹಿತ ವಿಪ್ಲವದ ಮೂಲಕ ಪ್ರಜೆಗಳ ಸಾಮಾಜಿಕ ಆರ್ಥಿಕ ಕ್ಷೇತ್ರಗಳಲ್ಲಿ ಬದಲಾವಣೆ ತರುವಂತಹ ಒಂದು ಪದ್ಧತಿ ಮತ್ತು ಅಂತಹ ಸ್ವರೂಪ ಉಳ್ಳ ಸರ್ಕಾರ ಪ್ರಜಾಸತ್ತಾತ್ಮಕ ವ್ಯವಸ್ಥೆಯು ಯಶಸ್ವಿಯಾಗಬೇಕಾದಲ್ಲಿ ಸಮಾಜದಲ್ಲಿ ಎದ್ದು ಕಾಣುವ ಅಸಮಾನತೆಗಳು ಅದೃಶ್ಯವಾಗಬೇಕು. ದಮನ ತುಳಿತಕ್ಕೊಳಗಾಗಿರುವ ಜಾತಿಗಳಿಗಾಗಲೀ, ವರ್ಗಗಳಿಗಾಗಲೀ ಇರಕೂಡದು. ಇದು ಅಂಬೇಡ್ಕರವರ ಸಂವಿಧಾನಬದ್ಧ ರಾಜಕೀಯ ವ್ಯವಸ್ಥೆಯ ನಿಲುವುಗಳಾಗಿದ್ದವು. ಅವರ ಸಾಮಾಜಿಕ ಹೋರಾಟದ ದೇಶೀಯವಾದದ ನೆಲೆಯ ತತ್ವಸಿದ್ಧಾಂತಗಳಾಗಿದ್ದವು. ಅಂಬೇಡ್ಕರರ ಕನಸಿನ ಭವ್ಯಭಾರತ ಪ್ರಜಾರಾಜ್ಯ

ಕಲ್ಪನೆಯು ಸಂಸದೀಯ ಪ್ರಜಾಸತ್ತಾತ್ಮಕವಾದ ಮಾದರಿಯಲ್ಲಿಯೇ ನಿರ್ಮಾಣಮಾಡುವ ಜಾತಿರಹಿತ, ಅಸಮಾನತೆ ರಹಿತವಾದದ್ದು. ಅದರ ನೆನಪನ್ನು ಹೀಗೆ ಹೇಳುವ ಮೂಲಕ ಕಾಣುತ್ತಾರೆ. ಯುಗ ಯುಗಗಳಿಂದ ದಾಸ್ಯಸಂಕೋಲೆಗಳಿಂದ ದಗ್ಧರಾಗಿಹೋಗಿರುವ ಪೀಡಿತ ವರ್ಗಗಳು ದೇಶ ಆಳುವುದನ್ನು ನನ್ನ ಕಣ್ಣೆದುರಲ್ಲಿ ನೋಡುವುದೇ ನನ್ನ ಜೀವನದ ಲಕ್ಷ್ಯ. ಈ ದೇಶದಲ್ಲಿನ ಅಧಿಕಾರಕ್ಕೆ, ಸಂಪತ್ತಿಗೆ ವಾರಸುದಾರರಾಗಿ ಅಲ್ಪ ಸಂಖ್ಯಾತರು, ಸಾಮಾಜಿಕವಾಗಿ ಹಿಂದುಳಿದವರು ಈ ಜಾತಿವ್ಯವಸ್ಥೆಯನ್ನು ತುಳಿದು ಧ್ವಂಸಮಾಡಿ ಏಕತೆಯಿಂದ ಒಂದೇ ಸಿದ್ಧಾಂತದ ಆಧಾರದ ಮೇಲೆ ನಿಂತು ಹೋರಾಡಬೇಕು. ಇದು ಅಂಬೇಡ್ಕರರ ಕನಸಿನ ದಿಕ್ಕು. ಯಾರು ಈ ದೇಶದಲ್ಲಿ ಶತಶತಮಾನಗಳಿಂದ ತುಳಿತಕ್ಕೆ ಒಳಪಟ್ಟು ಬೆವರು, ಮಣ್ಣು ಶ್ರಮಗಳಿಂದ ನಿರಂತರ ಸಂಬಂಧ ಇಟ್ಟುಕೊಂಡು ಬಂದಿರುತಾರೋ ಅವರು ಈ ದೇಶವನ್ನು ಆಳುವ ತುದಿಗೆ ಆ ದಿಕ್ಕು ಬಂದು ನಿಲ್ಲುತ್ತದೆ. ಈ ರೀತಿಯ ಮನಸ್ಥಿತಿಯಲ್ಲಿ ಅಂಬೇಡ್ಕರ್‌ರ ದೇಶೀಯ ನೆಲೆವಿರಿಸಿಕೊಳ್ಳುತ್ತದೆ.

ಈ ರೀತಿಯ ನಿಲುವಿನ ಬದ್ಧತೆಗಾಗಿ ಸಾಮಾಜಿಕ, ರಾಜಕೀಯ ಹೋರಾಟ ಕಟ್ಟಿದ ಅಂಬೇಡ್ಕರ್ ಅದನ್ನು ಸಾಧಿಸಿಕೊಳ್ಳಲು ನಿರಂತರ ಹೋರಾಟ ನಡೆಸಿದರು. ಅದಕ್ಕಾಗಿ ಅವಿರತ ಪ್ರಯತ್ನಪಟ್ಟು ತಮ್ಮ ತನು, ಮನ, ಧನ, ಯಶಸ್ಸುಗಳನ್ನು ಶೋಷಿತರ, ದಲಿತರ, ಭವಿಷ್ಯದ ಬಾಳಿಗಾಗಿ ಧಾರೆ ಎರೆದರು. ಅದಕ್ಕಾಗಿ ಈ ದೇಶದ ಪಟ್ಟಭದ್ರ ಹಿತಾಶಕ್ತಿಗಳ ವಿರುದ್ಧ ಸೆಣಸಾಡಿ ಸಾವನ್ನಪ್ಪಿದರು. ಆದ್ದರಿಂದಲೇ ಅಂಬೇಡ್ಕರ್ ಸಾಯುವ ಮುನ್ನ ತನ್ನ ಜನಾಂಗದ ಹಿಂಬಾಲಕರಿಗೆ ಅತ್ಯಂತ ದುಃಖದಿಂದ ಎಚ್ಚರಿಕೆಯ ಸಂದೇಶವೊಂದನ್ನು ಹೀಗೆ ಸಾರುತ್ತಾರೆ. 'ಓ ನನ್ನ ಭಾಂದವರೇ ನಾನು ನಿಮಗಾಗಿ ಪ್ರಬಲ ಸವರ್ಣA
ೀಯ ಹಿಂದುಗಳೊಂದಿಗೆ ನಿರಂತರ ಸಂಘರ್ಷಮಾಡಿ ಏನೆಲ್ಲಾ ಮಾಡಿದ್ದೇನೆಯೋ ಅದನ್ನು ನಾನು ಮಾಡುವಾಗ ಅನೇಕ ಕಷ್ಟ-ನಷ್ಟಗಳನ್ನು ಸಹಿಸಿ ಅತ್ಯಂತ ದುಃಖಿತನಾಗಿ ಈ ಹೋರಾಟದ ಬಂಡಿಯನ್ನು ಇಲ್ಲಿಯವರೆಗೂ ಎಳೆದು ಕೊಂಡು ಬಂದಿದ್ದೇನೆ. ಇದನ್ನು ಮುಂದಕ್ಕೆ ಎಳೆದುಕೊಂಡು ಹೋಗುವುದು ನಿಮ್ಮ ಕೆಲಸ. ಅದಕ್ಕಾಗಿ ನೀವು ನನ್ನಂತೆ ಹೋರಾಟವನ್ನು ಮಾಡ ಬೇಕಾಗುತ್ತದೆ. ಒಂದು ವೇಳೆ ನೀವು ಅದನ್ನು ಎಳೆದು ಕೊಂಡು ಹೋಗಲಾಗದಿದ್ದರೆ ಆ ಬಂಡಿಯನ್ನು ನಿಂತಲ್ಲಿ ಯಾದರೂ ನಿಂತಿರುವಂತೆ ನೋಡಿಕೊಳ್ಳಿ. ಆದರೆ ಅದನ್ನು ಹಿಂದಕ್ಕೆ ತಳ್ಳಬೇಡಿ' ಎಂದು ಹೇಳಿ ಆ ಬಂಡಿಯನ್ನು ದಲಿತರ, ಶೋಷಿತರ ಸಮುದಾಯದಲ್ಲಿ ಹಾಕಿಬಿಟ್ಟು ಹೊರಟು ಹೋದರು. ಅಂಬೇಡ್ಕರರ ಹೋರಾಟದ ಬಂಡಿಯ ಚಲನೆಯಲ್ಲಿ ಅವರ ಪ್ರತಿಭೆ ಪಾಂಡಿತ್ಯ ಶ್ರಮಗಳ ಜೊತೆಗೆ ಭಾರತ ಬ್ರಿಟಿಷ್ ಸರ್ಕಾರದ ಸಹಾಯ ಸಹಕಾರಗಳು ಸೇರಿಕೊಂಡಿವೆ ಎಂಬುದನ್ನು ನಿರಾಕರಿಸಲಾಗುವುದಿಲ್ಲ. ಅಂಬೇಡ್ಕರರ ಪಾಂಡಿತ್ಯ ಪ್ರತಿಭೆಗಳನ್ನು ಮೆಚ್ಚಿ ಬ್ರಿಟಿಷರು ಗುರುತಿಸಿ ಪ್ರೋತ್ಸಾಹಿಸಿದ್ದರು. ಹಾಗೆಂದ ಮಾತ್ರಕ್ಕೆ ಅಂಬೇಡ್ಕರ್ ಬ್ರಿಟಿಷ್ ಗುಲಾಮರೇನೂ ಆಗಿರಲಿಲ್ಲ. ಅವರ ಬಗ್ಗೆ ಶಂಕೆ ವ್ಯಕ್ತಪಡಿಸಿ ಯಾರಾದರೂ ಮಾತನಾಡಿದರೆ, ಅದು ಹಾಗೆ ಮಾತನಾಡುವವರ ಸಣ್ಣತನವನ್ನು ತೋರಿಸುತ್ತದೆಂದೇ ಅರ್ಥ. ಏಕೆಂದರೆ ಹಿಂದೂಧರ್ಮದಲ್ಲಿ ಅಸ್ಪೃಶ್ಯನಾಗಿ ಹುಟ್ಟಿದ ತಪ್ಪಿಗೆ ಅತ್ಯಂತ ಕೀಳಾಗಿ ನಾಯಿ, ನರಿ, ಕತ್ತೆಗಳಿಗಿಂತಲೂ ನಿಕೃಷ್ಟವಾಗಿ ಕಡೆಗಣಿಸಲ್ಪಟ್ಟವನಿಗೆ ಯಾರಾದರೂ ಕೈ ಹಿಡಿದು ನಡೆಸಿ ಪ್ರೋತ್ಸಾಹಿಸಿದರೆ, ಅದನ್ನು ತಿರಸ್ಕರಿಸುವಷ್ಟು ಅಂಬೇಡ್ಕರ್ ಹಿಂದೂ ಸನಾತನಿಯೂ ಆಗಿರಲಿಲ್ಲ. ಬದಲಾಗಿ ಅವರು ಅಸ್ಪೃಶ್ಯರಾಗಿದ್ದರು. ಈ ಅವಮಾನ ಅಂಬೇಡ್ಕರ್ ರವರನ್ನು ಪ್ರಚೋದಿಸುತ್ತದೆ ಮತ್ತು ಸಮಾನತೆಗಾಗಿ ಬಯಸುತ್ತದೆ ಎಂಬುದನ್ನು ಮರೆಯಬಾರದು. ಈ ಎರಡೂ ನೆಲೆಗಳು ಗಾಂಧೀ-ಅಂಬೇಡ್ಕರ್‌ರವರ ರಾಷ್ಟ್ರೀಯವಾದಗಳ ಪ್ರತಿಕ್ರಿಯೆಗಳಾಗಿ ಪರಿಗಣಿಸ ಬೇಕಾಗುತ್ತದೆ. ಈ ಚಿಂತನೆಗಳಲ್ಲಿ ಯಾರೂ ಮೇಲಲ್ಲ, ಕೀಳಲ್ಲ. ಅವರವರ ನೆಲೆಗಳಲ್ಲಿ ಅವರವರು ದೊಡ್ಡವರಾಗಿ ಕಾಣುತ್ತಾರೆ. ಕಾಲ ಅವುಗಳನ್ನು ಸ್ವೀಕರಿಸುವುದು ಅಥವಾ ಬಿಡುವುದನ್ನು ನಿರ್ಧರಿಸುತ್ತದೆ. ●

ಇರುಳು ಕಳೆದಿದೆ
ಮುಂಬೆಳಗು ಮೈತಳೆದಿದೆ
ಮತ್ತೆ ನಿಗಿನಿಗಿ ಹಗಲು
ಬಂದೆ ಬರುವವು.

ಕಾಲಚಕ್ರದ ಗತಿ
ಬದುಕಿನ ನಿಯತಿ
ನಿಖರ ಬಲ್ಲವಳು
ಎಂಬತ್ತರ ಅವ್ವ.

ಎಲ್ಲ ನೋವುಗಳ ನುಂಗಿ
ಮೊಮ್ಮಗಳ ನಗೆ ಬೆಳಕಲ್ಲಿ

ನಾಲ್ಕು ಹೆಜ್ಜೆ
'ಸಾಗಿದಷ್ಟೆರಥ'
ಎನ್ನುತ್ತಾಳೆ ನಿರ್ಲಿಪ್ತವಾಗಿ.

ಬೆಳಗಿನ ಕೋಳಿ ಕೂಗಿದರೆ
ಹೊಸ ಹುರುಪು
ಮುಂಗಾರ ಮೋಡ ಜಿನುಗಿದರೆ
ಇನ್ನೂ
ಉತ್ತುವ ಬಿತ್ತುವ ಉತ್ಸಾಹ.

○ ಜಿ.ಪಿ. ಬಸವರಾಜು

ಮುಖ್ಯವಾಹಿನಿಯೆಡೆಗೆ ದಲಿತರು– ದಾರಿ ದೂರ!

ಸಾವಿರಾರು ವರ್ಷಗಳ ಶೋಷಣೆ ಮತ್ತು ಆರ್ಥಿಕ, ಸಾಮಾಜಿಕ-ಶೈಕ್ಷಣಿಕ ಮತ್ತಿತರ ಅಸಮಾನತೆಗಳ ಕಾರಣ ಅವಮಾನದಿಂದ ಕುಗ್ಗಿಹೋಗಿದ್ದ ಜನರ ಪ್ರಗತಿಗಾಗಿ ಸಂವಿಧಾನ ದತ್ತವಾಗಿ ನೀಡಲಾದ ಅವಕಾಶಗಳೇ ಮೀಸಲಾತಿ. ಈ ಮೀಸಲಾತಿಯ ಜಾರಿಗಾಗಿ ಅಧಿಕಾರಕ್ಕೆ ಬಂದ ಸರ್ಕಾರಗಳು ಅನಾದರಣೆ ತೋರಿದರೂ ಬಾಯಿಯಲ್ಲಿ ಬಿಟ್ಟ ಬುರುಡೆ ಭರವಸೆಗಳನ್ನು ನಂಬಿದ ದಲಿತೇತರರಿಗೆ ಮಾತ್ರ ಇದು ಕಣ್ಣುರಿ ತಂದಿದ್ದರೆ ಆಶ್ಚರ್ಯವಿಲ್ಲ. ಹಾಗಾಗಿಯೇ 'ಸ್ವಾತಂತ್ರ್ಯ ಕಳೆದು 56 ವರ್ಷಗಳಾದರೂ ಇನ್ನೆಷ್ಟು ದಿನ ಇವರಿಗೆ ಮೀಸಲಾತಿ' ಎನ್ನುತ್ತಲೇ ತಮ್ಮ ಹೊಟ್ಟೆಯುರಿಯನ್ನು ಕಾರಿಕೊಳ್ಳುತ್ತಿದ್ದಾರೆ. ಆದರೆ ವಾಸ್ತವದಲ್ಲಿ ಮೀಸಲಾತಿಯ ಆಶಯವಾಗಲೀ ದಲಿತರಿಗೆ ನೀಡುವ ಕನಿಷ್ಠ ಪ್ರಮಾಣದ ಸೌಲತ್ತುಗಳಾಗಲೀ ಜಾರಿಯಾಗಿಲ್ಲದೆ ನಡೆದಿರುವ ಮೋಸದ ವಿಶ್ಲೇಷಣೆ ಈ ಲೇಖನದಲ್ಲಿದೆ.

ಇಂಗ್ಲೀಷ್ ಮೂಲ : ಡಾ|| ಎಂ. ಮಹದೇವ

ಕನ್ನಡಕ್ಕೆ : ಜಿ.ಪಿ.ನಾಯಕ್

'ಎಲ್ಲಿಯವರೆಗೆ ಸರ್ಕಾರ ದಲಿತರ ರಕ್ಷಣೆ ಮತ್ತು ಅಭಿವೃದ್ಧಿಯಲ್ಲಿ ತೊಡಗಬೇಕು' ಈ ಪ್ರಶ್ನೆಯನ್ನು ಬಹಳಷ್ಟು ದಲಿತೇತರ ಸಂಸ್ಥೆಗಳು ಸಭೆ ಸಮಾರಂಭಗಳಲ್ಲಿ ಕೇಳುತ್ತವೆ. ಈ ಲೇಖನವು ಮೇಲಿನ ಪ್ರಶ್ನೆಗೆ ಉತ್ತರಿಸಲು ಪ್ರಯತ್ನಿಸಲಿದೆ. ಹಲವಾರು ಸೀದಾ ಉತ್ತರಗಳಿವೆ. ಮೊದಲನೆಯದಾಗಿ ಸರ್ಕಾರ ದಲಿತರಿಗೆ ಭದ್ರವಾದ ಆರ್ಥಿಕ ತಳಹದಿ ಮತ್ತು ಸಾಮಾಜಿಕ ಸಮಾನತೆಗೆ ಅನುವು ಮಾಡಿಕೊಡುವವರೆಗೆ, ಎರಡನೆಯದಾಗಿ ಅಮಾನವೀಯವಾದ ಅಸ್ಪೃಶ್ಯತೆಯನ್ನು ಜನರ ಮನಸ್ಸಿನಿಂದ ತೆಗೆದುಹಾಕುವವರೆವಿಗೆ, ಮೂರನೆಯದಾಗಿ ದಲಿತರನ್ನು ಇತರರಂತೆ ಗೌರವದಿಂದ ಕಾಣುವವರೆಗೆ, ಕೊನೆಯದಾಗಿ ದಲಿತರು ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಮತ್ತು ರಾಜಕೀಯ ನ್ಯಾಯವನ್ನು ಗಳಿಸುವವರೆಗೆ. ದುರಾದೃಷ್ಟವಶಾತ್ ಕಳೆದ ಐದು ದಶಕಗಳಲ್ಲಿ ಸರ್ಕಾರದ ಕಾರ್ಯಕ್ರಮಗಳು ಸಣ್ಣಪುಟ್ಟ ಬದಲಾವಣೆಯನ್ನಷ್ಟೆ ತಂದಿವೆ ಹೊರತು ಸಂಪೂರ್ಣ ಪರಿವರ್ತನೆಯಲ್ಲ. ಆದ್ದರಿಂದ ಮೇಲಿನ ಪ್ರಶ್ನೆ ಕೇಳುವ ಸಮಯವಿನ್ನು ಪಕ್ವವಾಗಿಲ್ಲ. ಬಹುಷಃ ಅಂತಹ ಪ್ರಶ್ನೆ ಕೇಳುವವರಿಗೆ ಸತ್ಯಾಂಶ ತಿಳಿದಿಲ್ಲದಿರಬಹುದು. ಅಥವಾ ಈ ದಲಿತೇತರು ಬೆರಳೆಣಿಕೆಯಷ್ಟು ಮುಂದುವರೆದ ದಲಿತರನ್ನು ಕಂಡು ಇಂತಹ ಪ್ರಶ್ನೆಗಳನ್ನು ಕೇಳುತ್ತಿರಬಹುದು. ಲಕ್ಷಾಂತರ ಮಂದಿ ಜೀವನ ಜ್ಯೋತಿಯನ್ನೇ ಕಾಣದ ಅನಕ್ಷರಸ್ಥ ದಲಿತರೆಡೆಗೆ ಯೋಚಿಸುವ ಬದಲು, ನಿಜ ಹೇಳಬೇಕೆಂದರೆ, ಬಡತನ ನಿರ್ಮೂಲನೆ, ಜೀವನ ಮತ್ತು ಸುಧಾರಣೆ, ಇತ್ಯಾದಿ ಕ್ಷೇತ್ರಗಳಲ್ಲಿ ಸರ್ಕಾರ ಮಾಡಬೇಕಾಗಿರುವುದು ಬಹಳಷ್ಟಿದೆ. ಅದು ಮುಖ್ಯವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಇತ್ತೀಚಿನ ದಿನಗಳಲ್ಲಿ ಬದಲಾಗುತ್ತಿರುವ ಆರ್ಥಿಕ ನೀತಿ ಮತ್ತು ಸಮಾಜದಲ್ಲಿ ಬೆಳೆಯುತ್ತಿರುವ ವಿರೋಧಾಭಾಸಗಳು ದಲಿತರನ್ನು ಮುಖ್ಯವಾಹಿನಿಗೆ ತರುವಲ್ಲಿ ತಡೆಯನ್ನೊಡ್ಡುತ್ತಿವೆ. ದಲಿತರ ಮೂಲ ಸಮಸ್ಯೆಗಳನ್ನು ಈ ಕೆಳಕಂಡಂತೆ ವಿಂಗಡಿಸಬಹುದು.

ಆಸ್ತಿ ಇಲ್ಲದಿರುವಿಕೆ : ಜಾತಿ ಆಧಾರಿತ ಭಾರತೀಯ ಸಮಾಜದಲ್ಲಿ ಬದುಕಿಗೇನು ಮಾರ್ಗವೇ ಇಲ್ಲದ ಜನರ ಸ್ಥಿತಿಯನ್ನು ವಿವರಿಸುವುದು ಕಷ್ಟಕರವೆನಿಸುತ್ತದೆ. ಕೃಷಿಯೇ ಪ್ರಧಾನವಾದ ನಮ್ಮ ಸಮಾಜದಲ್ಲಿ ಜೀವನ ನಡೆಸಲು ಕೃಷಿಯ ಭೂಮಿ ಬೇಕು. ಆದರೆ ಭೂರಹಿತ್ವವೊಂದು ಮೂಲ ಸಮಸ್ಯೆಯಾಗಿ ನಿಂತಿದೆ. ಇತರೆ ಜಾತಿಗಳಲ್ಲಿ ಭೂರಹಿತ್ವ ಶೇ. 30ರಷ್ಟಾದರೆ ಇದು ದಲಿತರಲ್ಲಿ ಶೇ. 50ರಷ್ಟಿದ್ದು ಈ ಕುಟುಂಬಗಳು ತಮ್ಮ ದಿನನಿತ್ಯದ ಬದುಕಿಗಾಗಿ ಸಮರಕ್ಕಿಳಿಯಬೇಕಾಗಿದೆ. ಬಡ ದಲಿತರು ಸವರ್ಣೀಯರ ಸಹಾನುಭೂತಿಯಡಿಯಲ್ಲಿ ಬದುಕು ನಡೆಸುವ ಪರಿಸ್ಥಿತಿಯನ್ನು ಸೃಷ್ಟಿ ಮಾಡುವುದು ಕೂಡ ಈ ಭೂರಹಿತ್ವ. ಜೊತೆಗೆ ಬರಗಾಲದಲ್ಲಿ ಬೇಸಿಗೆಕಾಲದಲ್ಲಿ ಮತ್ತು ಸಾಮಾಜಿಕ ಕಲಹಗಳುಂಟಾದಾಗ ಈ ಭೂರಹಿತ ಕುಟುಂಬಗಳು ನಿರುದ್ಯೋಗಕ್ಕೀಡಾಗುತ್ತವೆ. ಇಂತಹ ಸಂದರ್ಭದಲ್ಲಿ ಬೇರೆ ದಾರಿಯಿಲ್ಲದೇ ಈ ನಿರ್ಗತಿಕ ಕುಟುಂಬಗಳು ಜೀವನೋಪಾಯಕ್ಕಾಗಿ ನಗರಗಳಿಗೆ ವಲಸೆ ಬರುವುದುಂಟು. ಆದರೆ ನಗರ ಜೀವನ ತನ್ನದೇ ಆದ, ವಸತಿ ಹೀನತೆ, ಮಕ್ಕಳ ವಿದ್ಯಾಭ್ಯಾಸ, ಕುಡಿವ ನೀರು, ಜೀವನ ಶುಚಿತ್ವಗಳಂತಹ ಸಮಸ್ಯೆಗಳನ್ನು ತಂದೊಡ್ಡಿಬಿಡುತ್ತದೆ. ಭೂರಹಿತ್ವವನ್ನು ತಡೆಯುವಲ್ಲಿ ಎಪ್ಪತ್ತರ ದಶಕದಿಂದೀಚೆಗೆ ಸರ್ಕಾರ ಕೈಗೊಂಡಿರುವ ಕ್ರಮದಿಂದಾಗಿ ಹೇಳಿಕೊಳ್ಳುವಂತಹ ಪ್ರಗತಿಯೇನು ಆಗಿಲ್ಲ. ಒಂದು ಕಡೆ ಆಡಳಿತಾತ್ಮಕ ಅಡತಡೆಗಳು ಭೂ ಸುಧಾರಣೆಗೆ ಅಡ್ಡಿಯಾದರೆ ಮತ್ತೊಂದು ಕಡೆ ಪರಿಶಿಷ್ಟ ಜಾ./ಪಂ. ಅಭಿವೃದ್ಧಿ ನಿಗಮಗಳು ಕೈಗೊಂಡಿರುವ ಭೂ ವಿತರಣಾ ಕ್ರಮಗಳು ಎಲ್ಲಾ ಭೂರಹಿತ ಕುಟುಂಬಗಳಿಗೆ ಭೂಮಿ ನೀಡುವಲ್ಲಿ ಸಫಲವಾಗುತ್ತಿಲ್ಲ.

ಬಡತನ : ಬಡತನ ಮತ್ತು ಪರಿಶಿಷ್ಟ ಜಾತಿ ಪದಗಳನ್ನು ಜೊತೆಜೊತೆಗಾಗಿ ಬಳಸಿದ್ದಲ್ಲಿ ತಪ್ಪಾಗಲಾರದು. ಏಕೆಂದರೆ ಭಾರತದೇಶದಲ್ಲಿ ಬಹುಮಂದಿ ದಲಿತರು ಬಡವರಾಗಿ ಹುಟ್ಟಿ ಬಡವರಾಗಿ ಬದುಕಿ ಬಡವರಾಗಿಯೇ ಅಸು ನೀಗುವ ದಾರುಣ ಸ್ಥಿತಿ ಇಂದಿಗೂ ಇದೆ. ಬಡತನದ ಸಮಸ್ಯೆ ಇತರೆ ಸಮುದಾಯಗಳಲ್ಲಿಯೂ ಇದೆಯಾದರೂ ಅದರ ಗಾತ್ರ ಮತ್ತು ಭೀಕರತೆ ದಲಿತರನ್ನು ಹೆಚ್ಚಾಗಿ ಕಾಡುತ್ತದೆ. ಯೋಜನಾ ಆಯೋಗದ ಅಂದಾಜಿನ ಪ್ರಕಾರ 1993-94ರಲ್ಲಿ ಸುಮಾರು 30% ಇತರೆ ಸಮುದಾಯಗಳು ಬಡತನ ರೇಖೆಯಿಂದ ಕೆಳಗೆ ಇದ್ದು ಈ ಅಂಕಿ ದಲಿತರಲ್ಲಿ ಶೇ. 49ರಷ್ಟಿತ್ತು. 1977-78ರಲ್ಲಿ ಇತರ ಸಮುದಾಯದ ಶೇ. 48.30 ಮಂದಿ ಬಡತನ ರೇಖೆಯಿಂದ ಕೆಳಗಿದ್ದರೆ ದಲಿತರ ಸಂಖ್ಯೆ ಶೇ. 50.30ಆಗಿತ್ತು. ಈ ಅಂಕಿ ಅಂಶಗಳು ದಲಿತರು ಮತ್ತು ಇತರರ ಮಧ್ಯೆ ಇರುವ ಬಡತನದ ಅಂತರವನ್ನು ಪ್ರತಿಬಿಂಬಿಸುತ್ತವೆ. ಈ ಅಂತರ ಎಪ್ಪತ್ತರ ದಶಕದಲ್ಲಿ ಶೇ. 8ರಷ್ಟಿದ್ದರೆ ಅದೀಗ ಶೇ. 13ಕ್ಕೇರಿದೆ. 1977-78ರಿಂದ 1993-94ರ ಅವಧಿಯಲ್ಲಿ ಇತರೆ ಸಮುದಾಯಗಳಲ್ಲಿ ಬಡತನ ನಿರ್ಮೂಲನೆ ಶೇ. 12.33ರಾದರೆ ಈ ಅಂಕಿ ದಲಿತರಲ್ಲಿ ಶೇ. 8 ಮಾತ್ರ. ದುರಾದೃಷ್ಟವಶಾತ್ ಇದುವರೆಗೆ ಬಡತನ ಅಥವಾ ದಾರಿದ್ರ್ಯ ನಿರ್ಮೂಲನೆಗಾಗಿ ದಲಿತರ ದೃಷ್ಟಿಕೋನದಿಂದ ಸಮಸ್ಯೆಗಳನ್ನು ವಿಶ್ಲೇಷಿಸುವ ಪ್ರಯತ್ನ ನಡೆದಿಲ್ಲ. ವ್ಯಾಖ್ಯಾನದಲ್ಲಿ ಬಡತನವೆಂಬುದಕ್ಕೆ ಅರ್ಥ ಒಂದೇ ಇರಬಹುದು ಆದರೆ ದಲಿತರು ಹಲವು ರೀತಿಯಿಂದ ವಂಚಿತರಾಗಿರುವುದರಿಂದ ಅವರಲ್ಲಿನ ಬಡತನಕ್ಕೆ ಸೂಕ್ಷ್ಮವಾಗಿ ಗಮನಿಸಬೇಕಾಗುತ್ತದೆ.

ಮುಂದುವರೆಯದಿರುವಿಕೆ : ಐದು ದಶಕಗಳ ಶೈಕ್ಷಣಿಕ ಕಾರ್ಯಕ್ರಮಗಳು ಸುಮಾರು ಮೂರನೇ ಒಂದರಷ್ಟು ದಲಿತರನ್ನು ವಿದ್ಯಾವಂತರನ್ನಾಗಿ ಮಾಡಿವೆ ಯಷ್ಟೆಯಲ್ಲಾ ದಲಿತ ವಿದ್ಯಾವಂತ ನಿರುದ್ಯೋಗಿಗಳ ಸೈನ್ಯವನ್ನೇ ಸೃಷ್ಟಿಸಿವೆ. ಸರ್ಕಾರಿ ಕ್ಷೇತ್ರದಲ್ಲಿನ ನೌಕರಿ ಮೀಸಲಾತಿ ಕೆಲ ದಲಿತರಿಗೆ ಸಹಾಯಮಾಡಿದೆ ಯಾದರೂ ಬಹಳಷ್ಟು ಮಂದಿ ನಿರುದ್ಯೋಗಿಗಳಾಗಿಯೇ ಉಳಿಯುವಂತಾಗಿದೆ.

ಇದಕ್ಕೆ ಮುಖ್ಯ ಕಾರಣ ನೌಕರಿಗೆ ಬೇಕಾಗುವ ಉದ್ಯೋಗಾರ್ಹತೆ ಮತ್ತು ದಲಿತರಿಗೆ ಸಿಗುವ ಶಿಕ್ಷಣದ ಮಧ್ಯೆ ಇರುವ ಅಂತರದಿಂದ. ಜಾಗತೀಕರಣ ಮತ್ತು ಖಾಸಗೀಕರಣದ ನಡುವೆ ಸರ್ಕಾರಿ ಕ್ಷೇತ್ರದ ಉದ್ಯೋಗಗಳು ನಶಿಸಿಹೋಗುತ್ತಿವೆ. ಇದರ ಜೊತೆಗೆ ಬಹಳ ಮಂದಿ ದಲಿತ ಮಕ್ಕಳು ಶಾಲೆಗೆ ಹೋಗ ಲಾಗುತ್ತಿಲ್ಲ, ಮತ್ತೆ ಕೆಲವರಿಗೆ ಶಾಲೆಗಳೇ ಇಲ್ಲವಾಗಿದೆ. ಬಡತನ ಮತ್ತು ಬಾಲ ಕಾರ್ಮಿಕ ಸ್ಥಿತಿಗಳಿಂದಾಗಿ ಬಳಲುವ ದಲಿತ ಮಕ್ಕಳು ದೇಶದಲ್ಲಿ ಶಾಲೆ ಬಿಡುವ ಒಟ್ಟು ಮಕ್ಕಳಲ್ಲಿ ಶೇ. 16ರಷ್ಟಿದ್ದಾರೆ. ಶಾಲೆ ಬಿಡುವ ಮಕ್ಕಳಲ್ಲಿ ಶೇ. 64ರಷ್ಟು ಪ್ರಾಥಮಿಕ ಶಾಲಾ ಮಧ್ಯೆದಲ್ಲೇ ಬಿಡುವುದರಿಂದ ಈ ಹಂತದಲ್ಲೇ ಸಮಸ್ಯೆಯನ್ನು ತಡೆಯುವಲ್ಲಿ ಕಾರ್ಯ ರೂಪಿಸಬೇಕಾಗಿದೆ.

ಸರ್ಕಾರಿ ಕ್ಷೇತ್ರದಲ್ಲಿ ನೌಕರಿಯೊಂದೇ ದಲಿತರು ಗೌರವದಿಂದ ಬದುಕಲುನುವಾಗುವ ಮಾರ್ಗವೆನ್ನ ಲಾಗುತ್ತಿತ್ತು. ದಲಿತರಿಗೆ ಅನ್ಯ ಆರ್ಥಿಕ ಬುನಾದಿ ಇಲ್ಲದಿರುವುದರಿಂದ ಸರ್ಕಾರಿ ಕ್ಷೇತ್ರದ ಉದ್ಯೋಗ ದಲಿತರನ್ನು ಮುಖ್ಯವಾಹಿನಿಗೆ ತರುವ ಮತ್ತೊಂದು ಸಾಧನವೆಂದು ನಮ್ಮ ಸಂವಿಧಾನ ಕತೃಗಳು ಅಭಿಪ್ರಾಯ ಪಟ್ಟಿದ್ದರು. ಆದರೆ ಕಳೆದ ಐವತ್ತು ವರ್ಷಗಳಲ್ಲಿ ಸುಮಾರು ಏಳು ಲಕ್ಷ ಮಂದಿಗಷ್ಟೆ ಈ ಸಂವಿಧಾನ ಬದ್ಧ ಹಕ್ಕುಗಳಿಂದ ಕೇಂದ್ರ ಸರ್ಕಾರ ಮತ್ತು ಕೇಂದ್ರ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಲ್ಲಿ ಕೆಳಸ್ಥರದ ಹುದ್ದೆಗಳು ಲಭಿಸಿವೆ. ಈ ಏಳು ಲಕ್ಷವೆಂಬ ಸಂಖ್ಯೆ ಒಟ್ಟು ಹುದ್ದೆಗಳು ಮತ್ತು ಅಪಾರ ದಲಿತ ಜನಸಂಖ್ಯೆಯನ್ನು ಗಮನಿಸಿದಾಗ ಗಣನೀಯವೆನಿಸುವುದಿಲ್ಲ. ಇವರಲ್ಲಿ ಒಂದಿಬ್ಬರು ಉನ್ನತ ಹುದ್ದೆಗಳಿಗೆ ತಲುಪಿದ್ದರೆ ಅದು ಅವರ ಸ್ವಪ್ರಯತ್ನದಿಂದ ಅಷ್ಟೇ. ಈ ದಿಶೆಯಲ್ಲಿ ದಲಿತರ ಮುನ್ನಡೆಯನ್ನು ಸವರ್ಣೀಯರು ಸಹಿಸುತ್ತಿಲ್ಲ, ಇದರಿಂದ ಮೀಸಲಾತಿಯನ್ನು ಕೆಳಸ್ಥರದ ಹುದ್ದೆಗಳಿಗಷ್ಟೇ ಸೀಮಿತಗೊಳಿಸುವ ಅಥವಾ ಮೇಲ್‌ಸ್ತರದ ಹುದ್ದೆಗಳಲ್ಲಿ ಮೀಸಲಾತಿಯನ್ನು ಮಿತಿಗೊಳಿಸುವ ನೀತಿಗಳು ಜಾರಿಯಾಗುತ್ತಿವೆ. ದುರಾದೃಷ್ಟವಶಾತ್ ಸರ್ಕಾರದ ದೀರ್ಘಾವಧಿ ಧ್ಯೇಯಗಳನ್ನು ಸಾಧಿಸಬೇಕಾದ ಸರ್ಕಾರಿ ಪ್ರತಿನಿಧಿಗಳೇ ಇಂತಹ ಅಸಂವಿಧಾನಿಕ ನೀತಿ ನಿರೂಪಣೆಗಳಲ್ಲಿ ಶಾಮೀಲಾಗುತ್ತಿದ್ದಾರೆ.

ಸರ್ಕಾರಿ ಕ್ಷೇತ್ರದಲ್ಲಿ ನೌಕರಿಯೊಂದೇ ದಲಿತರು ಗೌರವದಿಂದ ಬದುಕಲುನುವಾಗುವ ಮಾರ್ಗವೆನ್ನಲಾಗುತ್ತಿತ್ತು. ದಲಿತರಿಗೆ ಅನ್ಯ ಆರ್ಥಿಕ ಬುನಾದಿ ಇಲ್ಲದಿರುವುದರಿಂದ ಸರ್ಕಾರಿ ಕ್ಷೇತ್ರದ ಉದ್ಯೋಗ ದಲಿತರನ್ನು ಮುಖ್ಯವಾಹಿನಿಗೆ ತರುವ ಮತ್ತೊಂದು ಸಾಧನವೆಂದು ನಮ್ಮ ಸಂವಿಧಾನ ಕತೃಗಳು ಅಭಿಪ್ರಾಯ ಪಟ್ಟಿದ್ದರು. ಆದರೆ ಕಳೆದ ಐವತ್ತು ವರ್ಷಗಳಲ್ಲಿ ಸುಮಾರು ಏಳು ಲಕ್ಷ ಮಂದಿಗಷ್ಟೆ ಈ ಸಂವಿಧಾನ ಬದ್ಧ ಹಕ್ಕುಗಳಿಂದ ಕೇಂದ್ರ ಸರ್ಕಾರ ಮತ್ತು ಕೇಂದ್ರ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಲ್ಲಿ ಕೆಳಸ್ಥರದ ಹುದ್ದೆಗಳು ಲಭಿಸಿವೆ.

ವಸತಿ ಹೀನತೆ : ಯಾವುದೇ ರೀತಿಯ ವಸತಿ ಇಲ್ಲವೆಂಬುದು ರಾಷ್ಟ್ರದ ಒಟ್ಟು ವಸತಿ ಹೀನರಲ್ಲಿ ಶೇ. 57ರಷ್ಟಿರುವ 51 ಲಕ್ಷ ಮಂದಿ ದಲಿತರ ಸಮಸ್ಯೆ. ಇತರರನ್ನು ಹೋಲಿಸಿದಲ್ಲಿ ದಲಿತರನ್ನು ವಸತಿ ಹೀನತೆ ಸುಮಾರು ಒಂದುವರೆ ಪಟ್ಟು ಹೆಚ್ಚು. ವಸತಿ ಸಮಸ್ಯೆಯನ್ನು ಬಗೆಹರಿಸುವಲ್ಲಿ ಸರ್ಕಾರದ ಯೋಜನೆಗಳು ಅಷ್ಟೊಂದು ಫಲಕಾರಿಯಾಗಿಲ್ಲ. ಎಂಬತ್ತರ ದಶಕದಲ್ಲಿ ಕಟ್ಟಿಸಿದ ಸುಮಾರು 22 ಲಕ್ಷ ಮನೆಗಳಲ್ಲಿ ದಲಿತರಿಗೆ ದಕ್ಕಿದ್ದು 5 ಲಕ್ಷ ಮನೆಗಳಷ್ಟೆ. ದಲಿತರು ವಸತಿ ಹೀನತೆ ಗ್ರಾಮಾಂತರ ಪ್ರದೇಶದಿಂದ ನಗರ ಪ್ರದೇಶದಲ್ಲಿ ಹದಗೆಟ್ಟಿದ್ದು ಸಾವಿರಾರು ದಲಿತ ಕುಟುಂಬಗಳು ರಸ್ತೆ ಬದಿಗಳಲ್ಲಿ ವಾಸಿಸುವಂತಾಗಿದೆ. ಇದರ ಜೊತೆಗೆ ಸುಮಾರು ಶೇ. 70ರಷ್ಟು ದಲಿತ ಕುಟುಂಬಗಳು ಮುರುಕಲು ಮನೆಗಳಲ್ಲಿ ವಾಸಮಾಡುತ್ತಿದ್ದಾರೆ. ಈ ಅಸಹಾಯಕ ಪರಿಸ್ಥಿತಿಯನ್ನು ಸುಧಾರಿಸಲು ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಬೇಕಾಗಿದೆ.

ಸೌಲಭ್ಯಗಳಿಲ್ಲದಿರುವುದು: ವಸತಿ ಸಮಸ್ಯೆಯಂತೆಯೇ ಸುಮಾರು ಶೇ. 90ರಷ್ಟು ದಲಿತ ಕುಟುಂಬಗಳಿಗೆ ಮೂಲ ಸೌಲಭ್ಯಗಳಾದ ಶುದ್ಧ ನೀರು, ವಿದ್ಯುತ್‌ಚಕ್ತಿ ಅಥವಾ ಶೌಚಾಲಯ ವ್ಯವಸ್ಥೆ ಲಭಿಸುತ್ತಿಲ್ಲ. ಈ ಮೂಲ ಸೌಲಭ್ಯಗಳು ಉತ್ತಮ ಆರೋಗ್ಯ ಮತ್ತು ಶುದ್ಧ ಪರಿಸರವನ್ನು ಕಾಪಾಡುವಲ್ಲಿ ತೀರಾ ಅವಶ್ಯಕ. ಈ ಮೂಲ ಸೌಲಭ್ಯಗಳಿಂದ ವಂಚಿತರಾದವರಲ್ಲಿ ದಲಿತರ ಸಂಖ್ಯೆ ಸುಮಾರು ಮೂರು ಪಟ್ಟು ಹೆಚ್ಚು. ಇಂದಿಗೂ ಅಸುರಕ್ಷಿತ ಮತ್ತು ಕಲುಷಿತ ನೀರನ್ನು ಬಳಸಬೇಕಾದ ದಾರುಣ ಸ್ಥಿತಿ ಬಹಳ ಮಂದಿ ಗ್ರಾಮೀಣ ದಲಿತರನ್ನು ಕಾಡುತ್ತಿದೆ. ಸೀಮೆ ಎಣ್ಣೆ ದೀಪ ಉರಿಸುವುದರಿಂದ ಉಸಿರಾಡುವ ಸಮಸ್ಯೆ ಉಂಟಾಗುತ್ತದೆಯಾದರೂ ಇಂದಿಗೂ ಬಹಳಷ್ಟು ದಲಿತರ ಮನೆಗಳಲ್ಲಿ ಸೀಮೆಎಣ್ಣೆ ದೀಪಗಳೇ ಬೆಳಕಿಗೆ ಆಧಾರ. ಶೌಚಾಲಯದ ವ್ಯವಸ್ಥೆಗಳಿಲ್ಲದಿರುವುದರಿಂದ ದಲಿತರು ತಮ್ಮ ಮನೆಯ ಸುತ್ತ ಮುತ್ತಲ ಪ್ರದೇಶಗಳಲ್ಲಿ ಮಲ ಮೂತ್ರ ವಿಸರ್ಜನೆ ಮಾಡಿ ರೋಗ ರುಜಿನಗಳಿಗೆ ಎಡೆ ಮಾಡಿಕೊಡುತ್ತಿದ್ದಾರೆ. ಒಟ್ಟಾರೆ ಶುದ್ಧ ಕುಡಿಯುವ ನೀರು, ವಿದ್ಯುತ್‌ದೀಪ ಅಥವಾ ಶೌಚಾಲಯ ಸೌಲಭ್ಯ ಬಹಳಷ್ಟು ದಲಿತರಿಗೆ ದೊರೆಯಬೇಕಾಗಿದೆ.

ಅನ್ಯಮಾರ್ಗಗಳು: ಐದು ದಶಕಗಳ ಸರ್ಕಾರಿ ಯೋಜನೆಗಳಡಿಯಲ್ಲಿ ದಲಿತರ ಆರ್ಥಿಕ ಮತ್ತು ಸಾಮಾಜಿಕ ಸಮಸ್ಯೆಗಳನ್ನು ಹೋಗಲಾಗಿಸಲಾಗಿಲ್ಲ. ಕಾನೂನಿನಡಿಯಲ್ಲಿ ಮತ್ತು ಅಭಿವೃದ್ಧಿಕಾರ್ಯಗಳಡಿಯಲ್ಲಿ ಆಗಬೇಕಾಗಿದ್ದ ಪ್ರಗತಿ ಈ ಕಾರ್ಯಕ್ರಮಗಳನ್ನು ರೂಪಿಸುವಲ್ಲಿಯೇ ಆದ ತಪ್ಪುಗಳಿಂದ ಸಾಧ್ಯವಾಗಿಲ್ಲ. ಮತ್ತೊಂದು ಕಡೆ ದಲಿತರ ಅಸಹಾಯಕ ಸ್ಥಿತಿಯನ್ನು ಸಮಾಜ ಶೋಷಿಸುತ್ತಾ ಬಂದಿದೆ. ಕೊಲೆ, ಹೊಡೆದಾಟ, ಆಸ್ತಿಗಳಿಗೆ ಹಾನಿ, ದಲಿತ ಮಹಿಳೆಯರ ಅತ್ಯಾಚಾರ, ಸಾಮಾಜಿಕ ಬಹಿಷ್ಕಾರಗಳಿತ್ಯಾದಿಯಾಗಿ ದಲಿತರ ವಿರುದ್ಧ ಸವರ್ಣೀಯ ಸಮಾಜದ ಕ್ರೌರ್ಯ ಹೆಚ್ಚಾಗುತ್ತಾ ಬಂದಿದೆ. ಅಸ್ಪೃಶ್ಯತೆ ತೊಲಗಿಲ್ಲ, ಜೀತ ಪದ್ಧತಿ ಇಂದಿಗೂ ಜಾರಿಯಲ್ಲಿದೆ. ನಗರ ಪ್ರದೇಶದಲ್ಲಿ ದಲಿತರು ಎರಡೊತ್ತಿನ ಕೂಳಿಗಾಗಿ ಅಲೆದಾಡುತ್ತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಈಗಿರುವ ಅಭಿವೃದ್ಧಿ ಕಾರ್ಯಕ್ರಮಗಳು ಸೂಕ್ತವೇ ಅಥವಾ ಇಲ್ಲವೇ ಎಂಬುದನ್ನು ಸರ್ಕಾರ ಯೋಚಿಸಬೇಕಾಗಿದೆ. ನನ್ನ ಅಭಿಪ್ರಾಯದಲ್ಲಿ ಈ ಯೋಜನೆ/ಕಾರ್ಯಕ್ರಮಗಳು ಸಫಲವಾಗಿಲ್ಲ.

(36ನೇ ಪುಟಕ್ಕೆ)

ಚರಿತ್ರೆಯ ಪುನರ್‌ರಚನೆ ಮತ್ತು ಮಹಿಳೆ

ಈ ದೇಶದಲ್ಲಿ ಆಳರಸರ ಚರಿತ್ರೆಯನ್ನೇ ಸಮುದಾಯದ ಚರಿತ್ರೆಯೆಂದು ತಪ್ಪು ತಿಳಿಯಲಾಗಿದೆ. ಈ ದೇಶದ ಚರಿತ್ರೆ ರಾಜ-ಮಹಾರಾಜರ ವೈಭವದ ಜೀವನವನ್ನು ವರ್ಣಿಸುತ್ತದೆ, ರಾಜ-ರಾಣಿಯರ ಸಲ್ಲಾಪವನ್ನು ಹೇಳುತ್ತದೆ. ಜನಸಾಮಾನ್ಯನ ಜೀವನವನ್ನು ಮರೆಮಾಚಿದೆ. ದುಡಿವ ವರ್ಗದ ಜನರನ್ನು ದೂರ ತಳ್ಳಿದೆ. ಮಹಿಳೆಯರನ್ನು ಕಡೆಗಣಿಸಲಾಗಿದೆ. ಅದರಲ್ಲೂ ದಲಿತರನ್ನು ದಲಿತ ಮಹಿಳೆಯನ್ನು ದೂರವಿಟ್ಟಿದೆ. ಲಿಖಿತ ಚರಿತ್ರೆ ಶಾಸನಗಳು-ದಾಖಲೆಗಳು ರಾಜವೈಭೋಗವನ್ನು, ದತ್ತಿ-ದಾನಗಳ ವಿವರಗಳನ್ನು, ರಾಣಿಯರ ಉಪ ರಾಣಿಯರ ಸ್ವಯಂವರಗಳನ್ನು ವರ್ಣಿಸುತ್ತಲಿವೆ. ಇಲ್ಲಿ ಬಡವರ ಕಣ್ಣೀರಿನ ಕಥೆ ಕಾಣುವುದಿಲ್ಲ, ದುಡಿವವರ ಗೋಳು ದಾಖಲಾಗಿಲ್ಲ, ದಲಿತ ಮಹಿಳೆಯರ ಪ್ರಸ್ತಾಪ ಬರುವುದೇ ಇಲ್ಲ.

ಇಲ್ಲಿಯ ವಿದ್ವಾಂಸರು-ವಿದ್ಯಾವಂತರು ಲಿಖಿತ ಚರಿತ್ರೆಯನ್ನು-ಶಾಸನಗಳನ್ನು ನಂಬಿದಂತೆ, ಮೌಖಿಕ ಚರಿತ್ರೆಯನ್ನು-ಜನಪದ ಐತಿಹ್ಯಗಳನ್ನು ನಂಬುವುದಿಲ್ಲ. ಹೀಗಾಗಿ ಆಳಿದ ವರ್ಗಗಳ ಚರಿತ್ರೆಯೇ ಭಾರತದ ಚರಿತ್ರೆಯೆಂದು ಓದಿಸಲಾಗಿದೆ-ನಂಬಿಸಲಾಗಿದೆ-ನಂಬಲಾಗಿದೆ. ಇದು ನಿಜವಾದ ಚರಿತ್ರೆಗೆ ಬಗೆದ ದ್ರೋಹವಾಗಿದೆ. ಈ ಕಾರಣದಿಂದಲೇ ಇಂದು ಚರಿತ್ರೆಯನ್ನು ಪುನರ್‌ರಚಿಸಬೇಕಾಗಿದೆ. ಈ ಪುನರ್ ರಚನೆಯ ಕ್ರಿಯೆಯಲ್ಲಿ ತುಂಬಾ ಜಾಗ್ರತೆಯನ್ನು ವಹಿಸಬೇಕಾಗಿದೆ. ಆಳಿದ-ಆಳುವ ವ್ಯವಸ್ಥೆಯ ಜನವಿರೋಧಿ ಸಮುದಾಯದ ಚರಿತ್ರೆಯನ್ನು ಕೈಬಿಟ್ಟು ದುಡಿದ-ದುಡಿಯುವ ಸಮುದಾಯದ ಚರಿತ್ರೆಯನ್ನು ಬರೆಯಬೇಕಾಗಿದೆ. ಹೀಗೆ ಚರಿತ್ರೆಯನ್ನು ಪುನರ್‌ರಚಿಸುವ ಸಂದರ್ಭದಲ್ಲಿ ದಲಿತ ಮಹಿಳೆಗೆ ಮಹತ್ವದ ಸ್ಥಾನ ನೀಡಬೇಕಾಗಿದೆ.

ಹಿಂದಿನ ರಾಜ್ಯಾಂಗ ವ್ಯವಸ್ಥೆಯಲ್ಲಾಗಲಿ, ಆಡಳಿತ ವ್ಯವಸ್ಥೆಯಲ್ಲಾಗಲಿ ಶೂದ್ರರಿಗೆ-ದಲಿತರಿಗೆ ಸ್ಥಾನವೇ ಇರಲಿಲ್ಲ. ಇನ್ನು ದಲಿತ ಮಹಿಳೆಯ ಸ್ಥಿತಿಯಂತೂ ಶೋಚನೀಯವಾಗಿತ್ತು. ಶಿಷ್ಟ ಸಾಂಸ್ಕೃತಿಕ ಪರಂಪರೆಯಲ್ಲಿ ಇಂತಹ ದುರಂತ ಕಂಡರೆ, ಜನಪದ ಸಾಂಸ್ಕೃತಿಕ ಪರಂಪರೆಯಲ್ಲಿ, ಅದರಲ್ಲೂ ಗ್ರಾಮ ದೇವತೆಗಳ ವಿಷಯದಲ್ಲಿ ಇದಕ್ಕೆ ಭಿನ್ನವಾದ ಹೊಸ ಚರಿತ್ರೆಯ ವಿವರಗಳು ಕಾಣಸಿಗುತ್ತವೆ.

ಗ್ರಾಮದೇವತೆಗಳಲ್ಲಿ ಬಹುಸಂಖ್ಯಾತ-ದೇವತೆಗಳು ಹೆಣ್ಣು ದೇವತೆಗಳೇ ಆಗಿವೆ. ಅದರಲ್ಲೂ ಹೆಚ್ಚು ಸಂಖ್ಯೆಯ ದೇವತೆಗಳು ದಲಿತ ಹೆಣ್ಣು ದೇವತೆಗಳೇ ಆಗಿವೆ. ಇಂತಹ ಸಾಂಸ್ಕೃತಿಕ ಪರಂಪರೆಯ ನೆಲೆಯಿಂದ ದಲಿತ ಮಹಿಳೆಯ ಚರಿತ್ರೆಯನ್ನು ಕಟ್ಟಿಕೊಳ್ಳಬೇಕಾಗಿದೆ.

ಸವದತ್ತಿ ಎಲ್ಲಮ್ಮ ಹಾಗೂ ಮುನಿರಾಬಾದ ಹುಲಿಗೆಮ್ಮ ಗ್ರಾಮದೇವತೆಗಳ ಕಥಾ ವೃತ್ತಾಂತದ ಮೂಲಕ ದಲಿತ ಮಹಿಳೆಯರ ಸಾಧ್ಯತೆಗಳನ್ನು ಅರ್ಥೈಸಿಕೊಳ್ಳಬಹುದಾಗಿದೆ. ಸವದತ್ತಿ ಎಲ್ಲಮ್ಮನ ಕಥಾವೃತ್ತಾಂತದಲ್ಲಿ ಹಾಗೂ ಮುನಿರಾಬಾದ ಹುಲಿಗೆಮ್ಮನ ಕಥಾಪುರಾಣದಲ್ಲಿ ಪುರುಷ ಪ್ರಧಾನ ವ್ಯವಸ್ಥೆಯ ಕ್ರೌರ್ಯ-ಹಿಂಸೆಗಳು ಎದ್ದು ಕಾಣುತ್ತವೆ. ಮೇಲ್ ವರ್ಗದವರ ಶೋಷಣೆ-ಕೆಳವರ್ಗದವರ ಸಹನೆ ಸ್ಪಷ್ಟವಾಗುತ್ತವೆ. ಈ ಕಥಾನಕಗಳಲ್ಲಿ ವರ್ಣಸಂಘರ್ಷದ-ವರ್ಗಸಂಘರ್ಷದ ಬೀಜಗಳು ಕಾಣಿಸಿಕೊಳ್ಳುತ್ತವೆ. ಇಂತಹ ಮಹತ್ವದ ವಿಷಯಗಳತ್ತ ನಮ್ಮ ಶಿಷ್ಟಚರಿತ್ರೆ ಕಣ್ಣೆತ್ತಿ ನೋಡಿಲ್ಲ. ಇಲ್ಲಿಯ ಸಾಂಸ್ಕೃತಿಕ ಸಂಘರ್ಷಗಳು ಈ ಚರಿತ್ರೆಕಾರರಿಗೆ ಮುಖ್ಯವಾಗಿ ಕಾಣಿಸಿಲ್ಲ. ಜನಪದರನ್ನು ಅವರ ಮೌಖಿಕ ಚರಿತ್ರೆಯನ್ನು- ಅವರ ಸಾಂಸ್ಕೃತಿಕ ಪರಂಪರೆಯನ್ನು ಕಡೆಗಣಿಸಿದ ಚರಿತ್ರೆಕಾರರು ರಾಜ-ಮಹಾರಾಜರ ಭೋಗದ ಜೀವನವೇ ನಿಜವಾದ ಚರಿತ್ರೆಯೆಂದು ತಿಳಿದಿದ್ದಾರೆ.

ಶಾಂತಿಮಂತ್ರವನ್ನು ಪಠಿಸುವ ಈ ದೇಶದ ಅನೇಕ ಮುನಿಗಳು-ಋಷಿಗಳು-ತಪಸ್ವಿಗಳು ಅಶಾಂತಿ ವಾತಾವರಣವನ್ನು ಸೃಷ್ಟಿಸಿದರೆ, ಮಹಿಳೆಯರು- ದಲಿತ ಸ್ತ್ರೀಯರು ಶಾಂತಿ ಪಾಠ ಕಲಿಸಿದ್ದಾರೆ. ಮುನಿಗಳಾದವರೇ ರುಂಡ ಹಾರಿಸಲು ಆಜ್ಞಾಪಿಸಿ ಹಿಂಸೆಯನ್ನು ಮೆರೆದರೆ, ಈ ಮಹಿಳೆಯರು ಅವರು ಕೊಟ್ಟ ಹಿಂಸೆಯನ್ನು ಅರಗಿಸಿಕೊಂಡಿದ್ದಾರೆ.

○ ಡಾ|| ಬಸವರಾಜ ಸಬರದ

ಶಾಂತಿಮಂತ್ರವನ್ನು ಪಠಿಸುವ ಈ ದೇಶದ ಅನೇಕ ಮುನಿಗಳು-ಋಷಿಗಳು-ತಪಸ್ವಿಗಳುಅಶಾಂತಿ ವಾತಾವರಣವನ್ನು ಸೃಷ್ಟಿಸಿದರೆ, ಇಲ್ಲಿ ಬಾಳಿದ ಸಾಮಾನ್ಯ ಮಹಿಳೆಯರು-ದಲಿತ ಸ್ತ್ರೀಯರು ಶಾಂತಿಪಾಠ ಕಲಿಸಿದ್ದಾರೆ. ಮುನಿಗಳಾದವರೇ ರುಂಡ ಹಾರಿಸಲು ಆಜ್ಞಾಪಿಸಿ ಹಿಂಸೆಯನ್ನು ಮೆರೆದರೆ, ಈ ಮಹಿಳೆಯರು ಅಹಿಂಸೆಯಿಂದ ತಮ್ಮ ಸೃಜನಶಕ್ತಿಯ ಸಾಧ್ಯತೆಗಳಿಂದ, ಅವರು ಕೊಟ್ಟ ಹಿಂಸೆಯನ್ನು ಅರಗಿಸಿಕೊಂಡಿದ್ದಾರೆ. ಜಮದಗ್ನಿ ಮುನಿ ಬಲವಾದ ಕಾರಣವಿಲ್ಲದೆ ರೇಣುಕೆಯ ರುಂಡವನ್ನು ಹಾರಿಸಲು, ಪರಶುರಾಮನಿಗೆ ಆದೇಶಿಸುವುದು. ಪರುಷರಾಮ ತಾಯಿಯ ರುಂಡವನ್ನು ಹಾರಿಸಿ ಆಜ್ಞೆಪಾಲಿಸುವುದು, ಯಜಮಾನ ಸಂಸ್ಕೃತಿಯ ಹಿಂಸೆಯ ಪರಾಕಾಷ್ಠೆತೆಗೆ ಉದಾಹರಣೆಗಳಾಗಿವೆ. ರೇಣುಕೆ ಅಥವಾ ಎಲ್ಲಮ್ಮ, ಪುರುಷ ಪ್ರಧಾನ ವ್ಯವಸ್ಥೆಯ ಈ ಹಿಂಸೆಯನ್ನು ಮೆಟ್ಟಿನಿಂತು, ಏಳು ರುಂಡಗಳಾಗಿ ಬೆಳೆದು ಜನಸಾಮಾನ್ಯರಿಂದ ಪೂಜೆಗೊಳ್ಳುವುದು, ಅವೇ ಸಪ್ತ ಮಾತೃಕೆಗಳಾಗಿ ಸಾಂಸ್ಕೃತಿಕ ಮಹತ್ವವನ್ನು ಸಾರುವುದು ತುಂಬಾ ಮುಖ್ಯವಾಗಿರುತ್ತವೆ.

ಹಸಿವೆಯಿಂದ ಬಳಲುತಿದ್ದ ಹುಲಿಗೆಮ್ಮ-ಮಾತಂಗಿಯಂತಹ ದಲಿತ ಮಹಿಳೆಯರು ಬದನೇಕಾಯಿ ತಿಂದದ್ದಕ್ಕಾಗಿ, ತೋಟದ ಗೌಡ ಅವರ ಮೂಗು-ಮುಂದಲೆ ಕೊಯ್ಯುವುದು ಪುರುಷ ಪ್ರಧಾನ ವ್ಯವಸ್ಥೆಯ ಕರಾಳ ಮುಖಗಳ ದಾಖಲೆಯಾಗಿದೆ. ಇಲ್ಲಿ ವರ್ಗ ಸಂಘರ್ಷದ ಬೀಜಗಳನ್ನು ಕಾಣಬಹುದಾಗಿದೆ. ಊಳಿಗಮಾನ್ಯ ವ್ಯವಸ್ಥೆಯಲ್ಲಿ ಗೌಡ-ಕುಲಕರ್ಣಿಯರಂತಹ ಆಳುವ ವ್ಯವಸ್ಥೆಯ ಪ್ರತಿನಿಧಿಗಳು ಹೇಗೆ ದಲಿತ ಮಹಿಳೆಯರನ್ನು ಶೋಷಣೆ ಮಾಡಿದರೆಂಬುದಕ್ಕೆ ಅನೇಕ ಉದಾಹರಣೆಗಳಿವೆ. ಇಂತಹ ವಿಷಯಗಳನ್ನು ನಮ್ಮ

ಚರಿತ್ರೆ ಕಣ್ಣೆತ್ತಿಯೂ ನೋಡಿಲ್ಲ. ಇಂತಹ ಮಹಿಳೆಯರ ಹೋರಾಟದ ಗಾಥೆ ನಮ್ಮ ಚರಿತ್ರೆಗಳಲ್ಲಿ ಸಿಗುವುದು ತುಂಬಾ ವಿರಳವಾಗಿದೆ.

ಹೀಗೆ ಗ್ರಾಮದೇವತೆಗಳ ಸಂದರ್ಭದಲ್ಲಿ ಬರುವ ದಲಿತ ಮಹಿಳೆಯರ ಸಾಧ್ಯತೆಗಳನ್ನು ನಮ್ಮ ಚರಿತ್ರೆ ಕೈಬಿಟ್ಟಿದೆ. ಇವು ಪುರಾಣಕಾಲದ ಕಥೆಗಳಾಗಿರಬಹುದು, ಆದರೆ ಇಲ್ಲಿಯ ಸಾಂಸ್ಕೃತಿಕ ಮೌಲ್ಯಗಳು ಗಮನಾರ್ಹವಾಗಿವೆ. ರಾಜ್ಯಾಂಗ ವ್ಯವಸ್ಥೆಯ ಪ್ರತಿನಿಧಿಯಾಗಿ ಸತ್ಯಹರಿಶ್ಚಂದ್ರನ ಕಥೆಯನ್ನು ತೆಗೆದುಕೊಂಡರೆ ಅಲ್ಲಿ ಕಾಣುವುದು ಏನು? ಇದೇ ತಿರಸ್ಕಾರವಲ್ಲವೇ?

ಹರಿಶ್ಚಂದ್ರ ಹೊಲತಿಯರ ಗಾಯನವನ್ನು ಮೆಚ್ಚಿ ಮುತ್ತಿನ ಸರವನ್ನು ಕಾಣಿಕೆಯನ್ನಾಗಿ ಕೊಡುತ್ತಾನೆ. ಅವರು ಮದುವೆಯಾಗಲು ಕೇಳಿಕೊಂಡಾಗ ಹಿಂದೆ ಸರಿಯುತ್ತಾನೆ. ಆಗ ಹೊಲತಿಯರು ಕೇಳುವ ಪ್ರಶ್ನೆ ಬಹುಮುಖ್ಯವಾಗಿದೆ. ನಮ್ಮ ನೃತ್ಯವನ್ನು ನೋಡಿದ ಕಣ್ಣುಗಳಿಗೆ ಹೊಲೆಯಿಲ್ಲ, ಗಾಯನವನ್ನು ಕೇಳಿದ ಕಿವಿಗಳಿಗೆ ಹೊಲೆಯಿಲ್ಲ, ನಮ್ಮ ಪರಿಮಳವನ್ನು ಆಘ್ರಾಹಿಸಿದ ಮೂಗಿಗೆ ಹೊಲೆಯಿಲ್ಲ, ನಮ್ಮ ಸೌಂದರ್ಯವನ್ನು ಬಣ್ಣಿಸಿದ ನಾಲಿಗೆಗೆ ಹೊಲೆಯಿಲ್ಲ ಆದರೆ ನಮ್ಮನ್ನು ಮುಟ್ಟಿ ಮದುವೆಯಾದರೆ ಹೊಲೆಯಾಗುತ್ತದೆಯೆ? ಪಂಚೇಂದ್ರಿಯಗಳಲ್ಲಿ ನಾಲ್ಕು ಅಧಮ, ಒಂದು ಅಧಿಕವೆ? ಎಂದು ಕೇಳಿದ ಹೊಲತಿಯರ ಪ್ರಶ್ನೆಗಳಿಗೆ ಅಂದು ಹರಿಶ್ಚಂದ್ರನಲ್ಲಿ ಉತ್ತರವಿರಲಿಲ್ಲ. ಇಂದಿಗೂ ಕೂಡ ಜಾತಿಪ್ರಧಾನ ವ್ಯವಸ್ಥೆಯಲ್ಲಿ- ವರ್ಗಪ್ರಧಾನ ವ್ಯವಸ್ಥೆಯಲ್ಲಿ ಉತ್ತರಗಳೇ ಇಲ್ಲ. ಇಂತಹ ಸಂದರ್ಭದಲ್ಲಿ ನಮ್ಮ ಚರಿತ್ರೆಕಾರರು ಜಾಣಕಿವುಡರಾಗಿರುತ್ತಾರೆ. ಆಳುವ ವ್ಯವಸ್ಥೆ ಹೇಳಿದ್ದು ಮಾತ್ರ ಅವರ ಕಿವಿಗೆ ಬೀಳುತ್ತದೆ-ಕಣ್ಣಿಗೆ ಕಾಣುತ್ತದೆ. ಅನೇಕ ಸತ್ಯಸಂಗತಿಗಳು-ಜನಸಾಮಾನ್ಯರ ನೋವು-ನಿರಾಶೆಗಳು- ದಲಿತರ ಹತಾಶೆಗಳು ಅವರಿಗೆ ಕಾಣುವುದಿಲ್ಲ. ಹೀಗೆ ಶತಮಾನಗಳಿಂದಲೂ ಈ ಶಿಷ್ಟ ಚರಿತ್ರೆ ದಲಿತ ಮಹಿಳೆಯರನ್ನು ದೂರವೇ ಇಟ್ಟಿದೆ.

ಹನ್ನೆರಡನೆಯ ಶತಮಾನದ ವಚನ ಚಳುವಳಿಯ ಸಂದರ್ಭ, ದಲಿತ ಮಹಿಳೆಯರ ದೃಷ್ಟಿಯಿಂದ ತುಂಬಾ ಮಹತ್ವವಾದ ಕಾಲ. ಮಾದಾರ ಚೆನ್ನಯ್ಯ-ಡೋಹರ ಕಕ್ಕಯ್ಯ, ಇವರ ಸಮಕಾಲೀನಳಾಗಿದ್ದ ಬಸವಪೂರ್ವ ಯುಗದ ಶರಣೆ ವರದಾನಿ ಗುಡ್ಡವ್ವೆ ಮಹತ್ವದ ದಲಿತ ಶರಣೆ. ಬಸವಯುಗದ ಸಂದರ್ಭದಲ್ಲಿದ್ದ ಉರಿಲಿಂಗಪೆದ್ದಿಯ ಪುಣ್ಯಸ್ತ್ರೀ ಕಾಳವ್ವೆಯಂತಹ ಅನೇಕ ದಲಿತ ಶರಣೆಯರು ವಚನ ಚಳುವಳಿಯ ಮುಖ್ಯ ಭಾಗವಾಗಿದ್ದರು. ಆದರೆ ಹನ್ನೆರಡನೇ ಶತಮಾನದ ನಂತರ ನಡೆದದ್ದೇನು? ಹದಿನೈದನೇ ಶತಮಾನದಲ್ಲಿ ಬಂದ ನೂರೊಂದು ವಿರಕ್ತರಲ್ಲಾಗಲಿ, ಏಳುನೂರೊಂದು ವಿರಕ್ತರಲ್ಲಾಗಲಿ, ಪಂಚಪೀಠಾಧೀಶ್ವರರಲ್ಲಾಗಲಿ ಒಬ್ಬ ಮಹಿಳೆಯೂ ಇಲ್ಲ. ಇನ್ನು ದಲಿತ ಮಹಿಳೆಯ ಪ್ರಸ್ತಾಪವಂತೂ ಸಾಧ್ಯವೇ ಇಲ್ಲ. ಹನ್ನೆರಡನೇ ಶತಮಾನದಲ್ಲಿ ಯಾವ ವಚನ ಚಳುವಳಿ ಸಮಾನತೆಗಾಗಿ ಹೋರಾಟ ಮಾಡಿತ್ತೋ, ಅದೇ ಚಳುವಳಿಯ ಶರಣರ ಹೆಸರನ್ನು ಹೇಳಿ ಬದುಕಿದ ಮುಂದಿನವರು ಯಾರೂ ದಲಿತ ಮಹಿಳೆಯ ಬಗೆಗೆ ಕಾಳಜಿ ವಹಿಸಲಿಲ್ಲ. ಶೂನ್ಯ ಸಂಪಾದನೆಗಳಲ್ಲಂತೂ ದಲಿತ ವಚನಕಾರ್ತಿಯರ ಪ್ರವೇಶವೇ ಇಲ್ಲ. ಷಟ್‌ಸ್ಥಲ ಮಾರ್ಗದಲ್ಲಿ ಬದುಕಿದ ವರದಾನಿ ಗುಡ್ಡವ್ವೆ, ದಲಿತ ಆಹಾರ ಪದ್ಧತಿಗೆ ಗೌರವ ನೀಡಿದ ಕಾಳವ್ವೆ, ಕಾಯಕ ನಿಷ್ಠೆಗೆ ಹೆಸರಾದ ಸತ್ಯಕ್ಕ, ಪತಿಯ ತಪ್ಪನ್ನೇ ತಿದ್ದಿ ತೋರಿಸಿದ ಆಯ್ದಕ್ಕಿ ಲಕ್ಕಮ್ಮ ಇಂತಹ ಅನೇಕ-ಕೆಳವರ್ಗದ ಶರಣೆಯರು ವಚನ ಚಳುವಳಿಯ ಕೇಂದ್ರವಾಗಿದ್ದರು. ಆದರೆ ಮುಂದೆ ಬಂದ ಮಠಗಳೂ-ವೀರಶೈವ ಕವಿಗಳೂ , ಪುರಾಣಕಾರರು-ವಿರಕ್ತರು- ಗುರುಪರಂಪರೆಯವರು ಯಾರೂ ಈ ದಲಿತ ಮಹಿಳೆಯರ ಪರಂಪರೆಯನ್ನು ಗುರುತಿಸಲಿಲ್ಲ. ತಮ್ಮ ಸಮಕಾಲೀನ ಸಂದರ್ಭದ ಬದುಕಿನಲ್ಲಿ ಇವರಿಗೆ ಪ್ರಾಮುಖ್ಯತೆ ನೀಡಲಿಲ್ಲ. ಹೀಗಾಗಿ ಹನ್ನೆರಡನೇ ಶತಮಾನದಲ್ಲಿದ್ದ ವಚನ ಚಳುವಳಿಯ ಸಮಾನತೆಯ ಆಶಯ ಅಂದು ಅಲ್ಲಿಗೇ ಮುದುಡಿಹೋಯಿತು.

ಹೀಗೆ ಪುರಾಣದ ಘಟನೆಯನ್ನು ತೆಗೆದುಕೊಳ್ಳಿ, ರಾಜರ ಚರಿತ್ರೆಯ ಪ್ರಸಂಗವನ್ನು ನೋಡಿ, ಸಾಹಿತ್ಯದ ಸಂದರ್ಭಗಳನ್ನು ಗಮನಿಸಿ-ಎಲ್ಲಿಯೂ ದಲಿತರಿಗೆ-ದಲಿತ ಮಹಿಳೆಯರಿಗೆ ಸಿಗಬೇಕಾದ ಅವಕಾಶಗಳು ಸಿಕ್ಕಿಲ್ಲ. ಚರಿತ್ರೆಯಲ್ಲಿ ಅವರು ದಾಖಲಾಗಿಲ್ಲ.

ಸ್ವಾತಂತ್ರ್ಯ ಪೂರ್ವ ಹಾಗೂ ಸ್ವಾತಂತ್ರ್ಯ ಚಳುವಳಿ ಸಂದರ್ಭದಲ್ಲಿ ಅನೇಕ ಶೂದ್ರ-ದಲಿತ ಮಹಿಳೆಯರು ಈ ದೇಶಕ್ಕಾಗಿ ಪ್ರಾಣದಾನ ಮಾಡಿದ್ದಾರೆ. ಈ ಘಟನೆಗಳು ಎಲ್ಲಿಯೂ ನಮ್ಮ ಚರಿತ್ರೆಯಲ್ಲಿ ದಾಖಲಾಗಿಲ್ಲ. ಚಿತ್ರದುರ್ಗದ ಸಾಮ್ರಾಜ್ಯವನ್ನು-ಜನಸಾಮಾನ್ಯರನ್ನು ರಕ್ಷಣೆ ಮಾಡಿದ ವೀರವನಿತೆ ಒನಕೆ ಓಬವ್ವ ಕೆಳವರ್ಗದಿಂದ ಬಂದ ಮಹಿಳೆ. ಸಂಗೀತ ಕ್ಷೇತ್ರದಲ್ಲಿ ಹೆಸರುವಾಸಿಯಾಗಿದ್ದ ಶ್ರೀಮತಿ ವೆಂಕಟಸುಬ್ಬಲಕ್ಷ್ಮಿ ಲಂಬಾಣಿ ಜನಾಂಗದಿಂದ ಬಂದ ದೊಡ್ಡ ಕಲಾವಿದೆ. ಹೀಗೆ ಆಧುನಿಕ ಸಂದರ್ಭಕ್ಕೆ ಬಂದರೆ ಅನೇಕ ದಲಿತ ವರ್ಗದ ಮಹಿಳೆಯರು ವಿವಿಧ ಕ್ಷೇತ್ರಗಳಿಗೆ ತಮ್ಮ ಕೊಡುಗೆ ನೀಡಿದ್ದಾರೆ.

ಜಾನಪದ ಲೋಕ-ದಲಿತ ಮಹಿಳೆಯ ಬಹುಮಹತ್ವದ ದಾಖಲೆಗಳನ್ನು ಹೊಂದಿದೆ. ಮೌಖಿಕ-ಸಂಸ್ಕೃತಿಯಲ್ಲಿ ಈ ಮಹಿಳೆಯರು ಮನಬಿಚ್ಚಿ ಮಾತನಾಡಿದ್ದಾರೆ. ದೊಡ್ಡ ದೊಡ್ಡ ಜನಪದ ಕಲಾವಿದೆಯರೆಲ್ಲಾ ದುಡಿವ ವರ್ಗದಿಂದ ದಲಿತ ವರ್ಗದಿಂದ ಬಂದವರೇ ಆಗಿದ್ದಾರೆ. ಜಾನಪದಶ್ರೀಯಂತಹ ಪ್ರಶಸ್ತಿಗೆ ಮೌಲ್ಯವನ್ನು ತಂದುಕೊಟ್ಟ ಫಕೀರವ್ವ ಗುಡಿಸಾಗರರಂತಹ ಕಲಾವಿದೆಯರನ್ನು ನಮ್ಮ ಸಾಂಸ್ಕೃತಿಕ ಚರಿತ್ರೆ ಗಮನಿಸಬೇಕಾಗಿದೆ. ಆಧ್ಯಾತ್ಮ ಕ್ಷೇತ್ರದಲ್ಲೂ ಈ ಮಹಿಳೆಯರು ಸಾಧನೆ ಮಾಡಿದ್ದಾರೆ. ಸಜ್ಜಲಗುಡ್ಡದ ಶರಣಮ್ಮ, ಯಾನೆಗುಂದಿ ಮಾಣಿಕಮ್ಮ ಇಂತವರ ಬಗೆಗೆ ವಿಶೇಷ ಅಧ್ಯಯನ ನಡೆಯಬೇಕಾಗಿದೆ. ಚರಿತ್ರೆಯ ಪುನರ್‌ರಚನೆ ಸಂದರ್ಭದಲ್ಲಿ ಈ ಎಲ್ಲಾ ಸೂಕ್ಷ್ಮಗಳನ್ನೂ ಗಮನಿಸಬೇಕಾಗುತ್ತದೆ. ●

ಸಂವಾದ



ಲೇಖಕರಲ್ಲಿ ಮನವಿ

'ಸಂವಾದ'ವನ್ನು ನಾಡಿನ ಎಲ್ಲ ದುರ್ಬಲರಿಗೆ, ಅಸಹಾಯಕರಿಗೆ ಆಸರೆಯಾಗಬೇಕೆಂಬ ಮಹದಾಸೆಯೊಂದಿಗೆ ಪ್ರಾರಂಭಿಸಲಾಗಿದೆ. ಸಮಾಜದ ಹಲವು ಗೊಂದಲ-ಗೋಜಲುಗಳಲ್ಲಿ ವಿಚಾರ ಶೂನ್ಯರಾಗುತ್ತಿರುವ ಎಲ್ಲ ಜನ ವರ್ಗಗಳನ್ನು ಗಂಭೀರ ಚರ್ಚೆಗೆ ತೊಡಗಿಸಿ ಆ ಮೂಲಕ ವೈಚಾರಿಕ ನೆಲೆಗಟ್ಟನ್ನು ಒದಗಿಸುವ ಆಶೆ 'ಸಂವಾದ'ಕ್ಕಿದೆ. ಜಾತಿ, ಮತ, ಧರ್ಮಗಳ ಕಪಿಮುಷ್ಟಿಯಲ್ಲಿ ಸಿಲುಕಿರುವ ಪ್ರತಿಯೊಬ್ಬರ ಅಭಿವ್ಯಕ್ತಿವೇದಿಕೆಯಾಗಬೇಕೆಂಬ 'ಸಂವಾದ'ದ ಹಂಬಲಕ್ಕೆ ತಾವೆಲ್ಲ ಕೈಗೂಡಿಸಬೇಕೆಂಬ ನಿರೀಕ್ಷೆ ನಮ್ಮದು.

'ಸಂವಾದ' ಪ್ರಕಟಣೆಗಾಗಿ ಸಾಮಾಜಿಕ ಆರ್ಥಿಕ ಹಾಗೂ ಸಾಂಸ್ಕೃತಿಕ ರಂಗದ ಸೃಜನಾತ್ಮಕ ಹಾಗೂ ವಿಶ್ಲೇಷಣಾತ್ಮಕ ಲೇಖನಗಳನ್ನು ಬಯಸುತ್ತದೆ. ಸಣ್ಣ ಕಥೆ, ಕವನಗಳಿಗೂ ಆಹ್ವಾನವಿದೆ.

-ಸಂಪಾದಕ

ವಿಳಾಸ : ಸಂಪಾದಕರು,
'ಸಂವಾದ'ಮಾಸ ಪತ್ರಿಕೆ
ಸ್ಫೂರ್ತಿಧಾಮ, ಅಂಜನಾನಗರ
ವಿಶ್ವನೀಡಂ ಅಂಚೆ, ಬೆಂಗಳೂರು - 560 091

ಅಧಿಕಾರ ದರ್ಬಾರಿಗೆ ಶ್ರಮಜೀವಿಗಳ ಲಗ್ಗೆ

ಚಂದ್ರಭಾನ್ ಪ್ರಸಾದ್

ದಲಿತ್ ಡೈರಿ

ಸಮಾಜವಾದಿಗಳು, ಎಡಪಂಥೀಯರು, ಜಾತ್ಯಾತೀತ ವಾದಿಗಳು, ಸ್ವತಂತ್ರವಾದಿಗಳು ಹಾಗೂ ಅಧಿಕೃತ ಕೋಮುವಾದಿ ಬುದ್ಧಿಜೀವಿಗಳು ಉತ್ಸವದ ಖುಷಿ ಯಲ್ಲಿದ್ದಾರೆ. ಯಾಕಾಗಬಾರದು? ಗಂಗಾ ಬಯಲಿನ ಶ್ರಮಜೀವಿಗಳು ಕೊನೆಗೆ ಉ.ಪ್ರ. ರಾಜಕೀಯ ಅಧಿಕಾರ ಗದ್ದುಗೆಗೆ ಕುಣಿಯುತ್ತಾ ಪ್ರವೇಶಿಸಿದ್ದಾರೆ. ರಾಜಾಭೈಯ್ಯನು ಸ್ವತಂತ್ರವಾಗಿ ಈಗ ನಡೆದಾಡಬಹುದು. ಪ್ರಭುತ್ವ ವಿರೋಧಿ ಸಂಕೇತವಾದ ಈತ ಅದೇ ಪ್ರಜಾಪ್ರಭುತ್ವದ ಬಲಿಪಶುವಾಗಿದ್ದ, ಪ್ರಜಾಪ್ರಭುತ್ವವು ಯಾವಾಗಲೂ ಶ್ರಮಜೀವಿಗಳಿಗೆ ಕ್ರೂರವಾಗಿತ್ತು, ಈ ಪ್ರಜಾಪ್ರಭುತ್ವ ಎಷ್ಟು ಕಠೋರತೆಗೆ ಇಳಿಯುತ್ತದೆಂದರೆ ರಾಜಾಭೈಯ್ಯನಂಥ ಶಾಂತಿಯ ದೂತನನ್ನು ಜೈಲಿಗೆ ಅಟ್ಟಿತ್ತು, ಈಗ ಭೈಯ್ಯನು ಮುಕ್ತ, ಕುಂದ ಸಾಮ್ರಾಜ್ಯದ ದಲಿತರು ಹಣಮಳೆಯನ್ನು ನಿರೀಕ್ಷಿಸಬಹುದು. ರಾಜಾಭೈಯ್ಯನಂಥ ಸಾವಿರಾರು ಮಂದಿ ಬಂಧೀಖಾನೆಯಿಂದ ಹೊರಬರಬಹುದು. ಆ ದರಿದ್ರ ಸ್ವಭಾವದ ಮಹಿಳೆಯನ್ನು ನೋಡುತ್ತೀರಾ? ರಷ್ಯಾದ ಝಾರ್‌ಗಳು ಸಹ ನಾಚಿಕೆಯಿಂದ ತಲೆತಗ್ಗಿಸುತ್ತಾರೆ! ಈ ಹೆಂಗಸು ಭೈಯ್ಯನಂಥ ಪ್ರಾಣಿ ಪ್ರೇಮಿಯನ್ನು ಮೆಚ್ಚಿಕೊಳ್ಳಲಾಗಿಲ್ಲ, ಈ ಭೈಯ್ಯನು ಮೀನುಸಾಕಾಣಿಕಾ ಲೋಹಿಯಾವಾದಿ ಸಮಾಜವನ್ನು ಕುಂದದಲ್ಲಿ ಪ್ರಾರಂಭಿಸಿದ್ದಾನೆ. ಈ ವ್ಯಕ್ತಿ ಮೂಲತಃ ಮಾನವತಾವಾದಿಯಾಗಿದ್ದು ಭಾರತರತ್ನ ಪ್ರಶಸ್ತಿಗೆ ಯೋಗ್ಯ. ವ್ಯಂಗ್ಯವೆಂದರೆ ಆತ ಬಂಧಿಯಾದ. ಎಂಥ ನಾಚಿಕೆ?

ಸಮಾಜವಾದಿ ಎಡಪಂಥೀಯ, ಜಾತ್ಯಾತೀತ ಹಾಗೂ ಸ್ವತಂತ್ರವಾದಿ ಬುದ್ಧಿಜೀವಿ ವರ್ಗಗಳು ಭಾರತದ ಕುಲೀನ ವರ್ಗದ ಪ್ರಧಾನ ಅಂಗವಾಗಿದ್ದು ಒಂದು ಚಾರಿತ್ರಿಕ ಕರ್ತವ್ಯವನ್ನು ಕೈಗೊಂಡಿವೆ. ಭಾರತದ ಅತ್ಯಂತ ದೊಡ್ಡ ರಾಜ್ಯವನ್ನು ಆಕ್ರಮಿಸಿರುವ ಶ್ರಮಜೀವಿವರ್ಗದ ಆಕ್ರಮಣವನ್ನು ಆಚರಿಸಬಾರದೇಕೆ? ಮುಲಾಯಂ ಸಿಂಗ್ ಯಾದವನು ಈ ಶ್ರಮಜೀವಿಗಳ ಕೂಟವನ್ನು ಮುನ್ನಡೆಸಿದ್ದಾನೆ. ತಾತ್ವಿಕವಾಗಿ ಈ ಶ್ರಮಜೀವಿಗಳೆಂದರೆ ಯಾದವರು, ಲೋಧರು, ಠಾಕೂರರು, ಗೊಜ್ಜಾರರು, ಕುರ್ಮಿಗಳು. ಅವರು ಸಾಮಾಜಿಕ ಸರ್ವಾಧಿಕಾರತ್ವವನ್ನು ನಂಬುತ್ತಾರೆ. ಯೂರೋಪಿನ ಶ್ರಮಜೀವಿ ವರ್ಗಕ್ಕೆ ನಿಜವಾಗಿಯೂ ನರಕವಾಗಿದ್ದ ಪ್ರಜಾಪ್ರಭುತ್ವದ ಬೇರನ್ನೇ ಈ ಕೂಟರು ಕಿತ್ತೊಗೆಯುತ್ತಾರೆ. ಅಂದರೆ ಈ ಪ್ರಜಾಪ್ರಭುತ್ವವು ಯೂರೋಪ್ ಹಾಗೂ ಉತ್ತರ ಅಮೇರಿಕಾದ ಶ್ರಮಜೀವಿಗಳನ್ನು ಬಿಡದೆ ಕಾಡಿರುವಾಗ ಭಾರತದಲ್ಲಿನ ಶ್ರಮಜೀವಿಗಳ ಬದುಕನ್ನು ಇದೇ ಪ್ರಜಾಪ್ರಭುತ್ವವು ಸಂರಕ್ಷಿಸುತ್ತದೆ ಎನ್ನುವುದಕ್ಕೆ ಭರವಸೆ ಏನಿದೆ?

ವಜ್ರದುಂಗರಗಳನ್ನು ಧರಿಸಿರುವ ಈ ಮಹಿಳೆಯನ್ನು ನೋಡಿ. 1992ರ ಡಿಸೆಂಬರ್ 6ರಂದು ಅಯೋಧ್ಯೆಯಲ್ಲಿ

ಪ್ರಥಮ ದಲಿತ ಮಹಿಳಾ ಮುಖ್ಯಮಂತ್ರಿ ಮಾಯಾವತಿ

ಪ್ರಜಾಪ್ರಭುತ್ವದಿಂದ ಶಪಿತರಾಗಿರುವ ಯೂರೋಪಿನ ಶ್ರಮಜೀವಿಗಳು ಉತ್ಪಾದನಾ ಸಾಧನಗಳ ಒಡೆತನದಲ್ಲಿಲ್ಲ. ಆದ್ದರಿಂದ ಅವರಿಗೆ ಪ್ರಜಾಪ್ರಭುತ್ವವನ್ನು ಧ್ವಂಸಗೊಳಿಸಲಾಗಲಿಲ್ಲ, ಆದರೆ ಈ ಗಂಗಾ ಬಯಲಿನ ಶ್ರಮಜೀವಿಗಳು ಅಧಿಕ ಭೂಮಿಯನ್ನು ಭೂಮಿತಿ ಕಾಯಿದೆಯ ಹೊರತಾಗಿಯೂ ಹೊಂದಿದ್ದಾರೆ. ಇಂದಿರಾ ಗಾಂಧಿಯ ಕೈಕೆಳಗೆ ಪ್ರಜಾಪ್ರಭುತ್ವದ ದೌರ್ಜನ್ಯಕ್ಕೆ ಇದೊಂದು ಅತ್ಯತ್ತಮ ಉದಾಹರಣೆಯಲ್ಲವೇ? ಅವರು ಪ್ಯಾಕ್ಟರಿಗಳು, ಸ್ಥಳೀಯಸಂಸ್ಥೆಗಳು, ಸಾರಿಗೆ, ಪಿ.ಡಬ್ಲ್ಯೂ.ಡಿ ಗುತ್ತಿಗೆಗಳು ಹಾಗೂ ಇತರೆ ಸಂಬಂಧಿತ ಆರ್ಥಿಕ ಚಟುವಟಿಕೆಗಳನ್ನು ಹೊಂದಿದ್ದಾರೆ. ಹಾಗೂ ಅವರಿಗಿರುವ ಮತ್ತೊಂದು ಸಕಾರಾತ್ಮಕ ಸಂಗತಿಯೆಂದರೆ ಶ್ರಮಜೀವಿ ಸರ್ವಾಧಿಕಾರಕ್ಕೆ ಅಗತ್ಯವಿರುವ ತುಪಾಕಿಗಳು ಇವರಲ್ಲಿವೆ.

ಅನು : ಡೊಮಿನಿಕ್ ಡಿ.

ಚಾರಿತ್ರಿಕ ಪಾತ್ರವನ್ನು ಎಸಗಿದ ಜಾತ್ಯಾತೀತವಾದಿ ದೂತ ಕಲ್ಯಾಣಸಿಂಗ್‌ಗೆ ತನ್ನ ಸಹಾಯಹಸ್ತವನ್ನು ನೀಡಲು ಆಕೆ ಎಂದಾದರೂ ಬಯಸಿದ್ದುಂಟೇ? ಹೀಗಿರುವಲ್ಲಿ ಅಜಿತ್ ಸಿಂಗ್‌ನ ಎಂ.ಎಲ್.ಎಗಳು ಬೇರೆ ರಾಜ್ಯಕ್ಕೆ ಪಲಾಯನಗೊಂಡದ್ದನ್ನು ಪರಿಗಣಿಸಲಾದೀತೇ? ಈ ಮಹಿಳೆಯ ಪೂರ್ವಜರು ಮಡಕೆಗಳಲ್ಲಿ ತಿಂದಿದ್ದರು. ಆದರೀಗ ಪ್ರಥಮದರ್ಜೆಯ ಉಡುಪುಗಳೊಡನೆ ಚೆಲ್ಲಾಟ ಪಾಡುವ ಎದೆಗಾರಿಕೆ ತೋರಿದ್ದಾರೆ. ಇದನ್ನು ಯಾವನೇ ಒಬ್ಬ ತಾರ್ಕಿಕ ಪ್ರಜೆ ಒಪ್ಪಬಹುದೇ? ಆಕೆಯೆಂದಾದರೂ ಆತನ ದಿವಂಗತ ತಂದೆ ಚೌಧರಿ ಚರಣ್‌ಸಿಂಗ್‌ನ ಕೊಡುಗೆಯನ್ನು ಪರಿಗಣಿಸಿದ್ದಾಳೆಯೇ? ಈತ ಒಬ್ಬಂಟಿಗನಾಗಿ ಭಾರತದ ಪ್ರಧಾನಮಂತ್ರಿಯಾಗುವುದನ್ನು ತಡೆದಿದ್ದನಲ್ಲವೇ? ಈತನ ಉದಾರ ಮನೋಭಾವ ಎಷ್ಟಿತ್ತೆಂದರೆ ಶೋಷಣೆ ಮಾಡುತ್ತಿದ್ದ ದಲಿತರನ್ನು ತಮ್ಮ ಮತಚಲಾಯಿಸುವಿಕೆಯಿಂದ ಮುಕ್ತಗೊಳಿಸಿದ್ದ.

ಆದ್ದರಿಂದಲೇ ಇಂದಿಗೂ ದಲಿತರು ಇತರರಿಗಾಗಿ ದುಡಿಯುತ್ತಿರುವುದು. ಈ ವ್ಯಕ್ತಿಯ ಧ್ಯೇಯವೆಂಬಂತೆ ಆತನ ಸ್ವಯಂಸೇವಕರು ದಲಿತರ ಪರವಾಗಿ ಮತ ಹಾಕಿರುವುದು, ದಲಿತೇತರರು ದಲಿತರಿಗಾಗಿ ದುಡಿದಿರುವ ಮೊತ್ತಮೊದಲ ನಿದರ್ಶನ. ವರ್ತಮಾನದ ಸರ್ಕಾರದಲ್ಲಿ ಅಜಿತ್‌ಸಿಂಗ್‌ನ ಜನ ಅಂಥದೇ ಉಪಕಾರವನ್ನು ದಲಿತರಿಗೆ ನೀಡಲಿಚ್ಛಿಸಿದ್ದಾರೆ.

ಪ್ರಜಾಪ್ರಭುತ್ವದಿಂದ ಶಪಿತರಾಗಿರುವ ಯೂರೋಪಿನ ಶ್ರಮಜೀವಿಗಳು ಉತ್ಪಾದನಾ ಸಾಧನಗಳ ಒಡೆತನದಲ್ಲಿಲ್ಲ. ಆದ್ದರಿಂದ ಅವರಿಗೆ ಪ್ರಜಾಪ್ರಭುತ್ವವನ್ನು ಧ್ವಂಸಗೊಳಿಸಲಾಗಲಿಲ್ಲ, ಆದರೆ ಈ ಗಂಗಾ ಬಯಲಿನ ಶ್ರಮಜೀವಿಗಳು ಅಧಿಕ ಭೂಮಿಯನ್ನು ಭೂಮಿತಿ ಕಾಯಿದೆಯ ಹೊರತಾಗಿಯೂ ಹೊಂದಿದ್ದಾರೆ. ಇಂದಿರಾ ಗಾಂಧಿಯ ಕೈಕೆಳಗೆ ಪ್ರಜಾಪ್ರಭುತ್ವದ ದೌರ್ಜನ್ಯಕ್ಕೆ ಇದೊಂದು ಅತ್ಯತ್ತಮ ಉದಾಹರಣೆ ಯಲ್ಲವೇ? ಅವರು ಪ್ಯಾಕ್ಟರಿಗಳು, ಸ್ಥಳೀಯಸಂಸ್ಥೆಗಳು, ಸಾರಿಗೆ, ಪಿ.ಡಬ್ಲ್ಯೂ.ಡಿ ಗುತ್ತಿಗೆಗಳು ಹಾಗೂ ಇತರೆ ಸಂಬಂಧಿತ ಆರ್ಥಿಕ ಚಟುವಟಿಕೆಗಳನ್ನು ಹೊಂದಿದ್ದಾರೆ. ಹಾಗೂ ಅವರಿಗಿರುವ ಮತ್ತೊಂದು ಸಕಾರಾತ್ಮಕ ಸಂಗತಿಯೆಂದರೆ ಶ್ರಮಜೀವಿ ಸರ್ವಾಧಿಕಾರಕ್ಕೆ ಅಗತ್ಯವಿರುವ ತುಪಾಕಿಗಳು ಇವರಲ್ಲಿವೆ. ಈ ಗಂಗಾ ಬಯಲಿನ ಶ್ರಮಜೀವಿಗಳು ಅಧಿಕವಾಗಿ ಜ್ಞಾನೋದಯಗೊಂಡಿದ್ದು ಪ್ರಜಾಪ್ರಭುತ್ವದ ಅತ್ಯುನ್ನತ ಅಂಶಗಳನ್ನು ಹೊರಸೂಸಲು ತಯಾರಿದ್ದಾರೆ. ಅಮೇರಿಕಾ ಅಥವಾ ಯೂರೋಪಿನ ಸಮಾಜಗಳು ಎಂದಾದರೂ ಭೂಮಿತಿ ಕಾಯಿದೆಗಳನ್ನು ಹೊಂದಿದ್ದರೇ?

ಈ ಗಂಗಾಬಯಲಿನ ಶ್ರಮಜೀವಿಗಳಿಗೆ ಇರುವ ಮತ್ತೊಂದು ಅನುಕೂಲವೆಂದರೆ ಅವರಿಗೆ ಅಧಿಕ ಹಣವಿದ್ದು ಸಮಯವೂ ಸಾಕಷ್ಟು ಇದೆ. ಆದ್ದರಿಂದಾಗಿ ಅವರು ಮಾಯಾವತಿಯ ದಬ್ಬಾಳಿಕೆಯ ಆಡಳಿತವನ್ನು ಪ್ರಜ್ಞಾಶೂನ್ಯರಾಗಿದ್ದ ದಲಿತರ ಸಾಮಾಜಿಕ ಬದುಕನ್ನು ನೋಡಿಕೊಳ್ಳುತ್ತಿದ್ದಾರೆ. ನಾಚಿಕೆಯಿಲ್ಲದೆ ಪ್ರಜಾಪ್ರಭುತ್ವವನ್ನು ರಾಜ್ಯಾಂಗವು ವೈಭವೀಕರಿಸುತ್ತಾ ನಿಗದಿಪಡಿಸಿರುವ ಕನಿಷ್ಠ ಕೂಲಿಯನ್ನು ಅನುಷ್ಠಾನಗೊಳಿಸಲು ದಲಿತರು ಒತ್ತಾಯಿಸುವುದಾದರೂ ಹೇಗೆ? ಇದು ಬೇರೇನಲ್ಲ ದಿದ್ದರೂ ಕೃಷಿಕ್ಷೇತ್ರವನ್ನು ಅತಂತ್ರಗೊಳಿಸುವ ತಂತ್ರವಾಗಿದೆ. ಅಲ್ಲದೆ, ಆ ಮಹಿಳೆಯು, ವಿನ್ಯಾಸ ಗೊಳಿಸಿದ ಬೂಟುಗಳನ್ನು ಧರಿಸಿ, ದಲಿತರ ಉಮೇದುವಾರಿಕೆಗಾಗಿ ಆಕೆ ಒಂದು ವಿಶೇಷ ಯೋಜನೆಯನ್ನು ಪ್ರಾರಂಭಿಸಿದ್ದೇಕೆ? ದಲಿತರು ಸರಳ ಬದುಕನ್ನು ನಡೆಸಲಾಗದೇ? ಗುಮಾಸ್ತ ಹುದ್ದೆಗಳಲ್ಲಿರುವ ಸಂಕೀರ್ಣತೆಯನ್ನು ಆಕೆ ತಿಳಿದಿದ್ದಾಳೆಯೇ? ನಗರಕೇಂದ್ರಗಳಲ್ಲಿರುವ ದಲಿತರು ವಲಸೆಗೊಳ್ಳುವುದನ್ನು ಪ್ರಚೋದಿಸು ವುದೇಕೆ? ರಾಜಾಭೈಯ್ಯನೊಂದಿಗೆ ಅಪರಾಧಿಗಳೆನಿಸಿದ ಸ್ವಯಂ ಸೇವಕರು ಬಂಧೀಖಾನೆಗಳಿಂದ ಮುಕ್ತರಾಗಿ ಹೊರ ಬಂದಿದ್ದಾರೆ. ಒಂದಾನೊಂದು ಕಾಲದಲ್ಲೂ ಮಾವೊತ್ಸೆ ತುಂಗನನ್ನು ಅಪರಾಧಿಯೆಂದು ಆತನ ತಲೆಗೆ ಬಹುಮಾನವನ್ನು ಘೋಷಿಸಲಾಗಿತ್ತಲ್ಲವೇ? ಈ ಕ್ರಾಂತಿಕಾರಕ ಕಾವಲಾಳುಗಳು ದಲಿತರ ನೆಲೆಯನ್ನು ಈಗ ಕಾಯುತ್ತಿದ್ದಾರಲ್ಲದೆ, ಪ್ರತಿಯೊಬ್ಬ ವಯಸ್ಕ ದಲಿತನಿಗೂ ಹೂಮಾಲೆ ಯನ್ನೀಯುತ್ತಿದ್ದಾರೆ. ಮತ್ತು ದಲಿತರ ಹುಡುಗಿಯರಿಗೆ ಸಿಹಿಯನ್ನು ಹಂಚುತ್ತಿದ್ದಾರೆ. ಹೀಗಿರುವಲ್ಲಿ ಸೂಟುಧಾರಿಯಾದ ಆ ವ್ಯಕ್ತಿಯೇಕೆ ಚೆದರಿದ ಶ್ರಮ ಜೀವಿಗಳತ್ತ ಬೆರಳುತೋರಿಸುತ್ತಿದ್ದಾನೆ? ಪ್ರಜಾಪ್ರಭುತ್ವ ವನ್ನು ಘೋಷಿಸುತ್ತಿರುವ ಅದೇ ರಾಜ್ಯವು ಹೊರತಂದ ದಲಿತ ಕಾಯಿದೆಯನ್ನು ಈ ಶ್ರಮಜೀವಿಗಳೇಕೆ ಒಪ್ಪಿಕೊಳ್ಳುತ್ತಿದ್ದಾರೆ. ಈ ಸಾಮಾಜಿಕ ಒಕ್ಕೂಟದ ಅನೇಕ ಸದಸ್ಯರು ನಿಜವಾಗಿಯೂ ತರ್ಕದ ದೂತರಾಗಿ ಪ್ರೀತಿ ಮತ್ತು ಕರುಣೆಯ ಮದರ್‌ತೆರೇಸಾರ ಸಾಮರ್ಥ್ಯವನ್ನು ಹೊಂದಿದ್ದಾರೆ. ಜ್ಞಾನೋದಯಗೊಂಡ ಈ ಶ್ರಮಜೀವಿ ಒಕ್ಕೂಟವು ಪ್ರಜಾಸತ್ತಾತ್ಮಕ ಮತ್ತು ಸಾಮಾಜಿಕ ವಿಧಾನಗಳನ್ನು ಕೆಚಡಿ ಮಾಡಿ ಅಧಿಕಾರಗಳನ್ನು ಹಿಡಿಯಲು ತೊಡಗಿದ್ದಾರೆ. ಅಂದರೆ ಸಾಮಾಜಿಕ ನಿರಂಕುಶತ್ವಕ್ಕೆ ಅವರು ಪ್ರಜಾಸತ್ತಾತ್ಮಕ ಪ್ರಕ್ರಿಯೆಗಳನ್ನು ಹೆಣೆಯುತ್ತಿದ್ದಾರೆ. ಗಂಗಾಬಯಲಿನಲ್ಲಿ ಇದೊಂದು ಅತ್ಯಂತ ಸಂದಿಗ್ಧದ ಸ್ಥಿತಿ. ಹಾಗಾಗಿ ಸಮಾಜವಾದಿ, ಎಡಪಂಥೀಯ, ಜಾತ್ಯಾತೀತವಾದಿ, ಸ್ವತಂತ್ರವಾದಿ ಹಾಗೂ ಕೆಲವು ಕೋಮುವಾದಿ ಬುದ್ಧಿಜೀವಿಗಳು ಸಹ ಪ್ರಶಂಸಾರ್ಹರು. ಈ ಹೊಸ ಶ್ರಮಜೀವಿಗಳ ಕ್ರಾಂತಿಯ ಕೊಡುಗೆಯನ್ನು ಎಲ್ಲ ಪ್ರಜ್ಞಾವಂತ ನಾಗರೀಕರು ನಿಜವಾಗಿಯೂ ಆಚರಿಸತಕ್ಕದ್ದು. ಇಂಥ ನಿಜವಾದ ಕ್ರಾಂತಿಯನ್ನು ಮುನ್ನಡೆಸುತ್ತಿರುವ ಅತ್ಯುಚ್ಚ ಶ್ರಮಜೀವಿಯ ಒಡನಾಡಿಗಳಾಗಿರುವ ಎಲ್ಲ ಹಿನ್ನೆಲೆಯ ರಾಜಕಾರಣಿಗಳು, ಕಲಾಕಾರರು, ಬುದ್ಧಿಜೀವಿಗಳು, ಪತ್ರಕರ್ತರು ಹಾಗೂ ವರ್ಣವ್ಯವಸ್ಥೆಯೂ ಸಹ ಹೆಮ್ಮೆ ಪಡುವಂಥದ್ದು.

ಉ.ಪ್ರ.ದಲ್ಲಿ ಕ್ರಾಂತಿ ಮತ್ತು ಪ್ರತಿಕ್ರಾಂತಿ?

ಕಳೆದ ಮೇ. ತಿಂಗಳಲ್ಲಿ ಮಾಯಾವತಿಯು ಅಧಿಕಾರಕ್ಕೆ ಬಂದದ್ದು ಕ್ರಾಂತಿಯಲ್ಲ. ಆದರೆ ರಾಜಾಭಯ್ಯನನ್ನು ಜೈಲಿಗೆ ಕಳುಹಿಸುವ ಆಕೆಯ ನಿರ್ಧಾರ ನಿಜಕ್ಕೂ ಒಂದು ಸಾಮಾಜಿಕ ಕ್ರಾಂತಿ. ಪ್ರತಿಕ್ರಾಂತಿಯಲ್ಲ. ಠಾಕೂರ್ ಸಂಸ್ಕೃತಿ ಮತ್ತು ಅವರ ಸಾಮಾಜಿಕ ಮನಸಾಕ್ಷಿಯ ಪ್ರತಿರೂಪ. ಉ.ಪ್ರದೇಶದಲ್ಲಿ ಠಾಕೂರರ ಸಂಖ್ಯೆ 7.20% ಅಥವಾ ಸುಮಾರು ಒಂದು ಕೋಟಿ. ಪ್ರತಿಯೊಂದು ಠಾಕೂರ್ ಕುಟುಂಬವೂ ಸಹ, 'ಕಾನೂನಿನೆದುರು ಎಲ್ಲರೂ ಸಮಾನರು' ಎಂಬುದಕ್ಕೆ ವಿರುದ್ಧವಾಗಿರುವ ಒಂದು ಸಂಘಟಿತ ಶಸ್ತ್ರಾಗಾರ. ಉ.ಪ್ರ.ದಲ್ಲಿ ಅಸ್ತಿತ್ವದಲ್ಲಿರುವ ಶ್ರೇಣೀಕೃತ ಸಾಮಾಜಿಕ ವ್ಯವಸ್ಥೆಯಡಿ ಅವರ ಕ್ರೌರ್ಯಕ್ಕೆ ಸಮರ್ಥನೆ ದೊರೆಯುತ್ತಿದ್ದು ಪ್ರಜಾಪ್ರಭುತ್ವ ಈಗ ಈ ಠಾಕೂರರಿಗೆ ನಿಜವಾದ ಬೆದರಿಕೆಯನ್ನುಂಟು ಮಾಡಿದೆ.

ಮುಸ್ಲಿಂ ಮತ್ತು ಬ್ರಿಟಿಷರ ಆಳ್ವಿಕೆಯಲ್ಲೂ ತಮ್ಮ ಸಣ್ಣ ಸಾಮ್ರಾಜ್ಯಗಳನ್ನು ಉಳಿಸಿಕೊಂಡ ಮಧ್ಯಪ್ರದೇಶ ಮತ್ತು ರಾಜಸ್ಥಾನದ ರಾಜಪೂತರು ತಮ್ಮ ಹಕ್ಕುಗಳನ್ನು ಕಾಯ್ದುಕೊಂಡರು. ಆದರೆ ಉ.ಪ್ರ.ದ ರಾಜಪೂತರು ಮುಸ್ಲಿಂ ಆಳ್ವಿಕೆಯಲ್ಲಿ ದೌರ್ಜನ್ಯಕ್ಕೀಡಾಗಿ; ಬ್ರಿಟಿಷರ ಕಾಲದಲ್ಲಿ ಮತ್ತಷ್ಟು ಸಂಕಷ್ಟ ಪಟ್ಟು ಠಾಕೂರರಾದರು. ಆದ್ದರಿಂದ ಅವರ ಸ್ವಾತಂತ್ರ್ಯ ಅವರ ಹಿಂದಿನ 'ವೈಭವ' ವನ್ನು ಮರಳಿಗಳಿಸಿಕೊಡುವಂಥದ್ದು. ಜಮೀನ್ದಾರಿ ಪದ್ಧತಿಯ ರದ್ದುಗೊಳಿಸಿದ್ದು ಅವರ ಪ್ರಾಧಾನ್ಯತೆಯನ್ನು ಮೊಟಕುಗೊಳಿಸಿತ್ತು. ಈಗ ಆ ಕಳೆದ ಕೊಂಡ ಸಾಮಾಜಿಕ ಯಜಮಾನ್ಯವನ್ನು ಮರುಸ್ಥಾಪಿಸುವ ಬಯಕೆಯಲ್ಲಿದ್ದಾರೆ. ಅವರು ಪ್ರಜಾಪ್ರಭುತ್ವವನ್ನು ಸಂದೇಹಿಸುತ್ತಿದ್ದು ಪ್ರಜಾಸತ್ತಾತ್ಮಕ ಸಂಸ್ಥೆಗಳು ಅವರ ಕುಂಠಿತಗೊಂಡ ವರ್ಚಸ್ಸಿಗೆ ಕಾರಣವಾಗಿವೆ. ಒಂಟಿಗರಾದ ಠಾಕೂರರು ಸ್ವಾತಂತ್ರ್ಯೋತ್ತರದ ಬೆಳವಣಿಗೆಯನ್ನು ಅಸಹಾಯಕರಾಗಿ ವೀಕ್ಷಿಸಿದ್ದರು.

ಹೀಗೆ ದಿಗ್ಭ್ರಮೆಗೊಳಗಾದ ಸಮುದಾಯ ದಲಿತರು ಅಥವಾ ಶೂದ್ರರು ಮೊನ್ನೆಯ ತನಕ ಅವರ ಭೂಮಿಯನ್ನು ಗೇಯುತ್ತಿದ್ದರಲ್ಲದೆ, ಕೆಲವೇ ಕೇಜಿ ಕಾಳಿಗಾಗಿ ಬಿಸಿಲಿನ ಬೇಗೆಯಲ್ಲಿ ನಿಲ್ಲುತ್ತಿದ್ದವರು, ಇಂದು ಕೆಲವು ದಲಿತರ ಮಕ್ಕಳು ಅಂಬಾಸಿಡರ್ ಕಾರುಗಳಲ್ಲಿ ಲಾಲ್‌ಭತ್ತಿ ಯೊಡನೆ ತಿರುಗಾಟ ನಡೆಸಿರುವುದು ನಂಬಲಾಗುತ್ತಿಲ್ಲ. ಠಾಕೂರರಲ್ಲೂ ಅನೇಕ ಮಂದಿ ನೌಕರಶಾಹಿಯೊಳಗೆ ಬಂದಿದ್ದಾರೆ. ಆದರೆ ರಾಜ್ಯಾಂಗದೊಳಗಿನ ಶ್ರೇಣೀಕರಣದಲ್ಲಿ ಒಳಿತಾದುದೇನು ಇಲ್ಲ. ಮೊನ್ನೆಯವರೆಗೂ ಒಬ್ಬ ಅಸ್ಪೃಶ್ಯನಾಗಿ ರಸ್ತೆ ಬದಿಯಲ್ಲಿ ಪಾಲೀಷು ಮಾಡುತ್ತಿದ್ದ ದಲಿತನು, ಇಂದು ಠಾಕೂರನ ಮೇಲಧಿಕಾರಿಯಾಗಿದ್ದು ಆತನ ಅಣತಿಯ ಮೇರೆಗೆ ಫೈಲನ್ನು ತರಬೇಕು ಮತ್ತು ಹೇಳಿದ್ದನ್ನು ಬರೆದುಕೊಳ್ಳಬೇಕಾದ ಸ್ಥಿತಿಯನ್ನು ಭಯ ಭೀತಿಯಿಂದ ಎದುರಿಸಬೇಕಾಗಿದೆ. ಅನೇಕ ದಲಿತ ಸಚಿವರ ಎದುರು ಠಾಕೂರು ಐಎಎಸ್ ಅಧಿಕಾರಿಗಳು ಸಲಾಂ ಹೊಡೆದು, ಅಣತಿಯನ್ನು ಸ್ವೀಕರಿಸಬೇಕಾಗಿದೆ. ಪ್ರಜಾಸತ್ತಾತ್ಮಕ ಸಂಸ್ಥೆಗಳ ಅವಮಾನದ ಸ್ವಅನುಭವವು ಠಾಕೂರರನ್ನು ಸಾಮಾಜಿಕವಾಗಿ ಮತ್ತಷ್ಟು ಸೇಡಿನ ಮನೋಭಾವಕ್ಕೆ ದೂಡಿತು. ಇದೇ ಸೇಡಿನ ಮನೋಭಾವವು ಪ್ರಜಾಸತ್ತಾತ್ಮಕ ವಿಧಾನಗಳ ರಾಜಕಾರಣದಲ್ಲಿ ಮುಂದುವರೆದು ಅವರನ್ನು ಮತ್ತಷ್ಟು ಪತ್ಯೇಕಿಸಿತು. ಪಾರಂಪರಿಕ ವ್ಯವಸ್ಥೆಯ ಸಹ ಪ್ರಯಾಣಕರಾದ ಬ್ರಾಹ್ಮಣರು ಮತ್ತು ವೈಶ್ಯರು ಪ್ರಜಾಪ್ರಭುತ್ವಕ್ಕೆ ಬೇಗನೆ ಹೊಂದಿಕೊಂಡರು. ರಾಜ್ಯಾಂಗದ ಅಧಿಕಾರ, ನೌಕರಶಾಹಿ, ಶಿಕ್ಷಣ, ಸಾಹಿತ್ಯ ಮತ್ತು ಕಲಾ ಸಂಸ್ಥೆಗಳು ಇತ್ಯಾದಿಗಳನ್ನು ಬ್ರಾಹ್ಮಣರು ಆಕ್ರಮಿಸಿಕೊಂಡರೆ, ವೈಶ್ಯರು ಬೆಳೆಯುತ್ತಿದ್ದ ಕೈಗಾರಿಕೆ ಮತ್ತು ವಾಣಿಜ್ಯ ಇತ್ಯಾದಿಗಳನ್ನು ತೆಗೆದುಕೊಂಡರು. ಈ ಸಾಮಾಜಿಕ ವಿದ್ಯಮಾನವು ದ್ವಿಜರ ಸ್ಥಾನದಲ್ಲಿ ಬಿಕ್ಕಟ್ಟನ್ನು ಸೃಷ್ಟಿಸಿತು. ಬ್ರಾಹ್ಮಣರು ಕಾಂಗ್ರೆಸನ್ನು ಆಯ್ದುಕೊಂಡರೆ, ವೈಶ್ಯರು ಜನಸಂಘ ಕಟ್ಟುವಲ್ಲಿ ನಿರತರಾದರು. ಈಗಾಗಲೇ ಪ್ರತ್ಯೇಕಗೊಂಡ ಠಾಕೂರರನ್ನು ಇದು ಮತ್ತಷ್ಟು ಕಂಗೆಡಿಸಿತು.

ಪಾರಂಪರಿಕ ವ್ಯವಸ್ಥೆಯಲ್ಲಿ ಈ ಸಾಪೇಕ್ಷ ಕುಂಠಿತ ಹಾಗೂ ಪ್ರಾಜಾಸತ್ತಾತ್ಮಕ ಸಂಸ್ಥೆಗಳ ಬೆಳವಣಿಗೆ ಇತರ ಎರಡು ಪ್ರಧಾನ ಸಾಮಾಜಿಕ ವಿಭಾಗಗಳಿಗೆ ಕಾರಣವಾದವು. ಅಂದರೆ ಶೂದ್ರರು ಮತ್ತು ದಲಿತರು ಮೇಲ್ಮುಖ ಚಲನೆಯಲ್ಲಿ ತೊಡಗಿದ್ದಾರೆ. ದಲಿತರು ಶಿಕ್ಷಣ, ಸರ್ಕಾರಿ ಉದ್ಯೋಗಗಳು ಹಾಗೂ ಶಾಸನಾತ್ಮಕ ಅಂಗಗಳಲ್ಲಿ ತಮ್ಮ ಅವಕಾಶಗಳನ್ನು ಪಡೆದುಕೊಂಡರೆ ಮೇಲ್ದರ್ಜೆಯ ಶೂದ್ರರು ಭೂಮಿ ಮತ್ತು ಇತರೇ ಸಂಬಂಧಿತ ಸಂಪನ್ಮೂಲಗಳನ್ನು ಆಕ್ರಮಿಸಿದರು. ಆದರೆ ಬಹುಸಂಖ್ಯಾತ ದಲಿತರು ಹಳ್ಳಿಗಾಡಲ್ಲಿ ಮುಂದುವರೆದರು. ಇವರು ಯಜಮಾನ್ಯಗಳಿಸಿಕೊಂಡ ಶೂದ್ರರಿಗೆ ಮುಖಾಮುಖಿಯಾದರು. ಈ ಹೊಸ ಸಾಮಾಜಿಕ ಶೂದ್ರ ವಿಭಾಗವು ಕೃಷಿ ಆರ್ಥಿಕತೆಯನ್ನು

ಅದರ ಸಾಮಾಜಿಕ ಮತ್ತು ರಾಜಕೀಯ ಬದುಕನ್ನು ಸೆರೆಹಿಡಿಯಿತು. ಇದರ ವ್ಯಾಪ್ತಿ ಮತ್ತು ಗಾಢತೆಯನ್ನು ಇವತ್ತಿನ ಅದರ ರಾಜಕೀಯ ದಾಹದಲ್ಲಿ ಗುರುತಿಸಬಹುದಾಗಿದೆ.

ಬ್ರಾಹ್ಮಣರು ಅಸಂಖ್ಯಾತ ಸೂಟುಧಾರಿ ಎದ್ದುನಿಂತ ದಲಿತರೊಡನೆ ಹೊಂದಾಣಿಕೆ ಮಾಡಿಕೊಂಡದ್ದನ್ನು ಠಾಕೂರರು ಗುರುತಿಸಿದ್ದಾರೆ. ಅವರಿಗೆ ಬ್ರಾಹ್ಮಣರು ಪ್ರಜಾಸತ್ತಾತ್ಮಕ ಪ್ರಕ್ರಿಯೆಯನ್ನು ಪ್ರಾರಂಭಿಸಿದವರಂತೆ ಕಂಡರು. ಉ.ಪ್ರ.ದಲ್ಲಿ ಸಂಪನ್ಮೂಲಗಳ ಮೇಲೆ ಅವರಿಗೆ ಅಧಿಕ ಹಿಡಿತ ಇದ್ದರೂ ಸಹ ಅವರು ರಾಜಕೀಯ ಅಧಿಕಾರವನ್ನು ಪಡೆಯಲಾಗಲಿಲ್ಲ. ವೀರಬಹಾದ್ದೂರ್ ಸಿಂಗ್ ಹಾಗೂ ವಿ.ಪಿ.ಸಿಂಗ್ ಮುಖ್ಯಮಂತ್ರಿಗಳಾಗಿ ಅಲ್ಪಾವಧಿಯನ್ನಷ್ಟೇ ಕಳೆಯಲು ಶಕ್ತರಾದರು. ವಿ.ಪಿ.ಸಿಂಗ್ ಮತ್ತು ಚಂದ್ರಶೇಖರ್‌ರವರು ಪ್ರಧಾನಮಂತ್ರಿಯರಾಗಿ ಹಾಸ್ಯಾಸ್ಪದ ಪ್ರಾಮುಖ್ಯತೆಗೆ ಇಳಿದರು. ಭಾರತೀಯ ರಾಷ್ಟ್ರಪತಿಯಾಗಿ ಯಾರೇ ಠಾಕೂರರು ಬಂದಿಲ್ಲ, ಬ್ರಾಹ್ಮಣ ಪ್ರಾಬಲ್ಯತೆಯನ್ನು ಹೊಂದಿದ್ದ ಕಾಂಗ್ರೆಸ್ಸಿನ ವಿರುದ್ಧ 1977ರ ಚುನಾವಣೆಯಲ್ಲಿ ಠಾಕೂರರು ತಮ್ಮ ಸಿಟ್ಟನ್ನು ವ್ಯಕ್ತಪಡಿಸಿದರಲ್ಲೆ, ಮೇಲ್ಮುಖರಾಗಿದ್ದ ಶೂದ್ರರೊಡನೆ ಸೇರಿ ಕಾಂಗ್ರೆಸ್ ವಿರೋಧಿ ಅಲೆಯಲ್ಲಿ ಪಾಲ್ಗೊಂಡರು.

ಈ ಮೇಲ್ಮುಖ ಶೂದ್ರರಾದ ಯಾದವರು, ಜಾತರು, ಕುರ್ಮಿಗಳು, ಲೋಧರು, ಗುಜ್ಜಾರರು ಠಾಕೂರರ ಸ್ಥಿತಿಯನ್ನೇ ಅನುಭವಿಸುವಂತಾಯಿತು. ಅಂದರೆ ಠಾಕೂರರಂತೆ ಹಳ್ಳಿ ಪ್ರದೇಶದಲ್ಲಿ ಯಜಮಾನ್ಯವನ್ನು ಗಳಿಸಿದ ಶೂದ್ರರು, ಸಾಮಾಜಿಕವಾಗಿ ಘನ್ಯರಾಗಿ, ದಲಿತರು ಮತ್ತು ಇತರೆ ಕೆಳವರ್ಗದ ಶೂದ್ರರನ್ನು ಅಡಿಯಾಳನ್ನಾಗಿಸಬಾರದೇಕೆ? ಇಲ್ಲಿ ಮೇಲ್ಮುಖ ಶೂದ್ರರು ಅರ್ಥೈಸದ ಸಂಗತಿಯೆಂದರೆ ಠಾಕೂರರು ಸಾಂಪ್ರದಾಯಿಕ ವ್ಯವಸ್ಥೆಯಲ್ಲಷ್ಟೇ ಸಾಮಾಜಿಕ ಮಾನ್ಯತೆಯನ್ನು ಪಡೆದಿದ್ದರಲ್ಲದೆ, ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ದಲಿತರು ಅವರ ಸ್ಥಾನಮಾನವನ್ನು ಗೌರವಿಸಲಿಲ್ಲ ಮತ್ತು ಬ್ರಾಹ್ಮಣರು ಅದನ್ನು ವಿಧಿಬದ್ಧಗೊಳಿಸಲಿಲ್ಲ. ಯಾದವ, ಜಾತ, ಗುಜ್ಜಾರ, ಕುರ್ಮಿ, ಲೋಧ್ ನಾಯಕತ್ವಗಳು ಒಂದು ಪ್ರಬಲವಾದ ರಾಜಕೀಯ ಐಕ್ಯತೆಯನ್ನು ಸಾಧಿಸಿದರಲ್ಲದೆ, ಪ್ರಜಾಪ್ರಭುತ್ವ ವಿರೋಧಿಯಾದ ರಾಜಾಭಯ್ಯನಿಗೆ ತಮ್ಮ ಸಾಮಾಜಿಕ ಸಂದಿಗ್ಧತೆಗೆ ಕಾರಣರಾದರು. ಅಂದರೆ ತಮ್ಮ ಸಾಮಾಜಿಕ ಸ್ಥಾನಮಾನದ ಬಯಕೆಗಾಗಿ ಪ್ರಜಾಪ್ರಭುತ್ವ ಅಡ್ಡಿಯಾದಂತೆ ಭಾವಿಸಿದರು. ಇಲ್ಲಿ ಠಾಕೂರರು ಪ್ರಜಾಪ್ರಭುತ್ವದಿಂದ ಪೀಡಿತರಾಗಿ, ಅದನ್ನು ನೇರವಾಗಿ ಎದುರಿಸಲು ಒಬ್ಬ ರಾಜಾಭಯ್ಯನನ್ನು ಬಯಸಿದರಲ್ಲದೆ, ತಮ್ಮಂತೆ ಸಾಮಾಜಿಕ ವ್ಯವಸ್ಥೆಯ ಮಹದಾಸೆಯನ್ನು ಹೊಂದಿದವರ ಸಖ್ಯವನ್ನು ಬಯಸಿದರು. ಇದಕ್ಕೆ ಪೂರಕವಾದ ದ್ವಿಜರ ಬಳಗ ಒಂದನ್ನು ಶೂದ್ರರು ಬಯಸಿ. ಅದು ಅವರಿಗೆ ಸಾಮಾಜಿಕವಾಗಿ ಬೌದ್ಧಿಕ ಮತ್ತು ಸಾಂಸ್ಕೃತಿಕ ಮಾನ್ಯತೆಯನ್ನು ತರುತ್ತದೆಂದು ನಿರೀಕ್ಷಿಸಿದರು. ಅಲ್ಲಿ ಮರೆಯಲಾಗದ ಸಂಗತಿಯೆಂದರೆ ಮತಾಂಧರು

ದಿಗ್ಭ್ರಮೆಗೊಳಗಾದ ಸಮುದಾಯ ದಲಿತರು ಅಥವಾ ಶೂದ್ರರು ಮೊನ್ನೆಯತನಕ ಅವರ ಭೂಮಿಯನ್ನು ಗೇಯುತ್ತಿದ್ದರಲ್ಲದೆ, ಕೆಲವೇ ಕೇಜಿ ಕಾಳಿಗಾಗಿ ಬಿಸಿಲಿನ ಬೇಗೆಯಲ್ಲಿ ನಿಲ್ಲುತ್ತಿದ್ದವರು, ಇಂದು ಕೆಲವು ದಲಿತರ ಮಕ್ಕಳು ಅಂಬಾಸಿಡರ್ ಕಾರುಗಳಲ್ಲಿ ಲಾಲ್‌ಭತ್ತಿಯೊಡನೆ ತಿರುಗಾಟ ನಡೆಸಿರುವುದು ನಂಬಲಾಗುತ್ತಿಲ್ಲ. ಠಾಕೂರರಲ್ಲೂ ಅನೇಕ ಮಂದಿ ನೌಕರಶಾಹಿಯೊಳಗೆ ಬಂದಿದ್ದಾರೆ. ಆದರೆ ರಾಜ್ಯಾಂಗದೊಳಗಿನ ಶ್ರೇಣೀಕರಣದಲ್ಲಿ ಒಳಿತಾದುದೇನು ಇಲ್ಲ. ಮೊನ್ನೆಯವರೆಗೂ ಒಬ್ಬ ಅಸ್ಪೃಶ್ಯನಾಗಿ ರಸ್ತೆ ಬದಿಯಲ್ಲಿ ಪಾಲೀಷು ಮಾಡುತ್ತಿದ್ದ ದಲಿತನು, ಇಂದು ಠಾಕೂರನ ಮೇಲಧಿಕಾರಿಯಾಗಿದ್ದು, ಆತನ ಅಣತಿಯ ಮೇರೆಗೆ ಫೈಲನ್ನು ತರಬೇಕು ಮತ್ತು ಹೇಳಿದ್ದನ್ನು ಬರೆದುಕೊಳ್ಳಬೇಕಾದ ಸ್ಥಿತಿಯನ್ನು ಭಯಭೀತಿಯಿಂದ ಎದುರಿಸಬೇಕಾಗಿದೆ. ಅನೇಕ ದಲಿತ ಸಚಿವರ ಎದುರು ಠಾಕೂರು ಐಎಎಸ್ ಅಧಿಕಾರಿಗಳು ಸಲಾಂ ಹೊಡೆದು, ಆಣತಿಯನ್ನು ಸ್ವೀಕರಿಸಬೇಕಾಗಿದೆ.

ಇಟಲಿಯಲ್ಲಿ ಅಥವಾ ಜರ್ಮನಿಯಲ್ಲಿ ನಾಝಿಗಳು ಪ್ರಜಾಸತ್ತಾತ್ಮಕ ಸಂಸ್ಥೆಗಳನ್ನು ಉಪಯೋಗಿಸಿಯೇ ಪ್ರಜಾಪ್ರಭುತ್ವದ ಕತ್ತು ಹಿಸುಕಿದ್ದು.

ಆಜ್‌ಗರ್: ಯಾರ ವಿರುದ್ಧ ಅವರು ನಿಂತಿದ್ದಾರೆ?

ಒಬ್ಬ ಲೇಖಕನ ಜೀವಿತ ಕಾಲದಲ್ಲಿ ಆತನ ಸಿದ್ಧಾಂತಗಳು ಕ್ರಿಯಾಶೀಲವಾಗದೆ ಇರಬಹುದು. ರಿಪುಧರಮ್‌ಸಿಂಗ್, ಆಗ್ರಾದ ಚಿಕ್ಕ ಎಸ್ಟೇಟ್ ಭಾದಾವರ್‌ನ ರಾಜಾ-ಇವರಿಗೆ ಅಂಥದ್ದೇ ಆಯಿತೆಂದು ಕಾಣುತ್ತದೆ. ಠಾಕೂರ್ ರಾಜನು ರಾಜಕಾರಣಿಯಾಗಿ, ಭೂಒಡೆತನ ಹೊಂದಿದ ಒಂದು ಸಾಮಾಜಿಕ ಗುಂಪಿನೊಡನೆ ಹೊಂದಾಣಿಕೆಯನ್ನು ಬಯಸಿ, 'ಆಜ್‌ಗರ್' ಪರಿಕಲ್ಪನೆಯನ್ನು ಚಲಾವಣೆಗೆ ತಂದನು. 70ರ ದಶಕದಲ್ಲಿ ಆತ ಮಂಡಿಸಿದ 'ಆಜ್‌ಗರ್' ಎಂದರೆ ಅಹಿರರು(ಯಾದವರು), ಜಾತರು, ಗುಜ್ಜಾರರು, ರಾಜಪೂತರು ಒಂದಾಗಿ ಬ್ರಾಹ್ಮಣ-ದಲಿತ-ಮುಸ್ಲಿಂರ ಕಾಂಗ್ರೆಸ್‌ಗೆ ಒಂದು ಪ್ರಬಲವಾದ ಶಕ್ತಿಬಣವನ್ನು ಪರ್ಯಾಯವಾಗಿ ಕಟ್ಟಲು ಸ್ಥಾಪಿಸಿದ್ದ 'AJGAR'.

ಭಾರತೀಯ ರಾಜಕಾರಣಿಗಳು ವಿದ್ವಾಂಸರಿಗಿಂತ ಹೆಚ್ಚಾಗಿ ಸಮಾಜವನ್ನು ಅರಿತವರಾಗಿದ್ದಾರೆ. ಈ ರಾಜಕಾರಣಿಗಳು ಸಾಮಾಜಿಕ ಚಲನೆಯನ್ನು ಅದ್ಭುತವಾಗಿ ಅರ್ಥೈಸುತ್ತಾರಲ್ಲದೆ, ಅದನ್ನು ಸರಿಯಾಗಿ ಸಿದ್ಧಾಂತೀಕರಿಸುತ್ತಾರೆ. ಆದರೆ ಭಾರತೀಯ ಸಮಾಜವಿಜ್ಞಾನಿಗಳು ಡೋಲು ಭಾರಿಸುತ್ತಾ ಯಥಾಸ್ಥಿತಿಯನ್ನು ಕಾಯ್ದುಕೊಳ್ಳುತ್ತಿದ್ದಾರೆಯೇ ಹೊರತು, ಅವರು ಸಿದ್ಧಾಂತಿಗಳೇನು ಅಲ್ಲ. ಭಾದಾವರದ ರಾಜಾ ಠಾಕೂರರ ಪರಿಶುದ್ಧ ನಿರಾಶೆಯನ್ನು ಜೀವಿಸಿದ್ದನಲ್ಲದೆ, ಬ್ರಾಹ್ಮಣರು ಒಂದು ಜಾತಿಯಾಗಿ, ಕಾಂಗ್ರೆಸ್ ಒಂದು ರಾಜಕೀಯ ಸಂಘಟನೆಯಾಗಿ, ಮತ್ತು ಪ್ರಜಾಪ್ರಭುತ್ವ ಒಂದು ಸಿದ್ಧಾಂತವಾಗಿ ಠಾಕೂರರ ಪ್ರಾಬಲ್ಯಕ್ಕೆ ಪೆಟ್ಟುಕೊಟ್ಟಿದ್ದರು. ಅಲ್ಲದೆ, ಈ ಬ್ರಾಹ್ಮಣ ಮುಂದಾಳತ್ವವನ್ನು ಹೊಂದಿದ್ದ ಕಾಂಗ್ರೆಸ್ ಜಮೀನ್ದಾರಿ ವ್ಯವಸ್ಥೆ ರದ್ದತಿಯನ್ನು ಮಾಡಿತ್ತಲ್ಲದೆ, ಪ್ರಜಾಸತ್ತಾತ್ಮಕ ವ್ಯವಸ್ಥೆಯನ್ನು ಸ್ಥಾಪಿಸಿ, 'ಕಾನೂನಿನ ಎದುರು ಸಮಾನತೆ'ಯನ್ನು ಘೋಷಿಸಿತ್ತು.

ಭಾದಾವರದ ರಾಜನು ಬ್ರಾಹ್ಮಣ, ದಲಿತ ಮತ್ತು ಮುಸ್ಲಿಂರನ್ನು ತನ್ನ ರಾಜಕೀಯ ಸಿದ್ಧಾಂತದಲ್ಲಿ ಕೈಬಿಡುವ ಕಾರಣಗಳನ್ನಾದರೂ ವಿವರಿಸುವಷ್ಟು ಹೊಣೆಗಾರಿಕೆ ಸಾಮಾಜಿಕ ವಿಜ್ಞಾನಿಗಳಲ್ಲಿ ಇರಬೇಕಲ್ಲವೇ? ಅಥವಾ 'ಆಜ್‌ಗರ್' ಸಮುದಾಯಗಳಲ್ಲಿ ಇರಬಹುದೆನ್ನುವ ಸಾಮಾನ್ಯ ಸಂಗತಿಗಳಾದರೂ ಯಾವುವು? ಉ.ಪ್ರ.ದಲ್ಲಿನ ಬೆಳವಣಿಗೆಗಳ ಬಗ್ಗೆ ಖುಷಿ ಪಡುವ ಬದಲು ಭಾರತೀಯ ಪಾಂಡಿತ್ಯವು ಸ್ವಲ್ಪ ಸಮಯ ತೆಗೆದುಕೊಂಡು, ಆಜ್‌ಗರ್ ಸಿದ್ಧಾಂತ ಹರಿಕಾರ ಒಬ್ಬ ಜಾತನಾದ ಚರಣ್‌ಸಿಂಗ್‌ನಿಂದೇಕೆ ಬಂತು ಎಂಬುದನ್ನು ವಿವರಿಸಬಹುದೇ? ಯಾವ ರೀತಿಯಲ್ಲಿ ಯಾದವರು, ಜಾತರು ಮತ್ತು ಗುಜ್ಜಾರರ ಹಿತಾಸಕ್ತಿಗಳು ಠಾಕೂರರ ಹಿತಾಸಕ್ತಿಯೊಂದಿಗೆ ಹೊಂದಿಕೊಂಡರು? ಭಾದಾವರದ ರಾಜ ಹಾಗೂ ಚರಣ್‌ಸಿಂಗ್‌ರಿಬ್ಬರೂ ಉ.ಪ್ರ. ಸಮಾಜದ ಚಲನೆಯನ್ನು ಅದ್ಭುತವಾಗಿ ಗ್ರಹಿಸಿದ್ದರೂ, ಅವರಿಬ್ಬರ ಸಾಮಾಜಿಕ ಹಿನ್ನೆಲೆಗಳು ಅವರು ಮಂಡಿಸಿದ ಹೊಂದಾಣಿಕೆಗೆ ಅಡ್ಡಿಯಾದವೆಂದು ಹೇಳಬಹುದು. ಹಾಗಾಗಿ 'ಆಜ್‌ಗರ್' ವಾಸ್ತವ ರೂಪ ತಳೆಯುವಲ್ಲಿ ಸಫಲವಾಗಲಿಲ್ಲ.

ಆದರೆ ಮೂರು ದಶಕಗಳ ನಂತರ, 'ಆಜ್‌ಗರ್' ಒಕ್ಕೂಟವು ಉ.ಪ್ರ.ವನ್ನು ಆಳಲಾರಂಭಿಸಿದೆ. ಇದಕ್ಕೆ ಲೋಧರು ಹಾಗೂ ಕುರ್ಮಿಗಳು ಮತ್ತಷ್ಟು ಬೆಂಬಲವನ್ನು ನೀಡಲು ಅಣಿಯಾಗಿದ್ದಾರೆ. ಈ ಎಲ್ಲ ಒಕ್ಕೂಟವು ಉ.ಪ್ರ.ದ ಭೂಒಡೆತನದ ಜಾತಿಗಳಿಂದ ಆಗಿರುವಂಥದ್ದು. ಇದೇ ಎರಡು ದಶಕಗಳ ಹಿಂದೆ ರಜಪೂತರು ಅಥವಾ ಠಾಕೂರರು ಆಜ್‌ಗರ್‌ರ ಇತರ ಬಂಧುಗಳೊಡನೆ ಸೇರಲು ಸಾಧ್ಯವಾಗಿರಲಿಲ್ಲ. ಏಕೆಂದರೆ ಆಜ್‌ಗರ್‌ನ ಇತರರು ಠಾಕೂರರ ಗೇಣೀದಾರರಾಗಿದ್ದರು. ಆದ್ದರಿಂದ ಅವರು ಸಹಭಾಗಿತ್ವಕ್ಕೆ ಯೋಗ್ಯರಾಗಿರಲಿಲ್ಲ. ಆದರೆ ವಸ್ತುಸ್ಥಿತಿ ಬದಲಾದಂತೆ ಠಾಕೂರರು

ಪ್ರತ್ಯೇಕವಾಗಿಯೇ ಬೆಳೆಯ್ತೊಲಾರಂಭಿಸಿದರು. ಫ್ರಾನ್ಸ್ ಅಥವಾ ಚೈನಾದಂಥ ಕ್ರಾಂತಿಕಾರಕ ಬದಲಾವಣೆಗಳು ಇಂಡಿಯಾದಲ್ಲಿ ಆಗದಿದ್ದರೂ ಸಹ ಇಲ್ಲಿನ ಬದಲಾವಣೆಗಳು ನಿಜವಾಗಿ ಭಯಾನಕವಾದವು. ಭೂ-ಕೂಲಿ ಸಂಬಂಧಗಳು ಪ್ರಜಾಸತ್ತಾತ್ಮಕವಾಗಿ ಬುಡಮಟ್ಟದ ಸಮಾಜದಲ್ಲಿ ಪ್ರಜಾಸತ್ತಾತ್ಮಕ ಪ್ರಕ್ರಿಯೆಗಳಿಗೆ ಎಡೆಯಾಯಿತು. ಮಾಹಿತಿಯ ಸಲುವಾಗಿ ದಾಖಲಿಸಬೇಕಾದ ಸಂಗತಿಯೆಂದರೆ, ಉ.ಪ್ರ.ವು ಅತ್ಯಂತ ಹೆಚ್ಚಿನ ಭೂಸುಧಾರಣಾ ಕ್ರಮಗಳಿಗೆ ಸಾಕ್ಷಿಯಾಯಿತು.

ಪ್ರತಿ ಶತಕದ ದಲಿತರಲ್ಲಿ ನಲವತ್ತೂರು ಮಂದಿ ಸ್ವತಂತ್ರ ಕೃಷಿಕರಾಗಿದ್ದಾರೆ. ಅಖಿಲಭಾರತ ಮಟ್ಟದಲ್ಲಿ ಇದು ಕೇವಲ 24.44 ಅಷ್ಟೇ. ಪಂಜಾಬಿನಲ್ಲಿ ನೂರು ಮಂದಿ ದಲಿತರಲ್ಲಿ ಐದು ಮಂದಿ ಅಷ್ಟೇ ಸ್ವತಂತ್ರ ಕೃಷಿಕರು.

> **ಭಾರತೀಯ ರಾಜಕಾರಣಿಗಳು ವಿದ್ವಾಂಸರಿಗಿಂತ ಹೆಚ್ಚಾಗಿ ಸಮಾಜವನ್ನು ಅರಿತವರಾಗಿದ್ದಾರೆ. ಈ ರಾಜಕಾರಣಿಗಳು ಸಾಮಾಜಿಕ ಚಲನೆಯನ್ನು ಅದ್ಭುತ ವಾಗಿ ಅರ್ಥೈಸುತ್ತಾರಲ್ಲದೆ, ಅದನ್ನು ಸರಿಯಾಗಿ ಸಿದ್ಧಾಂತೀಕರಿಸುತ್ತಾರೆ. ಆದರೆ ಭಾರತೀಯ ಸಮಾಜ ವಿಜ್ಞಾನಿಗಳು ಡೋಲು ಭಾರಿಸುತ್ತಾ ಯಥಾಸ್ಥಿತಿಯನ್ನು ಕಾಯ್ದುಕೊಳ್ಳುತ್ತಿದ್ದಾರೆಯೇ ಹೊರತು, ಅವರು ಸಿದ್ಧಾಂತಿ ಗಳೇನು ಅಲ್ಲ. ಭಾದಾವರದ ರಾಜಾ ಠಾಕೂರರ ಪರಿಶುದ್ಧ ನಿರಾಶೆಯನ್ನು ಜೀವಿಸಿದ್ದನಲ್ಲದೆ, ಬ್ರಾಹ್ಮಣರು ಒಂದು ಜಾತಿಯಾಗಿ, ಕಾಂಗ್ರೆಸ್ ಒಂದು ರಾಜಕೀಯ ಸಂಘಟನೆಯಾಗಿ, ಮತ್ತು ಪ್ರಜಾಪ್ರಭುತ್ವ ಒಂದು ಸಿದ್ಧಾಂತವಾಗಿ ಠಾಕೂರರ ಪ್ರಾಬಲ್ಯಕ್ಕೆ ಪೆಟ್ಟುಕೊಟ್ಟಿದ್ದರು. ಅಲ್ಲದೆ, ಈ ಬ್ರಾಹ್ಮಣ ಮುಂದಾಳತ್ವವನ್ನು ಹೊಂದಿದ್ದ ಕಾಂಗ್ರೆಸ್ ಜಮೀನ್ದಾರಿ ವ್ಯವಸ್ಥೆ ರದ್ದತಿಯನ್ನು ಮಾಡಿತ್ತಲ್ಲದೆ, ಪ್ರಜಾಸತ್ತಾತ್ಮಕ ವ್ಯವಸ್ಥೆಯನ್ನು ಸ್ಥಾಪಿಸಿ, 'ಕಾನೂನಿನ ಎದುರು ಸಮಾನತೆ' ಯನ್ನು ಘೋಷಿಸಿತ್ತು.**

ಆದ್ದರಿಂದಲೇ ಪಂಜಾಬಿನಲ್ಲಿ ಬಿಎಸ್‌ಪಿ ಬೆಳೆಯಲಾಗಲಿಲ್ಲವೆಂಬುದನ್ನು ಗ್ರಹಿಸಬಹುದು. ಅಲ್ಲದೆ ತಮಿಳುನಾಡಿನಲ್ಲಿ ಅಂಥ ಚಳುವಳಿಗಳು ಯಶಸ್ವಿಯಾಗುವುದಿಲ್ಲ, ಪ್ರತೀ ನೂರಕ್ಕೆ ಹದಿನೈದು ಮಂದಿ ರೈತರಷ್ಟೇ ಕೃಷಿಕರಾಗಿರುವುದು. ಮಾಯಾವತಿಗಿಂತ ಹೆಚ್ಚಾಗಿ ಪೆರಿಯಾರರನ್ನು ಅರ್ಥೈಸಿದವರೆಂದರೆ ರಿಪುದಮನ್ ಸಿಂಗ್ ಮತ್ತು ಚರಣ್‌ಸಿಂಗ್. ಉ.ಪ್ರ.ದ ರಾಜಕೀಯ ಅಧಿಕಾರದಿಂದ ಬ್ರಾಹ್ಮಣರನ್ನು ಹೊರಗೋಡಿಸಲಿಲ್ಲವೆಂದರೆ ಭೂಸುಧಾರಣಾ ಕ್ರಮಗಳು ಅವರನ್ನು ಮತ್ತಷ್ಟು ಸಣ್ಣ ಹಿಡುವಳಿದಾರರನ್ನಾಗಿಸುವುದರಲ್ಲಿ ಸಂಶಯವೇ ಇಲ್ಲ, ಎಂದರೆ ಉ.ಪ್ರ.ದ ಹಳ್ಳಿಗಾಡು ಪ್ರದೇಶವು ಸಂಪೂರ್ಣವಾಗಿ ಪ್ರಜಾಸತ್ತಾತ್ಮಕವಾಗಿರುತ್ತದೆ. ಉ.ಪ್ರ.ದ ರಾಜಕೀಯ ಮುಂದಾಳತ್ವ ವಹಿಸಿದ ಬ್ರಾಹ್ಮಣರನ್ನು ಸಂದೇಹದಿಂದ ಕಾಣಲಾಗುತ್ತದೆ. ಏಕೆಂದರೆ ತಮಿಳುನಾಡಿನಲ್ಲಿ ಆದಂಥ ಸ್ಥಿತಿಯನ್ನು ಇಷ್ಟಪಡದ ಬ್ರಾಹ್ಮಣರು ನಿರ್ಧಾರಾತ್ಮಕವಾಗಿಯೇ ಭೂಸುಧಾರಣೆಯನ್ನು ತರುವುದರ ಮೂಲಕ ಮೇಲ್ವರ್ಗದ ಶೂದ್ರರನ್ನು ಹಿಡಿತದಲ್ಲಿಟ್ಟಿದ್ದಾರೆ. ಆದ್ದರಿಂದ, ಸಮಾನವಾದ ಭೂಸುಧಾರಣಾ ನೀತಿಯಿಂದ ಠಾಕೂರರನ್ನು ಹೊರತು ಪಡಿಸಲಾಗುವುದಿಲ್ಲ. ಹೀಗೆ ಜಮೀನ್ದಾರಿ ಪದ್ಧತಿಯ ರದ್ದತಿ ಠಾಕೂರರನ್ನು ಬದಿಗೆ ಸರಿಸಿತೋ ಹಾಗೆ 1972ರಲ್ಲಿ ಇಂದಿರಾಗಾಂಧಿ ತಂದ ಭೂಮಿತಿ ಕಾನೂನುಗಳು ಸಹ ಠಾಕೂರರನ್ನು ಮತ್ತಷ್ಟು ಇಕ್ಕಟ್ಟಿಗೆ ಸಿಲುಕಿಸಿದವು. ಈ ಆಜ್‌ಗರ್ ಒಕ್ಕೂಟವು ವರ್ಣಶ್ರೇಣಿಯನ್ನು ಮರು ವ್ಯವಸ್ಥೆಗೊಳಿಸಿ, ಅಸ್ಪೃಶ್ಯರನ್ನು ಇದ್ದಲ್ಲಿಯೇ ಬಿಟ್ಟು ಬ್ರಾಹ್ಮಣರನ್ನು ವ್ಯವಸ್ಥೆಯ ಕೆಳಗೆ ಇಳಿಸಲು ಬಯಸುತ್ತದೆ. ತಮಿಳುನಾಡಿನ ಬ್ರಾಹ್ಮಣೇತರ ಚಳುವಳಿಯ ಪ್ರತಿಬಿಂಬಕ್ಕಿದು ಸೂಕ್ತ ನಿದರ್ಶನವೇ ಸರಿ.

ಮೇಲ್ವರ್ಗದ ಶೂದ್ರರಿಗೆ ಒಂದು ಚಾರಿತ್ರಿಕ ಬಿಕ್ಕಟ್ಟು ಎದುರಾಗಿದೆ. ಅವರು ಭೌಗೋಳಿಕ ನೆಲೆಗಳಿಂದಾಗಿ ಅವರ ಮಧ್ಯೆ ಸರಿಸಮಾನ ಸಂಗತಿಗಳು ತುಂಬಾ ಕಮ್ಮಿಯಾಗಿವೆ. ಅವರ ಸಾಮಾಜಿಕ ಯಜಮಾನ್ಯರನ್ನು ಹೊರತು ಪಡಿಸಿಯೂ ಅವರೆಲ್ಲ ಪ್ರತ್ಯೇಕವಾಗಿ, ಸ್ವತಂತ್ರವಾಗಿ ಹೊರಹೊಮ್ಮಲು ಪ್ರಯತ್ನಿಸಿದರಾದರೂ ಉ.ಪ್ರ.ದ ರಾಜಕೀಯ ಅಧಿಕಾರವನ್ನು ತಮ್ಮ ಶಕ್ತಿಯ ಮೇಲೆ ಹಿಡಿಯಲಾಗುವುದಿಲ್ಲ.

ಭೌಗೋಳಿಕ ಭಿನ್ನತೆಯು ಅವರ ಮಧ್ಯೆ ಸಂಬಂಧವನ್ನು ಬೇರ್ಪಡಿಸುತ್ತದೆ. ಹಾಗಾಗಿ ಇವರ ಒಂದೇ ಒಂದು ಒಗ್ಗೂಡಬಹುದಾದ ನೆಲೆಯೆಂದರೆ ಬ್ರಾಹ್ಮಣ, ದಲಿತ, ಅಲ್ಪಸಂಖ್ಯಾತ ಮತ್ತು ಪ್ರಜಾಪ್ರಭುತ್ವ ವಿರೋಧಿ ನಿಲುವೇ ಆಗಿರುತ್ತವೆ. ಶತ್ರುವಿನ ಪಾಳೆಯದಲ್ಲಿ ಅಲ್ಪಸಂಖ್ಯಾತರು ಬೀಳದಿರುವಂತೆ ಈ ಕ್ಷಣಕ್ಕೆ ಅವರ ಪರವಾಗಿ ವಾದಿಸಲೇಬೇಕಾಗುತ್ತದೆ.

ಭಾರತದ ಅತ್ಯಂತ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ ರಾಜ್ಯವು ಅನೇಕ ದ್ವಂದ್ವಗಳಲ್ಲಿ ಸಿಲುಕಿದರೆ ಸಣ್ಣ ಸಂಗತಿಯಂತೆ. ಮಾಯಾವತಿಯು ಅಧಿಕಾರ ಕಳೆದುಕೊಂಡದ್ದು ಮತ್ತು ಮುಲಾಯಂ ಸಿಂಗ್ ಯಾದವ್ ಅಧಿಕಾರಕ್ಕೆ ವಾಪಾಸು ಬಂದಿರುವುದು ಮಹತ್ವದ ಸಂಗತಿಗಳೇನಲ್ಲ, ಇಲ್ಲಿ ನಡುಕ ಹುಟ್ಟಿಸುವ ಸಂಗತಿಯೆಂದರೆ ಆಜ್‌ಗರ್ ಶಕ್ತಿಯುತವಾಗಿ ಮರು ಸಂಘಟಿತಗೊಳ್ಳುತ್ತಿರುವುದು. ಈ ಸಂಘಟನಾ ಒಕ್ಕೂಟದ ಉದಯವು ಯಾರ ವಿರುದ್ಧ? ಆಹಿರರು, ಜಾತರು, ಗುಜ್ಜಾರರು, ಲೋಧರು, ಠಾಕೂರರು ಮತ್ತು ಕುರ್ಮಿಗಳು ಇಂದು ಒಂದುಗೂಡಿರುವುದು ಯಾರ ವಿರುದ್ಧ? ಪ್ರಜಾಪ್ರಭುತ್ವ ಇವರ ಗುರಿಯೇ? ●



ಸೃಜನಾತ್ಮಕ ಹಾಗೂ ವೈಚಾರಿಕ ಸಾಹಿತ್ಯ ಕೃತಿಗಳನ್ನು ವಿಮರ್ಶೆಗಾಗಿ

ಸಂವಾದ

ಆಹ್ವಾನಿಸುತ್ತದೆ.



ಪ್ರಕಾಶಕರು / ಲೇಖಕರು ಪ್ರಕಟಿತ ಕೃತಿಯ 2 ಪ್ರತಿಗಳನ್ನು ಕಳುಹಿಸಕೊಡಬೇಕಾಗಿ ಕೋರಲಾಗಿದೆ.

ವಿಳಾಸ :
ಸಂಪಾದಕರು, ಸಂವಾದ ಮಾಸಪತ್ರಿಕೆ,
ಸ್ಫೂರ್ತಿಧಾಮ, ಅಂಜನಾನಗರ,
ವಿಶ್ವನೀಡಂ ಅಂಚೆ, ಬೆಂಗಳೂರು - 560 091
ದೂರವಾಣಿ : 328 7943 / 328 1667

ಆರ್ಥಿಕ ಕ್ರಾಂತಿಯ ಹೊಸ ಪ್ರತಿಧ್ವನಿ

ಅತ್ಯುತ್ತಮ ಪದಗಳಲ್ಲಿ ಹೇಳುವುದಾದರೆ, ಡಾ. ಬಾಬಾಸಾಹೇಬ್ ಅಂಬೇಡ್ಕರ್‌ರವರು 20ನೇ ಶತಮಾನದಲ್ಲಿನ ಭಾರತದ ಪ್ರಮುಖ ಬುದ್ಧಿ ಜೀವಿಗಳಲ್ಲಿ ಒಬ್ಬರು. ಶ್ರೇಷ್ಠ ಮಾರ್ಕ್ಸ್‌ವಾದಿ ಅರ್ಥಶಾಸ್ತ್ರಜ್ಞ ಪೌಲ್ ಬರಾನ್‌ವರು, ತನ್ನ ಲೇಖನವೊಂದರಲ್ಲಿ ಬೌದ್ಧಿಕ ಕೆಲಸಗಾರ ಮತ್ತು ಬುದ್ಧಿ ಜೀವಿ ನಡುವಣ ವ್ಯತ್ಯಾಸವನ್ನು ವಿವರಿಸಿದ್ದಾರೆ. ಅವರ ಪ್ರಕಾರ, ಮೊದಲಿನವ, ತಮ್ಮ ಬುದ್ಧಿಶಕ್ತಿಯನ್ನು ಬದುಕುವುದಕ್ಕೆ ಬಳಸಿಕೊಳ್ಳುತ್ತಾನೆ. ಎರಡನೆಯವನು, ಇದನ್ನು ವಿಮರ್ಶಾತ್ಮಕ ವಿಶ್ಲೇಷಣೆ ಮತ್ತು ಸಾಮಾಜಿಕ ಬದಲಾವಣೆಗೆ ಉಪಯೋಗಿಸಿ ಕೊಳ್ಳುತ್ತಾನೆ. ಬರಾನ್‌ನ ಬುದ್ಧಿಜೀವಿಗಳ ವ್ಯಾಖ್ಯಾನಕ್ಕೆ ಡಾ|| ಅಂಬೇಡ್ಕರರ್‌ವರು ಚೆನ್ನಾಗಿ ಹೊಂದಿಕೊಳ್ಳುತ್ತಾರೆ. ಆಂಟೋನಿಯೋ ಗ್ರಾಮುಸ್ಕಿ ಹೇಳಿದಂಥ ಸಹಜ ಬುದ್ಧಿಜೀವಿ ಎಂಬುದಕ್ಕೆ ಡಾ. ಅಂಬೇಡ್ಕರ್ ಪ್ರಮುಖ ಉದಾಹರಣೆಯಾಗಿದ್ದಾರೆ. ಅಂದರೆ ಇವರು ಇಡೀ ಸಾಮಾಜಿಕ ವರ್ಗದ ಹಿತಾಶಕ್ತಿಯನ್ನು ಪ್ರತಿನಿಧಿಸಿದ್ದಾರೆ ಮತ್ತು ಅಭಿವ್ಯಕ್ತಿಗೊಳಿಸಿದ್ದಾರೆ.

ಡಾ. ಅಂಬೇಡ್ಕರರು ಭೂಸುಧಾರಣೆಯ ಶ್ರೇಷ್ಠ ಪ್ರತಿ ಪಾದಕರು ಮತ್ತು ರಾಷ್ಟ್ರದ ಆರ್ಥಿಕಾಭಿವೃದ್ಧಿಯಲ್ಲಿ ಪ್ರಮುಖ ಪಾತ್ರವಹಿಸಿದವರು. ಬಂಡವಾಳಶಾಹಿ ಆರ್ಥಿಕತೆಯಲ್ಲಿರುವ ಅಸಮಾನತೆಯನ್ನು ಅವರು ಗುರುತಿಸಿದ್ದರು. ಈ ವಿಷಯದ ಬಗೆಗಿನ ಅವರ ದೃಷ್ಟಿಕೋನಗಳು ಅನೇಕ ಬರಹಗಳಲ್ಲಿ ಚದುರಿ ಹೋಗಿ ರುವುದನ್ನು ಕಾಣಬಹುದು. ಇವುಗಳಲ್ಲಿ ಅತೀ ಮುಖ್ಯವಾದುವುಗಳೆಂದರೆ, 'ಭಾರತದಲ್ಲಿನ ಸಣ್ಣ ಹಿಡುವಳಿಗಳು ಮತ್ತು ಅದರ ಪರಿಣಾಮಗಳು' ಮತ್ತು 'ರಾಜ್ಯಾಂಗ ಮತ್ತು ಅಲ್ಪಸಂಖ್ಯಾತರು' ಎಂಬ ಲೇಖನಗಳು. ಈ ಬರಹಗಳು ಡಾ. ಅಂಬೇಡ್ಕರರು ಭೂಸುಧಾರಣೆಗಳ ಬಗ್ಗೆ ಜನರ ಅವಶ್ಯಕತೆಗೆ ಸೂಕ್ತವಾದ ಆರ್ಥಿಕತೆಯ ಬಗ್ಗೆಯೂ ತಮ್ಮ ಧೋರಣೆಗಳನ್ನು ವಿವರಿಸಿದ್ದಾರೆ.

ಮೂಲ : ವೆಂಕಟೇಶ್ ಆತ್ರೇಯ

ಕನ್ನಡಕ್ಕೆ : ಕೆ.ವಿ.ರೈ.

ಡಾ. ಅಂಬೇಡ್ಕರ್ ಭಾರತದ ಸಂವಿಧಾನ ಶಿಲ್ಪಿ ಮತ್ತು ಪರಿಶಿಷ್ಟ ಜಾತಿಗಳ ಅಶೋತ್ತರಗಳ ನಾಯಕನೆಂದು ಹೆಸರುವಾಸಿಯಾಗಿದ್ದಾರಷ್ಟೇ. ಆದರೆ ಅವರ ಆರ್ಥಿಕ ಅಭಿವೃದ್ಧಿಗೆ ಸಂಬಂಧಿಸಿದ ಅತೀ ಮಹತ್ವದ ವಿಚಾರಗಳು ಇನ್ನೂ ಗೋಚರವಾಗದೆ ಉಳಿದುಬಿಟ್ಟಿದೆ. ಡಾ. ಅಂಬೇಡ್ಕರರು ಭೂಸುಧಾರಣೆಯ ಶ್ರೇಷ್ಠ ಪ್ರತಿಪಾದಕರು ಮತ್ತು ರಾಷ್ಟ್ರದ ಆರ್ಥಿಕಾಭಿವೃದ್ಧಿಯಲ್ಲಿ ಪ್ರಮುಖ ಪಾತ್ರವಹಿಸಿದವರು. ಬಂಡವಾಳಶಾಹಿ ಆರ್ಥಿಕತೆಯಲ್ಲಿರುವ ಅಸಮಾನತೆಯನ್ನು ಅವರು ಗುರುತಿಸಿದ್ದರು. ಈ ವಿಷಯದ ಬಗೆಗಿನ ಅವರ ದೃಷ್ಟಿಕೋನಗಳು ಅನೇಕ ಬರಹಗಳಲ್ಲಿ ಚದುರಿ ಹೋಗಿರುವುದನ್ನು ಕಾಣಬಹುದು. ಇವುಗಳಲ್ಲಿ ಅತೀ ಮುಖ್ಯವಾದುವುಗಳೆಂದರೆ, 'ಭಾರತ ದಲ್ಲಿನ ಸಣ್ಣ ಹಿಡುವಳಿಗಳು ಮತ್ತು ಅದರ ಪರಿಣಾಮಗಳು' ಮತ್ತು 'ರಾಜ್ಯಾಂಗ ಮತ್ತು ಅಲ್ಪಸಂಖ್ಯಾತರು' ಎಂಬ ಲೇಖನಗಳು. ಈ ಬರಹಗಳು ಡಾ. ಅಂಬೇಡ್ಕರರು ಭೂಸುಧಾರಣೆಗಳ ಬಗ್ಗೆ ಜನರ ಅವಶ್ಯಕತೆಗೆ ಸೂಕ್ತವಾದ ಆರ್ಥಿಕತೆಯ ಬಗ್ಗೆಯೂ ತಮ್ಮ ಧೋರಣೆಗಳನ್ನು ವಿವರಿಸಿದ್ದಾರೆ.

ತೀವ್ರವಾದ ಭೂಸುಧಾರಣೆಯ ಅಗತ್ಯವನ್ನು ಒತ್ತಿಹೇಳುತ್ತಾ ಅವರು ಗುರುತಿಸುವುದೇನೆಂದರೆ, ಬೇಸಾಯಯೋಗ್ಯ ಭೂಮಿಯನ್ನು ಕಡಿಮೆ ಅಥವಾ ಹೆಚ್ಚು ಪ್ರಮಾಣದಲ್ಲಿ ಹೊಂದಿರುವುದಕ್ಕಿಂತಲೂ ಅಂಥ ಭೂಮಿಯಲ್ಲಿ ಬೇಸಾಯ ಉತ್ಪಾದನೆ, ಹೂಡಿಕೆ ಮತ್ತು ಶ್ರಮವನ್ನು ಒಟ್ಟಾಗಿ ಪರಿಗಣೆಗೆ ತೆಗೆದುಕೊಳ್ಳಬೇಕಾಗುತ್ತದೆ. ಅಲ್ಲದೆ ಅವರು ಕೈಗಾರೀಕರಣವನ್ನು ಒತ್ತಿ ಹೇಳುತ್ತಾ, ಕೃಷಿಯಲ್ಲಿರುವ ಅಧಿಕ ಶ್ರಮವನ್ನು ಇತರ ಉತ್ಪಾದನಾ ಉದ್ಯೋಗಗಳಿಗೆ ವರ್ಗಾಯಿಸುವುದ ರಿಂದ, ಕೃಷಿಯಲ್ಲಿ ಹೆಚ್ಚಿನ ಬಂಡವಾಳವನ್ನು ತೊಡಗಿಸುವುದರಿಂದ ಇಳುವರಿಯನ್ನು ಹೆಚ್ಚಿಸಬಹುದೆನ್ನುತ್ತಾರೆ. ಕೃಷಿಯಲ್ಲಿ ಅಂಥ ಬದಲಾವಣೆಯನ್ನು ತರುವಲ್ಲಿ ಸರ್ಕಾರದ ಪಾತ್ರವನ್ನು ಗುರುತಿಸುತ್ತಾ ಅವರು ಹೇಳುವುದೇನೆಂದರೆ ಭೂಮಿಯನ್ನು ರಾಷ್ಟ್ರೀಕರಣ ಮಾಡಿ, ಬೇಸಾಯಗಾರರ ಗುಂಪುಗಳಿಗೆ ಅದನ್ನು ಗುತ್ತಿಗೆಗೆ ನೀಡುವುದರ ಮೂಲಕ ಬೇಸಾಯದ ಸುಧಾರಣೆಗೆ ಸಹಕಾರ ಸ್ವರೂಪವನ್ನು ಉತ್ತೇಜಿಸಿ ದಂತಾಗುತ್ತದೆ.

1927ರ ಅಕ್ಟೋಬರ 10ರಂದು ಮುಂಬಯಿ ವಿಧಾನಪರಿಷತ್ತಿನಲ್ಲಿ ಚರ್ಚೆಯಲ್ಲಿ ಭಾಗವಹಿಸಿದ, ಡಾ. ಅಂಬೇಡ್ಕರರು ಹೇಳಿದ್ದೇನೆಂದರೆ, ಕೃಷಿ ಸಮಸ್ಯೆಗೆ ಪರಿಹಾರವೆಂದರೆ ಹೊಲಗಳ ಗಾತ್ರವನ್ನು ಹೆಚ್ಚಿಸುವುದಲ್ಲ, ಬೇಸಾಯದ ತೀವ್ರತೆಗಾಗಿ ಬಂಡವಾಳ ಮತ್ತು ಶ್ರಮದ ಹೂಡಿಕೆಯನ್ನು ಹೆಚ್ಚಿಸುವುದಾಗಿದೆ. (ಈ ಎಲ್ಲ ಉಲ್ಲೇಖಗಳನ್ನು 1979ರಲ್ಲಿ ಮಹಾರಾಷ್ಟ್ರ ಸರ್ಕಾರ ಪ್ರಕಟಪಡಿಸಿದ ಡಾ. ಅಂಬೇಡ್ಕರರ ಬರಹಗಳ ಸಂಕಲನದಿಂದ ತೆಗೆದುಕೊಳ್ಳಲಾಗಿದೆ.) ಅವರು ಮುಂದುವರಿದು, 'ಉತ್ತಮ ವಿಧಾನವೆಂದರೆ ಸಹಕಾರ ಕೃಷಿಯನ್ನು ಜಾರಿಗೊಳಿಸಿ, ಸಣ್ಣ ಹಿಡುವಳಿದಾರರನ್ನು ಬೇಸಾಯದಲ್ಲಿ ಒಂದು 'ಗೂಡಿಸುವುದು' ಎಂದು ಹೇಳಿದ್ದರು.

ಭಾರತ ಗಣರಾಜ್ಯದ ಸಂವಿಧಾನ ರೂಪಿಸುವ ಸಂದರ್ಭದಲ್ಲಿ, ರಾಜ್ಯಾಂಗವು ಆರ್ಥಿಕ ಶೋಷಣೆಯ ವಿರುದ್ಧ ರಕ್ಷಣೆಯನ್ನು ಒದಗಿಸತಕ್ಕದ್ದೆಂಬ ಪರಿಚ್ಛೇದವನ್ನು ಮೂಲಭೂತ ಹಕ್ಕುಗಳಲ್ಲಿನ ಕೆಲವು ಉಪಬಂಧಗಳಲ್ಲಿ ಸೇರಿಸಲು ಎಂದು ಡಾ. ಅಂಬೇಡ್ಕರರು ಸೂಚಿಸಿದ್ದರು.

ಇತರ ವಿಷಯಗಳೊಂದಿಗೆ, ಈ ಪರಿಚ್ಛೇದವನ್ನು ಈ ರೀತಿ ಸೂಚಿಸಿದ್ದಾರೆ:-

1) ಮುಖ್ಯ ಕೈಗಾರಿಕೆಗಳು ಸರ್ಕಾರಿ ಸ್ವಾಮ್ಯದಲ್ಲಿರತಕ್ಕದ್ದು ಮತ್ತು ನಡೆಸತಕ್ಕದ್ದು.

2) ಮೂಲ, ಆದರೆ ಮುಖ್ಯವಲ್ಲದ ಕೈಗಾರಿಕೆಗಳು ಸರ್ಕಾರಿ ಸ್ವಾಮ್ಯದಲ್ಲಿರತಕ್ಕದ್ದು, ಅದನ್ನು ರಾಜ್ಯಾಂಗವು ಅಥವಾ ಅದು ಸ್ಥಾಪಿಸಿದ ನಿಗಮಗಳು ನಡೆಸತಕ್ಕದ್ದು.

3) ಕೃಷಿಯು ಸರ್ಕಾರೀ ಉದ್ಯಮವಾಗಿರತಕ್ಕದ್ದು ಮತ್ತು ಎಲ್ಲ ಭೂಮಿಯನ್ನು ಸರ್ಕಾರವು ತೆಗೆದುಕೊಂಡು ನಿರ್ವಹಿಸತಕ್ಕದ್ದು ಮತ್ತು ಗ್ರಾಮ ನಿವಾಸಿಗಳಿಗೆ ಸೂಕ್ತವಾದ ಗಾತ್ರಗಳಲ್ಲಿ ಸಮುದಾಯ ಬೇಸಾಯಕ್ಕೆ ಅನುವು ಮಾಡಿಕೊಡತಕ್ಕದ್ದು.

ತಮ್ಮ ಸೂಚನೆಗಳ ಭಾಗವಾಗಿ, ಡಾ. ಅಂಬೇಡ್ಕರರು ಆರ್ಥಿಕ ಶೋಷಣೆಯ ವಿರುದ್ಧ ನಾಗರೀಕರಿಗೆ ರಕ್ಷಣೆಯನ್ನು ನೀಡುವ ಸಲುವಾಗಿ ವಿವರವಾದ ಟಿಪ್ಪಣಿಗಳನ್ನು ನೀಡಿದ್ದಾರೆ. ಅವರ ಪ್ರಕಾರ ಈ ಪರಿಚ್ಛೇದದ ಹಿಂದಿರುವ ಪ್ರಧಾನ ಉದ್ದೇಶವೆಂದರೆ ಜನರ ಆರ್ಥಿಕ

ಬದುಕನ್ನು ರೂಪಿಸುವುದು ರಾಜ್ಯಾಂಗದ ಆದ್ಯ ಕರ್ತವ್ಯವಾಗಿದ್ದು ಅದನ್ನು ಖಾಸಗಿ ಉದ್ಯಮಶೀಲತೆಗೆ ಬಾಧೆಯಾಗದಂತೆ ಉತ್ಪತ್ತಿಯನ್ನು ಹೆಚ್ಚಿಸುವುದು ಹಾಗೂ ಸಂಪತ್ತಿನ ಸಮಾನ ಹಂಚಿಕೆಗೆ ಅವಕಾಶವನ್ನು ಒದಗಿಸುವುದು. ಈ ಪರಿಚ್ಛೇದದಲ್ಲಿರುವ ಯೋಜನೆ ಮೇರೆಗೆ ಸಾಮುದಾಯಿಕ ಬೇಸಾಯ ವಿಧಾನವನ್ನೊಳಈಗೊಂಡಂತೆ, ಬೇಸಾಯವೂ ರಾಜ್ಯಾಂಗದ ಒಡೆತನದಲ್ಲಿರತಕ್ಕದ್ದು. ಹಾಗೆಯೇ ಸುಧಾರಿತ ರಾಜ್ಯಾಂಗದ ಸಮಾಜವಾದಿ ನೀತಿಯು ಕೈಗಾರಿಕಾ ಕ್ಷೇತ್ರದಲ್ಲಿ ಇರತಕ್ಕದ್ದು. ಕೃಷಿ ಮತ್ತು ಕೈಗಾರಿಕೆಗೆ ಬೇಕಾದ ಬಂಡವಾಳವನ್ನು ಒದಗಿಸುವ ಕರ್ತವ್ಯವು ಸಂಪೂರ್ಣವಾಗಿ ರಾಜ್ಯಾಂಗದ ಹೆಗಲ ಮೇಲೆ ಇರತಕ್ಕದ್ದು.

ರಾಜ್ಯಾಂಗವು ವಿಮೆಯ ಒದಗಿಸುವ ಮಹತ್ವದ ಬಗ್ಗೆ ಡಾ. ಅಂಬೇಡ್ಕರರು ಗುರುತಿಸುತ್ತಾ 'ತನ್ನ ಆರ್ಥಿಕ ಯೋಜನೆಗಳಿಗೆ ಬೇಕಾದ ಹಣಕಾಸು ಸಂಪನ್ಮೂಲಗಳಿಗೆ ವಿಮೆಯನ್ನು ಹೊಂದಿರತಕ್ಕದ್ದು. ಇದರ ಗೈರುಹಾಜರಿಯಲ್ಲಿ ರಾಜ್ಯಾಂಗವು ಹಣಕಾಸು ಮಾರುಕಟ್ಟೆಯಿಂದ ಅಧಿಕ ಬಡ್ಡಿಗೆ ಸಾಲವನ್ನು ತೆಗೆದುಕೊಳ್ಳಬೇಕಾಗುತ್ತದೆ' ಎಂದು ಹೇಳುತ್ತಾರೆ. ಆದ್ದರಿಂದ, ಅವರ ಪ್ರಕಾರ, ವಿಮೆಯು ರಾಷ್ಟ್ರೀಕೃತಗೊಳ್ಳಬೇಕು. ಅವರ ಸ್ಪಷ್ಟ ನಿಲುವೆಂದರೆ, 'ಭಾರತದ ಕೈಗಾರಿಕೋದ್ಯಮ ತೀವ್ರವಾಗಿ ಬೆಳೆಯ ಬೇಕಾದಲ್ಲಿ ಸಮಾಜವಾದಿ ರಾಜ್ಯಾಂಗವು ಅತ್ಯವಶ್ಯವಾಗಿದೆ. ಖಾಸಗಿ ರಂಗವು ಅದನ್ನು ಮಾಡಲಾಗದು. ಹಾಗೇನಾದರೂ ಮಾಡಿದಲ್ಲಿ, ಯೂರೋಪಿನಲ್ಲಿ ಖಾಸಗಿ ಬಂಡವಾಳಶಾಹಿಯು ಮಾಡಿದಂತೆ, ಸಂಪತ್ತಿನ ಹಂಚಿಕೆಯಲ್ಲಿ ಅಸಮಾನತೆಯನ್ನು ಉಂಟು ಮಾಡುತ್ತದೆ. ಇದು ಭಾರತೀಯರಿಗೆ ಒಂದು ಎಚ್ಚರಿಕೆಯಾಗಿದೆ'.

ತಮ್ಮ ಸೂಚನೆಗಳಿಗೆ ಟೀಕಾಸ್ತ್ರಗಳನ್ನು ಗುರುತಿಸುತ್ತಾ, ಅಂಬೇಡ್ಕರರು ರಾಜಕೀಯ ಪ್ರಜಾಪ್ರಭುತ್ವಕ್ಕಾಗಿ ವಾದಿಸುವುದೇನೆಂದರು, 'ಸಂವಿಧಾನಾತ್ಮಕ ಹಕ್ಕುಗಳನ್ನು ವ್ಯಕ್ತಿಯೊಬ್ಬ ತನಗೆ ದೊರೆಯಲೇಬೇಕಾದ ಸೌಕರ್ಯದಂತೆ ಅನುಭೋಗಿಸುವಂತಿಲ್ಲ'. ಅಂದರೆ 'ರಾಜ್ಯಾಂಗವು ಒಬ್ಬ ಖಾಸಗಿ ವ್ಯಕ್ತಿ ಇತರರನ್ನು ಆಳಲು ಯಾವುದೇ ಅಧಿಕಾರವನ್ನು ನೀಡಿಲ್ಲ'. ಅವರು ಸೂಚಿಸುವುದೇನೆಂದರೆ, 'ಖಾಸಗಿ ಉದ್ಯಮದ ಮೇಲೆ ಆಧಾರಿತವಾಗಿರುವ ಸಾಮಾಜಿಕ, ಆರ್ಥಿಕ ವ್ಯವಸ್ಥೆಯಲ್ಲಿ ಮತ್ತು ವೈಯಕ್ತಿಕ ಗುರಿಗಳ ಅನುಸರಣೆಯಲ್ಲಿ ಈ ಅಗತ್ಯತೆಗಳನ್ನು ಉಲ್ಲಂಘಿಸಿದಂತಾಗುತ್ತದೆ'.

ಆರ್ಥಿಕ ಮತ್ತು ಸಾಮಾಜಿಕವಾದ ಖಾಸಗಿ ಸಂಗತಿಗಳಲ್ಲಿ ರಾಜ್ಯಾಂಗವೂ ಪ್ರವೇಶಿಸಿಕೂಡದೆಂಬ ಸ್ವತಂತ್ರವಾದಿಗಳ ನಿಲುವನ್ನು ವಿರೋಧಿಸುತ್ತಾ, ಡಾ. ಅಂಬೇಡ್ಕರ್ ಹೇಳಿದ್ದೇನೆಂದರೆ, 'ರಾಜ್ಯಾಂಗವು ಪ್ರವೇಶ ಮಾಡದಿದ್ದಲ್ಲಿ ಸ್ವಾತಂತ್ರ್ಯವು ಉಳಿಯುತ್ತದೆ ಏನೋ ಹೌದು? ಯಾರಿಗೆ ಮತ್ತು ಯಾರಿಗಾಗಿ ಈ ಸ್ವಾತಂತ್ರ್ಯ? ಈ ಸ್ವಾತಂತ್ರ್ಯದಲ್ಲಿ ಸ್ಪಷ್ಟವಾಗಿರುವ ಸಂಗತಿಯೆಂದರೆ ಭೂಮಾಲೀಕರಿಗೆ ಮತ್ತಷ್ಟು ಬಡ್ಡಿಯನ್ನು ಹೆಚ್ಚಿಸುತ್ತದೆ. ಬಂಡವಾಳಶಾಹಿಗಳಿಗೆ ಶ್ರಮದ ವೇಳೆಯನ್ನು ಹೆಚ್ಚಿಸುತ್ತಿರುತ್ತದೆ ಹಾಗೂ ಕೂಲಿಯನ್ನು ಕಡಿಮೆ ಮಾಡುತ್ತದೆ' . ಮುಂದುವರಿಸಿ ಅವರು ಹೇಳುವುದೇನೆಂದರೆ, 'ಆರ್ಥಿಕ ವ್ಯವಸ್ಥೆಯೊಂದು ಅಧಿಕ ಮಂದಿ ಕೆಲಸಗಾರರನ್ನು ಉದ್ಯೋಗದಲ್ಲಿ ತೊಡಗಿಸಿಕೊಳ್ಳುವಾಗ ನಿರಂತರವಾದ ಮಧ್ಯಂತರಗಳಲ್ಲಿ ಅಧಿಕ ಸರಕುಗಳ ಉತ್ಪಾದನೆಯಲ್ಲಿ ತೊಡಗುತ್ತದೆ. ಇಲ್ಲಿ ಉದ್ಯಮದ ಚಕ್ರ ಚಲಿಸಬೇಕಾದರೆ ಕಾರ್ಮಿಕರು ಕೆಲಸ ನಿರ್ವಹಿಸುವಂತೆ ಯಾರಾದರೊಬ್ಬರೂ ನಿಯಮಗಳನ್ನು ಮಾಡಬೇಕಾಗುತ್ತದೆ. ರಾಜ್ಯಾಂಗವು ಅದನ್ನು ಮಾಡದಿದ್ದಲ್ಲಿ ಖಾಸಗಿ ಉದ್ಯಮಿಯು ಮಾಡುತ್ತಾರೆ. ಮತ್ತೊಂದು ಪರಿಭಾಷೆಯಲ್ಲಿ ಹೇಳುವುದಾದರೆ, ರಾಜ್ಯಾಂಗ ನಿಯಂತ್ರಿತ ಸ್ವಾತಂತ್ರ್ಯಕ್ಕೆ ಮತ್ತೊಂದು ಹೆಸರೆಂದರೆ ಖಾಸಗಿ ಉದ್ಯೋಗದಾತನ ಸರ್ವಾಧಿಕಾರವೆಂದಾಗುತ್ತದೆ'.

ಡಾ. ಅಂಬೇಡ್ಕರರ ಹೆಸರನ್ನು ದಿನ ನಿತ್ಯ ಜಪಿಸುತ್ತಿರುವ ಸ್ವಘೋಷಿತ ದಲಿತ ಚಳುವಳಿಯ ನಾಯಕರು ಅವರ ಆರ್ಥಿಕ ನೀತಿ ಮತ್ತು ಶೋಷಿತ ಜನರ ಹೋರಾಟಗಳಿಗೆ ಅದರ ಪ್ರಸ್ತುತತೆಯನ್ನು ಎಳ್ಳಷ್ಟೂ ಗಮನಿಸಿರುವುದಿಲ್ಲ. ಹಾಗೆಯೇ ದಲಿತರನ್ನು ಪ್ರತಿನಿಧಿಸುವ ರಾಜಕೀಯ ಶಕ್ತಿಗಳು ಸಂಘ ಪರಿವಾರದೊಂದಿಗೆ ಒಟ್ಟೊಟ್ಟಾಗಿ ಇರುವುದರಿಂದ ಹಾಗೂ ಕ್ರಾಂತಿಕಾರರ ಸಾಮಾಜಿಕ ನಿಲುವನ್ನು (ಕೆಲವೊಮ್ಮೆ ಆರ್ಥಿಕ ನಿಲುವನ್ನು ಸಹ) ಪ್ರತಿಪಾದಿಸುವ ಅನೇಕ ದಲಿತ ಚಳುವಳಿಯ ವಿಭಾಗಗಳಿಂದ ಹೆಚ್ಚೇನೂ ನಿರೀಕ್ಷಿಸುವಂತಿಲ್ಲ.

1990ರ ನಂತರದಲ್ಲಿ ಭಾರತದ ನವಉದಾರೀಕರಣದ ಸುಧಾರಣೆಗಳ ಅನುಭವವು ಡಾ. ಅಂಬೇಡ್ಕರರ ಸಂದೇಶಗಳನ್ನು ನಿಜವಾಗಿಸುತ್ತಿದ್ದು, ಏಕಸ್ವಾಮ್ಯ ಬಂಡವಾಳವು ಯಾವುದೇ ಅಡತಡೆಯಿಲ್ಲದೆ ದೇಶದೊಳಗೆ ಮತ್ತು ಹೊರಗೆ ಕ್ರಿಯಾಶೀಲವಾಗಿದೆ. ಈಗಾಗಲೇ ಅಧಿಕವಾಗಿ ಬರೆದಿರುವಂತೆ, ಈ ಉದಾರೀಕರಣ ಕಾಲದ ಸುಧಾರಣೆಯಿಂದ ಆರ್ಥಿಕ ಬೆಳವಣಿಗೆಗೆ ಮತ್ತಷ್ಟು ಕುಮ್ಮಕ್ಕು ಸಿಕ್ಕಿದೆ ಹೌದು.

ಆದರೆ ಅದೇ ವೇಳೆಯಲ್ಲಿ ಉದ್ಯೋಗದ ಬೆಳವಣಿಗೆಯಲ್ಲಿ ಹಾಗೂ ಬಡತನ ರೇಖೆ ಗಿಂತ ಕೆಳಗೆ ಜೀವಿಸುವ ಜನಸಂಖ್ಯೆಯಲ್ಲಿ ಯಾವುದೆ ಈ ವಿಶಿಷ್ಟ ಬದಲಾವಣೆ ಕಾಣುತ್ತಿಲ್ಲ. ಕೃಷಿಯು ಈಗಾಗಲೇ ಬಿಕ್ಕಟ್ಟಿನಲ್ಲಿದೆ. ಹಾಗೂ ಕೈಗಾರಿಕಾ ಉದ್ಯಮಗಳ ಬೆಳವಣಿಗೆಯಲ್ಲಿ ಕುಂಠಿತ ಕಂಡುಬರುತ್ತಿದೆ. ಇದೇ ವೇಳೆ ಆಹಾರಧಾನ್ಯಗಳ ಉತ್ಪತ್ತಿ ಕಡಿಮೆಯಾದರೂ ಸಹ ಸರ್ಕಾರವು ತನ್ನ ಉಗ್ರಾಣದಲ್ಲಿಟ್ಟಿರುವ ಅಧಿಕ ಧಾನ್ಯ ವನ್ನು ವಿದೇಶದಲ್ಲಿ ಮಾರಲು ಅಥವಾ ದೇಶದೊಳಗೆ ಖಾಸಗಿ ವಾಣಿಜ್ಯಕ್ಕೆ ಕಮ್ಮಿ ಬೆಲೆಯಲ್ಲಿ ಮಾರುವ ಮಸಲತ್ತು ನಡೆಸುತ್ತಿದೆ.

ಸರ್ಕಾರ ಮತ್ತು ಅದರ ಆರ್ಥಿಕ ತಜ್ಞರು ಈ ಬಿಕ್ಕಟ್ಟು ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣದ ನೀತಿಯಿಂದಾಗಿ ಎಂಬುದನ್ನು ಗುರುತಿಸದೆ, ಎರಡನೇ ತಲೆಮಾರಿನ ಸುಧಾರಣೆಗಳನ್ನು ಪರಿಹಾರವಾಗಿ ಸೂಚಿ ಸುತ್ತಿದ್ದಾರೆ. ಈ ಸುಧಾರಣೆಗಳ ಕೇಂದ್ರದಲ್ಲಿ ಉದ್ಯೋಗ ಭದ್ರತೆಯ ಸಂಪೂರ್ಣ ನಿರ್ಮೂಲನೆ ಇದೆ, ಈ ಉದಾರ ವಾದಿಗಳ ಸಮರ ಕೂಗೆಂದರೆ, 'ಎಲ್ಲ ನಿಯಂತ್ರಣಗಳನ್ನು ಮತ್ತು ರಾಜ್ಯಾಂಗವನ್ನು ತಿರಸ್ಕರಿಸಿ, ಮಾರುಕಟ್ಟೆ ನೀತಿ ಸ್ಥಾಪಿತವಾಗಲಿ'.

ಈ ಸಂದರ್ಭದಲ್ಲಿ ಅಂಬೇಡ್ಕರರವರು ಹೇಳಿದ್ದನ್ನು ಇಲ್ಲಿ ನೆನಪಿಸಬಹುದಾದರೆ. ಸರ್ಕಾರ ನಿಯಂತ್ರಣ ಸ್ವಾತಂತ್ರ್ಯವೆಂದರೆ, ಅದು ಖಾಸಗಿ ಉದ್ಯಮಿಯ ಸರ್ವಾಧಿಕಾರವೆಂದೇ ಹೇಳಬೇಕು. ಕಾರ್ಮಿಕ ಸುಧಾರಣೆಗಳಾಗಲಿ ಅಥವಾ ಕೃಷಿ ನೀತಿಯಾಗಲಿ, ವಿಮಾ ಕ್ಷೇತ್ರದ ಪ್ರಶ್ನೆಯಾಗಲಿ ಅಥವಾ ಅಭಿವೃದ್ಧಿಯಲ್ಲಿ ಸಾರ್ವಜನಿಕ ವಲಯದ ಪಾತ್ರವನ್ನಾಗಲಿ ಗಮನಕ್ಕೆ ತೆಗೆದುಕೊಂಡಲ್ಲಿ, ಡಾ. ಅಂಬೇಡ್ಕರರ ವಿಚಾರಗಳು ನವ ಉದಾರೀಕರಣ ನೀತಿಗಳಿಗೆ ವಿರುದ್ಧ ದಿಕ್ಕಿನಲ್ಲಿ ನಿಲ್ಲುತ್ತದೆ.

ದುರಂತವೆಂದರೆ, ಡಾ. ಅಂಬೇಡ್ಕರರ ಹೆಸರನ್ನು ದಿನ ನಿತ್ಯ ಜಪಿಸುತ್ತಿರುವ ಸ್ವಘೋಷಿತ ದಲಿತ ಚಳುವಳಿಯ ನಾಯಕರು ಅವರ ಆರ್ಥಿಕ ನೀತಿ ಮತ್ತು ಶೋಷಿತ ಜನರ ಹೋರಾಟಗಳಿಗೆ ಅದರ ಪ್ರಸ್ತುತತೆಯನ್ನು ಎಳ್ಳಷ್ಟೂ ಗಮನಿಸಿರುವುದಿಲ್ಲ. ಹಾಗೆಯೇ ದಲಿತರನ್ನು ಪ್ರತಿನಿಧಿಸುವ ರಾಜಕೀಯ ಶಕ್ತಿಗಳು ಸಂಘ ಪರಿವಾರದೊಂದಿಗೆ ಒಟ್ಟೊಟ್ಟಾಗಿ ಇರುವುದರಿಂದ ಹಾಗೂ ಕ್ರಾಂತಿಕಾರರ ಸಾಮಾಜಿಕ ನಿಲುವನ್ನು (ಕೆಲವೊಮ್ಮೆ ಆರ್ಥಿಕ ನಿಲುವನ್ನು ಸಹ) ಪ್ರತಿಪಾದಿಸುವ ಅನೇಕ ದಲಿತ ಚಳುವಳಿಯ ವಿಭಾಗಗಳಿಂದ ಹೆಚ್ಚೇನೂ ನಿರೀಕ್ಷಿಸುವಂತಿಲ್ಲ. ಯಾಕೆಂದರೆ, ಇವರ್ಯಾರೂ ಭೂಮಿಯ ಪ್ರಶ್ನೆಯನ್ನಾಗಲಿ, ರಾಜ್ಯಾಂಗದ ಪಾತ್ರವನ್ನಾಗಲಿ ಡಾ. ಅಂಬೇಡ್ಕರ್ ಪ್ರತಿಪಾದಿಸಿದ ಸೂಕ್ಷ್ಮ ರೀತಿಯಲ್ಲಿ ಎತ್ತುವುದಿಲ್ಲ. ●

(ಡಾ॥ ವೆಂಕಟೇಶ್ ಆತ್ರೇಯ, ಅರ್ಥಶಾಸ್ತ್ರ ವಿಭಾಗದ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಭಾರತೀದಾಸನ್ ವಿಶ್ವವಿದ್ಯಾನಿಲಯ, ತಿರುಚಿ . ಸೌಜನ್ಯ : ಫ್ರಂಟ್ ಲೈನ್)

ಪವಿತ್ರ ಗೋವು ಖಾದಿ ಧರಿಸುತ್ತಿದೆಯೇ?

ಜಗತ್ತಿನಾದ್ಯಂತ ಮಾನವ ಬೇಟೆಯಾಡುತ್ತಲೆ ಕೃಷಿ ರಂಗಕ್ಕಿಳಿದ, ಅದರ ಮೇಲೆ ಪ್ರಭುತ್ವ ಸ್ಥಾಪಿಸಿಕೊಳ್ಳುತ್ತಿದ್ದಂತೆಯೇ ವಾಣಿಜ್ಯ ಮತ್ತು ಕೈಗಾರಿಕಾ ರಂಗದಲ್ಲಿ ಅದ್ಭುತ ಸಾಧನೆ ತೋರ್ಪಡಿಸಿದ್ದಾನೆ. ಜೀವ ತಂತ್ರಜ್ಞಾನ (Bio-technology) ಹಾಗೂ ಮಾಹಿತಿ ತಂತ್ರಜ್ಞಾನ (Information Technology)ದಲ್ಲೂ ಕಣ್ಣು ಕೋರೈಸುವಂತಹ ಪ್ರಗತಿ ಸಾಧಿಸಿದ್ದಾನೆ. ಇಂತಹ ಮಾಹಿತಿ ತಂತ್ರಜ್ಞಾನದ ಮುಖಾಂತರವೇ ಪೂರ್ವದಲ್ಲಿ ಬೇಟೆ ಕಲಿತ ಮಾನವ ಬೇಟೆಯಾಡದೆ ಉಳಿಸಿರುವ ಪ್ರಾಣಿಗಳಾವುವು ಎಂಬ ಸೂಕ್ಷ್ಮ ಸತ್ಯ ವಿಚಾರಗಳನ್ನು ಅನ್ವೇಷಣೆ ಮಾಡಬೇಕಿದೆ. ಮಾನವ ತದ್ರೂಪಿಗಳ ಸೃಷ್ಟಿಸಲು ಪಾಶ್ಚಿಮಾತ್ಯರು ತಲೆತುಂಬ ಹೊಸ ಸೂತ್ರಗಳನ್ನು ತುಂಬಿಕೊಂಡು ಅವುಗಳೊಂದಿಗೆ ಸೆಣಸಾಡುತ್ತಿರುವಾಗ, ಭಾರತವು ಏಕರೂಪ ನಾಗರಿಕ ಸಂಹಿತೆ ಹಾಗೂ ಗೋಹತ್ಯೆ ನಿಷೇಧ ಕುರಿತು ಸಂಸತ್ತಿನಲ್ಲಿ ಚರ್ಚೆ-ಪ್ರತಿ ಚರ್ಚೆಗಾಗಿ ಕಸರತ್ತು ನಡೆಯುತ್ತಿದೆ. ಈ ಹಿನ್ನೆಲೆಯಲ್ಲಿ ಪವಿತ್ರ ಗೋವು ಖದ್ದರ್ ಖಾದಿ ಧರಿಸಿಕೊಳ್ಳುತ್ತಿರುವ ಆಧುನಿಕ ಕಥೆಯನ್ನು ಸ್ವಲ್ಪ ಅವಲೋಕಿಸುವ ಕಾರ್ಯ ಇಲ್ಲಿ ನಡೆದಿದೆ:

ಸೌಜನ್ಯ : ದಿ ಹಿಂದೂ

ಬೌದ್ಧ ಧರ್ಮ ಜನನಕ್ಕೂ ಮುನ್ನ ಯಥೇಚ್ಛವಾಗಿ ಇಲ್ಲಿ ಪ್ರಾಣ ಹತ್ಯೆ ನಡೆಯುತ್ತಿತ್ತೆಂಬ ಜಾಗತಿಕ ಸತ್ಯಗಳು ಸಮಕಾಲೀನ ಚಾರಿತ್ರಿಕ ದಾಖಲೆಗಳಲ್ಲಿವೆ. ಈ ಧರ್ಮ ಮನುಕುಲ ಉದ್ಧಾರಕ್ಕಾಗಿ ಹಲವು ಮಾನವೀಯ ಸನ್ಮಾರ್ಗಗಳನ್ನು ಸಾರಿತ್ತು. ಕೃಷಿ ಪ್ರಧಾನವಾದ ಅಂದಿನ ಸಮಾಜ ಹಸು ಮತ್ತು ಇತರ ಪ್ರಾಣಿಗಳನ್ನು ಕೃಷಿ ಕಾರ್ಯಗಳಿಗೆ ಬಳಸಿ ಕೊಳ್ಳುತ್ತಿತ್ತು. ಅವುಗಳಿಂದ ಸಿಗುತ್ತಿದ್ದ ಸಹಾಯಗಳನ್ನು ನೆನೆದವರೆಲ್ಲರೂ ಅವುಗಳನ್ನು ಕೊಲ್ಲುವುದನ್ನು ನಿಲ್ಲಿಸಿದ್ದರು. ಬೌದ್ಧರ ವರ್ಚಸ್ಸಿನಿಂದ ಪುಳಕಿತಗೊಂಡ ಬ್ರಾಹ್ಮಣವಾದಿಯರು ಪ್ರಾಣಹತ್ಯೆ ಬಗ್ಗೆ ಸಹಾನುಭೂತಿ ವ್ಯಕ್ತಪಡಿಸತೊಡಗಿದ್ದರು. ಅಂದು ವ್ಯಾಪಕವಾಗಿ ಹರಡಿದ್ದ ಬೌದ್ಧಧರ್ಮದ ಪ್ರಭಾವದಿಂದ ಎಲ್ಲ ಬಗೆಯ ಪ್ರಾಣಹತ್ಯೆ ನಿಷೇಧವಾಗತೊಡಗಿತ್ತು. ಅದರಲ್ಲೂ ಗುಪ್ತರ ಯುಗದಲ್ಲಿ ಬ್ರಾಹ್ಮಣ ಸಂಸ್ಕೃತಿಯನ್ನು ಸಾರಲು ಗೋಹತ್ಯೆ ನಿಷೇಧಕ್ಕೆ ರಾಜಾಶ್ರಯಗಳು ದೊರಕಿದವು. ಗೋಹತ್ಯೆಯು ಭಾರತದಲ್ಲಂತು ಒಂದು ಕಾಲಘಟ್ಟದಲ್ಲಿ ಕಾಣಿಸಿಕೊಂಡ ಪ್ರಕ್ರಿಯೆ ಆಗಿರಲಿಲ್ಲ. ಈ ನಿಟ್ಟಿನಲ್ಲಿ ಅವಲೋಕಿಸಿದಾಗ ಗೋಮಾಂಸ ಭಕ್ಷಣೆ ಅನಾದಿಕಾಲ ದಿಂದಲೂ ಇತ್ತೆಂಬ ಸಾಕ್ಷಾಧಾರಗಳು ನಮಗೆ ಹೇರಳವಾಗಿ ದೊರೆಯುತ್ತವೆ. ಅವುಗಳನ್ನು ಒಪ್ಪಿಕೊಳ್ಳುವ ಮನಸ್ಸು ಮಾತ್ರ ಇಲ್ಲಿ ವೈಜ್ಞಾನಿಕವಾಗಿ ವಿಕಾಸ ಗೊಂಡಿರಬೇಕಷ್ಟೇ.

○ ದಾಸನೂರು ಕೂಸಣ್ಣ

ಜಗತ್ತಿನಾದ್ಯಂತ ಮಾನವ ಬದುಕಲು ವಿಷಜಂತುಗಳನ್ನು ಬಿಡದೆ ತಿಂದಿದ್ದಾನೆಂಬ ಬಹಿರಂಗ ಸತ್ಯವನ್ನು ನಾವಿಂದು ನಂಬಲೇಬೇಕಿದೆ. ಅಂದ ಮೇಲೆ ಗೋವು ಹತ್ಯೆಯನ್ನು ನಿರಂತರವಾಗಿ ನಡೆಸಿಕೊಂಡು ಬಂದಿದ್ದಾರೆಂದು ನಮ್ಮ ಚಾರಿತ್ರಿಕ ದಾಖಲೆಗಳು ಉಲ್ಲೇಖಿಸಿವೆ. ಜಗತ್ತೆಲ್ಲ ಅಂಧಕಾರದ ಕತ್ತಲಿನಲ್ಲಿ ಮಲಗಿರುವಾಗ ಕ್ರಿಸ್ತಪೂರ್ವದಲ್ಲೇ ಮನುಕುಲ ಉದ್ಧಾರಕ್ಕಾಗಿ ನೀತಿ ಸಂಹಿತೆಗಳು ಜನ್ಮತಾಳಿದವೆಂಬ ಹೆಗ್ಗಳಿಕೆ ನಮ್ಮಲ್ಲಿದೆ. ಬೌದ್ಧ ಧರ್ಮ ಜನನಕ್ಕೂ ಮುನ್ನ ಯಥೇಚ್ಛವಾಗಿ ಇಲ್ಲಿ ಪ್ರಾಣ ಹತ್ಯೆ ನಡೆಯುತ್ತಿತ್ತೆಂಬ ಜಾಗತಿಕ ಸತ್ಯಗಳು ಸಮಕಾಲೀನ ಚಾರಿತ್ರಿಕ ದಾಖಲೆಗಳಲ್ಲಿವೆ. ಈ ಧರ್ಮ ಮನುಕುಲ ಉದ್ಧಾರಕ್ಕಾಗಿ ಹಲವು ಮಾನವೀಯ ಸನ್ಮಾರ್ಗಗಳನ್ನು ಸಾರಿತ್ತು. ಕೃಷಿ ಪ್ರಧಾನವಾದ ಅಂದಿನ ಸಮಾಜ ಹಸು ಮತ್ತು ಇತರ ಪ್ರಾಣಿಗಳನ್ನು ಕೃಷಿ ಕಾರ್ಯಗಳಿಗೆ ಬಳಸಿಕೊಳ್ಳುತ್ತಿತ್ತು. ಅವುಗಳಿಂದ ಸಿಗುತ್ತಿದ್ದ ಸಹಾಯಗಳನ್ನು ನೆನೆದವರೆಲ್ಲರೂ ಅವುಗಳನ್ನು ಕೊಲ್ಲುವುದನ್ನು ನಿಲ್ಲಿಸಿದ್ದರು. ಬೌದ್ಧರ ವರ್ಚಸ್ಸಿನಿಂದ ಪುಳಕಿತಗೊಂಡ ಬ್ರಾಹ್ಮಣವಾದಿಯರು ಪ್ರಾಣಹತ್ಯೆ ಬಗ್ಗೆ ಸಹಾನುಭೂತಿ ವ್ಯಕ್ತಪಡಿಸತೊಡಗಿದ್ದರು. ಅಂದು ವ್ಯಾಪಕವಾಗಿ ಹರಡಿದ್ದ ಬೌದ್ಧಧರ್ಮದ ಪ್ರಭಾವದಿಂದ ಎಲ್ಲ ಬಗೆಯ ಪ್ರಾಣಹತ್ಯೆ ನಿಷೇಧವಾಗತೊಡಗಿತ್ತು. ಅದರಲ್ಲೂ ಗುಪ್ತರ ಯುಗದಲ್ಲಿ ಬ್ರಾಹ್ಮಣ ಸಂಸ್ಕೃತಿಯನ್ನು ಸಾರಲು ಗೋಹತ್ಯೆ ನಿಷೇಧಕ್ಕೆ ರಾಜಾಶ್ರಯಗಳು ದೊರಕಿದವು. ಗೋಹತ್ಯೆಯು ಭಾರತದಲ್ಲಂತು ಒಂದು ಕಾಲಘಟ್ಟದಲ್ಲಿ ಕಾಣಿಸಿಕೊಂಡ ಪ್ರಕ್ರಿಯೆ ಆಗಿರಲಿಲ್ಲ, ಈ ನಿಟ್ಟಿನಲ್ಲಿ ಅವಲೋಕಿಸಿದಾಗ ಗೋಮಾಂಸ ಭಕ್ಷಣೆ ಅನಾದಿಕಾಲದಿಂದಲೂ ಇತ್ತೆಂಬ ಸಾಕ್ಷಾಧಾರಗಳು ನಮಗೆ ಹೇರಳ ವಾಗಿ ದೊರೆಯುತ್ತವೆ. ಅವುಗಳನ್ನು ಒಪ್ಪಿಕೊಳ್ಳುವ ಮನಸ್ಸು ಮಾತ್ರ ಇಲ್ಲಿ ವೈಜ್ಞಾನಿಕವಾಗಿ ವಿಕಾಸ ಗೊಂಡಿರಬೇಕಷ್ಟೇ.

ಇಂದಿನ ಬಹುತೇಕ ಹೊಸ ದೇಶಿಯ ಮತ್ತು ವಿದೇಶಿ ಅಡುಗೆ ರುಚಿಗಳು ವಿದ್ಯಾವಂತರಿಗೆ ಸಾಹಿತ್ಯ ಮತ್ತು ಜಾಹೀರಾತುಗಳ ಮುಖಾಂತರ ಪರಿಚಯವಾಗುತ್ತವೆ. ಅವುಗಳ ಬಗ್ಗೆ ಮಾನಸಿಕವಾಗಿ ಮಾರುಹೋದವರು ಅನುಭವಿಸಲು ಮುಂದಾಗುತ್ತಾರೆ. ನಿಧಾನವಾಗಿ ಅದು ಸಮಾಜದ ಮುಖ್ಯವಾಹಿನಿಯಲ್ಲೂ ಹರಿದು ಕೆಲವೊಮ್ಮೆ ಕೆಳಮಧ್ಯಮ ವರ್ಗಗಳನ್ನು ಆಕರ್ಷಿಸುತ್ತದೆ. ಈ

ನಮೂನೆಯಲ್ಲಿ ಅಂದು ಗೋಮಾಂಸ ಮತ್ತು ಇತರ ಪ್ರಾಣಿಗಳ ಮಾಂಸವು ಬಾಯಿಂದ ಬಾಯಿಗೆ ರುಚಿ ಇಳಿದು ಜನಪ್ರಿಯಗೊಂಡಿತ್ತು. ಇದೊಂದು ಜಾಗತಿಕ ಪ್ರಕ್ರಿಯೆ ಅಂದರೂ ತಪ್ಪಾಗದು.

ಶತಮಾನಗಳು ಉರುಳಿದಂತೆಲ್ಲ ಗೋಮಾಂಸ ತಿಂದು ತಿರಸ್ಕರಿಸಿದವರೇ, ಸಾಮಾಜಿಕ ಉನ್ನತ ಸ್ಥಾನ-ಮಾನಗಳಿಗಾಗಿ ಗೋಮಾಂಸ ಭಕ್ಷಣೆ ಬಗ್ಗೆ ಅವಹೇಳನಕಾರಿಯಾದ ಸಾಹಿತ್ಯ ರಚನೆಯಲ್ಲಿ ತೊಡಗಿಕೊಂಡರು. ಆಗಾಗಲೆ ತಳವೂರಿದ್ದ ವರ್ಣಾಶ್ರಮ ಪದ್ಧತಿ ಇದನ್ನು ಸ್ಥಾನೀಕರಿಸಲು ಸಹಕಾರಿಯಾಯಿತು. ಅಂದು ಯಾವುದೇ ಸಾಮಾಜಿಕ, ಆರ್ಥಿಕ ಸ್ಥಾನಮಾನಗಳಿರದಿದ್ದ ಶೋಷಿತ ಜಾತಿಗಳ ಸಮುದಾಯಗಳು ಬದುಕಿನ ಅನಿವಾರ್ಯತೆಗಾಗಿ ಜೀವಂತ ಗೋವು ಮತ್ತು ಸತ್ತ ಜಾನುವಾರಗಳನ್ನು ತಿನ್ನುವುದನ್ನು ಅಭ್ಯಾಸಮಾಡಿಕೊಂಡರು. ಇಂತಹ ಅನುಭೋಗ ಕ್ರಿಯೆಗಳನ್ನು ಬ್ರಾಹ್ಮಣ ಸಾಹಿತ್ಯ ಅಶುದ್ಧ ಜೀವನ ಕ್ರಮವೆಂದು ತೀಕ್ಷ್ಣವಾಗಿ ಸಾರತೊಡಗಿದ್ದವು. ಗೋಹತ್ಯೆಯು ಭಾರತಕ್ಕೆ ಮಹಮದೀಯರ ದಾಳಿಯಿಂದಾಗಲಿ, ಕ್ರೈಸ್ತರ ತಕ್ಕಡಿಯಿಂದಾಗಲಿ, ತೈಮೂರರ ಧಾಳಿಯಿಂದಾಗಲಿ ಅಥವಾ ದಲಿತರ ಸ್ವಹಿತಾಶಕ್ತಿಯಿಂದಾಗಲಿ ಆರಂಭಗೊಂಡು ಇಲ್ಲಿ ನೆಲೆಯೂರಲಿಲ್ಲ. ಈ ಸಂಸ್ಕೃತಿ ಜಗತ್ತಿನಾದ್ಯಂತ ಇರುವಂತೆ ಈ ನೆಲದಲ್ಲೆ ಹುಟ್ಟಿ, ಹೆಮ್ಮರವಾಗಿ ಬಹುಸಂಖ್ಯಾತ ಸಮುದಾಯಗಳ ಆಹಾರ ಪದ್ಧತಿಯಾಗಿ ರೂಪುಗೊಂಡಿದೆ. ಅಂದಿನಿಂದಲೂ ಗೋಮಾಂಸ ಹಾರಿಗಳನ್ನು ಅಶುದ್ಧರೆಂದು ಅವಹೇಳನಕ್ಕೆ ಒಳಪಡಿಸಿ, ಸಮಾಜದ ಮುಖ್ಯವಾಹಿನಿಯಲ್ಲಿ ಐಕ್ಯಮತದ ಜೀವನದಲ್ಲಿ ಸೇರ್ಪಡೆಯಾಗದಂತೆ ತಡೆಯುವಲ್ಲಿ ಬ್ರಾಹ್ಮಣಿಕೆ ಶಕ್ತವಾಯಿತು. ಇದರಿಂದಾಗಿ ಲೌಕಿಕ ಜಗತ್ತಿನಲ್ಲಿ ಜರುಗುತ್ತಿದ್ದ ವಿಚಾರ ಕ್ರಾಂತಿಯ ಹೊಂಬೆಳಕು ನತದೃಷ್ಟ ಜನ ಸಮುದಾಯಗಳ ಮೇಲೆ ಬೀಳದಂತೆಯು ಆಗೋಚರ ಪರದೆಗಳು ಸೃಷ್ಟಿಯಾಗಿದ್ದವು. ನಿರಂತರ ಸಾಮಾಜಿಕ ಬದಲಾವಣೆಗಳಲ್ಲಿ ಸಾಮಾಜಿಕ, ಧಾರ್ಮಿಕ ಹಾಗೂ ಶೈಕ್ಷಣಿಕ ಮೌಢ್ಯಗಳಿಂದ ಇಂದಿನಂತೆಯೇ ಬಾಳ್ವೆ ನಡೆಸಿಕೊಂಡು ಬಂದಿದ್ದಾರೆ. ಇಂತಹ ಅನಾಹುತ ಗಳೆಲ್ಲವೂ ಭಾರತದ ದುರಂತಗಳೆಂದೆ ನಂಬಬಹುದು.

ಹಿಂದೂ ಭಾವನೆಯು ಕೃತಕ ಚಿಲುಮೆಯಂತಿದೆ?

'ಹಿಂದೂ' ಎಂಬ ಪದವು ವಿಚಿತ್ರವಾದ ಭಾವಾರ್ಥವನ್ನು ಹೊಂದಿದೆ. 'ಇಂಡಸ್' ಎಂಬ ಪದವನ್ನು ಆಗಿಂದಾಗ್ಗೆ ಭಾರತವನ್ನು ಲೂಟಿಗೈಯುತ್ತಿದ್ದ ಅರಬ್ಬರು ಈ ಪದವನ್ನು ಬಳಸಿದ್ದರು. ರಾಜ್ಯಗಳ ಲೂಟಿಕೋರ ಅರಬ್ ತುರ್ಕರರು ರಕ್ತ ಪಿಪಾಸುಗಳಾಗಿದ್ದರು. ಸೇಡಿಯಾಪು ಕೃಷ್ಣಭಟ್ಟ ರಂತಹ ವಿದ್ವಾಂಸರು 'ಹಿಂದು' ಎಂದರೆ, ಅಪಮಾನಿತನಾದವನು, ಹಿಮ್ಮೆಟ್ಟಿಸಿಕೊಂಡವನು ಅಥವಾ ಆಕ್ರಮಣಕ್ಕೆ ಒಳಗಾದವನು ಎಂಬ ತೀರ್ಮಾನಕ್ಕೆ ಬಂದಿದ್ದಾರೆ. ಸ್ವಾಮಿ ದಯಾನಂದ ಸರಸ್ವತಿ ಕೂಡ ಹಿಂದೂ ಪದ ಒಪ್ಪಿಕೊಳ್ಳದೆ, ವೇದಗಳ ಮೂಲಕ ಭಾರತವನ್ನು ನೋಡಲೆತ್ನಿಸಿದ್ದರು. ಅಥವಾ 'ಇಂಡಸ್'

ದಲಿತರು-ಮುಸ್ಲಿಂರು ಗೋಮಾಂಸ ತಿನ್ನದೆ ಇರುವವರನ್ನು ಇಲ್ಲಿ ಅಶುದ್ಧರೆಂದು ಕರೆಯಲಾಗುತ್ತಿದೆ. ಉದ್ಯೋಗಸ್ಥ ದಲಿತರು ಇಂದು ಸಂಪೂರ್ಣವಾಗಿ ಗೋವಲ್ಲದ ಮಾಂಸಾಹಾರಗಳಿಗೆ ಮೊರೆಹೋಗಿದ್ದಾರೆ. ಕಡಲ ತೀರದಲ್ಲಿರುವ ಬ್ರಾಹ್ಮಣರು ಮತ್ತು ಒಳನಾಡುಗಳಲ್ಲಿರುವ ಬ್ರಾಹ್ಮಣರಲ್ಲಿ ವ್ಯಾಪಕವಾಗಿ ಮೀನು ಸೇವಿಸುವ ಕುಟುಂಬಗಳಿವೆ. ಅದರ ಜೊತೆಗೆ ಕೆಲವು ಕುಟುಂಬಗಳು ಕೋಳಿ ಮೊಟ್ಟೆ ಸೇವಿಸುತ್ತಾರೆ. ನಾವು ಭ್ರೂಣಹತ್ಯೆಯನ್ನು ಮಹಾ ಪಾಪವೆಂದು ನಂಬಿದ್ದೇವೆ. ಆದರೆ ಭ್ರೂಣಾವಸ್ಥೆಯಲ್ಲಿರುವ ಮೊಟ್ಟೆ ಮಾತ್ರ ಪಾಪವೆನಿಸುತ್ತಿಲ್ಲ. ಮೀನು-ಮೊಟ್ಟೆಗಳೆರಡನ್ನು ಅಶುದ್ಧತೆಯ ಪರಿಧಿಯಿಂದ ದೂರವಿಡಲಾಗಿದೆ.

ಸಿಂಧೂ ಜನರಿಗೆ ಅನ್ವಯಿಸುವ ಪದವನ್ನು ದ್ರಾವಿಡ-ಮಂಗೋಲಿಯನ್ ಜನಾಂಗಗಳಿಗೆ ಹೋಲಿಕೆ ಆಗುವುದಿಲ್ಲ 'ಹಿಂದೂ' ಪದವು ಇಂದಿಗೂ ನಿಗೂಢವಾದ ಅರ್ಥವನ್ನೇ ಉಳಿಸಿಕೊಂಡಿದೆ.

ಧಾರ್ಮಿಕವಾಗಿ ಭಾರತೀಯರನ್ನು ಅಳೆದಾಗ ಎಲ್ಲಿಯೂ ಸಮಗ್ರ ಮತ್ತು ಏಕ ಸಂಸ್ಕೃತಿಯ ಆರಾಧನೆಗಳು ಸಿಗುವುದಿಲ್ಲ. ಜಾತಿಗೊಂದು ಸಮುದಾಯಕ್ಕೊಂದು ಆಚರಣೆ, ನಡವಳಿಕೆಗಳಿವೆ. ತಮ್ಮ ವಂಶಗತ ನಂಬಿಕೆಗಳನ್ನೆ ಧರ್ಮವೆಂದು ನಂಬಿರುವ ಸಾವಿರಾರು ಬುಡಕಟ್ಟುಗಳು ಇಲ್ಲಿವೆ. ಭಾರತದ 1911ನೇ ಜನಗಣತಿ ತನ್ನ ಜನಸಂಖ್ಯೆ ವರ್ಗೀಕರಣಕ್ಕಾಗಿ 10 ಸಮೀಕರಣಗಳನ್ನು ಅಳವಡಿಸಿಕೊಂಡಿತ್ತು. ಈ ಸಮೀಕರಣಗಳನ್ನು ಪ್ರಮುಖವಾಗಿ ಬ್ರಾಹ್ಮಣರೊಂದಿಗೆ ದೇಶದ ಜನಸಂಖ್ಯೆಯನ್ನು ಹೋಲಿಸಿ ಅಭ್ಯಾಸಿಸುವ ಕ್ರಮವಾಗಿತ್ತು. ಹೇಗೆಂದರೆ; 1) ಬ್ರಾಹ್ಮಣರ ಪರಮಾಧಿಕಾರವನ್ನು ತಿರಸ್ಕರಿಸುವವರು. 2) ಬ್ರಾಹ್ಮಣ ಅಥವಾ ಇನ್ನಾವುದೇ ಹಿಂದು ಗುರುಗಳಿಂದ ಮಂತ್ರೋಪದೇಶ ಪಡೆಯದವರು. 3) ವೇದಗಳ ಪರಮಾಧಿಕಾರವನ್ನು ಅಲ್ಲಗಳೆಯುವವರು. 4) ಹಿಂದೂ ದೇವತೆಗಳನ್ನು ಪೂಜಿಸದವರು.5) ಬ್ರಾಹ್ಮಣ ರನ್ನು ಕುಲಪುರೋಹಿತರನ್ನಾಗಿ ಹೊಂದಿರದವರು. 6) ಬ್ರಾಹ್ಮಣ ಪುರೋಹಿತರೇ ಇಲ್ಲದಂತ ಸಮುದಾಯ. 7) ಹಿಂದೂ ದೇವಾಯಗಳಿಗೆ ಪ್ರವೇಶ ನಿರಾಕರಿಸಲ್ಪಟ್ಟವರು. 8) (1) ನೇರ ಸ್ಪರ್ಶದಿಂದ ಅಥವಾ (2) ಸೂಚಿತವಾದಷ್ಟು ಹತ್ತಿರದಿಂದ ಹೊಲಸನ್ನು ಉಂಟು ಮಾಡುವವರು, 9) ಮರಣ ಹೊಂದಿದವರನ್ನು ಹೂಳುವವರು ಮತ್ತು 10) ಗೋಮಾಂಸ ತಿನ್ನುವವರು ಹಾಗೂ ಗೋವನ್ನು ಪೂಜಿಸದವರು ಎಂಬ ವರ್ಗೀಕರಣ ಮಾಡಿತ್ತು. ಈ ಅಂಶಗಳ ಮೇಲೆ ಇಂದಿನ ಜಾತಿ-ಜಾತಿಗಳ ನಡುವೆ ಇರುವ ಅಂತರದಂತೆಯೇ ಈ ತೀರ್ಮಾನಗಳಿವೆ. ಬ್ರಾಹ್ಮಣ ಮತ್ತು ಬ್ರಾಹ್ಮಣೇತರರ ಸೀಳನ್ನು ಗೋಮಾಂಸ ಭಕ್ಷಣೆ, ಪುರೋಹಿತಿಕೆ, ಅಶುದ್ಧತೆ ಹಾಗೂ ಅನೈರ್ಮಲ್ಯದ ವೃತ್ತಿಗಳ ಆಧಾರದ ಮೇಲೆ ಅಂದು ಹಿಂದುತ್ವ ಪ್ರತಿಪಾದಿಸಲಾಗಿದೆ. ಅಂದರೆ ನಿಜವಾದ ಹಿಂದುಗಳೆಂದರೆ, ಬ್ರಾಹ್ಮಣರೆಂಬ ಧ್ವನಿ ಅಡಗಿದೆ. ಇಂದು ಬೇರೆ ಕಾರಣಗಳಿಗಾಗಿ ಹಿಂದೂತ್ವದ ಕಲ್ಪನೆ ವಿಸ್ತಾರಗೊಂಡಿದೆ. ಆಧುನಿಕ ಭಾರತದಲ್ಲಿ ಗೋಮಾಂಸ ಭಕ್ಷಣೆ ಮುಖಾಂತರ ಜನಸಮುದಾಯಗಳಾದ ದಲಿತರು, ಅಲ್ಪಸಂಖ್ಯಾತರಾದ ಮುಸ್ಲಿಂರು ಹಾಗೂ ಕ್ರೈಸ್ತರನ್ನು ಪ್ರತ್ಯೇಕಿಸುವ ಅವೈಜ್ಞಾನಿಕತೆ ಹೀಗೆ ಆರಂಭಗೊಂಡಿತ್ತು.

ಮೂಲ ಪರಿಶಿಷ್ಟ ಜಾತಿ / ಪಂಗಡಗಳು, ಮುಸ್ಲಿಂರು, ಕ್ರೈಸ್ತರು ಹಾಗೂ ಇತರ ಸಣ್ಣಪುಟ್ಟ ಅತಿ ಹಿಂದುಳಿದ ಜಾತಿಗಳೆಲ್ಲವೂ ಸಂಪ್ರದಾಯಿಕವಾಗಿ ಗೋಮಾಂಸ ತಿನ್ನುವವರೆಂದು ತೀರ್ಮಾನಿಸಿದರೂ, ಅವರ ಜನಸಂಖ್ಯೆ ಪ್ರಮಾಣ ಶೇ. 45ರಷ್ಟಾಗುತ್ತದೆ. ಬ್ರಾಹ್ಮಣರ ಸ್ಥಾನಮಾನಗಳಿಗೆ ಹಾತೊರೆದು ಜನಿವಾರ ಧರಿಸಿಯೂ ಮಾಂಸಾಹಾರಿಗಳಾಗಿದ್ದಾರೆ. ಇವರೆಲ್ಲರನ್ನು ಗೋಮಾಂಸ ತಿನ್ನುವವರ ಜೊತೆಗೆ ಸೇರಿಸಿದರೆ ಶೇ. 65ಕ್ಕಿಂತ ಅಧಿಕ ಮಾಂಸಾಹಾರಿ ಗಳಿದ್ದಾರೆಂಬ ಕಲ್ಪನೆಗೆ ಬರಬಹುದು. ಆದರೆ, ಗೋಮಾಂಸವನ್ನು ಸಾಂಪ್ರದಾಯಿಕವಾಗಿ ತಿನ್ನುವವರೆಲ್ಲರೂ ಅಧಿಕವಾಗಿ ದಿನಪೂರ್ತಿ ಅದನ್ನೇ ಸೇವಿಸುತ್ತಾರೆಂದರೂ ನಮ್ಮ ಊಹೆ ತಪ್ಪಾಗುತ್ತದೆ. ಹಾಗೇನಾದರೂ ತಿಂದರೆ ಗೋವು ಸಂತತಿಯನ್ನು ದುರ್ಬೀನು ಹಾಕಿ ನೋಡಿದರೂ ಸಿಗುತ್ತಿರಲಿಲ್ಲ. ಕಾಶ್ಮೀರ ತುಂಬ ಮುಸ್ಲಿಮರಿದ್ದಾರೆ. ಆದರೆ, ಅಲ್ಲಿ ಅವರೆಲ್ಲರೂ ಹೆಚ್ಚಾಗಿ ಮೇಕೆ, ಕುರಿ ಹಾಗೂ ಕೋಳಿ ಮಾಂಸವನ್ನು ಪ್ರೀತಿಸುತ್ತಾರೆ. ಮುಂದುವರಿದ ಹಿಂದುಳಿದ ಜಾತಿಗಳಿಂದ ಮತಾಂತರಗೊಂಡಿರುವ ಉತ್ತಮರಾದ ಮುಸ್ಲಿಂರು ಗೋಮಾಂಸವನ್ನು ಸಾಮಾನ್ಯವಾಗಿ ತಿನ್ನುವುದಿಲ್ಲ. ಈಶಾನ್ಯ ರಾಜ್ಯ ಮತ್ತು ಕಡಲತೀರದ ರಾಜ್ಯಗಳಲ್ಲಿ ಗೋಮಾಂಸ ಭಕ್ಷಣೆ ಸರ್ವೇಸಾಮಾನ್ಯವಾಗಿದೆ.

ದಲಿತರು-ಮುಸ್ಲಿಂರು ಗೋಮಾಂಸ ತಿನ್ನದೆ ಇರುವವರನ್ನು ಇಲ್ಲಿ ಅಶುದ್ಧರೆಂದು ಕರೆಯಲಾಗುತ್ತಿದೆ. ಉದ್ಯೋಗಸ್ಥ ದಲಿತರು ಇಂದು ಸಂಪೂರ್ಣವಾಗಿ ಗೋವಲ್ಲದ ಮಾಂಸಾಹಾರಗಳಿಗೆ ಮೊರೆಹೋಗಿದ್ದಾರೆ. ಕಡಲ ತೀರದಲ್ಲಿರುವ ಬ್ರಾಹ್ಮಣರು ಮತ್ತು ಒಳನಾಡುಗಳಲ್ಲಿರುವ ಬ್ರಾಹ್ಮಣರಲ್ಲಿ ವ್ಯಾಪಕವಾಗಿ ಮೀನು ಸೇವಿಸುವ ಕುಟುಂಬಗಳಿವೆ. ಆದರ ಜೊತೆಗೆ ಕೆಲವು ಕುಟುಂಬಗಳು ಕೋಳಿ ಮೊಟ್ಟೆ ಸೇವಿಸುತ್ತಾರೆ. ನಾವು ಭ್ರೂಣಹತ್ಯೆಯನ್ನು ಮಹಾಪಾಪವೆಂದು ನಂಬಿದ್ದೇವೆ. ಆದರೆ ಭ್ರೂಣಾವಸ್ಥೆಯಲ್ಲಿರುವ ಮೊಟ್ಟೆ ಮಾತ್ರ ಪಾಪವೆನಿಸುತ್ತಿಲ್ಲ. ಮೀನು-ಮೊಟ್ಟೆಗಳೆರಡನ್ನು ಅಶುದ್ಧತೆಯ ಪರಿಧಿಯಿಂದ ದೂರವಿಡಲಾಗಿದೆ. ಭಾರತೀಯ

ಸಮಾಜದಲ್ಲಿ ಹಿಂದೂ ಕಲ್ಪನೆಯಂತೆ ಊಟೋಪಚಾರಗಳಲ್ಲಿರುವ ಭಿನ್ನತೆ ಯಂತೆಯೇ ಅವರ ಜೀವನಕ್ರಮಗಳಿವೆ. ಆದುದ ರಿಂದಲೇ ಅಂಬೇಡ್ಕರಾದಿಯಾಗಿ ಹಲವಾರು ಸಮಾಜ ಶಾಸ್ತ್ರಜ್ಞರು ಗೋಮಾಂಸವನ್ನು ಮಾತ್ರ ಅಶುದ್ಧವೆಂದು ಪರಿಗಣಿಸಿರುವುದನ್ನು ವಿಮರ್ಶಿಸಿ ಕಟುವಾಗಿ ಟೀಕಿಸಿದ್ದಾರೆ. 'ಹಿಂದೂತ್ವ' ಅನ್ನುವುದು ಒಂದು ಸಮಗ್ರ ಸಾಂಕೇತಿಕತೆಯ ಮತವಾಗಿ ಬಳಕೆಗೊಂಡಿಲ್ಲ.

ಗೋವಿಗೆ ಮಾತ್ರ ಬಿಳಿ ಖದ್ದರ್ ಖಾದಿ, ಕೋಣಗಳಿಗೆ ಕಪ್ಪೇಕೆ?

ಈ ದೇಶದ ಮೂಲ ನಿವಾಸಿಗಳಾದವರು ಗೋಮಾಂಸ ತಿಂದಿದ್ದಾರೋ ಇಲ್ಲವೋ ಆದೀಗ ಮುಖ್ಯ ಪ್ರಶ್ನೆಯಲ್ಲ. ಗೋಹತ್ಯೆ ವಿಚಾರದಲ್ಲಿ ಜಗತ್ತಿಗಿರದ ಸಂಕಟ ಭಾರತದಲ್ಲಿ ಮಾತ್ರ ಭುಗಿಲೆದ್ದಿದೆ. ಮಹಾವಿಷ್ಣು ಇಲ್ಲಿ ದಶಾವತಾರ ಪುರುಷ, ತನ್ನ ಮೊದಲ ಅವತಾರದಲ್ಲಿ ಮತ್ಸ್ಯನಾಗಿ, ಎರಡನೆ ಅವತಾರದಲ್ಲಿ ಕೂರ್ಮನಾಗಿ, ಹಾಗೂ ಮೂರನೆ ಅವತಾರವನ್ನು ವರಾಹವತಾರ ಎತ್ತಿದ್ದಾನೆ. ಇದೆಲ್ಲಕ್ಕಿಂತಲೂ ಮುಖ್ಯವಾಗಿ ನರಭಕ್ಷಕ ಉಗ್ರನರಸಿಂಹನ ಅವತಾರವೆತ್ತಿದ್ದಾನೆ. ಅಂದ ಮೇಲೆ ಎಲ್ಲ ವರ್ಗದ ಪ್ರಾಣಿಗಳನ್ನು ಸಮಾನ ದೃಷ್ಟಿಕೋನದಡಿ ನೋಡುವುದು ಈಗ ಆಗಬೇಕಿದೆ. 'ಹೊಲಸು ತಿನ್ನುವವನೆ ಹೊಲೆಯ; ಕೊಲ್ಲುವವನೆ ಮಾದಿಗ' ಎಂಬ ಕವಿವಾಣಿ ಪ್ರಕಾರ ಭಾರತವನ್ನು ಅವಲೋಕಿಸಿದಾಗ ಶುದ್ಧಶಾಖಾಹಾರಿಗಳು ವಿರಳ ಅಲ್ಪಸಂಖ್ಯಾತರಾಗುತ್ತಾರೆ. ಇಲಿ ಆಮೆ ತಿನ್ನುವ ಬುಡಕಟ್ಟಿನಿಂದ ಮನುಷ್ಯರನ್ನು ತಿನ್ನುವ ಅಘೋರಿಗಳ ಪರಂಪರೆ ಇರುವುದನ್ನು ಕಾಣ ಬಹುದಾಗಿದೆ. ಪ್ರತಿವರ್ಷವೂ 8-9 ಮಿಲಿಯನ್ ಟನ್ ಮೀನು ಸೇವಿಸುವವರನ್ನು ಯಾರೊಬ್ಬರೂ ಅಶುದ್ಧ ರೆಂದು ಕರೆಯುತ್ತಿಲ್ಲ. ಹಂದಿ(ವರಾಹ)ಯನ್ನು ಕೆಲವು ಹಿಂದುಳಿದ ಜಾತಿಗಳು ವ್ಯಾಪಕವಾಗಿ ಅನುಭೋಗಿಸು ತ್ತಾರೆ. ದಲಿತರಲ್ಲಿ ಆಯ್ದ ಕೆಲವು ಜಾತಿಗಳು ಇದನ್ನು ಸೇವಿಸುತ್ತಾರೆ. ಅವರಲ್ಲಿ ಅಪ್ಪಿತಪ್ಪಿ ತಿಂದವರು ಶುದ್ಧೀಕರಣ ಮಾಡಿಕೊಂಡು ಮನೆಗೆ ಸೇರಲ್ಪಡುತ್ತಾರೆ. ಹೊಲಸು ಪ್ರಾಣಿ ಎಂದು ನಾಮಾಂಕಿತವಾಗಿರುವ ಹಂದಿ ತಿನ್ನುವವರಿಗೆ ಮಾತ್ರ ಇಲ್ಲಿಯ ತನಕ ಅಶುದ್ಧತೆ ಅಂಟುಕೊಂಡಿಲ್ಲ. ಆದರೆ, ಅಸ್ಪೃಶ್ಯರನ್ನು ಕಂಡರೆ ಮೈಲಿದೂರದಲ್ಲಿ ನಿಂತು ಅವರೂ ಸಹ ಉಸಿರಿಡಿಯುತ್ತಾರೆ. ಅಂದ ಮೇಲೆ ಗೋಮಾಂಸ ತಿನ್ನುವವರು ಮಾತ್ರವೇಕೆ ಅಶುದ್ಧರಾಗುತ್ತಾರೆ?

ಪ್ರೊ. ಡಿ.ಎನ್. ಜ್ಹಾರವರ Holy Cow: Beef Indian Dietary Tradition ಎಂಬ ವೈಜ್ಞಾನಿಕ ಕೃತಿ ಹೊರಬಂದಾಗ ಗೋಪ್ರಿಯರೆಲ್ಲರೂ ಬೀದಿಗಿಳಿದು ಕೂಗಾಡಿದ್ದರು. ಕೊನೆಗೆ ಈ ವಿವಾದ ನ್ಯಾಯಾಲಯದ ಕಟ್ಟೇರಿತ್ತು. ನಮ್ಮ ದೇಶ ಮಿತಿಮೀರಿ ಬೆಳೆಯುತ್ತಿರುವ ಜನಸಂಖ್ಯೆಗೆ ಸಾಂಪ್ರದಾಯಿಕ ಗೋವಿನಿಂದ ಹಾಲುಣಿಸುತ್ತೆವೆಂದು ನಂಬಿದ್ದರೆ, ಅದು ಜೇನಿನಷ್ಟು ದುಬಾರಿ ಆಗಿರುತ್ತಿತ್ತು. ಇಲ್ಲಿ ಹಾಲು ಸಂಪ್ರದಾಯಿಗಳಿಗೆ



ದಲಿತರು- ಅಲ್ಪಸಂಖ್ಯಾತರು ಗೋಮಾಂಸವನ್ನು ತಿನ್ನುತ್ತಿದ್ದರೂ ಅವರಲ್ಲಿ ಅಧಿಕ ಪ್ರಮಾಣದ ಪೋಷಕಾಂಶಗಳ ಕೊರತೆಯಿದೆ. ನಮ್ಮ ದೇಶದ ಅಹಿಂಸಾ ಪ್ರಿಯರಾಗಲಿ, ವಿಷ್ಣು ಪ್ರಿಯರಾಗಲಿ ಎಂದೂ ಮೀನು, ಹಂದಿ ಅಥವಾ ಆಮೆಗಳನ್ನು ತಿನ್ನುವುದರ ಬಗ್ಗೆ ನ್ಯಾಯಾಲಯಗಳಲ್ಲಿ ನಿಷೇಧಕ್ಕೆ ಆಗ್ರಹಿಸಿ ದಾವೆ ಹೂಡಿಲ್ಲ. ಬಹುಷಃ ಅವರಿ ಗಿನ್ನೂ ಈ ಬಗ್ಗೆ ಸರಿಯಾದ ಮಾಹಿತಿ ಸಿಕ್ಕಿಲ್ಲವೇನೋ? ಒಂದು ಪ್ರಾಣಿಗೆ ಶ್ವೇತವನ್ನು ತೋರಿಸುವುದು; ಮತ್ತೊಂದು ಪ್ರಾಣಿಗೆ ಕಪ್ಪು ತೋರಿಸುವುದು ಸಮಾನತೆಯ ದೃಷ್ಟಿಯಲ್ಲಿ ಸಾಧುವಲ್ಲ. ಕೇವಲ ಗೋಹತ್ಯೆ ನಿಂತರೆ ಗಾಂಧೀಜಿ ಬಯಸಿದ ಅಹಿಂಸಾ ನಾಡು ಇದಾಗದು. ಬುದ್ಧಮಯವಾಗಬೇಕಾದರೆ ಸಕಲ ಪ್ರಾಣಿಗಳ ಹತ್ಯೆ ನಿಲ್ಲಬೇಕಿದೆ. ಈ ಮೂಲಕ ಜಗತ್ತಿಗೆ ಭಾರತವೊಂದು ಮಾದರಿ ರಾಷ್ಟ್ರವಾಗುತ್ತದೆ.

ಕಿವಿಗೊಡದೆ ಅಂದು ನಡೆಸಿದ ಮಿಶ್ರತಳಿ ಪ್ರಯೋಗದಿಂದ ಪ್ರತಿಯೊಬ್ಬರು ಇಂದು ತಲಾ 270 ಗ್ರಾಂ ಹಾಲನ್ನು ಕುಡಿಯುವಂತಾಗಿದೆ. ಗೋವುಗಳಿಗಿಂತ ಎಮ್ಮೆಗಳಿಂದ ಹಾಲು ಅಧಿಕವಾಗಿ ಸಿಗುತ್ತಿದ್ದರೂ, ಅವುಗಳಿಗೆ ಯಾವುದೇ ಕಿಮ್ಮತ್ತಿಲ್ಲ. ಬಹುಷಃ ಗೋವು ಪ್ರಿಯರೇನಾದರೂ ಅಂದು ನಮ್ಮ ಗೋವುಗಳಿಗೆ ಮಿಶ್ರತಳಿ ಅಳವಡಿಕೆ ಬೇಡವೆಂದಿದ್ದರೆ, ಅಪೌಷ್ಠಿಕಾಂಶ ಕೊರತೆ ಜನರಲ್ಲಿ ನೂರರಷ್ಟಿರುತ್ತಿತ್ತು. ದಲಿತರು-ಅಲ್ಪಸಂಖ್ಯಾತರು ಗೋಮಾಂಸವನ್ನು ತಿನ್ನುತ್ತಿದ್ದರೂ ಅವರಲ್ಲಿ ಅಧಿಕ ಪ್ರಮಾಣದ ಪೋಷಕಾಂಶಗಳ ಕೊರತೆಯಿದೆ. ನಮ್ಮ ದೇಶದ ಅಹಿಂಸಾ ಪ್ರಿಯರಾಗಲಿ, ವಿಷ್ಣು ಪ್ರಿಯರಾಗಲಿ ಎಂದೂ ಮೀನು, ಹಂದಿ ಅಥವಾ ಆಮೆಗಳನ್ನು ತಿನ್ನುವುದರ ಬಗ್ಗೆ ನ್ಯಾಯಾಲಯಗಳಲ್ಲಿ ನಿಷೇಧಕ್ಕೆ ಆಗ್ರಹಿಸಿ ದಾವೆ ಹೂಡಿಲ್ಲ. ಬಹುಷಃ ಅವರಿ ಗಿನ್ನೂ ಈ ಬಗ್ಗೆ ಸರಿಯಾದ ಮಾಹಿತಿ ಸಿಕ್ಕಿಲ್ಲವೇನೋ? ಒಂದು ಪ್ರಾಣಿಗೆ ಶ್ವೇತವನ್ನು ತೋರಿಸುವುದು; ಮತ್ತೊಂದು ಪ್ರಾಣಿಗೆ ಕಪ್ಪು ತೋರಿಸುವುದು ಸಮಾನತೆಯ ದೃಷ್ಟಿಯಲ್ಲಿ ಸಾಧುವಲ್ಲ. ಕೇವಲ ಗೋಹತ್ಯೆ ನಿಂತರೆ ಗಾಂಧೀಜಿ ಬಯಸಿದ ಅಹಿಂಸಾ ನಾಡು ಇದಾಗದು. ಬುದ್ಧಮಯವಾಗ ಬೇಕಾದರೆ ಸಕಲ ಪ್ರಾಣಿಗಳ ಹತ್ಯೆ ನಿಲ್ಲಬೇಕಿದೆ. ಈ ಮೂಲಕ ಜಗತ್ತಿಗೆ ಭಾರತವೊಂದು ಮಾದರಿ ರಾಷ್ಟ್ರವಾಗುತ್ತದೆ. ನುಡಿದಂತೆ ನಡೆದುಕೊಳ್ಳುತ್ತಿರುವ ದೇಶವೆಂದಾಗುತ್ತದೆ.

ಗೋಹತ್ಯೆ ನಿಷೇಧದಿಂದ ದೇಶದ ಆರ್ಥಿಕ ಅಭಿವೃದ್ಧಿ ವೃದ್ಧಿಸುವುದೇ?

ಈ ದೇಶದಲ್ಲಿರುವ ಶೇ.40ರಷ್ಟು ಕಡುಬಡವರಿಗೆ ಒಪ್ಪೊತ್ತಿನ ಊಟಕ್ಕೂ ಗತಿಯಿಲ್ಲ. ಅಲ್ಪಸ್ವಲ್ಪ ಆದಾಯವನ್ನು ಹೈನುಗಾರಿಕೆಗಳಿಂದ ಬಡಕುಟುಂಬಗಳು ಪಡೆಯುತ್ತಿವೆ. ಗೋಹತ್ಯೆ ನಿಷೇಧದಿಂದ ಸಿಗುವ ಲಾಭಾಂಶಗಳೇನು ಎಂಬ ಪ್ರಶ್ನೆಯಿದೆ? ಡೆನ್ಮಾರ್ಕ್ ಹೈನುಗಾರಿಕೆಯಲ್ಲಿ ಅದ್ಭುತ ಸಾಧನೆ ಮಾಡಿದೆ. ಅಲ್ಲಿಯ ಜನರಿಗೆ ಗೋವುಹತ್ಯೆಯು ಪಾಪವೆಂದು ಪರಿಗಣಿಸಿಲ್ಲ. ಭಾರತದ ದನದ ಮಾಂಸ ಮತ್ತು ಅದರ ಖಾದ್ಯಕ್ಕೆ ಅಂದಿನಿಂದಲೂ ವಿದೇಶಗಳಲ್ಲಿ ಬೇಡಿಕೆಯಿದೆ. ಸ್ವದೇಶಿ ವೈದ್ಯ ಪದ್ಧತಿಕೂಡ ವಾತ ಮತ್ತು ಒಣಕೆಮ್ಮಿಗೆ ಗೋಮಾಂಸ ಮತ್ತು ಅದರ ಕಾಲಿನ ಸೂಪು ಸಿದ್ಧೌಷಧವೆಂದು ಪ್ರತಿಪಾದಿಸಿದೆ. ಕ್ಷಯದಿಂದ ನರಳುವ ರೋಗಿಗಳಿಗೆ ಅಧಿಕ ಪ್ರೊಟೀನ್ ಸಿಗುವ ದನದ ಮಾಂಸ ತಿನ್ನಲು ವೈದ್ಯರು ಸಲಹೆ ನೀಡುತ್ತಾರೆ. ವಿದೇಶಗಳಿಗೆ ರಫ್ತಾಗುವ ಮಾಂಸಕ್ಕಾಗಿ ನಮ್ಮೂರ ಗೋಮಾಳಗಳಲ್ಲಿ ಬೆಳೆದವನ್ನು ಬಳಸುವುದಿಲ್ಲ. ವೈದ್ಯಕೀಯ ಮುನ್ನೆಚ್ಚರಿಕೆ ಯಿಂದ ಆಧುನಿಕ ಫಾರಂಗಳಲ್ಲಿ ಸಾಕಿದ ಎಳೆ ವಯಸ್ಸಿನ ದನ ಮತ್ತು ಎಮ್ಮೆಗಳನ್ನು ಕತ್ತರಿಸಿ, ಸಂಸ್ಕರಿಸಿ ಮಾರಾಟ ಮಾಡಲಾಗುತ್ತಿದೆ. 1990ರಿಂದೀಚೆಗೆ ಭಾರತದಲ್ಲಿ ನಡೆದಿರುವ ಅಹಿತಕರ ಬೆಳವಣಿಗೆ ಯಿಂದಾಗಿ, ಸಂಪ್ರದಾಯಿಕವಾಗಿ ಮಾಂಸವನ್ನು ಖರೀದಿಸುತ್ತಿದ್ದ ರಾಷ್ಟ್ರಗಳು ಅಭಿವೃದ್ಧಿ ಹೊಂದಿರುವ ದೇಶಗಳಿಂದ ತಮ್ಮ ಬೇಡಿಕೆಗಳನ್ನು ಪೂರೈಸಿಕೊಳ್ಳುತ್ತಿವೆ. ಅದರಲ್ಲೂ ಜಾಗತೀಕರಣದ ಸುಂಟರಗಾಳಿಗೆ ಈ ಉದ್ದಿಮೆ ಸಿಕ್ಕಿ ನಲುಗುತ್ತಿದೆ. ಭಾರತದಲ್ಲಿ ಸೃಷ್ಟಿಯಾಗಿರುವ ಗೋಹತ್ಯೆ ಗಲಾಟೆಯಿಂದ ವಿದೇಶಿ ವಹಿವಾಟುಗಳ ಮೇಲೆ ನೇರ ಪರಿಣಾಮ ಬೀರಿದೆ. ನಾವು ಆಮದು ಮಾಡಿಕೊಳ್ಳುತ್ತಿರುವ ಮಾಂಸಮುದ್ದಿಗಳೆಲ್ಲವೂ ಪಂಚತಾರ ಹೋಟೆಲುಗಳಿಗೆ ಪೂರೈಸುವುದಕ್ಕಾಗಿ, ಗರೀಬ ಮುಸ್ಲಿಮನಾಗಲಿ, ದಲಿತನಾಗಲಿ ಇಲ್ಲಿ ಬೆಂದ ದನದ ಮಾಂಸ ತಿನ್ನುವಷ್ಟು ಅದೃಷ್ಟಶಾಲಿಗಳೇನಲ್ಲಾ.

ಈಗಾಗಲೇ ಸುಪ್ರೀಂಕೋರ್ಟು ನೀಡಿರುವ ವ್ಯತಿರಿಕ್ತ ತೀರ್ಪಿನಿಂದ ದೇಶಾದ್ಯಂತ ಸಣ್ಣ ಮತ್ತು ಮಧ್ಯಮ ಚರ್ಮ ಕೈಗಾರಿಕೆಗಳು ಮುಚ್ಚಿಹೋಗಿವೆ. ಅವುಗಳನ್ನು

ನಂಬಿದ್ದ ಲಕ್ಷೋಪಲಕ್ಷ ಕಾರ್ಮಿಕರು ಬೀದಿ ಪಾಲಾಗಿದ್ದಾರೆ. ಒಂದು ವೇಳೆ ಸಂಪೂರ್ಣ ಗೋಹತ್ಯೆ ನಿಷೇಧವಾದರೆ, ಈಗ ದುಡಿಯುತ್ತಿರುವ ದಲಿತ-ಹಿಂದುಳಿದ-ಅಲ್ಪಸಂಖ್ಯಾತರ 20 ಲಕ್ಷಕ್ಕೂ ಅಧಿಕ ಕಾರ್ಮಿಕರು ನಿರುದ್ಯೋಗಿಗಳಾಗುವರು. ಇಷ್ಟೊಂದು ಜನರಿಗೆ ಜೀವನಾಧಾರಗಳನ್ನು ಮತ್ತು ಪುನರ್ವಸತಿ ಕಲ್ಪಿಸುವಷ್ಟು ನಮ್ಮ ಹಿಂದೂ ದೇವಸ್ಥಾನಗಳು ಬೆಳೆದಿಲ್ಲ. ಕಳೆದ ವರ್ಷ ಇಲ್ಲಿಂದ 8780ಕೋಟಿ ರೂಪಾಯಿಗಳ ಚರ್ಮ ರಫ್ತಾಗಿದೆ, ಮುಂದೆ ಅದಕ್ಕೂ ಕಲ್ಲು ಬೀಳುವುದು. ದೇಶಿಯವಾಗಿ ಉತ್ಪಾದಿಸುವ ಚರ್ಮ ಕೈಗಾರಿಕೆಗೆ ಶೇ. 60ರಷ್ಟು ಕಚ್ಚಾ ಚರ್ಮ ಕಸಾಯಿಖಾನೆಗಳಿಂದ ದೊರತರೆ, ಶೇ. 40ರಷ್ಟು ಸತ್ತ ಪ್ರಾಣಿಗಳಿಂದ ದೊರೆಯುತ್ತದೆ. ಈಗಾಗಲೆ ಜಾಗತೀಕರಣದ ಮಾಯಮೃಗ ರೈತರ ಆತ್ಮಹತ್ಯೆಗಳಿಗೆ ಪರಿಹಾರ ನೀಡದೆ ದಾರಿಕಿತ್ತಿದೆ. ಖಾಸಗೀಕರಣದ ಕೈಗಾರಿಕೀಕರಣದಿಂದ ಧರೆಗೆ ಚಿನ್ನದ ಗಣಿಯೇ ಬೀಳುವುದೆಂಬ ಭ್ರಮೆ ಹುಸಿಯಾಗಿದೆ. ಗೋಹತ್ಯೆ ನಿಷೇಧದಿಂದ ಉದ್ಯೋಗ ವಂಚಿತರಾದವರಿಗೆ ಕೇಂದ್ರ ಅಥವಾ ರಾಜ್ಯ ಸರ್ಕಾರಗಳು ಯಾವ ಯಾವ ವಲಯಗಳಲ್ಲಿ ಪರ್ಯಾಯ ವ್ಯವಸ್ಥೆ ಕಲ್ಪಿಸುತ್ತದೆ? ಗೋಹತ್ಯೆ ನಿಷೇಧದಿಂದ ಶೇ. 40ರಷ್ಟು ದೇಶಿಯ ಚರ್ಮ ಉತ್ಪಾದನೆಯಲ್ಲಿ ಕುಸಿತವಾಗುವುದು. ಈ ಕೊರತೆಯನ್ನು ಅಧಿಕ ಬೆಲೆಕೊಟ್ಟು ವಿದೇಶಿ ಮಾರುಕಟ್ಟೆಗಳಿಂದ ಖರೀದಿಸಬೇಕು. ಇಲ್ಲವೆ ಕೃತಕ ಫೋಮ್ ಉತ್ಪಾದನೆಗೆ ಮುಂದಾಗಬೇಕು. ಇದರಿಂದ ಪರಿಸರದ ಮೇಲೆ ಇನ್ನಷ್ಟು ದುಸ್ಪರಿಣಾಮ ಬೀರುತ್ತದೆ. ಉಣ್ಣುವ ತಟ್ಟೆ ಕಳೆದುಕೊಂಡ ಬಡವಿ, ಕುಡಿಯವ ಚಂಬು ನೀಡಿ ಪಂಚಾಂಗ ಶಾಸ್ತ್ರ ಕೇಳಿದಂತಾಗುತ್ತದೆ ಇಲ್ಲಿನ ಆರ್ಥಿಕತೆ.

ಜಾನುವಾರಗಳ ಒಡೆತನದಲ್ಲಿ ಎಪ್ಪತ್ತರಷ್ಟು ಹಿಂದುಳಿದವರಲ್ಲಿದ್ದರೆ, ಇಪ್ಪತ್ತರಷ್ಟು ದಲಿತ- ಅಲ್ಪಸಂಖ್ಯಾತರ ವಶದಲ್ಲಿವೆ. ಇನ್ನೂಳಿದವು ಸವರ್ಣೀಯರ ಕೈಲ್ಲಿವೆ. ಸವರ್ಣೀಯರು ಗ್ರಾಮಾಂತರ ಪ್ರದೇಶಗಳಲ್ಲಿ ಸತ್ತ ದನಗಳನ್ನು ದಲಿತರಿಗೆ ಪುಕ್ಕಟೆಯಾಗಿ ನೀಡದೆ, ಅದಕ್ಕೆ ಪ್ರತಿಯಾಗಿ ಅದರಿಂದ ಮಾಡಿದ ಪದಾರ್ಥಗಳನ್ನು ಬೇಡುತ್ತಾರೆ. ಭಡ ಹಿಂದುಳಿದವರು ದನ-ಕರುಗಳನ್ನು ಮಾರಾಟ ಮಾಡುವಾಗ, 'ನಾವು ಅವುಗಳನ್ನು ಕಟುಕರ ಬಾಯಿಗೆ ಒಪ್ಪಿಸುತ್ತಿದ್ದೇವೆಂಬ' ಪಾಪಪ್ರಜ್ಞೆ ಅವರಿಗೆ ಕಾಡುವುದಿಲ್ಲ. ಸಂವಿಧಾನ ಸಂಪೂರ್ಣವಾಗಿ ಜಾನುವಾರುಗಳನ್ನು ಸಂರಕ್ಷಿಸಲು ಸೂಚಿಸಿದೆ. ಇಂದು ಅಸ್ಪೃಶ್ಯತೆಯನ್ನು ಅಧಿಕೃತವಾಗಿ ನಿಷೇಧಿಸಿದರೂ, ಅದರ ಆಚರಣೆಯೇನು ನಿಂತಿಲ್ಲ. ಯಾವುದೇ ಅಡೆ-ತಡೆಗಳಿಲ್ಲದೆ ಆಚರಣೆಯಾಗುತ್ತಿದೆ. ಅದರ ಕಾವು ಬಿಸಿಯೂಟಕ್ಕೂ ತಟ್ಟಿದೆ ಎಂದರೆ ಈ ದೇಶದಲ್ಲಿರುವ ಸಾಮಾಜಿಕ ಸ್ಥಿತಿಯನ್ನು ಊಹಿಸುವುದೂ ಬಲು ಕಷ್ಟ ದಲಿತ, ಮುಸ್ಲಿಂ ಅಥವಾ ಕ್ರೈಸ್ತರನ್ನು ಮಾತ್ರ ಗೋವು ಪ್ರಿಯರು ಹರಕೆ ಕೂಸುಗಳನ್ನಾಗಿಸುವುದು ಸಮರ್ಥನೀಯವಲ್ಲ, ಆದರೆ ಗೋವಿಗೆ ಮಾತ್ರ ಖದ್ದರೆ ಖಾದಿ ತೊಡಿಸುವುದರಿಂದ ಇತರ ಪ್ರಾಣಿಗಳಿಗೆ ಸಲ್ಲುವ ನ್ಯಾಯವಂತು ಅಲ್ಲವೇ ಅಲ್ಲ. ಒಂದು ವೇಳೆ ಗೋಹತ್ಯೆ ನಿಷೇಧದಿಂದ ದಲಿತರಿಗೆ ತಗುಲಿರುವ ಸಾಮಾಜಿಕ ಕಳಂಕ ಹೋಗುವುದಾದರೆ ವಿಶ್ವವೆ ಇಲ್ಲಿನವರಿಗೆ ಅಭಾರಿಯಾಗುತ್ತದೆ. ಗೋಹತ್ಯೆ ನಿಷೇಧದಿಂದ ಸ್ವಾರ್ಥ ಈಡೇರಿದ ಮೇಲೆ ಇಲ್ಲಿ ಯಾವುದೇ ಸಂಶಯಗಳಿಲ್ಲದೆ ಯಥಾಸ್ಥಿತಿಯ ಸಾಮಾಜಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಪರಿಸರ ಮುಂದುವರಿಯುತ್ತದೆ.

ಇಂದು ಅಸ್ಪೃಶ್ಯತೆಯನ್ನು ಅಧಿಕೃತವಾಗಿ ನಿಷೇಧಿಸಿದ್ದರೂ, ಅದರ ಆಚರಣೆಯೇನು ನಿಂತಿಲ್ಲ. ಯಾವುದೇ ಅಡೆ-ತಡೆಗಳಿಲ್ಲದೆ ಆಚರಣೆಯಾಗುತ್ತಿದೆ. ಅದರ ಕಾವು ಬಿಸಿಯೂಟಕ್ಕೂ ತಟ್ಟಿದೆ ಎಂದರೆ ಈ ದೇಶದಲ್ಲಿರುವ ಸಾಮಾಜಿಕ ಸ್ಥಿತಿಯನ್ನು ಊಹಿಸುವುದೂ ಬಲು ಕಷ್ಟ, ದಲಿತ, ಮುಸ್ಲಿಂ ಅಥವಾ ಕ್ರೈಸ್ತರನ್ನು ಮಾತ್ರ ಗೋವು ಪ್ರಿಯರು ಹರಕೆ ಕೂಸುಗಳನ್ನಾಗಿಸುವುದು ಸಮರ್ಥನೀಯವಲ್ಲ, ಆದರೆ ಗೋವಿಗೆ ಮಾತ್ರ ಖದ್ದರೆ ಖಾದಿ ತೊಡಿಸುವುದರಿಂದ ಇತರ ಪ್ರಾಣಿಗಳಿಗೆ ಸಲ್ಲುವ ನ್ಯಾಯವಂತು ಅಲ್ಲವೇ ಅಲ್ಲ. ಒಂದು ವೇಳೆ ಗೋಹತ್ಯೆ ನಿಷೇಧದಿಂದ ದಲಿತರಿಗೆ ತಗುಲಿರುವ ಸಾಮಾಜಿಕ ಕಳಂಕ ಹೋಗುವುದಾದರೆ ವಿಶ್ವವೆ ಇಲ್ಲಿನವರಿಗೆ ಅಭಾರಿಯಾಗುತ್ತದೆ. ಗೋಹತ್ಯೆ ನಿಷೇಧದಿಂದ ಸ್ವಾರ್ಥ ಈಡೇರಿದ ಮೇಲೆ ಇಲ್ಲಿ ಯಾವುದೇ ಸಂಶಯಗಳಿಲ್ಲದೆ ಯಥಾಸ್ಥಿತಿಯ ಸಾಮಾಜಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಪರಿಸರ ಮುಂದುವರಿಯುತ್ತದೆ.

ಹಿಂದೂ ಎನಿಸಿಕೊಂಡವರು ಮಾನಸಿಕವಾಗಿ ಪರಿಶುದ್ಧರಾಗಬೇಕಿದೆ?

ಗೋಹತ್ಯೆ ಮಾಡಿ ಪಾಪ ಸಂಪಾದಿಸುವವರಿಗಿಂತ, ಅಮಾನವೀಯ ಕೃತ್ಯಗಳಲ್ಲಿ ತೊಡಗಿ ಇಲ್ಲಿನ ಮಾನವರು ಮಹಾ ಪಾಪಿಗಳಾಗುತ್ತಿದ್ದಾರೆ. ನಿತ್ಯವೂ ಇಲ್ಲಿನ ಸ್ತ್ರೀಯರ ಶೀಲಗಳು ಹರಣಗೊಳ್ಳುತ್ತಿದೆ. ಸ್ತ್ರೀಯರನ್ನು ವಿವಿಧ ದೇವತೆಗಳಿಗೆ ಹೋಲಿಸಿ ಕೊಂಡಾಡುವ ಮನಸ್ಸುಗಳೆಲ್ಲವೂ ನಿತ್ಯ ಅವರನ್ನು ಶೋಷಣೆಗೈದು ಬದುಕುತ್ತಿದ್ದಾರೆ. ವರದಕ್ಷಿಣೆಯಂತಹ ಪಿಡುಗಿಗೆ ಮುಗ್ಧ ಸ್ತ್ರೀಯರು ಬಲಿಯಾಗುತ್ತಿದ್ದಾರೆ. ಈ ಬಗ್ಗೆ ಕಾನೂನುಗಳಿದ್ದರೂ ಜನರಲ್ಲಿ ಭೀತಿಯಿಲ್ಲ. ಪಾಪ, ಕರ್ಮಗಳನ್ನು ಹೇಳುತ್ತಾರೆಯೇ ವಿನಃ ಆಚರಣೆಗಳಲ್ಲಿ ತೋರಿಸುವುದಿಲ್ಲ. ಶೈವ ಸ್ವರೂಪದ ಪಾರ್ವತಿಯನ್ನು ಇಲ್ಲಿ ಹತ್ತಾರು ರೂಪಗಳಲ್ಲಿ ಪೂಜಿಸುವ ಸಮುದಾಯಗಳಿವೆ. ಈ ದೇವತೆಗೆ ಬ್ರಾಹ್ಮಣರ ಮನೆಯಲ್ಲಿ ತುಪ್ಪದ ದೀಪ ಹಚ್ಚಿದರೆ, ಹಿಂದುಳಿದ-ದಲಿತರ ಮನೆಗಳಲ್ಲಿ ಬಿಸಿ ರಕ್ತದ ನೈವೇದ್ಯ ಸಿಗುತ್ತದೆ. ಸವರ್ಣೀಯರ ಮನೆಗಳಲ್ಲಿ ಏನಾದರೂ ತೊಂದರೆಯಾದಲ್ಲಿ ಹಟ್ಟಿ ದೇವತೆಗಳಿಗೆ ಹರಕೆ ಕಟ್ಟಿಕೊಳ್ಳುತ್ತಾರೆ. ಅದರ ಪರಿಹಾರಕ್ಕೊಂದು ಕೋಣನನ್ನು ದಲಿತರ ಕೈಗಿಟ್ಟು ಅರ್ಪಿಸಲು ಕೋರುತ್ತಾರೆ. ಇಂತಹ ಬಲಿಗಳನ್ನು ಮೂಗು ಮುಚ್ಚಿ ಥ್ಥೂ...ಚ್ಚಿ... ಅನ್ನುವ ಸವರ್ಣೀಯರಾರು ಮಾನಸಿಕವಾಗಿ ಪ್ರಾಣಿಹತ್ಯೆ ಬಗ್ಗೆ ಸದೃಢ ಮನಸ್ಸನ್ನು ಹೊಂದಿಲ್ಲ. ಭಾರತದ ಸಾಮಾಜಿಕ ಋಣ ಭಾರದಲ್ಲಿ ಶಿಕ್ಷಣ ಪಡೆದ ಮೇಲ್ಜಾತಿಯ ಜನರೆಲ್ಲರೂ ಗೋವುಗಳ ಬಗ್ಗೆ ಪ್ರೀತಿ ಹೊಂದಿರದ ಅಮೇರಿಕಾ, ಇಂಗ್ಲೆಂಡ್, ಇತ್ಯಾದಿ ದೇಶಗಳಿಗೆ ವಲಸೆ ಹೋಗುತ್ತಿದ್ದಾರೆ. ಅಲ್ಲಿನ ಗಾಳಿಮಾತ್ರ ಅವರಿಗೆ ಅಶುದ್ದವಾಗಿಲ್ಲ, ಅಲ್ಲಿನ ಸಂಪ್ರದಾಯಗಳ ಬಗ್ಗೆ ಇಲ್ಲಿಗೆ ಬಂದಿಳಿದಾಗ ದಿನಗಟ್ಟಲೆ ರೀಲು ಬಿಡುತ್ತಾರೆ. ಇಂತಹ ದುರಂತಗಳು ನಮ್ಮಲ್ಲಿ ಸಾವಿರಾರಿವೆ.

ಈ ದೇಶದಲ್ಲಿರುವ ಪೈಶಾಚಿಕ ನಡವಳಿಕೆಗಳನ್ನು ಪಟ್ಟಿಮಾಡುತ್ತಾ ಹೋದರೆ, ನಮಗಿನ್ನೂ ಮಾನವೀಯತೆಯ ಪಾಠಗಳ ಮೊದಲ ವರ್ಣಗಳೆ ಪರಿಚಯವಾಗಿಲ್ಲವೆಂಬ ಅಂಶ ಎದ್ದು ಕಾಣುತ್ತದೆ. ಆದರೆ, ದಲಿತರು, ಅಲ್ಪಸಂಖ್ಯಾತರು ಅಥವಾ ಹಿಂದುಳಿದವರಾರೂ ಪರಿವರ್ತನೆ ಬೇಡವೆನ್ನುವುದಿಲ್ಲ. ಕೋಣಗಳ ಬಗ್ಗೆ ಸಹಾನುಭೂತಿ ಹೊಂದಿರದ ಗೋವುಪ್ರಿಯರ ಬಗ್ಗೆ ದೇಶಾದ್ಯಾಂತ ಅವರಿಂದ ಸಂಶಯ ವ್ಯಕ್ತವಾಗುತ್ತದೆ. ಪದೇ ಪದೇ ಅಧಿಕಾರದ ಲಾಂಗ್‌ಜಂಪ್‌ಗಾಗಿ ಗೋವಿಗೆ ಖದ್ದರ್ ತೊಡಿಸಿ, ಕೋಣಗಳಿಗೆ ಕಪ್ಪು ತೊಡಿದರೆ ಅದೊಂದು ಸಮಂಜಸ ಸಾಮಾಜಿಕ ನ್ಯಾಯವಾಗುವುದಿಲ್ಲ. ಈ ದೇಶದ ಜನರ ರಕ್ತದಲ್ಲಿರುವ ಬ್ರಾಹ್ಮಣಿಕೆ ಹೋಗಿ, ಅಪಮಾನಿತರಾಗಿರುವ ಮಾನವರೊಂದಿಗೆ ಎಲ್ಲ ಪ್ರಬೇಧದ ಸಕಲ ಪ್ರಾಣಿಗಳನ್ನು ಸಂಪ್ರೀತಿಸುವುದನ್ನು ಗೋವು ಪ್ರಿಯರು ಆರಂಭಿಸಬೇಕಿದೆ. ಅವಾಗ ಪಾಪಿ ಮಾನವರಿಂದ ಬದುಕಿದ್ದೇವೆಂದು ಸಕಲ ಪ್ರಾಣಿಗಳೆಲ್ಲವೂ ಇವರಿಗೆ ಕೃತಜ್ಞಾತಾಪೂರ್ವಕವಾಗಿರುತ್ತವೆ. ಅಧಿಕಾರ ಸಿಗುವ ತನಕ ರಾಮಾಕ್ಷರ ಬೋಧಿಸಿ, ತದನಂತರ ಮಾರ್ಜಾಲ ನ್ಯಾಯದ ಯಥಾಸ್ಥಿತಿಯ ಬಾಳ್ವೆಗೆ ಹೊರಟವರನ್ನು ಇತಿಹಾಸವಂತು ಕ್ಷಮಿಸಲಾರದು. ●

ದುರ್ಬಲ ರೋಗಿಗಳ ಧರ್ಮದ ಬಡಬಡಿಕೆ

(ಹಿಂದಿನ ಸಂಚಿಕೆಯಿಂದ)

ಈ ದೇಶದಲ್ಲಿ ಈಗ ಯಾರು 'ಧರ್ಮ', ಧರ್ಮ' ಎನ್ನುತ್ತಿದ್ದಾರೋ ಅವರಲ್ಲಿ ಅನೇಕರು ದುರ್ಬಲರಾದ ರೋಗಿಗಳು, ಹುಳುಕು ಮೆದುಳಿನವರು. ಅಥವಾ ವಿಚಾರಶೂನ್ಯರಾದ ಹುಂಬರು. ಈಗ ಮಹಾ ರಜೋಗುಣವು ಉದ್ದೀಪ್ತವಾಗದ ಹೊರತು ನಿಮಗೆ ಇಹವೂ ಇಲ್ಲ, ಪರವೂ ಇಲ್ಲ, ಇದರ ಪರಿಣಾಮ ಇಹಜೀವನದಲ್ಲಿ ದಾಸತ್ವ, ಪರಲೋಕದಲ್ಲಿ ನರಕ.

ಟೀಕೆಗಳಿಗೆ ಗಮನಕೊಡದೆ ನಿನಗಿಷ್ಟ ಬಂದಷ್ಟು ಮೀನು ತೆಗೆದುಕೊ. ದೇಶವೆಲ್ಲಾ ಒಂದೇ ತರಕಾರಿಯಲ್ಲಿ ಜೀವಿಸುವ, ಅಜೀರ್ಣದಿಂದ ನರಳುವ ಬಾಬಾಜಿಗಳಿಂದ ತುಂಬಿಹೋಗಿದೆ. ಸತ್ವಗುಣದ ಚಿಹ್ನೆಯೆ ಇಲ್ಲ, ಬರೇ ತಮಸ್ಸು ಮೃತ್ಯುವಿನ ಛಾಯೆ. ನಗುಮುಖ, ಅಭಯೋತ್ಸಾಹ, ತೃಪ್ತಿ ಉತ್ಕಟ ಚಟುವಟಿಕೆ-ಇವೆಲ್ಲಾ ಸತ್ವಗುಣದ ಪರಿಣಾಮ. ಸೋಮಾರಿತನ, ಆಲಸ್ಯ, ಉತ್ಕಟ, ಮೋಹ, ನಿದ್ರೆ ಇವೆಲ್ಲಾ ತಾಮಸ ಚಿಹ್ನೆ...ಈಗ ರಾಜಸ ಸ್ವಭಾವ ಬಹಳ ಬೇಕಾಗಿದೆ. ನೀನು ಸತ್ವಗುಣಗಳೆಂದು ತಿಳಿದಿರುವವವರಲ್ಲಿ ಶೇಕಡಾ 90 ಮಂದಿ ಘೋರ ತಾಮಸದಿಂದ ಆವೃತರಾಗಿದ್ದಾರೆ! ತೀವ್ರವಾದ ರಾಜಸಿಕ ಶಕ್ತಿಯ ಉದ್ದೀಪನವಾಗಬೇಕು. ಇಡೀ ದೇಶವೆಲ್ಲಾ ತಮೋಗುಣದಿಂದ ಆಚ್ಛಾದಿತವಾಗಿದೆ. ದೇಶದಾದ್ಯಂತ ಜನರಿಗೆಲ್ಲಾ ಆಹಾರ, ಬಟ್ಟೆ ಬೇಕು, ದೇಶ ಜಾಗ್ರತಗೊಳ್ಳಬೇಕು. ಚಟುವಟಿಕೆಯಿಂದ ಕೆಲಸ ಮಾಡುವಂತೆ ಪ್ರೇರೇಪಿಸಬೇಕು. ಇಲ್ಲದಿದ್ದಲ್ಲಿ ಅವರು ಮತ್ತಷ್ಟು ಜಡರಾಗಿ ಮರ ಕಲ್ಲುಗಳಾಗುತ್ತಾರೆ. ಆದ್ದರಿಂದಲೇ ಹೆಚ್ಚು ಮಾಂಸ, ಮೀನು ತಿನ್ನಬೇಕೆಂದು ನಾನು ಹೇಳುವುದು.

ಪ್ರಪಂಚವೆಲ್ಲಾ ಸಂಚರಿಸಿ ಬಂದ ಮೇಲೆ ಇತರ ದೇಶಗಳೊಡನೆ ಹೋಲಿಸಿ ನೋಡಿದರೆ ನಮ್ಮ ದೇಶೀಯರು ಸಂಪೂರ್ಣ ತಾಮಸದಲ್ಲಿ ಮುಳುಗಿರುವುದನ್ನು ನೋಡಿದೆ. ಹೊರಗಡೆ ನೋಡಿದರೆ ತೋರಿಕೆಗೆ ಸಾತ್ವಿಕ ಸ್ವಭಾವವಿರುವಂತೆ ತೋರುವುದು. ಆದರೆ ಒಳಗಡೆ ಸಂಪೂರ್ಣ ಕಲ್ಲುಮರಗಳಂತೆ ಜಡರಾಗಿರುವರು .. ದೇಶದಲ್ಲಿ ಜನರ ರಕ್ತ ಅವರ ಎದೆಯಲ್ಲೇ ಹೆಪ್ಪುಗಟ್ಟಿ ರಕ್ತನಾಳಗಳಲ್ಲಿ ಹರಿಯಲಾರದೋ ಎಂಬಂತೆ ಪಾರ್ಶ್ವವಾಯು ಬಂದು ನಿಸ್ತೇಜವಾಗಿದೆಯೋ ಎಂಬಂತಿದೆ. ಆದ್ದರಿಂದ ನನ್ನ ಉದ್ದೇಶವೆಂದರೆ ಮೊದಲು ಜನರ ರಾಜಸ ಸ್ವಭಾವವನ್ನು ವೃದ್ಧಿಗೊಳಿಸಿ ಉತ್ಸಾಹಪಟುಗಳಾಗಿ ಜೀವಿಸಲು ಅರ್ಹರಾಗುವಂತೆ ಮಾಡಬೇಕು. ದೇಹದಲ್ಲಿ ಶಕ್ತಿ ಇಲ್ಲದೆ, ಎದೆಯಲ್ಲಿ ಉತ್ಸಾಹವಿಲ್ಲದೆ, ಮೆದುಳಿನಲ್ಲಿ ಸ್ವತಂತ್ರ ಆಲೋಚನೆ ಇಲ್ಲದೆ ಅವರೇನು ಮಾಡಬಲ್ಲರು? ಕೇವಲ ಜಡತ್ವದ ಮುದ್ದೆಗಳು!!

ಮಹಾ ರಜೋಗುಣ ಸಂಪನ್ನರಾದ ಅವರು (ಪಾಶ್ಚಾತ್ಯರು) ಈಗ ಭೋಗದ ಕೊನೆಯ ಅಂತಸ್ತಿಗೆ

ನನ್ನ ಗುರುಗಳು (ಶ್ರೀರಾಮಕೃಷ್ಣ ಪರಮಹಂಸರು) ಶಾಖಾಹಾರಿಗಳಾಗಿದ್ದರು. ಆದರೆ ಮಹಾ ಕಾಳಿಗೆ ನೈವೇದ್ಯ ಮಾಡಿದ ಮಾಂಸವನ್ನು ಕೊಟ್ಟರೆ ಅದನ್ನು ಶಿರಕ್ಕೆ ತಾಗಿಸುತ್ತಿದ್ದರು. ಪ್ರಾಣಿಗಳನ್ನು ಕೊಲ್ಲುವುದು ನಿಸ್ಸಂದೇಹವಾಗಿ ಕೆಟ್ಟದ್ದು. ಆದರೆ ರಸಾಯನಶಾಸ್ತ್ರದ ಅಭಿವೃದ್ಧಿಯೊಂದಿಗೆ ಎಲ್ಲಿಯವರೆವಿಗೆ ಸಸ್ಯಾಹಾರವನ್ನು ಮನುಷ್ಯನ ಶರೀರಕ್ಕೆ ಒಗ್ಗುವಂತೆ ಮಾಡಿಲ್ಲವೋ ಅಲ್ಲಿಯವರೆವಿಗೂ ಮಾಂಸವನ್ನು ತಿನ್ನದೆ ವಿಧಿ ಇಲ್ಲ, ಈಗಿನ ವಾತಾವರಣಕ್ಕೆ ಸರಿಯಾಗಿ ಎಲ್ಲಿಯವರೆವಿಗೂ ಮನುಷ್ಯ ರಾಜಸಿಕ (ಚಟುವಟಿಕೆಯ) ಜೀವನವನ್ನು ನಡೆಸಬೇಕೋ, ಅಲ್ಲಿಯವರೆವಿಗೂ ಮಾಂಸಾಹಾರದ ಮೂಲಕವಲ್ಲದೆ ಬೇರೆ ದಾರಿಯಿಲ್ಲ.

○ ಜ. ಹೊ. ನಾರಾಯಣಸ್ವಾಮಿ

ಹತ್ತಿಬಿಟ್ಟಿದ್ದಾರೆ. ಅವರಿಗೇನು? ಯೋಗ ಪ್ರಾಪ್ತಿಯಾಗದೆ ಹೊಟ್ಟೆಯ ಚಾಪಲ್ಯವಿರುವ ನಿಮಗೆ ಆಗುವುದೆಂದು ಭಾವಿಸಿದಿರಾ...ಅಲ್ಲದೆ ಅವರ ಭೋಗದಲ್ಲಿರುವುದೇನು? ಜೌಗು ನೆಲದ ಮನೆಗಳಲ್ಲಿ ಚಿಂದಿಗಳ ಮೇಲೆ ಮಲಗಿಕೊಂಡು ವರ್ಷವರ್ಷವೂ ಹಂದಿಗಳ ಹಾಗೆ ವಂಶವೃದ್ಧಿ ಮಾಡುವುದಲ್ಲ! ಹೊಟ್ಟೆಗಿಲ್ಲದೆ ಸಾಯುತ್ತಿರುವ ತಿರುಕರನ್ನೂ ಗುಲಾಮರನ್ನೂ ಪಡೆಯುವುದಲ್ಲ, ಅದಕ್ಕೆ ಈಗ ಜನರಲ್ಲಿ ರಜೋಗುಣವನ್ನು ಉದ್ದೀಪನಗೊಳಿಸಿ ಕರ್ಮಪ್ರಾಣರನ್ನಾಗಿ ಮಾಡಬೇಕಾಗಿದೆ.

ನಮ್ಮ ದೇಶೀಯರಿಗೆ ಸತ್ಯವಾದ ಧರ್ಮವನ್ನು ಅವಲಂಬಿಸಿ ಅದನ್ನು ಸಾಧನೆ ಮಾಡುವಷ್ಟು ಶಕ್ತಿಯಾದರೂ ಉಳಿದಿರುವುದೇನು? ತಾವು ಸಾತ್ವಿಕರೆಂದು ತಮ್ಮಲ್ಲಿ ಹೆಮ್ಮೆ ಪಡುವುದೊಂದೇ ಅವರಿಗಿರುವುದು..ಯಾವ ಮನುಷ್ಯ ಕೊಂಚವೂ ದೇಹ ಶ್ರಮ ಪಡದೆ ಕೇವಲ ಹರಿನಾಮವನ್ನು ಜಪಿಸುತ್ತಾ ಕೊಠಡಿಯ ಬಾಗಿಲನ್ನು ಮುಚ್ಚಿಕೊಂಡು ಕುಳಿತಿರುವನೋ, ಯಾರು ಸ್ವತಃ ತನ್ನ ಕಣ್ಣೆದುರೇ ಇತರರಿಗಾಗುತ್ತಿರುವ ಅನ್ಯಾಯ ಅತ್ಯಾಚಾರಗಳನ್ನು ನೋಡಿಯೂ ಮೌನವಾಗಿ ಉದಾಸೀನದಿಂದ ಇರುವನೋ ಅಂತಹ ಮನುಷ್ಯನಿಗೆ ಸಾತ್ವಿಕ ಗುಣವಿದೆಯೆನ್ನುವೆಯೇನು? ಖಂಡಿತವಾಗಿಯೂ ಇಲ್ಲ, ಅಂಥವನು ಸಂಪೂರ್ಣ ತಾಮಸದ ಆವರಣದಿಂದ ಆಚ್ಛಾದಿತನಾಗಿರುವನು. ಒಂದು ದೇಶದ ಜನರು ತಮ್ಮ ಹಸಿವನ್ನಿಂಗಿಸಲು ಸಾಕಷ್ಟು ಆಹಾರವೂ ಇಲ್ಲದೆ ಇದ್ದಾಗ ಹೇಗೆ ತಾನೆ ಧರ್ಮವನ್ನು ಸಾಧಿಸಬಲ್ಲರು? ಭೋಗದ ಆಸೆ ಆಕಾಂಕ್ಷೆ ತುಂಬಿದ ಮನಸ್ಸಿಗೆ ಕೊಂಚವೂ ತೃಪ್ತಿ ಸಿಗದೆ ಇರುವಾಗ ಆ ದೇಶದ ಜನರಿಗೆ ತ್ಯಾಗಬುದ್ಧಿ ಹೇಗೆ ತಾನೇ ಬರುವುದು? ಆದ್ದರಿಂದಲೇ ಮೊಟ್ಟ ಮೊದಲು ಜನರಿಗೆ ಸಾಕಷ್ಟು ತಿನ್ನಲು ಆಹಾರ ಮತ್ತು ಕೊಂಚ ಭೋಗಿಸಲು ಸಾಕಷ್ಟು ಭೋಗ ಸಾಮಗ್ರಿ-ಇಷ್ಟು ಸಿಗುವ ಮಾರ್ಗೋಪಾಯವನ್ನು ಕಂಡು ಹಿಡಿ. ನಂತರ ಕ್ರಮೇಣ ನಿಜವಾದ ವೈರಾಗ್ಯ ಬರುವುದು.

ಸಸ್ಯಾಹಾರದ ವಿಷಯದಲ್ಲಿ ನಾನು ಹೇಳುವುದು ಇದು. ಮೊದಲು ನನ್ನ ಗುರುಗಳು (ಶ್ರೀರಾಮಕೃಷ್ಣ ಪರಮಹಂಸರು) ಶಾಖಾಹಾರಿಗಳಾಗಿದ್ದರು. ಆದರೆ ಮಹಾಕಾಳಿಗೆ ನೈವೇದ್ಯ ಮಾಡಿದ ಮಾಂಸವನ್ನು ಕೊಟ್ಟರೆ ಅದನ್ನು ಶಿರಕ್ಕೆ ತಾಗಿಸುತ್ತಿದ್ದರು. ಪ್ರಾಣಿಗಳನ್ನು ಕೊಲ್ಲುವುದು ನಿಸ್ಸಂದೇಹವಾಗಿ ಕೆಟ್ಟದ್ದು. ಆದರೆ ರಸಾಯನಶಾಸ್ತ್ರದ ಅಭಿವೃದ್ಧಿಯೊಂದಿಗೆ ಎಲ್ಲಿಯವರೆವಿಗೆ ಸಸ್ಯಾಹಾರವನ್ನು ಮನುಷ್ಯನ ಶರೀರಕ್ಕೆ ಒಗ್ಗುವಂತೆ ಮಾಡಿಲ್ಲವೋ ಅಲ್ಲಿಯವರೆವಿಗೂ ಮಾಂಸವನ್ನು ತಿನ್ನದೆ ವಿಧಿ ಇಲ್ಲ, ಈಗಿನ ವಾತಾವರಣಕ್ಕೆ ಸರಿಯಾಗಿ ಎಲ್ಲಿಯವರೆವಿಗೂ ಮನುಷ್ಯ ರಾಜಸಿಕ (ಚಟುವಟಿಕೆಯ) ಜೀವನವನ್ನು ನಡೆಸಬೇಕೋ, ಅಲ್ಲಿಯವರೆವಿಗೂ ಮಾಂಸಾಹಾರದ ಮೂಲಕವಲ್ಲದೆ ಬೇರೆ ದಾರಿಯಿಲ್ಲ, ಅಶೋಕ ಚಕ್ರವರ್ತಿ ಕತ್ತಿಯ ಬಲದಿಂದ ಲಕ್ಷಾಂತರ ಪ್ರಾಣಿಯ ಬಲಿಯನ್ನೇನೋ ನಿಲ್ಲಿಸಿದನು. ಆದರೆ ಸಾವಿರ ವರುಷದ ಗುಲಾಮಗಿರಿ ಅದಕ್ಕಿಂತ ಭಯಂಕರವಲ್ಲವೆ? ಕೆಲವು ಕುರಿಗಳ ಪ್ರಾಣವನ್ನು ಕಾಪಾಡುವುದೋ ಅಥವಾ ಅದರ ಬದಲು ಒಬ್ಬನೆ ಹೆಂಡತಿ ಮಕ್ಕಳ ಪ್ರಾಣವನ್ನು ಕಾಪಾಡಲು ಅಶಕ್ತನಾಗಿ ಆಹಾರವನ್ನು ತನ್ನ ಮಕ್ಕಳಿಗೋಸುಗವಾಗಿ ಅದನ್ನು ಲೂಟಿಮಾಡುವ ದರೋಡೆಕಾರರಿಂದ ತಪ್ಪಿಸುವುದಕ್ಕೆ ಅಶಕ್ತನಾಗುವುದೋ ಇವೆರಡರಲ್ಲಿ ಯಾವುದು ಘೋರ ಪಾತಕ? ಬೇಕಾದರೆ, ದೈಹಿಕ ಕಷ್ಟದ ಮೂಲಕ

ವಾಗಿ ತಮ್ಮ ಜೀವನೋಪಾಯವನ್ನು ಯಾರು ಸಂಪಾದಿಸುವುದಿಲ್ಲವೋ ಅಂತಹ ಮೇಲಿನ ವರ್ಗಕ್ಕೆ ಸೇರಿದ ಹತ್ತಾರು ಮಂದಿ ಮಾಂಸಾಹಾರವನ್ನು ಬಿಡಲಿ. ಆದರೆ ಯಾರು ತಮ್ಮ ಆಹಾರವನ್ನು ಹಗಲೂ ರಾತ್ರಿ ಬೆವರು ಸುರಿಸಿ ಸಂಪಾದನೆ ಮಾಡಬೇಕೋ ಅವರ ಮೇಲೆ ಶಾಖಾಹಾರವನ್ನು ಬಲವಂತ ಮಾಡುವುದೇ ನಮ್ಮ ದೇಶದ ಸ್ವಾತಂತ್ರ್ಯ ಹಾನಿಗೆ ಒಂದು ಕಾರಣ. ಒಳ್ಳೆಯ ಮತ್ತು ದೇಹ ಪೋಷಕವಾದ ಆಹಾರ ಏನು ಮಾಡಬಲ್ಲದು ಎಂಬುದಕ್ಕೆ ಜಪಾನೇ ಒಂದು ಉದಾಹರಣೆ.

ಭಾರತದಲ್ಲಿ ಹಿಂದೆ ದನದ ಮಾಂಸ ತಿನ್ನದ ಬ್ರಾಹ್ಮಣ ಬ್ರಾಹ್ಮಣನಾಗಿ ಉಳಿಯುತ್ತಿರಲಿಲ್ಲ, ಸನ್ಯಾಸಿ, ರಾಜ, ಮಹಾತ್ಮರು ಮನೆಗೆ ಬಂದರೆ ಗೌರವಾರ್ಥವಾಗಿ ಅತ್ಯುತ್ತಮ ಗೂಳಿಯನ್ನು ಕೊಂದು ಅಡಿಗೆ ಮಾಡುತ್ತಿದ್ದರು ಎಂದು ವೇದದಲ್ಲಿ ನೀನು ಓದುವೆ. ನಮ್ಮದು ಕೃಷಿ ಪ್ರಧಾನ ಜೀವನವಾದ್ದರಿಂದ ಅತ್ಯುತ್ತಮ ಎತ್ತುಗಳನ್ನು ಕೊಂದರೆ ಕಾಲ ಕ್ರಮೇಣ ದನದ ಜಾತಿಯೇ ನಾಶವಾಗುವುದೆಂದು ತಿಳಿದು ಗೋಹತ್ಯೆ ಮಹಾಪಾಪ ವೆಂದು ಪರಿಗಣಿಸಲು ಪ್ರಾರಂಭಿಸಿದರು. ಪಂಜಾಬಿನ ಹಲವು ಗ್ರಾಮಗಳಲ್ಲಿ ಹಂದಿಯನ್ನು ತಿನ್ನದವರನ್ನು ಹಿಂದೂಗಳೆಂದು ಪರಿಗಣಿಸುವುದೇ ಇಲ್ಲ ನೇಪಾಳದಲ್ಲಿ ಬ್ರಾಹ್ಮಣರು ಚತುರ್ವರ್ಣಗಳಲ್ಲಿ ಮದುವೆ ಮಾಡಿಕೊಳ್ಳಬಹುದು.

ಈಗ ನಾನು ಕೇವಲ ಮಾಂಸವನ್ನು ಮಾತ್ರ ತಿಂದು ಜೀವಿಸುತ್ತಿದ್ದೇನೆ. (28-41-897ರಂದು ಶ್ರೀಮತಿ ಹೇಲ್‌ರವರಿಗೆ ಬರೆದ ಪತ್ರ).

ಮಾಂಸಾಹಾರವನ್ನು ಸ್ವೀಕರಿಸುವುದು ಒಳ್ಳಯದೇ ಕೆಟ್ಟದೇ ಅಥವಾ ಬರೀ ಶಾಖಾಹಾರದ ಮೇಲೆ ಜೀವಿಸಬೇಕೇ, ಮಾಂಸಾಹಾರದಿಂದ ಪ್ರಯೋಜನ ಉಂಟೆ? ಎಂಬುದರ ಮೇಲೆ ಹಲವು ಭಿನ್ನಾಭಿಪ್ರಾಯಗಳಿವೆ...ರಾಮ, ಕೃಷ್ಣ ಮುಂತಾದವರೆಲ್ಲಾ ಮದ್ಯ, ಮಾಂಸವನ್ನು ಸೇವಿಸುತ್ತಿದ್ದರೆಂಬುದನ್ನು ರಾಮಾಯಣ, ಮಹಾಭಾರತದಲ್ಲಿ ನೋಡುತ್ತೇವೆ.

ಸೀತಾಮಾದಾಯ ಬಾಹುಭ್ಯಾಂ ಮಧುಮೈರೇಯಕಂ ಶುಚಿ!
ಪಾಯಯಾಮಾಸ ಕಾಕುತ್ಸ್ಥಃ ಶಚೀಮಿಂದ್ರೋ ಯಥಾಮೃತಮ್!
ಮಾಂಸಾನಿ ಚ ಸುಮೃಷ್ಟಾನಿ ವಿವಿಧಾನಿ ಫಲಾನಿ ಚ!
ರಾಮಸ್ಯಾಭ್ಯವಹಾರಾರ್ಥಂ ಕಿಂಕರಾ ಸ್ತೂರ್ಣಮಾಹರನ್!
-ರಾಮಾಯಣ, ಉತ್ತರಕಾಂಡ. 42

(ಶ್ರೀರಾಮ ಸೀತೆಯನ್ನು ಎರಡೂ ಬಾಹುಗಳಿಂದಲೂ ಆಲಂಗಿಸಿ ಶುದ್ಧ ಮೈರೇಯ ಮದ್ಯವನ್ನು ಇಂದ್ರ ಶಚಿಗೆ ಅಮೃತವನ್ನು ನೀಡುವಂತೆ, ನೀಡಿದನು. ಪರಿಚಾರಕನು ಹಲವು ಬಗೆಯ ಮಾಂಸವನ್ನು ಮತ್ತು ಫಲಗಳನ್ನು ಬಡಿಸಿದರು.)

ಸುರಾಘಟಸಹಸ್ರೇಣ ಮಾಂಸಭೂತೌದನೇನ ಚ!
ಯಕ್ಷ್ಯೇ ತ್ವಾಂ ಪ್ರೀಯತಾಂ ದೇವಿ ಪುರೀಂ ಪುನರುಪಾಗತಾ!
-ರಾಮಾಯಣ, ಅಯೋಧ್ಯಾಕಾಂಡ. 52

(ಮಹಾತಾಯಿ ಗಂಗೆ, ದಯೆ ತಾಳು. ನಾನು ಹಿಂತಿರುಗಿ ಬರುವಾಗ ಸಾವಿರ ಮದ್ಯದ ಹಂಡೆ, ಬೇಕಾದಷ್ಟು ಮಾಂಸದೊಂದಿಗೆ ಬೇಯಿಸಿದ ಅನ್ನವನ್ನು ನಿನಗೆ ಅರ್ಪಿಸುತ್ತೇನೆ) ಎಂದು ಸೀತಾದೇವಿ ಗಂಗಾನದಿಯನ್ನು ದಾಟುವ ಕಾಲದಲ್ಲಿ ಪ್ರಾರ್ಥಿಸುವಳು.

ಉಚೌ ಮಧ್ವಾಸವಕ್ಷೀವಾವುಭೌ ಚಂದನರೂಪಿತಾ!
ಸ್ವಗ್ವಿನೌ ವರಸ್ತ್ರೌ ತೌ ದಿವ್ಯಾಭರಣಭೂಷಿತೌ!!
-ಮಹಾಭಾರತ, ಉದ್ಯೋಗಪರ್ವ, ಅಧ್ಯಾ. 58-5

(ನಾನು, ಕೃಷ್ಣಾರ್ಜುನರಿಬ್ಬರೂ ಗಂಧ ಲೇಪಿಸಿಕೊಂಡು ಪುಷ್ಪದಿಂದ ಅಲಂಕೃತರಾಗಿ ಸುಂದರ ವಸ್ತ್ರಗಳನ್ನು ಧರಿಸಿ ಮಧ್ವಾಸವನ್ನು ಸೇವಿಸಿದ್ದುದನ್ನು ಕಂಡೆನು.)

ಹಿಂದೂ ಮತ್ತು ಚೀಣಿಯರನ್ನು ನೋಡಿ, ಅವರು ಎಷ್ಟು ಬಡವರಾಗಿರುವರು ಎನ್ನುವರು. ಅವರು ಮಾಂಸ ತಿನ್ನುವುದಿಲ್ಲ, ಅಕ್ಕಿ ಮತ್ತು ಸಿಕ್ಕಿದ ಕೆಲವು ತರಕಾರಿಯ ಮೇಲೆ ಜೀವಿಸುವುದರಿಂದ ಇಂತಹ ದುಸ್ಥಿತಿಯಲ್ಲಿರುವರು. ಹಿಂದೆ ಜಪಾನಿಯರೂ ಅದೇ ಸ್ಥಿತಿಯಲ್ಲಿದ್ದರು. ಆದರೆ ಮಾಂಸಾಹಾರಕ್ಕೆ ಪ್ರಾರಂಭಿಸಿದೊಡನೆಯೇ ಅವರ ಚರಿತ್ರೆಯಲ್ಲಿ ಹೊಸ ಅಧ್ಯಾಯ ಪ್ರಾರಂಭವಾಯಿತು. ಇಂಡಿಯಾ ಸೈನ್ಯದಲ್ಲಿ ಸುಮಾರು ಒಂದೂವರೆ ಲಕ್ಷ ಭಾರತೀಯರು ಸಿಪಾಯಿಗಳಾಗಿರುವರು. ಅವರಲ್ಲಿ ಬಲಾಢ್ಯರಾದ ಸಿಖ್ಖರು ಮತ್ತು ಗೂರ್ಕರು ಎಂದೂ ಶಾಖಾಹಾರಿಗಳಲ್ಲ...ಯಾರು ಆಧ್ಯಾತ್ಮಿಕ ಜೀವನವನ್ನು ನಡೆಸಬೇಕೆಂದು ಇಚ್ಛಿಸುವರೋ ಅವರಿಗೆ ಶಾಖಾಹಾರ ಒಳ್ಳೆಯದು. ಆದರೆ ಯಾರು ಹಗಲು ರಾತ್ರಿ ಜೀವನದಲ್ಲಿ ದುಡಿಯಬೇಕೋ ಅವರು ಮಾಂಸಾಹಾರವನ್ನು ಸೇವಿಸಬೇಕು. ಎಲ್ಲಿಯವರೆವಿಗೂ ಸಮಾಜದಲ್ಲಿ ಬಲವಂತನಿಗೆ ಜಯವೆಂಬುದು ಇದೆಯೋ ಅಲ್ಲಿಯವರೆವಿಗೂ ಮಾಂಸಾಹಾರಿಯಾಗಿರಬೇಕು. ಇಲ್ಲದೆ ಇದ್ದರೆ ದುರ್ಬಲರು ಬಲಾಢ್ಯರ ಪಾದದ ಅಡಿಗೆ ಸಿಕ್ಕಿ ನಾಶವಾಗುವರು. ಎಲ್ಲೋ ಕೆಲವರಿಗೆ ಶಾಖಾಹಾರದಿಂದ ಪ್ರಯೋಜನವನ್ನು ಹೇಳಿದರೆ ಸಾಲದು. ಒಂದು ದೇಶವನ್ನು ಮತ್ತೊಂದು ದೇಶದೊಂದಿಗೆ ಹೋಲಿಸಿ ನಿರ್ಣಯಕ್ಕೆ ಬನ್ನಿ.

ಮಾಂಸಾಹಾರವನ್ನು ಮಾಡುವ ಕ್ಷತ್ರಿಯರ ವಿಚಾರವನ್ನು ಕುರಿತು ನೀವು ಬರೆಯುತ್ತೀರಿ. ಮಾಂಸಾಹಾರವೋ ಅಲ್ಲವೋ, ಅದು ನಮಗೆ ಬೇಕಾಗಿಲ್ಲ, ಹಿಂದೂ ಧರ್ಮದಲ್ಲಿರುವ ಎಲ್ಲ ಉಚ್ಛವಾದ ಮತ್ತು ಅತ್ಯಂತ ಶ್ಲಾಘನೀಯವಾದ ಮಹದಾಲೋಚನೆಗಳ ಮೂಲ ಅವರು. ಉಪನಿಷತ್ತುಗಳನ್ನು ಯಾರು ಬರೆದರು? ರಾಮ ಯಾರು? ಕೃಷ್ಣ ಯಾರು? ಬುದ್ಧ ಯಾರು? ಜೈನ ಧರ್ಮದ ತೀರ್ಥಂಕರರು ಯಾರು? ಕ್ಷತ್ರಿಯರು ಎಂದು ಧರ್ಮವನ್ನು ಬೋಧಿಸಿದರೋ, ಅವರು ಯಾವಾಗಲೂ ಎಲ್ಲರಿಗೂ ಅದನ್ನು ದಾನಮಾಡಿದರು. ಬ್ರಾಹ್ಮಣರು ಎಂದು ಏನು ಬರೆದರೂ ಅದಕ್ಕೆ ಅವರಲ್ಲದೆ ಉಳಿದವರಿಗೆ ಅರ್ಹತೆಯಿಲ್ಲ. ಭಗವದ್ಗೀತೆಯನ್ನು ಮತ್ತು ವ್ಯಾಸನ ಬ್ರಹ್ಮ ಸೂತ್ರವನ್ನು ಓದಿ ಅಥವಾ ಯಾರಾದರೂ ನಿಮಗೆ ಓದಿ ಹೇಳುವಂತೆ ಮಾಡಿ. ಗೀತೆಯಲ್ಲಿ ಮುಕ್ತಿಯ ಪರಮಪದವನ್ನು ಹೊಂದಲು ಎಲ್ಲಾ ಸ್ತ್ರೀಯರಿಗೆ,ಎಲ್ಲಾ ಪುರುಷರಿಗೆ, ಎಲ್ಲಾ ಜಾತಿಮತಗಳವರಿಗೆ ಅಧಿಕಾರವಿದೆ ಎಂದು ಕೃಷ್ಣನು ಸಾರುತ್ತಾನೆ. ಆದರೆ ವ್ಯಾಸನಾದರೋ, ಪಾಪ, ಶೂದ್ರರನ್ನು ಮೋಸ ಮಾಡುವುದಕ್ಕೆ, ವೇದಕ್ಕೆ ಅಪಾರ್ಥವನ್ನು ಕಲ್ಪಿಸುತ್ತಾನೆ. ಭಗವಂತನೂ ನಿಮ್ಮಂತೆ ಒಬ್ಬ ಹುಚ್ಚು ಮನುಷ್ಯನೇ? ಹರಿಯುತ್ತಿರುವ ಆತನ ಕೃಪಾಗಂಗೆಯನ್ನು ಒಂದು ಚೂರು ಮಾಂಸ ತಡೆಗಟ್ಟುವುದೇ! ಹೀಗಿದ್ದ ಪಕ್ಷದಲ್ಲಿ ಅವನು ಒಂದು ಕುರುಡು ಕಾಸಿಗೂ ಬೆಲೆ ಬಾಳಲಾರ!

ಸಮಾಜ ಸುಧಾರಕರ ಒಂದು ಮಾಸಪತ್ರಿಕೆಯಲ್ಲಿ ನನ್ನನ್ನು ಶೂದ್ರನೆಂದು ಕರೆದು ಸನ್ಯಾಸಿಯಾಗಲು ನನಗೆ ಅಧಿಕಾರ ವಿಲ್ಲವೆಂದು ಹೇಳಿರುವರು. ಇದಕ್ಕೆ ಉತ್ತರವಾಗಿ ಬ್ರಾಹ್ಮಣರು 'ಯಮಾಯ ಧರ್ಮರಾಜಾಯ ಚಿತ್ರ ಗುಪ್ತಾಯ ವೈ ನಮಃ 'ಎಂದು ಉಚ್ಚರಿಸಿ ಯಾರ ಪಾದಗಳನ್ನು ಪೂಜಿಸುವರೋ ಅವರು ನನ್ನ ವಂಶದ ಮೂಲ ಪುರುಷರು. ಅವರು ಪರಿಶುದ್ಧ ಕ್ಷತ್ರಿಯರು ಎನ್ನುವೆನು. ನೀವು ನಿಮ್ಮ ಪುರಾಣ ಪಣ್ಯಕಥೆಗಳನ್ನು ನಂಬಿದರೆ, ನನ್ನ ವರ್ಣ ಮಾಡಿದ ಇತರ ಸೇವೆಯನ್ನು ಬಿಟ್ಟರೂ, ಅದು ಹಲವು ಶತಮಾನಗಳವರೆಗೆ ಅರ್ಧ ಭರತಖಂಡವನ್ನೇ ಆಳಿತೆಂಬುದು ಗೊತ್ತಾಗುವುದು. ನನ್ನ ವರ್ಣವನ್ನು ಬಿಟ್ಟರೆ ಭರತಖಂಡದ ಇಂದಿನ

ಭಾರತದಲ್ಲಿ ಹಿಂದೆ ದನದ ಮಾಂಸ ತಿನ್ನದ ಬ್ರಾಹ್ಮಣ ಬ್ರಾಹ್ಮಣನಾಗಿ ಉಳಿಯುತ್ತಿರಲಿಲ್ಲ, ಸನ್ಯಾಸಿ, ರಾಜ, ಮಹಾತ್ಮರು ಮನೆಗೆ ಬಂದರೆ ಗೌರವಾರ್ಥವಾಗಿ ಅತ್ಯುತ್ತಮ ಗೂಳಿಯನ್ನು ಕೊಂದು ಅಡಿಗೆ ಮಾಡುತ್ತಿದ್ದರು ಎಂದು ವೇದದಲ್ಲಿ ನೀನು ಓದುವೆ. ನಮ್ಮದು ಕೃಷಿ ಪ್ರಧಾನ ಜೀವನವಾದ್ದರಿಂದ ಅತ್ಯುತ್ತಮ ಎತ್ತುಗಳನ್ನು ಕೊಂದರೆ ಕಾಲ ಕ್ರಮೇಣ ದನದ ಜಾತಿಯೇ ನಾಶವಾಗುವುದೆಂದು ತಿಳಿದು ಗೋಹತ್ಯೆ ಮಹಾಪಾಪ ವೆಂದು ಪರಿಗಣಿಸಲು ಪ್ರಾರಂಭಿಸಿದರು. ಪಂಜಾಬಿನ ಹಲವು ಗ್ರಾಮಗಳಲ್ಲಿ ಹಂದಿಯನ್ನು ತಿನ್ನದವರನ್ನು ಹಿಂದೂಗಳೆಂದು ಪರಿಗಣಿಸುವುದೇ ಇಲ್ಲ. ನೇಪಾಳದಲ್ಲಿ ಬ್ರಾಹ್ಮಣರು ಚತುರ್ವರ್ಣಗಳಲ್ಲಿ ಮದುವೆ ಮಾಡಿ ಕೊಳ್ಳಬಹುದು.

ಸಂಸ್ಕೃತಿಯಲ್ಲಿ ಉಳಿಯುವುದೇನು? ವಂಗಭೂಮಿಯಲ್ಲೆ ನಮ್ಮ ಕುಲ, ಶ್ರೇಷ್ಠ ತತ್ವಜ್ಞಾನಿಗಳನ್ನು, ಕವಿಗಳನ್ನು, ಇತಿಹಾಸಕಾರರನ್ನು, ಪ್ರಾಕೃತ ವಿಮರ್ಶಕರನ್ನು, ಪ್ರಖ್ಯಾತ ಧರ್ಮ ಬೋಧಕರನ್ನು ಕೊಟ್ಟಿರುವುದು. ಆಧುನಿಕ ಭರತಖಂಡದ ಪ್ರಖ್ಯಾತ ವಿಜ್ಞಾನಿ ನಮ್ಮ ಕುಲೋದ್ಭವನು.ಈ ನಿಂದಕರಿಗೆ ಚರಿತ್ರೆ ಸ್ವಲ್ಪ ಗೊತ್ತಿರ ಬೇಕಿತ್ತು, ಬ್ರಾಹ್ಮಣ, ಕ್ಷತ್ರಿಯ, ವೈಶ್ಯರೆಂಬ ತ್ರಿವರ್ಣದವರಿಗೂ ಸನ್ಯಾಸದ ಹಕ್ಕಿದೆ ಎಂಬುದು ಅವರಿಗೆ ಗೊತ್ತಿರಬೇಕಿತ್ತು. ಇದನ್ನು ಸುಮ್ಮನೆ ಹೇಳುತ್ತಿರುವೆನು. ನನ್ನನ್ನು ಶೂದ್ರನೆಂದು ಕರೆದುದಕ್ಕೆ ನನಗೆ ಕೊಂಚವೂ ವ್ಯಥೆ ಆಗವುದಿಲ್ಲ, ನಮ್ಮ ಪೂರ್ವಿಕರು ದೀನರನ್ನು ನಿಕೃಷ್ಟ ದೃಷ್ಟಿಯಿಂದ ನೋಡಿದುದಕ್ಕೆ ಇದೊಂದು ಪ್ರಾಯಶ್ಚಿತ್ತ ವೆಂದು ತಿಳಿಯುತ್ತೇನೆ. ನಾನು ಹೊಲೆಯನಾಗಿದ್ದರೆ ಇನ್ನೂ ಹೆಚ್ಚು ಶ್ರೇಷ್ಠನ (ಶ್ರೀರಾಮಕೃಷ್ಣಪರಮಹಂಸರ) ಶಿಷ್ಯ ನಾನು. ಚಂಡಾಲ ಇದಕ್ಕೆ ಒಪ್ಪಿಗೆ ಕೊಡಲಿಲ್ಲ, ಬ್ರಾಹ್ಮಣ ಸನ್ಯಾಸಿಗೆ ಆತ ತನ್ನ ಮನೆಯನ್ನು ಗುಡಿಸಲು ಹೇಗೆ ಒಪ್ಪಿಗೆ ಕೊಡುವನು? ನನ್ನ ಗುರುಗಳು ಅರ್ಧ ರಾತ್ರಿಯಲ್ಲಿ ಅವನ ಕಕ್ಕಸ್ಸನ್ನು ಗುಡಿಸಿ, ತಮ್ಮ ಕೇಶರಾಶಿಯಿಂದ ಆ ಸ್ಥಳವನ್ನು ಒರೆಸಿದರು. ಇದನ್ನು ಅವರು ಹಲವು ದಿನಗಳ ವರೆಗೆ ಮಾಡಿದರು. ದೀನರಲ್ಲಿ ದೀನರಾಗಬೇಕೆಂಬುದೇ ಅವರ ಇಚ್ಛೆ, ಅವರ ಪಾದಗಳನ್ನು ನಾನು ಶಿರದಲ್ಲಿ ಧರಿಸಿರುವೆ, ಅವರೇ ನನ್ನ ಗುರುಗಳು... ಮತ್ತೊಂದೇ ಶುದ್ಧ ಸನಾತನ ಹಿಂದೂಗಳು ನಮ್ಮ ದೇಶ ದಲ್ಲಿಯೇ ನನಗೆ ಯಾವ ಯಾವ ಸತ್ಕಾರ ಮಾಡಿರುವರು ಎಂಬುದಕ್ಕೆ ಉದಾಹರಣೆ. ನಮ್ಮ ಸುಧಾರಕರು ಚಂಡಾಲನನ್ನೂ ಕೂಡ ಸೇವಿಸುವಂತಹ ಜೀವನವನ್ನು ವ್ಯಕ್ತಗೊಳಿಸಲಿ. ಆಗ ನಾನು ಅವರ ಪದತಳದಲ್ಲಿ ಕುಳಿತು ಕಲಿತು ಕೊಳ್ಳುತ್ತೇನೆ. ಅದಕ್ಕೆ ಮುಂಚೆ ಅಲ್ಲ, ಎಳ್ಳಿನಷ್ಟು ಅನುಷ್ಠಾನ ಹೊರೆಯಷ್ಟು ಮಾತಿಗಿಂತ ಮೇಲು, ನಾನು ಪಶ್ಚಿಮ ದೇಶಗಳಿಂದ ಹಿಂತಿರುಗಿ ಬರುತ್ತಿರುವನೆಂದು ರಾಣಿ ರಾಸಮಣಿಯ ತೋಟದ ಮಾಲೀಕರು ನನ್ನನ್ನು ಒಳಕ್ಕೆ ಪ್ರವೇಶಿಸಲು ಬಿಡಲಿಲ್ಲ.

ಉಪನಿಷತ್ತಿನ ತತ್ವವೆಲ್ಲ ರಾಜರ ಬುದ್ಧಿಯಿಂದ ಬಂದುದು, ಬ್ರಾಹ್ಮಣನಿಂದಲ್ಲ, ಪ್ರತಿಯೊಂದು ಧಾರ್ಮಿಕ ಹೋರಾಟದ ಹಿಂದೆಯೂ ಒಂದು ಆರ್ಥಿಕ ಹೋರಾಟ ವಿದೆ. ಯಾರು ತಾವು ಬ್ರಾಹ್ಮಣರೆಂದು, ಹೆಮ್ಮೆ ಕೊಚ್ಚಿ ಕೊಳ್ಳುತ್ತಾರೋ ಅವರು ತಮ್ಮ ಬ್ರಾಹ್ಮಣತ್ವವನ್ನು, ಆಧ್ಯಾತ್ಮಿಕ ಜೀವನವನ್ನು ವ್ಯಕ್ತಗೊಳಿಸುವುದು ಮತ್ತು ಇತರರು ಆ ಸ್ಥಿತಿಗೆ ಬರಲು ಅವರಿಗೆ ಸಹಾಯ ಮಾಡುವುದು ಇವುಗಳ ಮೂಲಕ ತೋರಬೇಕಾಗಿದೆ. ಹಲವರಲ್ಲಿ ತಾವು ಉತ್ತಮ ಕುಲ ಸಂಭೂತರೆಂದು ಹೆಮ್ಮೆಯು ಮಾತ್ರವಿದೆ. ಈ ಹೆಮ್ಮೆಯನ್ನು ತೃಪ್ತಿಪಡಿಸುವ, ಅವರ ಸೋಮಾರಿತನವನ್ನು ಮುಂದುವರಿಸುವ ಈ ದೇಶದ ಅಥವಾ ಪರದೇಶದ ಆಚಾರಗಳು ಯಾವುದಾದರೂ ಆಗಲಿ, ಅದು ಅವರಿಗೆ ತೃಪ್ತಿಯನ್ನು ತರುತ್ತದೆ.

ಬ್ರಾಹ್ಮಣರೇ ಜೋಪಾನ! ಇದು ಮೃತ್ಯು ಚಿಹ್ನೆ, ಜಾಗ್ರತರಾಗಿ, ನಿಮ್ಮ ಪುರುಷತ್ವವನ್ನೂ ಬ್ರಾಹ್ಮಣತ್ವವನ್ನೂ, ಬ್ರಾಹ್ಮಣೇತರರನ್ನು ಮೇಲಕ್ಕೆ ಎತ್ತುವುದರಲ್ಲಿ ತೋರಿ.

ಸಮಾಜ ಸುಧಾರಕರ ಒಂದು ಮಾಸಪತ್ರಿಕೆಯಲ್ಲಿ ನನ್ನನ್ನು ಶೂದ್ರನೆಂದು ಕರೆದು ಸನ್ಯಾಸಿಯಾಗಲು ನನಗೆ ಅಧಿಕಾರ ವಿಲ್ಲವೆಂದು ಹೇಳಿರುವರು. ಇದಕ್ಕೆ ಉತ್ತರವಾಗಿ ಬ್ರಾಹ್ಮಣರು 'ಯಮಾಯ ಧರ್ಮರಾಜಾಯ ಚಿತ್ರ ಗುಪ್ತಾಯ ವೈ ನಮಃ' ಎಂದು ಉಚ್ಚರಿಸಿ ಯಾರ ಪಾದಗಳನ್ನು ಪೂಜಿಸುವರೋ ಅವರು ನನ್ನ ವಂಶದ ಮೂಲ ಪುರುಷರು.

ಯಜಮಾನನಂತೆ ಈ ಕೆಲಸವನ್ನು ಮಾಡುವುದಲ್ಲ ಅಹಂಕಾರ ಮತ್ತು ಮೌಢ್ಯತೆಯಿಂದ ತನ್ನ ಸಮಾನ ಯಾರೂ ಇಲ್ಲ ಎಂದು ಭಾವಿಸಿ ಈ ಕೆಲಸವನ್ನು ಮಾಡುವುದಲ್ಲ; ದಾಸನಂತೆ ಈ ಕೆಲಸವನ್ನು ಮಾಡಬೇಕು.

ನಿಮ್ಮ ಹಾಗೆ ಅವರು (ಕೆಳ ಜಾತಿಯವರು) ಕೆಲವು ಪುಸ್ತಕಗಳನ್ನು ಓದಿಲ್ಲದೆ ಇರಲಿ, ನಿಮ್ಮ ಹಾಗೆ ಷರ್ಟು ಕೋಟು ಹಾಕಿಕೊಂಡು ದೊಡ್ಡ ಮನುಷ್ಯರಾಗುವುದನ್ನು ಕಲಿತುಕೊಂಡಿಲ್ಲದೆ ಇರಲಿ, ಆದರೇನು? ಅವರೇ ಜನಾಂಗದ ಮೇರುದಂಡ-ಎಲ್ಲಾ ದೇಶದಲ್ಲಿಯೂ ಈ ಇತರ ಶ್ರೇಣಿಯ ಜನರು ಕೆಲಸ ಬಿಟ್ಟುಕುಳಿತರೆ ನೀವು ಅನ್ನ ಬಟ್ಟೆಗಳನ್ನು ಎಲ್ಲಿಂದ ತರುವಿರಿ? ಕಲ್ಕತ್ತೆಯಲ್ಲಿ ಒಂದು ದಿವಸ ಗುಡಿಸುವವರು ಕೆಲಸ ಮಾಡದೆ ನಿಂತುಬಿಟ್ಟರೆ ಹಾಹಾಕಾರ ಹುಟ್ಟಿ ಹೋಗುತ್ತದೆ...ಕಷ್ಟ ಜೀವಿಗಳಾದವರು ಕೈಕಟ್ಟಿಕೊಂಡು ಕುಳಿತರೆ ನಿಮಗೆ ಅನ್ನ ಬಟ್ಟೆ ದೊರೆಯುವುದಿಲ್ಲ, ಇವರನ್ನು ನೀವು ಕೀಳು ಜನರೆಂದು ಭಾವಿಸುತ್ತೀರಿ! ನೀವು ವಿದ್ಯಾವಂತರೆಂದು ಬಡಾಯಿ ಕೊಚ್ಚಿಕೊಳ್ಳುತ್ತೀರಿ.

ವ್ಯವಸಾಯಗಾರರು, ಜೋಡು ಹೊಲಿಯುವವರು, ಗುಡಿಸುವವರು ಇದ್ದಾರಲ್ಲಾ ಇವರ ಕರ್ಮ ತತ್ಪರತೆಯೂ ಆತ್ಮನಿಷ್ಠೆಯೂ ನಿಮ್ಮಗಳಲ್ಲಿ ಅನೇಕರದ್ದಕ್ಕಿಂತ ಮೇಲು. ಅವರು ಸದ್ದಿಲ್ಲದೆ ಯಾವಾಗಲೂ ಕೆಲಸ ಮಾಡಿಕೊಂಡು ಹೋಗುತ್ತಿರುತ್ತಾರೆ. ದೇಶದ ಧನ ಧಾನ್ಯಗಳನ್ನು ಉಂಟು ಮಾಡುತ್ತಾರೆ. ಬಾಯಲ್ಲಿ ಮಾತಿಲ್ಲ, ಅವರು ಜಾಗ್ರತೆಯಾಗಿಯೋ ನಿಮ್ಮ ಮೇಲೆ ಬಂದು ಬಿಡುತ್ತಾರೆ... ನೀವು ಈ ಸಹಿಷ್ಣುಗಳಾದ ನೀಚಜಾತಿಯವರ ಮೇಲೆ ಇಷ್ಟು ದಿನ ಅತ್ಯಾಚಾರ ನಡೆಸಿಕೊಂಡು ಬಂದಿದ್ದೀರಿ. ಅವರು ಈಗ ನಿಮ್ಮ ಮೇಲೆ ಮುಯ್ಯಿ ತೀರಿಸಿಕೊಳ್ಳುವರು. ಇನ್ನು ಸಾವಿರ ಸಾರಿ ಪ್ರಯತ್ನ ಪಟ್ಟರೂ ಮೇಲು ಜಾತಿಯವರು ಕೀಳು ಜಾತಿಯವರನ್ನು ತಡೆಯುವುದಕ್ಕಾಗುವುದಿಲ್ಲ.

ಇಲ್ಲಿಯವರೆವಿಗೂ ಧರ್ಮ ಬ್ರಾಹ್ಮಣರ ಮೀಸಲಾಗಿತ್ತು. ಆದರೆ ಪ್ರಬಲ ಕಾಲಚಕ್ರ ಪ್ರವಾಹದಲ್ಲಿ ಅವರು ಇಂದು ಅದೇ ಸ್ಥಳದಲ್ಲಿ ಇರಲಾರರು. ದೇಶದ ಪ್ರತಿಯೊಬ್ಬರೂ ಧರ್ಮವನ್ನರಿಯುವಂತೆ ಮಾಡಲು ತೊಡಗಿ, ಬ್ರಾಹ್ಮಣರಷ್ಟೇ ತಮಗೂ ಹಕ್ಕಿದೆ ಎಂಬ ಭಾವನೆ ಅವರ ಮನಸ್ಸಿನಲ್ಲಿ ನಾಟುವಂತೆ ಮಾಡಿ. ಪ್ರತಿಯೊಬ್ಬರಿಗೂ, ಚಂಡಾಲರಿಗೂ ಈ ಪ್ರಜ್ವಲಿಸುವ ಮಂತ್ರ ದೀಕ್ಷೆ ಕೊಡಿ. ಸರಳ ಮಾತಿನಲ್ಲಿ ಅವರಿಗೆ ಜೀವನ, ವ್ಯಾಪಾರ, ವ್ಯವಹಾರ, ವ್ಯವಸಾಯ ಮುಂತಾದವುಗಳಲ್ಲಿ ಶಿಕ್ಷಣ ಕೊಡಿ. ಹೀಗೆ ಈ ಸಾಧಾರಣ ಜನರು ಯಾವಾಗ ಎಚ್ಚೆತ್ತುಬಿಡುವರೋ ಆಗ ಅವರು ತಮ್ಮ ಮೇಲೆ ನಡೆದ ಅತ್ಯಾಚಾರವನ್ನು ತಿಳಿದು ಕೊಳ್ಳುವರು. ಆಗ ಅವರು ಉಃಫ್ ಎಂದು ಊದಿದರೆ ಮೇಲ್ಜಾತಿಯವರಾದ ನೀವು ಎಲ್ಲೋ ಹೋಗಿ ಬೀಳುವಿರಿ.

ಒಳಗೆ ಅದಮ್ಯವಾದ ಶಕ್ತಿಯಿದೆ. ಸುಮ್ಮನೆ 'ನಾನು ಏನೂ ಅಲ್ಲ' ಎಂದುಕೊಂಡು ವೀರ್ಯಹೀನರಾಗಿ ಬಿದ್ದಿದ್ದೀರಿ. ನೀವೇ ಏಕೆ? ಎಲ್ಲಾ ಜಾತಿಯವರೂ ಹಾಗೇ ಆಗಿದ್ದಾರೆ. ಒಂದು ಸಲ ಹೊರಗೆ ಸಂಚರಿಸಿಕೊಂಡು ಬಾ, ಭರತಖಂಡವನ್ನು ಬಿಟ್ಟು ಮಿಕ್ಕ ದೇಶಗಳ ಜನರಲ್ಲಿ ಜೀವನ ಪ್ರವಹಿಸುತ್ತಿದೆ ಎಂಬುದು ಗೊತ್ತಾಗುತ್ತದೆ. ನೀವು ಮಾಡುವುದೇನು? ಇಷ್ಟು ವಿದ್ಯೆ ಕಲಿತು ಅನ್ಯರ ಮನೆಯ ಬಾಗಿಲಿನಲ್ಲಿ ಭಿಕಾರಿಯಂತೆ 'ನೌಕರಿ ಕೊಡಿ, ನೌಕರಿ ಕೊಡಿ' ಎಂದು ಅರಚಿಕೊಳ್ಳುವುದು. ಎಕ್ಕಡವನ್ನು ತಿ,ದು, ತಿಂದು ಗುಲಾಮಗಿರಿಯನ್ನು ಮಾಡಿ ಮಾಡಿ ನೀವೇನು ಮನುಷ್ಯರಾಗಿದ್ದೀರಾ? ನಿಮ್ಮ ಬೆಲೆ ಒಂದು ಕುರುಡು ಕವಡೆಯೂ ಅಲ್ಲ, ಇಂಥ ಸಜಲ ಸಫಲ ದೇಶ; ಇಲ್ಲಿ ಪ್ರಕೃತಿ ಮಿಕ್ಕ ದೇಶಗಳಿಗಿಂತ ಕೋಟ್ಯಾಧಿಕವಾಗಿ ಧನ ಧಾನ್ಯವನ್ನು ಕೊಡುತ್ತಿದೆ; ಇಲ್ಲಿ ಪ್ರಾಣವನ್ನು ಧರಿಸಿ ಕೊಂಡಿರುವುದಕ್ಕೆ ನಿಮ್ಮ ಹೊಟ್ಟೆಗೆ ಅನ್ನವಿಲ್ಲ, ಬೆನ್ನಿನ ಮೇಲೆ ಬಟ್ಟೆಯಿಲ್ಲ! ಯಾವ ದೇಶದ ಧನ ಧಾನ್ಯಗಳು ಪ್ರಪಂಚದ ಇತರ ದೇಶಗಳಲ್ಲೆಲ್ಲಾ ನಾಗರೀಕತೆಯನ್ನು ಪ್ರಚುರ ಪಡಿಸಿತೊ ಆ ಅನ್ನಪೂರ್ಣೆಯ ದೇಶದಲ್ಲಿ ನಿಮ್ಮಗಳಿಗೆ ಇಂಥ ದುರ್ದೆಶೆಯೆ? ಒಂದು ಗತಿಗೆಟ್ಟ ನಾಯಿಗಿಂತಲೂ ನಿಮ್ಮ ಸ್ಥಿತಿ ಕಡೆಯಾಗಿದೆ. ನೀವು ನಿಮ್ಮ ವೇದಾಂತಗಳ ಬಡಾಯಿ ಯನ್ನು ಹೇಳಿಕೊಳ್ಳುತ್ತೀರಿ. ಯಾವ ಜನಾಂಗ ಸಾಮಾನ್ಯ ಅನ್ನ ಬಟ್ಟೆಯನ್ನು ಸಂಪಾದಿಸಲಾರದೋ- ಮತ್ತೊಬ್ಬರ ಮುಖವನ್ನು ನೋಡಿಕೊಂಡೇ ಹೊಟ್ಟೆ ಹೊರೆದು ಕೊಳ್ಳುತ್ತದೆಯೋ ಆ ಜನಾಂಗಕ್ಕೆ ಬಡಾಯಿ ಏಕೆ? ಧರ್ಮ ಕರ್ಮಗಳನ್ನು ಈಗ ಗಂಗೆಯಲ್ಲಿ ತೇಲಿಬಿಟ್ಟು ಮೊದಲು ಜೀವನ ಸಂಗ್ರಾಮದಲ್ಲಿ ಮುಂದಾಗಿರಿ. ಭರತಖಂಡದಲ್ಲಿ ಎಷ್ಟು ಪದಾರ್ಥಗಳಿಂದ ಮತ್ತು ಅವುಗಳ ಸಹಾಯದಿಂದ ಬಂಗಾರವನ್ನು ಪಡೆಯುತ್ತಾರೆ, ನೀವೋ ಮೂಟೆ ಹೊರುವ ಕತ್ತೆಗಳಂತೆ ಅವರ ಪದಾರ್ಥಗಳನ್ನು ದೇಶವಿದೇಶಗಳ ಜನರು ತೆಗೆದು ಕೊಂಡು ಅವುಗಳ ಮೇಲೆ ತಮ್ಮ ಬುದ್ಧಿಯನ್ನು ಉಪ ಯೋಗಿಸಿ ನಾನಾ ಪದಾರ್ಥಗಳನ್ನು ತಯಾರುಮಾಡಿ ದೊಡ್ಡವರಾದರು. ನೀವೋ ನಿಮ್ಮ ಬುದ್ಧಿಯನ್ನು ಪೆಟ್ಟಿಗೆಯಲ್ಲಿ ಮುಚ್ಚಿಟ್ಟು ಮನೆಯಲ್ಲಿದ್ದ ಹಣವನ್ನು ಹೊರಗಿನವರಿಗೆ ಕೊಟ್ಟುಬಿಟ್ಟು 'ಕವಳ', 'ಕವಳ' ಎಂದು ಅಲೆಯುತ್ತೀರಿ. ●

(ಈ ವಿಚಾರ ಲಹರಿಗಳನ್ನು ಮೈಸೂರಿನ ಶ್ರೀ ರಾಮಕೃಷ್ಣಾಶ್ರಮ ಪ್ರಕಟಿಸಿದ 'ಸ್ವಾಮಿ ವಿವೇಕಾನಂದರ ಕೃತಿ ಶ್ರೇಣಿ'ಯ ಹತ್ತು ಸಂಪುಟಗಳಿಂದ ಆಯ್ದುಕೊಳ್ಳಲಾಗಿದೆ.)

ಶಿವಶಕ್ತಿ + ಭೀಮಶಕ್ತಿ = ದಲಿತರ ಸರ್ವನಾಶ



ಶಿವಶಕ್ತಿ + ಭೀಮಶಕ್ತಿ = ದೇಶಭಕ್ತಿ ಎಂಬ ಭಿತ್ತಿ ಪತ್ರಗಳು ಚುನಾವಣೆ ಭರಾಟೆ ಹತ್ತಿರವಾಗುತ್ತಿದ್ದಂತೆ ಮಹಾರಾಷ್ಟ್ರದಲ್ಲಿ ಅಲ್ಲಲ್ಲಿ ಹಾರಾಡುತ್ತಿರುವ ಭಾರತೀಯ ಜನತಾ ಪಕ್ಷದ ಚಡ್ಡಿ ಸಂಸ್ಥೆಯಾದ ಶೀವಸೇನೆ ದಲಿತರ ಮತಗಳಿಕೆಗಾಗಿ ಅಂಬೇಡ್ಕರ್ ಹಾಗೂ ಜನವಿರೋಧಿ ಉಗ್ರ ಹಿಂದುತ್ವವಾದಿ ಮತ್ತು ದೇಶದ ನಂ.1 ಭಯೋತ್ಪಾದಕನೆಂದು ಕುಖ್ಯಾತಿಯನ್ನು ಪಡೆದಿರುವ ಶಿವಸೇನೆಯ ಮುಖ್ಯಸ್ಥ ಬಾಳಾಠಾಕ್ರೆಯ ಭಾವ ಚಿತ್ರಗಳಿರುವ ಭಿತ್ತಿ ಪತ್ರಗಳು ಈಚೆಗೆ ಮಹಾರಾಷ್ಟ್ರದೆಲ್ಲೆಡೆ ಕಾಣಿಸುತ್ತಿವೆ.

ನಿರಂತರವಾಗಿ ನೋವು, ಅವಮಾನ ಅಸಮಾನತೆ, ದಮನ, ದೌರ್ಜನ್ಯ ಸಜೀವ ದಹನಗಳಿಗೆ ಗುರಿಯಾದಂತಹ ಜನರನ್ನು ರಾಜಕೀಯ ಪಕ್ಷಗಳು ತಮ್ಮ ವೈಯಕ್ತಿಕ ತೆವಲುಗಳಿಗಾಗಿ ಬಡವರ ರಕ್ತ ಹೀರುತ್ತಿದ್ದಾರೆ. ಸರ್ಕಾರ ಉರುಳಿಸಲು, ಸರ್ಕಾರ ಸ್ಥಾಪಿಸಲು ದಲಿತರ ರಕ್ತದ ಕೋಡಿ ಹರಿಯುತ್ತಿರುವುದನ್ನು ನಾವು ನೋಡಿದ್ದೇವೆ.

○ ಸಣ್ಣಿಂಗಿ ರಾಜ

ರಾಜಕೀಯ ಪಕ್ಷಗಳ ಕುತಂತ್ರಗಳನ್ನು ಜನರಿಂದು ಅರಿತು ಮತ ಚಲಾಯಿಸುವುದನ್ನೆ ಬಹಿಸ್ಕರಿಸುತ್ತಿದ್ದಾರೆ, ಕಳ್ಳ ಕದೀಮ, ಗೂಂಡಾಗಳಿಗೆ, ಹಗಲು ದರೋಡೆಕೋರರಿಗೆ, ನಾವ್ಯಾಕೆ ಪರವಾನಗಿ ನೀಡಬೇಕೆಂಬ ಸತ್ಯವನ್ನು ಅರಿತಿದ್ದಾರೆ. ಹೊಸಹೊಸ ಘೋಷಣೆಗಳೊಂದಿಗೆ ಜನರನ್ನ ವಂಚಿಸಲು ನೋಡಿದರು. ಆ ಘೋಷಣೆಗಳೆಲ್ಲ ಹಳಸಲಾಗಿದೆ. ಆದ್ದರಿಂದ ಇಂದು ಹೊಸಹೊಸ ಘೋಷಣೆಗಳನ್ನ ಹೊಸಹೊಸ ಪಕ್ಷಗಳ ಹೆಸರಿನಲ್ಲಿ ನೀಡುತ್ತಿದ್ದಾರೆ. ಎಲ್ಲಾ ಸಂಸದೀಯ ಪಕ್ಷಗಳ ಅಳ್ವಿಕೆಯನ್ನ ಕಂಡ ಜನರು ಬೇಸತ್ತು ಹೋಗಿದ್ದಾರೆ.

ಆದ್ದರಿಂದ ಇಂದು ಜನರನ್ನ ವಂಚಿಸಲು ಹಲವಾರು ಪ್ರಾದೇಶಿಕ ಪಕ್ಷಗಳು ಹುಟ್ಟಿಕೊಳ್ಳುತ್ತಿವೆ. ದಲಿತರ ಹೆಸರಿನಲ್ಲೆ ಹುಟ್ಟಿ ಬಂದ ಬಿ.ಎಸ್.ಪಿ. ಅಂಬೇಡ್ಕರ್, ದಲಿತರು, ಬಹುಜನರೆಂದು ಹೇಳುತ್ತಾ ಅಧಿಕಾರಕ್ಕಾಗಿ, ಜನದ್ರೋಹಿ ಮನುವಿನ ಅನುಯಾ(ನಾ)ಯಿ ಬಿಜೆಪಿಯೊಂದಿಗೆ ಹೊಂದಾಣಿಕೆ ಮಾಡಿಕೊಂಡು ಜನರನ್ನ ವಂಚಿಸಿದ್ದನ್ನ ನಾವು ಕಂಡಿದ್ದೇವೆ. ಇವರ್ಯಾರನ್ನೂ ಜನರು ನಂಬುತ್ತಿಲ್ಲ. ಎಲ್ಲಾ ಸಂಸದೀಯ ಪಕ್ಷಗಳು ಸಹ ಜನರ ರಕ್ತ ಹೀರಲು ಇರುವ ಪಕ್ಷಗಳೇ ಆಗಿವೆ. ಅವು ಎಂದೂ ಸಹ ಜನರ ಹಿತ ಚಿಂತನೆಗಾಗಿ (ಶ್ರಮಿಸಿದ್ದಿಲ್ಲ) ಶ್ರಮಿಸುವುದಿಲ್ಲ ಇದು ನಮ್ಮ ಕಣ್ಣಮುಂದಿನ ವಾಸ್ತವ ಸತ್ಯ.

ಶಿವಸೇನೆ ಎಂಬ ವಾನರಸೇನೆಯ ದೇಶಭಕ್ತಿ:

ಶಿವಸೇನೆ ಮಹಾರಾಷ್ಟ್ರದಲ್ಲಿ ದಲಿತರ ವಿರುದ್ಧ ಅತಿಮುಖ್ಯವಾಗಿ ಅಂಬೇಡ್ಕರ್ ಅವರ ಅನುಯಾಯಿಗಳು ಮತಾಂತರ ಹೊಂದುವಂತಹ ಪ್ರಕ್ರಿಯೆಯನ್ನ ಆರಂಭಿಸಿದ ಬಂದ ಮೇಲೆ ಮೇಲ್ಜಾತಿಯ ಪಕ್ಷ ಹಿಂದುತ್ವದ ಹೆಸರಿನಲ್ಲಿ ಧರ್ಮ ಧರ್ಮಗಳ ನಡುವೆ ಜಾತಿ ಜಾತಿಗಳ ನಡುವೆ ಕಲಹ ಹಚ್ಚಿ ಚುನಾವಣೆ ಅಧಿಕಾರ ಹಿಡಿಯಲು ಹುಟ್ಟಿಕೊಂಡವು. ಅದೇ ರೀತಿ ಬಾಳಾಠಾಕ್ರೆ ಮಹಾರಾಷ್ಟ್ರದಲ್ಲಿ ಎಲ್ಲೇ ಮೀರಿ ದಲಿತರ ಸಜೀವ ದಹನ, ಅಂಬೇಡ್ಕರ್ ಪ್ರತಿಮೆಗಳಿಗೆ ಅವಮಾನ, ಹತ್ಯಾಕಾಂಡಗಳನ್ನ ಮುಂಬೈನ ಬೀದಿಬೀದಿಗಳಲ್ಲಿ ನಡೆಸಿರುವಂತಹ ವ್ಯಕ್ತಿಯಾದರೂ ಇಂದು ದಲಿತರ ಮತಗಳಿಕೆಗಾಗಿ ಅಂಬೇಡ್ಕರ್ ಹೆಸರು ಹೇಳುತ್ತಿರುವುದನ್ನ ನಾವು ಅರಿಯಬೇಕಿದೆ.

ಮಹಾರಾಷ್ಟ್ರದಲ್ಲಿ ಅಂಬೇಡ್ಕರ್‌ರವರು ದಲಿತರ ಏಳ್ಗೆಗಾಗಿ ದಲಿತರ ಮೇಲೆ ದೌರ್ಜನ್ಯ ನಡೆಸ್ಸುವಂತಹ ಮೇಲ್ಜಾತಿಯ ದುರಾಭಿಮಾನಿಗಳ ವಿರುದ್ಧ ಹುಟ್ಟಿಕೊಂಡಂತಹ 'ಭೀಮಸೇನೆ' ಸಂಘಟನೆ ಇಂದು ಯಾರಿಗೆ ಮತ್ತು ಎಂತಹ ಉದ್ದೇಶಗಳಿಗಾಗಿ ಬಳಕೆಯಾಗುತ್ತಿದೆ?

ಮೇಲ್ಜಾತಿ ಮೇಲ್ವರ್ಗದ ಸಂಘಟನೆಗಳು ಇನ್ನೊಂದು ಜಾತಿಯ ಮೇಲೆ ದೌರ್ಜನ್ಯ ಮಾಡುವುದು ಮತ್ತು ದಮನಿತ ಜಾತಿಗಳು ಮೇಲೆ (ಸಮಾಜದ ಮುಖ್ಯವಾಹಿನಿಗೆ) ಬರದಂತೆ ತುಳಿಯುವುದಕ್ಕಾಗಿಯೇ ಹುಟ್ಟಿಕೊಂಡರೆ, ದಮನಿತ ಜಾತಿ ಸಂಘಟನೆಗಳು ತಮ್ಮ ಹಕ್ಕುಗಳಿಗಾಗಿ ತಮ್ಮ ಮೇಲೆ ನಡೆಯುವಂತಹ ದೌರ್ಜನ್ಯಗಳನ್ನ ಪ್ರತಿಭಟಿಸಲಿಕ್ಕಾಗಿಯೇ ಹುಟ್ಟಿಕೊಳ್ಳುತ್ತವೆ ಇದನ್ನ ನಾವು ಸೂಕ್ಷ್ಮವಾಗಿ ಗಮನಿಸಬೇಕು. 'ಭೀಮಸೇನೆ' ದಮನಿತ ಜನರ ಆಶಯಗಳಿಗಾಗಿ ದಲಿತ ದಮನಿತರ ನೋವಿನ ಧ್ವನಿಯಾಗಿ ಅಂದು ಮಹಾರಾಷ್ಟ್ರದಲ್ಲಿ ಹುಟ್ಟಿಕೊಂಡಿತು.

ಅಂಬೇಡ್ಕರ್ ಎಲ್ಲಿ - ಬಿಜೆಪಿ ಭಯೋತ್ಪಾದಕರೆಲ್ಲಿ

ಹಿಂದುತ್ವ, ಬ್ರಾಹ್ಮಣಶಾಹಿ ಪುರೋಹಿತರ ಕಡುವೈರಿಯಾಗಿದ್ದ ಅಂಬೇಡ್ಕರ್ ವ್ಯಕ್ತಿತ್ವದ ಕುರಿತು ವಿವರಿಸುವ ಅಗತ್ಯವಿಲ್ಲ. ಅಂಬೇಡ್ಕರ್ ಹಿಂದೂ ಧರ್ಮವನ್ನು ವಿರೋಧಿಸಿ ಬೇರೆ ಧರ್ಮಕ್ಕೆ ಹೋದ ಕಾರಣಗಳನ್ನ ವಿವರಿಸಿ ಅವರು ಹೇಳಿದ್ದಾರೆ. ಅಂತಹ ವ್ಯಕ್ತಿಯನ್ನು ಇಂದು ಜನ ವಿರೋಧಿ, ಜೀವವಿರೋಧಿ ಮನುವಿನ ಅನುಯಾಯಿ ಉಗ್ರ ಹಿಂದುತ್ವವಾದಿ ಬ್ರಾಹ್ಮಣಶಾಹಿಗಳ ಪಕ್ಷದ ಬಾಳಾಠಾಕ್ರೆಯ ಚಿತ್ರದೊಂದಿಗೆ ಅಂಬೇಡ್ಕರ್ ಚಿತ್ರ ಕಲ್ಪನಾತೀತ, ಅಷ್ಟೇ ಈ ನಾಡಿನ ದುರಂತ.

ಸಂಘಗಳು, ದಲಿತರನ್ನ ಮತ್ತು ಸಮಸಮಾಜದ ಆಶಯಗಳಿಗಾಗಿ ಶ್ರಮಿಸಿದ ಹಲವು ಜನನಾಯಕರನ್ನ ಸರ್ವನಾಶಮಾಡಿ, ಅವರ ವಿಚಾರಗಳಿಗೆ ಗೋರಿ ಕಟ್ಟಿದ್ದಾರೆ. ಅರುಣ್ ಶೌರಿ ಎಂಬ ಜನದ್ರೋಹಿ ಕೇಂದ್ರದ ಬಂಡವಾಳ ಕಡಿತ ಖಾತೆಯ ಕುಖ್ಯಾತ ಮಂತ್ರಿ 'ಸುಳ್ಳ ದೇವರುಗಳ ಸೃಷ್ಟಿ'ಎಂಬ ಉದ್ಗ್ರಂಥವನ್ನ ಬರೆದು ಡಾ|| ಅಂಬೇಡ್ಕರ್‌ರನ್ನ ಮಟ್ಟಹಾಕಲು ನೋಡಿದರು. ಆದರೆ ಅದು ಸಾಧ್ಯವಾಗಲಿಲ್ಲ, ಆದ್ದರಿಂದ ಇಂದು ದಲಿತರನ್ನ ಮತ್ತು ಅಂಬೇಡ್ಕರ್‌ರನ್ನ ಬಿಟ್ಟು ಏನು ಮಾಡಲು ಸಾಧ್ಯವಿಲ್ಲವೆಂದು ತಿಳಿದು ಅವರನ್ನಿಟ್ಟುಕೊಂಡು ರಾಜಕೀಯಕ್ಕೆ ಬರುತ್ತಿದ್ದಾರೆ. ಇದು ಬಿಜೆಪಿಗಳ ಅಸಹಾಯಕತೆ ಮತ್ತು ಕುತಂತ್ರವನ್ನ ಸೂಚಿಸುತ್ತದೆ.

ಮನುಧರ್ಮ, ವೇದಶಾಸ್ತ್ರಗಳ ಆಧಾರದ ಮೇಲೆ ಜಾತಿಧರ್ಮ ದೇವರುಗಳನ್ನ ಸೃಷ್ಟಿಸಿ, ಜನರನ್ನ ಒಡೆದು ಆಳುತ್ತಿರುವ ಕೋಮುವಾದಿ ಸಂಘಗಳು ಮತ್ತು ದಮನಿತ ಜನರ ಭೀಮಸೇನೆ ಸೇರಿದರೆ ದಲಿತರ ಸರ್ವನಾಶ

(36ನೇ ಪುಟಕ್ಕೆ)

ತಾರ್ಕಿಕ ಧರ್ಮ V/s ಅತಾರ್ಕಿಕ ಧರ್ಮ

'ಭಾರತೀಯ ಸಮಾಜದಲ್ಲಿ ಕ್ರಾಂತಿ ಮತ್ತು ಪ್ರತಿಕ್ರಾಂತಿ'ಯನ್ನು ವಿವರಿಸುವಾಗ ಅಂಬೇಡ್ಕರ್‌ರವರು ಬ್ರಾಹ್ಮಣ್ಯ ಮತ್ತು ಬೌದ್ಧಧರ್ಮದ ನಡುವಿನ ಸಂಘರ್ಷ ಚರಿತ್ರೆಯೆಂದೇ ವ್ಯಾಖ್ಯಾನಿಸುತ್ತಾರೆ. ಅಂದರೆ ಭಾರತೀಯ ಸಮಾಜದ ನಾಗರೀಕತೆ ಮತ್ತು ಚರಿತ್ರೆಯಲ್ಲಿ ಬೌದ್ಧಧರ್ಮದ ಪಾತ್ರವನ್ನು ಅದು ಎತ್ತಿ ತೋರಿಸುತ್ತದೆ. ಅನೇಕ ಕ್ರಾಂತಿಕಾರಿ ನಾಯಕರು ತಮ್ಮ ವರ್ಣವ್ಯವಸ್ಥೆಯ ವಿರುದ್ಧದ ಹೋರಾಟದಲ್ಲಿ ಇಂತಹ ಪ್ರಶ್ನೆಗಳನ್ನು ಕೈಗೆತ್ತಿಕೊಂಡಿದ್ದಾರೆ.

ಮೂಲ: ಗೇಲ್ ಓಮ್‌ವೆಡ್ಟ್

ಕನ್ನಡಕ್ಕೆ : ದಿ.ಡಾ.ಚಿ.

'ಧರ್ಮದ ಉದ್ದೇಶ ಈ ಜಗತ್ತಿನ ಉಗಮವನ್ನು ವಿವರಿಸುವುದು. ಆದರೆ 'ಧಮ್ಮ'ವು ಜಗತ್ತನ್ನು ಮರು ನಿರ್ಮಿಸುವ ಉದ್ದೇಶವನ್ನು ಹೊಂದಿದೆ'. ಈ ಉಲ್ಲೇಖದ ಮೂಲಕ ಡಾ. ಬಿ.ಆರ್. ಅಂಬೇಡ್ಕರ್ ಬೌದ್ಧಧರ್ಮ ಜಗತ್ತನ್ನು ಪರಿವರ್ತಿಸುವ ಧರ್ಮವೆಂದು ಅರ್ಥೈಸುತ್ತಾರೆ. ಅಂದರೆ ಅದು ಮೂರು ಮುಖ್ಯ ಸವಾಲುಗಳನ್ನು ಒಡ್ಡುತ್ತದೆ. ಪಾರಂಪರಿಕ ಭಾರತೀಯ ಸಮಾಜದ ಶೋಷಣಾತ್ಮಕ ವ್ಯವಸ್ಥೆಯಾದ ಬ್ರಾಹ್ಮಣ್ಯವನ್ನು ಅದು ತಿರಸ್ಕರಿಸುತ್ತದೆ. ಅಲ್ಲದೆ, ಶೋಷಣೆಯನ್ನು ವಿರೋಧಿಸುವ ಸಾಮಾಜಿಕ ಸಿದ್ಧಾಂತವಾದ ಮಾರ್ಕ್ಸ್‌ವಾದವನ್ನು ಪ್ರಶ್ನಿಸುತ್ತದೆ. ಹಾಗೂ ಇಲ್ಲಿವರೆಗೂ ಅರ್ಥೈಸಲಾಗಿರುವ ಬೌದ್ಧ ಧರ್ಮದ ವ್ಯಾಖ್ಯಾನಗಳನ್ನು ಮರು ವ್ಯಾಖ್ಯಾನಕ್ಕೆ ಒಳಪಡಿಸುತ್ತದೆ.

ಭಾರತವನ್ನು ಕಾಡುತ್ತಿರುವ ಅನೇಕ ಕೆಡುಕುಗಳಿಗೆ ಬ್ರಾಹ್ಮಣ್ಯವೇ ಕಾರಣೀಭೂತವೆನ್ನುವುದರಲ್ಲಿ ಡಾ.ಅಂಬೇಡ್ಕರ್‌ರವರಿಗೆ ಸಂದೇಹವೇ ಇಲ್ಲ. ಆದ್ದರಿಂದ ಅದಕ್ಕೆ ಪರ್ಯಾಯ ಬೌದ್ಧಧರ್ಮವೊಂದೇ ಎನ್ನುತ್ತಾರೆ. 'ಭಾರತೀಯ ಸಮಾಜ ಚರಿತ್ರೆ' ಎನ್ನುವ ಪ್ರಬಂಧದಲ್ಲಿ 'ಭಾರತೀಯ ಸಮಾಜದಲ್ಲಿ ಕ್ರಾಂತಿ ಮತ್ತು ಪ್ರತಿಕ್ರಾಂತಿ'ಯನ್ನು ವಿವರಿಸುವಾಗ ಅವರು ಬ್ರಾಹ್ಮಣ್ಯ ಮತ್ತು ಬೌದ್ಧಧರ್ಮದ ನಡುವಿನ ಸಂಘರ್ಷ ಚರಿತ್ರೆಯೆಂದೇ ವ್ಯಾಖ್ಯಾನಿಸುತ್ತಾರೆ. ಅಂದರೆ ಭಾರತೀಯ ಸಮಾಜದ ನಾಗರೀಕತೆ ಮತ್ತು ಚರಿತ್ರೆಯಲ್ಲಿ ಬೌದ್ಧಧರ್ಮದ ಪಾತ್ರವನ್ನು ಅದು ಎತ್ತಿ ತೋರಿಸುತ್ತದೆ. ಅನೇಕ ಕ್ರಾಂತಿಕಾರಿ ನಾಯಕರು ತಮ್ಮ ವರ್ಣವ್ಯವಸ್ಥೆಯ ವಿರುದ್ಧದ ಹೋರಾಟದಲ್ಲಿ ಇಂತಹ ಪ್ರಶ್ನೆಗಳನ್ನು ಕೈಗೆತ್ತಿಕೊಂಡಿದ್ದಾರೆ. ಅಂತಹುದರಲ್ಲಿ ಬಹು ವಿಶಿಷ್ಟವಾಗಿ ನಿಲ್ಲುವುದೆಂದರೆ ಅಂಬೇಡ್ಕರವರು ಭಾರತೀಯ ಚರಿತ್ರೆಯ ಬಗ್ಗೆ ವ್ಯಾಖ್ಯಾನಿಸಿದ 'ಬೌದ್ಧಧರ್ಮ ಮತ್ತು ಬ್ರಾಹ್ಮಣ ಧರ್ಮ'ದ ಡಯಲೆಕ್ಟಿಕ್ಸ್(ದ್ವಂದ್ವಾತ್ಮಕ ಭೌತಿಕ ತಾರ್ಕಿಕತೆ)ನಲ್ಲಿ.

ಅದೆ ಸಮಯದಲ್ಲಿ ಮಾರ್ಕ್ಸ್‌ವಾದಕ್ಕೆ ಧಮ್ಮವೊಂದೇ ಪರ್ಯಾಯವೆಂದೂ ಅಂಬೇಡ್ಕರ್‌ರವರು ಸೂಚಿಸುತ್ತಾರೆ. ಅಂದರೆ ಶೋಷಣೆಗೆ ಪರಿಹಾರವಾಗಿ ಮಾರ್ಕ್ಸ್‌ಸಿದ್ಧಾಂತಿಗಳ ಪ್ರಶ್ನೆಯನ್ನೇ ಅವರು ಮತ್ತೊಂದು ರೀತಿಯಲ್ಲಿ ಕೇಳುತ್ತಾರೆ. ತನ್ನ 'ಫಯರ್‌ಬಾಕ್‌ನ ಥೀಸಿಸ್'ನಲ್ಲಿ ಕಾರ್ಲ್‌ಮಾರ್ಕ್ಸ್ ಹೀಗೆನ್ನುತ್ತಾರೆ. 'ತತ್ವಜ್ಞಾನಿಗಳು ಜಗತ್ತನ್ನು ಭಿನ್ನವಾಗಿ ಅರ್ಥೈಸಿದ್ದಾರಷ್ಟೇ. ಆದರೆ ಅದನ್ನು ಬದಲಾಯಿಸುವುದು ಪ್ರಮುಖ ಸಂಗತಿಯಾಗಿದೆ'. ಈ ಪ್ರಸಿದ್ಧ ಹೇಳಿಕೆಯನ್ನು ಅಂಬೇಡ್ಕರ್‌ರವರು ಮತ್ತಷ್ಟು ವಿವರವಾಗಿ ಪ್ರತಿಧ್ವನಿಸುತ್ತಿದ್ದಾರೆ. ತಮ್ಮ ಒಂದು ಪ್ರಬಂಧ 'ಬುದ್ಧ ಅಥವಾ ಕಾರ್ಲ್‌ಮಾರ್ಕ್ಸ್'ದಲ್ಲಿ ಅಂಬೇಡ್ಕರ್ ಅವರು ಹೇಳುವುದೇನೆಂದರೆ 'ತತ್ವಶಾಸ್ತ್ರದ ಒಂದು ಪ್ರಮುಖ ಕ್ರಿಯೆಯೆಂದರೆ ಜಗತ್ತಿನ ಮರು ನಿರ್ಮಾಣವನ್ನು ಮಾಡುವುದೇ ಹೊರತು, ಅದರ ಉಗಮವನ್ನು ವಿವರಿಸುವುದರಲ್ಲಿ ಕಾಲ ಕಳೆಯುವುದು ಅಲ್ಲ'. ಮಾರ್ಕ್ಸ್ ಸಿದ್ಧಾಂತದಲ್ಲಿರುವ ಈ ಬೆಂಕಿಯನ್ನು ಅಂಬೇಡ್ಕರ್‌ರವರು ಸರಿಯಾಗಿಯೇ ಗ್ರಹಿಸುತ್ತಾರೆ. ಆದಾಗ್ಯೂ ಅಂಬೇಡ್ಕರವರು ಜಗತ್ತಿನ ಸಮಸ್ಯೆಗಳಿಗೆ ಮಾರ್ಕ್ಸ್‌ನಿಂದ ಪ್ರೇರಣೆಯನ್ನು ಪಡೆಯುತ್ತಾರಾದರೂ, ಅವರು ಪ್ರತಿಪಾದಿಸುವ ಪರಿಹಾರೋಪಾಯಗಳು ಮಾರ್ಕ್ಸ್‌ವಾದಿಗಳಿಗೆ ಮತ್ತು ಸಮಕಾಲೀನ ಸೆಕ್ಯುಲರಿಸ್ಟರಿಗೆ ನುಂಗಲಾರದ ತುತ್ತಾಗಿ ಬಿಡುತ್ತದೆ. ಅಂಬೇಡ್ಕರವರ ಪ್ರಕಾರ 'ಬೌದ್ಧ ಸಂಘ', ಕಮ್ಯುನಿಸ್ಟ್ ಸಮಾಜದ ಆದರ್ಶದ ವಾಸ್ತವ ರೂಪ. ಅಂದರೆ ಧಮ್ಮದ ನೈತಿಕ ಧೋರಣೆಗಳು ವ್ಯಕ್ತಿ ಮತ್ತು ಸಮಾಜಗಳೆರಡನ್ನು ಮರು ನಿರ್ಮಿಸುತ್ತವೆ. ಇದನ್ನು ಮಾರ್ಕ್ಸ್‌ವಾದಿಗಳು 'ಭೂರ್ಶ್ವಾ ಆದರ್ಶವಾದ'ವೆಂದು ಪರಿಗಣಿಸುತ್ತಾರೆ. ಅವರಂತೆಯೇ ಭಾರತೀಯ ಮಂದಗಾಮಿ ಎಡಪಂಥೀಯರು ತಮ್ಮ ಕಾಲದ ಸೆಕ್ಯುಲರ್ ಧೋರಣೆಗಳಿಗೆ ಬದ್ಧರಾಗಿ ಆರ್ಥಿಕ ಮತ್ತು ರಾಜಕೀಯ ಪರಿಹಾರೋಪಾಯಗಳನ್ನು ಬಲವಾಗಿ ನಂಬುತ್ತಾರಲ್ಲದೆ ಧಾರ್ಮಿಕವಾದ ಪರಿಹಾರಗಳನ್ನು ಅಲ್ಲ.

ಅಂಬೇಡ್ಕರ್‌ರವರ ಬೌದ್ಧಧರ್ಮದ ಈ ಮೂರು ವ್ಯಾಖ್ಯಾನವು ಅಂತಿಮವಾಗಿ ಪ್ರಚಲಿತವಿದ್ದ ಬೌದ್ಧ ನಿರೂಪಣೆಗಳಿಗೂ ಸಹ ಬಲವಾದ ಸವಾಲನ್ನು ಒಡ್ಡುತ್ತದೆ. ಈಗಾಗಲೇ ಅಸ್ತಿತ್ವದಲ್ಲಿದ್ದ ಮೂರು ಬುದ್ಧ ಮಾರ್ಗಗಳಾದ ತೇರವಾದ (ಹೀನಾಯಾನ), ಮಹಾಯಾನ ಮತ್ತು ವಜ್ರಾಯಾನಗಳಿಗೆ ಬದಲಾಗಿ ಅಂಬೇಡ್ಕರ್‌ರವರು 'ನವಯಾನ ಬೌದ್ಧಧಮ್ಮ'ವನ್ನು ಆರಂಭಿಸುತ್ತಾರೆ. ಇಂದು ಈ ಪರಿಕಲ್ಪನೆ ಎಲ್ಲಾ ಕಡೆ ಒಪ್ಪಿಗೆಯನ್ನು ಪಡೆಯುತ್ತದೆ.

ಅನೇಕಬಾರಿ ಅಂಬೇಡ್ಕರ್‌ರವರ ವಿಧಾನ ಬೌದ್ಧಧರ್ಮದ ನಂಬುಗೆಯಲ್ಲಿ ಒಬ್ಬ ಪ್ರಾಕ್ಟಿಕಲ್ ಸುಧಾರಣಾ ವಾದಿಯಂತೆ ಕಂಡು, ತಮಗೆ ಬೇಕಾದುದನ್ನು ಆಯ್ದುಕೊಳ್ಳುತ್ತಾರೆ. ಹೀಗೆ ಮಾಡುವಾಗ ಅವರು ಒಬ್ಬ ಸಾಮಾನ್ಯನಂತೆ ವಿಧಿ ಆಚರಣೆಗಳಿಗೆ ಜೋತು ಬೀಳದೆ, ಪ್ರವಾದಿಯಂತೆ ತಮಗೆ ತಾವೇ ಮಾನ್ಯತೆಯನ್ನು ಪಡೆದುಕೊಳ್ಳುತ್ತಾರೆ. ಹೀಗೆ ಮಾಡುವಾಗ ಅವರು ಕಾರಣಗಳನ್ನು ಪ್ರತಿಪಾದಿಸುತ್ತಾರೆ. ಅವರಿಗೆ ಮಾರ್ಗದರ್ಶಕವಾದ ಸೂತ್ರಗಳ ಸರಳವಾದುದು: 'ಒಂದು ಪಠ್ಯಕ್ಕೆ ಕಾಲ ಕ್ರಮೇಣ ಹಲವಾರು ಪಠ್ಯಾಂತರಗಳು ಸೇರಿಕೊಳ್ಳುತ್ತವೆ. ಆ ಪಠ್ಯಾಂತರಗಳಿಗೆ ಒಂದು ಸಣ್ಣ ಪರೀಕ್ಷೆಯನ್ನು ಮಾಡಬಹುದು ಅಂದರೆ ಯಾವುದು ತಾರ್ಕಿಕ ಮತ್ತು ವಿವೇಚನೆಯಿಂದ ಕೂಡಿಸುತ್ತದೆಯೋ, ಅದನ್ನು ಬುದ್ಧ ಮಾತಿಗೆ ಸರಿಯಾದುದೆಂದು ಪರಿಗಣಿಸುವುದು'.

ಅಂದರೆ ಜ್ಞಾನೋದಯ ಕಾಲದ ತಾರ್ಕಿಕತೆಗೆ ಕೇವಲ ಧಾರ್ಮಿಕ ಮುಖವಾಡವನ್ನು ಧರಿಸಲಾಗಿದೆಯೇ? ಹಾಗೆ ಮಾಡುವಾಗ ಮಿತಿ ಮೀರಿ ವರ್ತಿಸಿದಂತೆ ಕಾಣಿಸುತ್ತಿದೆಯೇ?

ಬೌದ್ಧಧರ್ಮ ಹಾಗೂ ಬ್ರಾಹ್ಮಣಧರ್ಮ:

ಬೌದ್ಧಧರ್ಮವನ್ನು ಪುನರುಜ್ಜೀವನಗೊಳಿಸಿದ ಅಂಬೇಡ್ಕರವರ ಬಹುಮುಖ್ಯ ಸಂಗತಿಯೆಂದರೆ ಇಡೀ ಭಾರತದ ಸಮಗ್ರ ಅಭಿವೃದ್ಧಿಯ ಕಾಳಜಿಯಾಗಿತ್ತು. ಈ ನಿಟ್ಟಿನಲ್ಲಿ ಭಾರತೀಯ ಐಡೆಂಟಿಟಿಯನ್ನು ಕುರಿತಂತೆ ಇದ್ದ ಬೌದ್ಧಧರ್ಮ ಮತ್ತು ಬ್ರಾಹ್ಮಣ್ಯದ ನಡುವಿನ ಸಂಘರ್ಷದ ಚರ್ಚೆಯು ಅಂಬೇಡ್ಕರವರ ಅರ್ಥೈಸುವಿಕೆಯಲ್ಲಿ ಸ್ಪಷ್ಟತೆಯನ್ನು ತಳೆಯುತ್ತಿತ್ತು. ತಮ್ಮ ಸಮಕಾಲೀನ ಅನೇಕ ಬುದ್ಧಿಜೀವಿಗಳು., ಅದರಲ್ಲೂ ಇಂದು ಮೂಲತಃ 'ಹಿಂದೂ' ಐಡೆಂಟಿಟಿಯಲ್ಲಿ ಎಲ್ಲಾ

ಧರ್ಮಗಳನ್ನು ಮತ್ತು ಪಂಗಡಗಳನ್ನು ಏಕರೂಪಿಯಾಗಿಸಿ, ಇಡೀ ಭಾರತೀಯತೆಯು ದೈವ ಮತ್ತು ಮಾನವ ಆತ್ಮಗಳೊಡನೆ ಇರುವ ಮೂಲಭೂತ ಏಕತೆಯಲ್ಲಿ ಇದೆಯೆಂಬಂತೆ ವಾದಿಸುತ್ತಾರೆ.ಇದನ್ನು ಪಾಶ್ಚಿಮಾತ್ಯ ಧರ್ಮಗಳೊಡನೆ ಹೋಲಿಸಿ, ಅದು ಮಾನವ ಮತ್ತು ದೈವ, ಮಾನವ ಮತ್ತು ಪ್ರಕೃತಿ, ಏಕದೈವಾರಾಧನೆಯ ಧಾರ್ಮಿಕತೆ, ಪ್ರತ್ಯೇಕತೆ ಮತ್ತು ವೈಯಕ್ತಿಕತೆಯ ವಿಚಾರಗಳಲ್ಲಿ ಭಿನ್ನತೆಯು ಇದೆಯೆಂದು ತೋರಿಸಲಾಗುತ್ತಿತ್ತು. ಈ ಹಿನ್ನೆಲೆಯಲ್ಲಿ ಬೌದ್ಧಧರ್ಮವು ತನ್ನ ಮೂಲ ಸಂಗತಿಗಳಲ್ಲಿ ಹಿಂದೂ ಧರ್ಮದಂತೆ ಎಂದು ವಾದಿಸಲಾಗುತ್ತಿತ್ತು

'ಹಿಂದೂ' ಪರಿಕಲ್ಪನೆಯು ಮೂಲತಃ ಭೌಗೋಳಿಕತೆಯನ್ನು ಅಂದರೆ ಸಿಂಧೂ ನದಿಯಿಂದ ಬಂದುದಾಗಿ, ವಿದೇಶಿಯರು ಮೊದಲಿಗೆ ಅದನ್ನು ಬಳಸುತ್ತಾರೆ. ಇರಾನಿಯರು 'ಸ್'ನ್ನು 'ಹ್' ಎಂದು ಉಚ್ಚರಿಸುತ್ತಾರೆ. (ಆದ್ದರಿಂದಲೇ ಅಸುರ ಎಂಬ ಪದವು ವೇದದಲ್ಲಿನ ಆರ್ಯನ್ನರ ದೈವದ ವಿರುದ್ಧ ದೆವ್ವವಾಗಿ, ಜೊರಾಷ್ಟ್ರ ಧರ್ಮದಲ್ಲಿನ ಶ್ರೇಷ್ಠದೈವ 'ಅಹುರ' ಎಂದಾಗಿ ಬಳಕೆಯಾಗಿರುತ್ತದೆ) ಮೊಘಲರ ಕಾಲದಲ್ಲಿ ಅದನ್ನು ಅನೇಕ ಬಾರಿ ಭಿನ್ನ ಧರ್ಮೀಯರನ್ನು ಸೂಚಿಸಲು ಬಳಕೆಯಾಗುತ್ತಿತ್ತು. ಬ್ರಿಟಿಷ್ ಕಾಲದಲ್ಲಿ ಎಲೀಟ್(ಶ್ರೀಮಂತ) ರಾಷ್ಟ್ರೀಯವಾದಿಗಳು ತಮ್ಮ 'ಹಿಂದೂ ಧರ್ಮ'ದ ಪರಿಕಲ್ಪನೆಯಾಗಿ ಅದನ್ನು ಪರಿಭಾವಿಸುತ್ತಾರೆ. ಹಿಂದೂ ಧರ್ಮವೆಂದರೆ ವೇದಗಳನ್ನು ಆಧರಿಸಿದ ಸಡಿಲವಾದ, ಎಲ್ಲಾ ವಿಧದ ವಿಧಿಗಳು ಮತ್ತು ಪಂಗಡಗಳನ್ನು ಒಟ್ಟಾಗಿ, ವೇದಾಂತ ತತ್ವದಲ್ಲಿ ಸುಮಾರಾಗಿ ಏಕೀಕರಿಸಿರುವುದು ಕಂಡುಬರುತ್ತದೆ. ಹೀಗೆ ವ್ಯಕ್ತಿಯ ಆತ್ಮವನ್ನು ವಿಶ್ವದ ಚೈತನ್ಯದೊಡನೆ ಒಂದಾಗಿಸಿರುವುದು ಕಾಣಸಿಗುತ್ತದೆ. ಹಿಂದುತ್ವ ಐಡಿಯಾಲಜಿಯ ಜನಕರು 'ಹಿಂದೂ ಎನ್ನುವವನು ಭಾರತವನ್ನು ತನ್ನ ಪುಣ್ಯ ಭೂಮಿ ಮತ್ತು ಪಿತೃಭೂಮಿ ಎಂದು ಒಪ್ಪುವುದೆಂದು' ವಾದಿಸುತಾತ್ತಾರೆ. ಹಾಗೆಯೇ ಎಲೀಟ್ ಸುಧಾರಣಾವಾದಿಗಳು ಹಿಂದೂ ಧರ್ಮವನ್ನು 'ರಾಷ್ಟ್ರೀಯ ಧರ್ಮ'ವೆಂದು ಪ್ರಚುರಪಡಿಸುತ್ತಾರೆ. ಅಸ್ಪೃಶ್ಯರು ಬೇರೆ ಧರ್ಮಗಳಿಗೆ ಮತಾಂತರಗೊಳ್ಳುಬಾರದೆನ್ನುವ ಗಾಂಧೀಜಿಯ ವಾದದಲ್ಲೂ ಅದು ಅಡಗಿರುವುದನ್ನು ಗಮನಿಸಬಹುದು. ಅಂದರೆ ಅವರು ತಮ್ಮ ಧರ್ಮದಲ್ಲಿದ್ದುಕೊಂಡೇ ಅದರಲ್ಲಿ ಸುಧಾರಣೆ ತರಬೇಕೆಂದು ವಾದಿಸಲಾಗುತ್ತದೆ.

ಈ ನಿರೂಪಣೆಯ ಆಧುನಿಕ ಹಿಂದೂ ಧರ್ಮವು 'ಹಿಂದೂ ಧರ್ಮ ಮತ್ತು ಜಾತಿ' ಪ್ರಶ್ನೆಯನ್ನು ಮುಚ್ಚಿಬಿಡುತ್ತದೆ. ಆದರೆ 'ಧರ್ಮ' ಎಂಬ ಪದವು ಅನೇಕ ಬಾರಿ 'ರಿಲಿಜನ್'ಗೆ ಪರ್ಯಾಯವನ್ನಾಗಿ ಅನುವಾದಿಸಿಕೊಂಡರೂ ಸಹ, ಅಂತಿಮವಾಗಿ ಅದು 'ವರ್ಣಾಶ್ರಮ ಧರ್ಮ'ವನ್ನು ಸೂಚಿಸಲು ಬಳಸಲಾಗುತ್ತದೆ. ಸುಧಾರಣಾವಾದಿಗಳು ಮತ್ತು ಸನಾತನಿಗಳ ನಿಲುವೆಂದರೆ ಮೂಲ ವರ್ಣ ವ್ಯವಸ್ಥೆಯ ವಿವಿಧ ಭಾಷಾ



ಕಾರ್ಲ್‌ಮಾರ್ಕ್ಸ್

> ಅಂಬೇಡ್ಕರವರ ಪ್ರಕಾರ 'ಬೌದ್ಧಸಂಘ', ಕಮ್ಯುನಿಸ್ಟ್ ಸಮಾಜದ ಆದರ್ಶದ ವಾಸ್ತವ ರೂಪ. ಅಂದರೆ ಧಮ್ಮದ ನೈತಿಕ ಧೋರಣೆಗಳು ವ್ಯಕ್ತಿ ಮತ್ತು ಸಮಾಜಗಳೆರಡನ್ನು ಮರುನಿರ್ಮಿಸುತ್ತವೆ. ಇದನ್ನು ಮಾರ್ಕ್ಸ್‌ವಾದಿಗಳು 'ಭೂರ್ಜ್ವಾ ಆದರ್ಶವಾದ'ವೆಂದು ಪರಿಗಣಿಸುತ್ತಾರೆ. ಅವರಂತೆಯೇ ಭಾರತೀಯ ಮಂದಗಾಮಿ ಎಡಪಂಥೀಯರು ತಮ್ಮ ಕಾಲದ ಸೆಕ್ಯುಲರ್ ಧೋರಣೆಗಳಿಗೆ ಬದ್ಧರಾಗಿ ಆರ್ಥಿಕ ಮತ್ತು ರಾಜಕೀಯ ಪರಿಹಾರೋಪಾಯಗಳನ್ನು ಬಲವಾಗಿ ನಂಬುತ್ತಾರಲ್ಲದೆ ಧಾರ್ಮಿಕವಾದ ಪರಿಹಾರಗಳನ್ನು ಅಲ್ಲ.

ಮತ್ತು ಜನಾಂಗೀಯ ಗುಂಪುಗಳನ್ನು ಭಾರತದಲ್ಲಿ ಸೌಹಾರ್ದ ರೀತಿಯಲ್ಲಿ ಒಂದುಗೂಡಿಸುತ್ತಿತ್ತು ಆದರೆ ಆಧುನಿಕ ಕಾಲದಲ್ಲಿ ಅದು ಸಾವಿರಾರು ಕಠಿಣವಾದ ಜಾತಿಗಳಾಗಿ ಒಡೆದುಹೋಯಿತು ಎಂದು ವಾದಿಸಲಾಗುತ್ತದೆ. ಆದ್ದರಿಂದ ಪರಿಹಾರವೆಂಬಂತೆ ಆ ಆದರ್ಶೀಕೃತ ವರ್ಣ ವ್ಯವಸ್ಥೆಯ ಮೂಲಕ್ಕೆ ಹಿಂತಿರುಗುವುದು ಸೂಕ್ತವೆನ್ನಲಾಗುತ್ತದೆ. ಜವಾಹರ್‌ಲಾಲ್ ನೆಹರೂ ಕೂಡ ಜಾತಿ ಪದ್ಧತಿಯನ್ನು ತನ್ನ 'ಡಿಸ್ಕವರಿ ಆಫ್ ಇಂಡಿಯಾ' ಕೃತಿಯಲ್ಲಿ ಅನುಮೋದಿಸುತ್ತಾ, 'ಗ್ರಾಮ ಮತ್ತು ಅವಿಭಕ್ತ ಕುಟುಂಬ' ಭಾರತೀಯ ಸಮಾಜದ ಆಧಾರ ಕಂಬಗಳೆನ್ನುತ್ತಾರೆ. ಅಲ್ಲದೆ, 'ಜಾತಿಯೆನ್ನುವುದು ಮೂಲಭೂತವಾಗಿ ಕ್ರಿಯಾತ್ಮಕವಾದುದು ಮತ್ತು ಮಧ್ಯಕಾಲೀನ ಯೂರೋಪಿನ ಕಸುಬು ಗುಂಪುಗಳ ವ್ಯಾಪಾರದಂತೆಯೇ'ಎನ್ನುತ್ತಾರೆ.

ಹೀಗೆ ಭಾರತೀಯ ಚಿಂತನೆಯು ಪಾಶ್ಚಿಮಾತ್ಯ ಆಲೋಚನೆಯೊಡನೆ ಹೋಲಿಸುತ್ತಾ, ವ್ಯಕ್ತಿ ಮತ್ತು ಸಮುದಾಯ ಅಥವಾ ಸಹಕಾರ, ಹಾಗೂ ಆಧ್ಯಾತ್ಮವನ್ನು ಭೌತಿಕವಾದಕ್ಕೆ ವಿರುದ್ಧವಾಗಿ, ತೋರಿಸಲಾಗುತ್ತದೆ. ಈ ವೈರುಧ್ಯಗಳು ಎಡಪಂಥೀಯರಿಗೆ ಸೆಕ್ಯುಲರ್ ಆಗಿ, ಹಿಂದೂ ರಾಷ್ಟ್ರೀಯವಾದಿಗಳಿಗೆ ಸ್ವದೇಶಿಯವಾಗಿ, ಇಬ್ಬರಿಗೂ ದೇಶೀ ಸಾಮಾಜಿಕ ಚಿಂತನೆಯನ್ನು ಬೆಳೆಸಿಕೊಳ್ಳಲು ಅನುವು ಮಾಡಿಕೊಡುತ್ತವೆ.

ತಮ್ಮನ್ನು ತಾವೇ ಹಿಂದೂಗಳೆಂದು ಕರೆದುಕೊಳ್ಳುವವರಿಗೆ ಬೌದ್ಧಧರ್ಮವು ಅನೇಕ ಬಾರಿ ಒಂದು ರೀತಿಯ 'ಪ್ರತಿಭಟನಾ ಹಿಂದೂಧರ್ಮ'ವಾಗಿ ಕಾಣಿಸುತ್ತದೆಯಷ್ಟೆ ಇಂಥವರ ಪ್ರಕಾರ ಅದು ಪೂರ್ವ ಹಿಂದೂ ತಾತ್ವಿಕತೆಯಲ್ಲೇ ಬೆಳೆದು ಬಂತು, ವೈದಿಕ ಯಜ್ಞಗಳಲ್ಲಿದ್ದ ವಿಧಿ ಬದ್ಧತೆ ಮತ್ತು ಹಿಂಸೆಯನ್ನು ಅದು ಪ್ರತಿಭಟಿಸಿತು ಮತ್ತು ಜಾತಿ ಪದ್ಧತಿಯ ಕಠಿಣತೆಯನ್ನು ವಿರೋಧಿಸಿತು, ಈ ಎಲ್ಲಾ ಪ್ರತಿಭಟನೆಗಳು ಅವರ ವಾದವನ್ನು ಗೆಲ್ಲುತ್ತವೆ (ಅಂದರೆ ವೈದಿಕ ಆಚರಣೆಗಳು ಹೋಗಿ, ಸಸ್ಯಾಹಾರವು ಬ್ರಾಹ್ಮಣ ಬದುಕಾಯಿತು) ಅಥವಾ ಅಂಥದ್ದೇ ಮುಂದೆ ಭಕ್ತಿ ಚಳುವಳಿ ಮತ್ತು ಇತರ ಸುಧಾರಣಾ ಚಳುವಳಿಗಳು ಮಾಡಿದವು ಎಂದು ನಂಬಿಸಲಾಗುತ್ತದೆ. ಹೀಗೆ ಎಲ್ಲವನ್ನು ಒಳಗೊಳ್ಳುವ, ಕೈಚಾಚಿ ತಬ್ಬಿಕೊಳ್ಳುವ ಹಿಂದೂ ಧರ್ಮದಿಂದಾಗಿ ಕ್ರಮೇಣ ಬೌದ್ಧಧರ್ಮವು ನಿರುಪಯುಕ್ತವಾಗಿ ಸಾಯುತ್ತದೆ. ಆದ್ದರಿಂದ ಬೌದ್ಧಧರ್ಮವು ಮೂಲತಃ ಬೇರೆಯಲ್ಲ, ಮಹಾಯಾನದಲ್ಲಿ ಪರಿಕಲ್ಪಿತವಾದ 'ಶೂನ್ಯತಾ' (ಯಾವುದೇ ಮೂಲ ಲಕ್ಷಣವಿಲ್ಲ) ವೇದಾಂತದ 'ಬ್ರಹ್ಮಣ್'ಸಿದ್ಧಾಂತಕ್ಕೆ ಸಮನಾದುದು ಎಂದು ಅನೇಕರು ವಾದಿಸುತ್ತಾರೆ.

ಈ ರೀತಿ 'ಹಿಂದೂ' ಐಡಿಯಾಲಜಿಯ ಬೆಳವಣಿಗೆಯನ್ನು 19ನೇ ಮತ್ತು 20ನೇ ಶತಮಾನಗಳಲ್ಲಿ ಜಾತಿ ವಿರೋಧಿ ಚಳುವಳಿಗಳು ಖಂಡಿಸುತ್ತವೆ. ಈ ಚಳುವಳಿಗಳಲ್ಲಿ ಮೊದಲಿಗೆ ಜ್ಯೋತಿರಾವ್ ಫುಲೆ (ಮಹಾರಾಷ್ಟ್ರ), ಜ್ಯೋತಿದಾಸ್ ತಮಿಳುನಾಡಿನಲ್ಲಿ ಕಾಣಿಸಿಕೊಳ್ಳುತ್ತಾರೆ. ಈ ಎರಡು ಪ್ರದೇಶಗಳಲ್ಲೂ ಬ್ರಾಹ್ಮಣೇತರ ಚಳುವಳಿಗಳು ತೀವ್ರವಾಗಿ, 1920ರ ಸುಮಾರಿಗೆ ದಲಿತ ಚಳುವಳಿಗಳು ಎಲ್ಲಾ ಕಡೆ ಹುಟ್ಟಿಕೊಳ್ಳುತ್ತವೆ. ಈ ಚಳುವಳಿಗೆಲ್ಲಾ ಪ್ರಧಾನವಾದ ಚಿಂತನೆಯೆಂದರೆ 'ವೈರುಧ್ಯಾತ್ಮಕತೆ'ಯೆನ್ನುವುದು ಭಾರತೀಯ ಸಮಾಜ ಮತ್ತು ಚರಿತ್ರೆಯಲ್ಲಿ ಕಾಣಿಸಿಕೊಂಡಿರುವುದು. ಅಂದರೆ ಶೋಷಣೆ, ಹೋರಾಟ, ಹಿಂಸೆ ಮತ್ತು ದಬ್ಬಾಳಿಕೆ ಪ್ರಧಾನ ವಾಸ್ತವಗಳಾಗಿದ್ದು ಭಾರತೀಯ ಮಣ್ಣಿನಲ್ಲಿ ಉದಯಿಸಿರುವ ವಿವಿಧ ಬಗೆಯ ಧಾರ್ಮಿಕ ಮತ್ತು ತಾತ್ವಿಕ ಸಿದ್ಧಾಂತಗಳೆಲ್ಲಾ ಈ ವೈರುಧ್ಯವನ್ನು ಹೊಂದಿದ್ದವು.

ಅಂಬೇಡ್ಕರ್‌ರವರು ಈ ಪರಂಪರೆಯ ಮೇಲೆ ನಿರ್ಮಾಣ ಕ್ರಿಯೆಯಲ್ಲಿ ತೊಡಗುತ್ತಾರೆ. ಅವರು

'ಹಿಂದೂಧರ್ಮ'ದ ಪರಿಕಲ್ಪನೆಯನ್ನು ತಮ್ಮ ಎಲ್ಲಾ ಬರವಣಿಗೆಯಲ್ಲೂ ವಾಸ್ತವವೆಂದು ಒಪ್ಪುತ್ತಾರೆ. ಕಾರಣ 20ನೇ ಶತಮಾನದಲ್ಲಿ ಬಹುಮಂದಿ ಭಾರತೀಯರು ತಮ್ಮನ್ನು ಹಿಂದೂಗಳೆಂದೇ ವ್ಯಾಖ್ಯಾನಿಸಿಕೊಂಡಿದ್ದರು. ಇದನ್ನು ಅಂಬೇಡ್ಕರವರು ಗ್ರಹಿಸಿದ್ದು ಭಾರತೀಯ ಸಮಾಜದೊಳಗೆ ಇದ್ದ ವೈರುದ್ಧ್ಯಾತ್ಮಕ 'ಬ್ರಾಹ್ಮಣ್ಯ'ವನ್ನು ಅವರು ಬಳಸಿ, ಬ್ರಾಹ್ಮಣ ಶ್ರೇಷ್ಠತೆಯ ಮತ್ತು ಜಾತಿ ಶ್ರೇಣೀಕೃತ ವ್ಯವಸ್ಥೆಯನ್ನು ವಿವರಿಸುತ್ತಾರೆ. ಬೌದ್ಧ ಧರ್ಮ ಅವೆಲ್ಲವನ್ನು ತಿರಸ್ಕರಿಸುತ್ತದೆ.

ಬ್ರಾಹ್ಮಣ ಧರ್ಮವು ಮಂತ್ರ-ತಂತ್ರಗಳನ್ನು ಆಚರಣೆಗೆ ತಂದರೆ, ಬೌದ್ಧಧರ್ಮವು ತಾರ್ಕಿಕತೆ ಮತ್ತು ನೈತಿಕತೆಯನ್ನು ಬೋಧಿಸುತ್ತದೆ. ದಲಿತರಿಗೆ ಬೌದ್ಧಧರ್ಮ ಮತ್ತು ಬ್ರಾಹ್ಮಣ್ಯದ ನಡುವಿನ ಸಂಘರ್ಷವು ಬಹಳ ಮುಖ್ಯವಾದುದು. ಏಕೆಂದರೆ ಬೌದ್ಧಧರ್ಮದ ಉಚ್ಚಾಟನೆಯ ಮೂಲಕವೇ ಜಾತಿ ಪದ್ಧತಿಯನ್ನು ಆಚರಣೆಗೆ ತಂದದ್ದು, ಆ ಮೂಲಕ ಕೆಲವು ಗುಂಪುಗಳನ್ನು ಅಸ್ಪೃಶ್ಯರೆಂದು ಶ್ರೇಣೀಕೃತ ವ್ಯವಸ್ಥೆಯಡಿ ತಳ್ಳಿದ್ದು. ಆದ್ದರಿಂದಲೇ ಅಂಬೇಡ್ಕರವರು, ದಲಿತರು ಮೂಲತಃ ಬೌದ್ಧರಾಗಿದ್ದು ಸಂಪನ್ಮೂಲಗಳಿಂದ ಅವರನ್ನು ವಂಚಿತರನ್ನಾಗಿಸಿದ್ದು ನಾಗರೀಕತೆಯೊಳಗಿನ ಬಹುದೊಡ್ಡ ಸಂಘರ್ಷ ಎಂದು ಸಾರಿದ್ದು.

ಈ ಎಲ್ಲಾ ಚಿಂತನೆಯೂ ಹಿಂದಿನವರ ಜಾತಿ ವಿರೋಧಿ ಚಳುವಳಿಗಳಲ್ಲಿ ತಮ್ಮ ಬೇರುಗಳನ್ನು ಫುಲೆಯವರೂ ಸಹ ಅದನ್ನೇ ಮತ್ತೊಂದು ರೀತಿಯಲ್ಲಿ ಸಾಧರಪಡಿಸುತ್ತಾ ಬ್ರಾಹ್ಮಿಣಿಕಲ್ ಸಿದ್ಧಾಂತವು ಎಲ್ಲಾ ಜನ ಸಮುದಾಯಗಳನ್ನು ಗುಲಾಮಗಿರಿಗೆ ತಳ್ಳಿತು ಎನ್ನುತ್ತಾರೆ. ಅಲ್ಲದೆ, ಈ ಗುಲಾಮಗಿರಿಯ ವಿರುದ್ಧ ಬಹುಹಿಂದೆಯೇ ಹೋರಾಟದಲ್ಲಿ ತೊಡಗಿದ್ದು ಬುದ್ಧ ಎಂಬುದನ್ನು ಗುರುತಿಸುತ್ತಾರೆ. ತಮಿಳುನಾಡಿನ ಜ್ಯೋತಿದಾಸ್ ತನ್ನದೇ ಆದ ಬೌದ್ಧ ಚಳುವಳಿಯನ್ನು ಆರಂಭಿಸಿದರಲ್ಲದೆ, ದಲಿತರನ್ನು ಬೌದ್ಧರೆಂದೇ ಗುರುತಿಸುತ್ತಾರೆ.

ಅಂದರೆ ಅವರ ಪ್ರಕಾರ ತಮಿಳು 'ಪರೆಯ' ಜನರು ಬೌದ್ಧರಾಗಿದ್ದರಲ್ಲದೆ, ಬುದ್ಧನ ಸ್ವಂತ ಕುಲವಾದ 'ಸಾಖ್ಯಾ'ಸಂತನದವರೇ ಆಗಿದ್ದರೆಂದು ವಾದಿಸುತ್ತಾರೆ. 1920ರ ವೇಳೆಗೆ ಈ ಅಂಶವು ದಕ್ಷಿಣ ಭಾರತದ ಎಲ್ಲಾ ದಲಿತ ಚಳುವಳಿಗಳಲ್ಲೂ ಹಾಸುಹೊಕ್ಕಾಗಿ ರುವುದನ್ನು ಗುರುತಿಸಬಹುದು. ಆರ್ಯನ್ನರು ಆರ್ಯೇತ ರರ ಸ್ಥಳೀಯ ಸಮಾನತೆಯಿಂದ ಕೂಡಿದ ಸಮಾಜವನ್ನು ಆಕ್ರಮಿಸಿಕೊಂಡರು ಎಂಬ ಎಲ್ಲಾ ಥಿಯರಿಗಳ ಸಂದರ್ಭದಲ್ಲಿ ಮೇಲಿನ ಅಂಶ ಗಮನಕ್ಕೆ ಬರುತ್ತದೆ. ಈ ಅರ್ಥೈಸುವಿಕೆಯ ಹಿನ್ನೆಲೆಯಲ್ಲಿ ದಲಿತರು ಬೌದ್ಧಧರ್ಮವನ್ನು ಒಪ್ಪುವುದೆಂದರೆ (ಹಾಗೆಯೇ ಇತರ ಬ್ರಾಹ್ಮಣೇತರರೂ ಸಹ) ಅದು ಬರೀ ಮತಾಂತರವಾಗಿರದೆ ಅದೊಂದು ವಿಮೋಚನೆಯ ಧರ್ಮವಾಗಿದ್ದು ತಮ್ಮ ಮೂಲ ಐಡೆಂಟಿಟಿಗೆ ಹಿಂತಿರುಗುವುದೇ ಆಗಿದೆ.



ಜೋತಿ ಬಾ ಫುಲೆ

ಜ್ಯೋತಿ ದಾಸನ್

'ಹಿಂದೂ' ಐಡಿಯಾಲಜಿಯ ಬೆಳವಣಿಗೆಯನ್ನು 19ನೇ ಮತ್ತು 20ನೇ ಶತಮಾನಗಳಲ್ಲಿ ಜಾತಿ ವಿರೋಧಿ ಚಳುವಳಿಗಳು ಖಂಡಿಸುತ್ತವೆ. ಈ ಚಳುವಳಿಗಳಲ್ಲಿ ಮೊದಲಿಗೆ ಮಹಾರಾಷ್ಟ್ರದಲ್ಲಿ ಜ್ಯೋತಿರಾವ್ ಫುಲೆ, ತಮಿಳುನಾಡಿನಲ್ಲಿ ಜ್ಯೋತಿದಾಸ್ ಕಾಣಿಸಿಕೊಳ್ಳುತ್ತಾರೆ. ಈ ಎರಡು ಪ್ರದೇಶಗಳಲ್ಲೂ ಬ್ರಾಹ್ಮಣೇತರ ಚಳುವಳಿಗಳು ತೀವ್ರವಾಗಿ, 1920ರ ಸುಮಾರಿಗೆ ದಲಿತ ಚಳುವಳಿಗಳು ಎಲ್ಲಾ ಕಡೆ ಹುಟ್ಟಿಕೊಳ್ಳುತ್ತವೆ. 'ವೈರುದ್ಧ್ಯಾತ್ಮಕತೆ' ಭಾರತದ ಸಮಾಜ ಮತ್ತು ಚರಿತ್ರೆಯಲ್ಲಿ ಕಾಣಿಸಿಕೊಳ್ಳತೊಡಗುತ್ತದೆ.

ಧರ್ಮ ಮತ್ತು ಆಧುನಿಕತೆ:

ಕ್ರಾಂತಿಕಾರಕ ಸಮಾಜವಾದಕ್ಕೆ ಪರ್ಯಾಯವಾಗಿ ಧಮ್ಮವನ್ನು ಅಂಬೇಡ್ಕರವರು ಪ್ರತಿಪಾದಿಸಿರುವುದು ಮಾರ್ಕ್ಸಿಸಂಗೆ ನಿಜವಾದ ಸವಾಲಾಗಿದೆಯಷ್ಟೇ ಅಲ್ಲದೆ, ಅಂದಿನ ಎಲ್ಲಾ ಸಮಾಜವಾದಿ ಚಿಂತನೆಗಳಿಗೂ ಸವಾಲೇ ಸರಿ. ಆಧುನಿಕತೆಯನ್ನು ಧರ್ಮನಿರಪೇಕ್ಷಿತ (ಸೆಕ್ಯುಲರ್) ನೆಲೆಯಲ್ಲೇ ಅರ್ಥೈಸಲಾಗಿದೆ; ಕೈಗಾರಿಕಾ ಕ್ರಾಂತಿಯ ಕಾಲವು ವಿಜ್ಞಾನ ಮತ್ತು ಸಂದೇಹಿ ಬುದ್ಧಿಯನ್ನು ಪ್ರೇರೇಪಿಸಿದ ಕಾರಣ ಎಲ್ಲಾ ಧರ್ಮಗಳನ್ನು ಅದೇ ರೀತಿಯಾಗಿ ಕಾಣಲಾಯಿತು. 1950 ಮತ್ತು 1960ರ ದಶಕಗಳಲ್ಲಿ ಸಾಮಾನ್ಯವಾಗಿ ಪಾರಂಪರಿಕ ಧರ್ಮದ ಸ್ವರೂಪ ನಿಧಾನವಾಗಿ ಸಾವನ್ನಪ್ಪುತ್ತವೆಯೆಂದು ಭಾವಿಸಲಾಯಿತು. ಹಾಗೆಯೇ ಕಾರ್ಲ್‌ಮಾರ್ಕ್ಸ್‌ನ ಪ್ರಕಾರ ಧರ್ಮವು ಸಾಮಾಜಿಕ ವ್ಯವಸ್ಥೆಯ (ಸೂಪರ್ ಸ್ಟ್ರಕ್ಚರ್) ಭಾಗವಾಗಿದ್ದು ಸಾಮಾಜಿಕ ಸಮಾನತೆ ಬಂದೊಡನೆ ಅದು ಕಣ್ಮರೆಯಾಗುತ್ತದೆ.

ಮ್ಯಾಕ್ಸ್ ವೇಬರನೂ ಸಹ ಎಲ್ಲಾ ಕಡೆ ಹರಡಿರುವ ಅಧಿಕಾರ ಶಾಹಿಯ ತರ್ಕದಿಂದಾಗಿ ಜಗತ್ತಿನಲ್ಲಿ ಅತೃಪ್ತಿಯು ಅಧಿಕಗೊಂಡಿದೆಯೆನ್ನುತ್ತಾನೆ. ಅಂದಿನ ಅನೇಕ ಸಮಾಜ ಶಾಸ್ತ್ರಜ್ಞರೂ ಸಹ ನಂಬಿದ ಸಂಗತಿಯೆಂದರೆ ಸೆಕ್ಯುಲರ್ ನಿಲುವುಗಳ ಪ್ರಕ್ರಿಯೆಯಿಂದಾಗಿ ಧರ್ಮದ ಪ್ರಾಮುಖ್ಯತೆ ಕಮ್ಮಿಯಾಗುತ್ತದೆ.

ಆದರೆ ಅಂಬೇಡ್ಕರವರು ಭಿನ್ನವಾಗಿ ಯೋಚಿಸುತ್ತಾರೆ: 'ಸಮಾಜಕ್ಕೆ ನೈತಿಕತೆಯನ್ನು ನೀಡುವ ಒಂದು ಧರ್ಮದ ಅವಶ್ಯಕತೆ ಇದೆ', ಹೇಗೆ ಭಾರತದ ಹಿಂದುಳಿದಿರುವಿಕೆಗೆ, ಅದರಲ್ಲೂ ಅಸ್ಪೃಶ್ಯರ ಗುಲಾಮಿತನಕ್ಕೆ ಬ್ರಾಹ್ಮಣಧರ್ಮ ಕಾರಣವಾಗಿದೆಯೋ, ಅದನ್ನು ಕೇವಲ ಸಮಜೋ-ಆರ್ಥಿಕ ಅಭಿವೃದ್ಧಿಯಿಂದ ಸರಿಪಡಿಸಲಾಗದು ಮತ್ತು ಧರ್ಮವನ್ನು ಅಗತ್ಯವೆಂದು ಪರಿಗಣಿಸಲಾಗದು. ಆದ್ದರಿಂದ, ಒಂದು ಹೊಸ, ನೈತಿಕ ಮತ್ತು ತಾರ್ಕಿಕ ಧರ್ಮ ಅಥವಾ 'ಧಮ್ಮ'(ಇಂದಿನ) ಅಗತ್ಯ. 'ಬುದ್ಧ ಮತ್ತು ಆತನ ಧಮ್ಮ' ಕೃತಿಯಲ್ಲಿ ಅಂಬೇಡ್ಕರವರು ಹೀಗೆಂದು ಬರೆಯುತ್ತಾರೆ:

'ಸಮಾಜವು ಮೂರರಲ್ಲಿ ಒಂದನ್ನು ಆಯ್ಕೆ ಮಾಡಬೇಕು. ಅದು ಧಮ್ಮವನ್ನು ಸರ್ಕಾರದ ಸಾಧನವನ್ನಾಗಿ ಆಯ್ಕೆ ಮಾಡದಿರಬಹುದು.. ಅಂದರೆ ಇದು ಅರಾಜಕತೆಗೆ ಸಮಾಜವನ್ನು ದೂಡುತ್ತದೆ. ಎರಡನೆಯದಾಗಿ, ಸಮಾಜವು ಪೊಲೀಸ್ ಅಂದರೆ ಸರ್ವಾಧಿಕಾರವನ್ನು ಸರ್ಕಾರದ ಯಂತ್ರವನ್ನಾಗಿ ತೆಗೆದುಕೊಳ್ಳಬಹುದು, ಮೂರನೆಯದಾಗಿ, ಸಮಾಜವು ಧಮ್ಮವನ್ನು ಆರಿಸಿಕೊಂಡು, ಯಾವಾಗ ಧಮ್ಮವನ್ನು ಜನ ಅನುಸರಿಸುವುದಿಲ್ಲವೋ, ಆಗ ಒಬ್ಬ ನ್ಯಾಯಾದೀಶನನ್ನು ಆರಿಸಿ ಕೊಳ್ಳಬಹುದು. ಅರಾಜಕತೆ ಮತ್ತು ಸರ್ವಾಧಿಕಾರದಲ್ಲಿ ಸ್ವಾತಂತ್ರ್ಯ ಇರುವುದಿಲ್ಲ ಆಯ್ಕೆಯಲ್ಲಿ ಸ್ವಾತಂತ್ರ್ಯ

ಉಳಿದುಕೊಳ್ಳುತ್ತದೆ. ಆದ್ದರಿಂದ, ಯಾರಿಗೆ ಸ್ವಾತಂತ್ರ್ಯ ಬೇಕಿದೆಯೋ ಅವರು ಧಮ್ಮವನ್ನು ಹೊಂದ ಬೇಕಾಗುತ್ತದೆ'.

ಇಲ್ಲಿ ಅಂಬೇಡ್ಕರವರು ಕ್ರಿಯಾವಾದಿಗಳಿಗೆ (ಫಂಕ್ಷನಲಿಸ್ಟ್) ಹತ್ತಿರವಾಗಿ, ಸಾಮಾಜಿಕ ಭಾವೈಕ್ಯತೆಗೆ ಒಂದು ಮೌಲ್ಯಾತ್ಮಕ ವ್ಯವಸ್ಥೆ ಅಗತ್ಯವಿದೆ ಎನ್ನುವ ಅವರ ವಾದವನ್ನು ಒಪ್ಪುತ್ತಾರೆ. ಅದರಲ್ಲೂ ವಿಶೇಷವಾಗಿ ಫ್ರಾನ್ಸ್ ಸಮಾಜಶಾಸ್ತ್ರಜ್ಞ ಎಮಿಲ್ ಡರ್ಖೀಮ್‌ನನ್ನು

ಕ್ರಾಂತಿಕಾರಕ ಸಮಾಜವಾದಕ್ಕೆ ಪರ್ಯಾಯವಾಗಿ ಧಮ್ಮವನ್ನು ಅಂಬೇಡ್ಕರವರು ಪ್ರತಿಪಾದಿಸಿರುವುದು ಮಾರ್ಕ್ಸಿಸಂಗೆ ನಿಜವಾದ ಸವಾಲಾಗಿದೆಯಷ್ಟೇ ಅಲ್ಲದೆ, ಅಂದಿನ ಎಲ್ಲಾ ಸಮಾಜವಾದಿ ಚಿಂತನೆಗಳಿಗೂ ಸವಾಲೇ ಸರಿ. ಆಧುನಿಕತೆಯನ್ನು ಧರ್ಮನಿರಪೇಕ್ಷಿತ (ಸೆಕ್ಯುಲರ್) ನೆಲೆಯಲ್ಲೇ ಅರ್ಥೈಸಲಾಗಿದೆ; ಕೈಗಾರಿಕಾ ಕ್ರಾಂತಿಯ ಕಾಲವು ವಿಜ್ಞಾನ ಮತ್ತು ಸಂದೇಹಿ ಬುದ್ಧಿಯನ್ನು ಪ್ರೇರೇಪಿಸಿದ ಕಾರಣ ಎಲ್ಲಾ ಧರ್ಮಗಳನ್ನು ಅದೇ ರೀತಿಯಾಗಿ ಕಾಣಲಾಯಿತು.

ನೆನಪಿಸುತ್ತಾರೆ. ಈತನ ಕೊನೆಯ ಕೃತಿ 'ದಿ ಎಲಿಮೆಂಟರಿ ಫಾರ್ಮ್ಸ್ ಆಫ್ ರಿಲೀಜಿಯಸ್ ಲೈಫ್' (ಧಾರ್ಮಿಕ ಬದುಕಿನ ಮೂಲ ರೂಪ)ಯಲ್ಲಿ ಡರ್ಖೀಮ್ ಧರ್ಮದ ಬಗ್ಗೆ ಯಾವುದೇ ಸಮಾಜವಾದಿ ಪಿತಾಮಹರು ನೀಡಿದ ಸೂಕ್ಷ್ಮ ವ್ಯಾಖ್ಯಾನವನ್ನು ಕೊಡುತ್ತಾನೆ. ಅಂದರೆ ಆತ ಸಾಮಾಜಿಕ ಭಾವೈಕ್ಯತೆಗೆ ಪೂರಕವಾದ 'ಪಾವಿತ್ರ್ಯ'ದ ಕಲ್ಪನೆಯನ್ನು ನೀಡುತ್ತಾನೆ. ಇದನ್ನೇ ಅಂಬೇಡ್ಕರವರು 'ಧಮ್ಮವು ಪಾವಿತ್ರ್ಯದಿಂದ ಕೂಡಿದ ನೈತಿಕತೆ' ಎನ್ನುತ್ತಾರೆ.

ಇದಕ್ಕೆ ತದ್ವಿರುದ್ಧವಾಗಿ ಮಾರ್ಕ್ಸ್ ಮತ್ತು ವೇಬರ್ ನಂಬಿದ್ದು ಆಧುನಿಕತೆ ವೃದ್ಧಿಗೊಂಡಂತೆ ಧರ್ಮವು ನಶಿಸುತ್ತದೆ ಎನ್ನುವುದನ್ನು ಒಪ್ಪದೆ, ಒಂದು ಹೊಸ ಮತ್ತು ವಿವೇಚನಾ ಧರ್ಮವು ತರ್ಕ ಮತ್ತು ವೈಯಕ್ತಿಕತೆಗೆ ನೈತಿಕ ಆಧಾರವನ್ನು ನೀಡುತ್ತದೆ ಎಂಬುದನ್ನು ಒಪ್ಪಲಾಗುತ್ತದೆ. ಫ್ರಾನ್ಸ್‌ನ ಕ್ರಾಂತಿಯಲ್ಲಿ ಮುನ್ಸೂಚಿಸಿದ 'ವೈಜ್ಞಾನಿಕ ಧರ್ಮ'ವನ್ನು ಅವರು ಸ್ವಾಗತಿಸುತ್ತಾರೆ.

ಅಂಬೇಡ್ಕರವರ ನವಯಾನ ಬೌದ್ಧಧಮ್ಮವು ನಿಜವಾಗಿಯೂ ಡರ್ಖೀಮ್ ಸೂಚಿಸಿದ ತಾರ್ಕಿಕ ಧರ್ಮವನ್ನೇ ಪ್ರತಿಪಾದಿಸುತ್ತದೆ. ●

(ಬ್ರಾಹ್ಮಣ ಧರ್ಮ ಮತ್ತು ಜಾತಿಯನ್ನು ಮೆಟ್ಟಿದ 'ಭಾರತದಲ್ಲಿ ಬೌದ್ಧಧರ್ಮ' ಎನ್ನುವ ಕೃತಿಯ ಪೀಠಿಕಾ ಭಾಗದಿಂದ ಮೇಲಿನದನ್ನು ಆಯ್ದುಕೊಳ್ಳಲಾಗಿದೆ. ಈ ಕೃತಿಯನ್ನು ಸ್ಪೇಚ್ ಪ್ರಕಾಶನವು ಹೊರ ತರಲಿದೆ.)

ಆಶಯ



ಭಾರತವೆಂಬ ದೇಶ ಪಾಪಕೋಶ
ಯಾರಿಲ್ಲವೆಂದರು,
ಪಾತಕವಿಲ್ಲದ ಪ್ರದೇಶವಿದೆಯೆ?
ಕೆಲವೊಮ್ಮೆ,
ಪಾಪ ಧರಿಸಿ ಪೋಷಾಕಿನಿಂದಾಗಿ
ಪತ್ತೆಯಾಗುವುದಿಲ್ಲ ಅಷ್ಟೇ!

ಹಲವು ಧರ್ಮ ನೂರು ಜಾತಿಯ ಜಾತ್ರೆ
ಹಾಗಿದ್ದರೂ ನಡೆದಿದೆ ಜೀವ ಭಾವದ ಯಾತ್ರೆ

ಕವಿಯ ಕನವರಿಕೆಗೆ ಕೊನೆಯಿಲ್ಲ
ಪಾಪ ಪುಣ್ಯಗಳ ಪಹರೆಯಲ್ಲಿ
ಅಳಿದವರ ನೆರಳು ಕಾಡಿ
ಸಹಸ್ರ ವರ್ಷಗಳ ವ್ಯಥೆಯ ನೆನಪು ಹೊತ್ತು
ಮೊರೆಯುವ ಕಡಲದಂತಹ ಒಡಲ
ಒಳದನಿಯಲ್ಲೀಗ
ಭೂತದ ನೆನಪ ತೊಡೆದು
ವರ್ತಮಾನಕಿಳಿಯುವ ಮಾತು.

ಕತ್ತಲೆಯ ದಿನ ಕಳೆದು
ಹಾದಿಗುಂಟ ಹರಡಿಕೊಂಡ
ಹೊಸಬೆಳಗು ಕಾಣದೆ
ಕೆಟ್ಟ ಕನಸು ಕೊನೆಯಾಗದೆ?

ಅಡಿಯನಿಡುವೆಡೆಯಲ್ಲಿ
ತೊಡರಲಿರುವ ಎಡರುಗಳ
ತೊಡಬೇಕಿದೆ
ಸಮಾಧಿಗಳ ಮೇಲೆ
ಸ್ವಪ್ನ ಲೋಕವರಳಿ, ಬರಲಿ
ಹೂ ನಗೆಯ ಹೊಸ ಚೈತ್ರ.

ಐದೇ ಸಾವಿರ ಸಂವತ್ಸರದ ಸೂತಕ
ಕೊಳಚೆ ತೊಳೆಯಬೇಕು ಶತಮಾನ
ಅಡಿಗೆಗೆ, ನಡಿಗೆಗೆ ಸಲ್ಲದೀಗ ಅವಸರ.

ಪರಿವರ್ತನೆಯ ಯುಗದ ಕೊನೆಯಂಕ
ಪದಾತಿ ದಳದ ಗೆಲುವು
ಅಳಿದ ಪುರಾಣಗಳ ಮೇಲೆ ಅಶ್ವಘೋಷ.

ಕ್ಷಣದ ಫಲಿತವೇನಲ್ಲ ಅಂತಿಮ
ಶಾಶ್ವತೆ ಸಮತೆ ನಮ್ಮ ಗಮ್ಯ!
ಬಿಗಿದ ನರ ಕೊರಳ ಘೋಷ
ಜಗವ ಜಯಿಸುವ ಹಂಬಲದ ಹಾದಿಯಲಿ
ಎಲ್ಲರ ಹೃದಯ ಗೆಲ್ಲುವ ಹಾಡು ಮೂಡಲಿ
ಆ ಹಾಡೇ ಮುನ್ನಡೆಸಲಿ!

○ ಮೋಹನ ನಾಗಮ್ಮನವರ

ದಲಿತರು–ದಾರಿ ದೂರ!

(15ನೇ ಪುಟದಿಂದ)

ಆದ್ದರಿಂದ ಆವಶ್ಯಕತೆಯನ್ನಾಧರಿಸಿದ ಮತ್ತು ಉದ್ದೇಶಪೂರಕವಾದ ಸಮಗ್ರಯೋಜನೆಗಳನ್ನು ಅನುಷ್ಠಾನಗೊಳಿಸಿ ದಲಿತರನ್ನು ಮುಖ್ಯವಾಹಿನಿಗೆ ತರಬೇಕಾಗಿದೆ. ಇಂತಹ. ಸಮಗ್ರ ಯೋಜನೆಗಳಿಗೆ ಬೇಕಾದ ಸಂಪನ್ಮೂಗಳನ್ನು ಈಗ ಅಸ್ತಿತ್ವದಲ್ಲಿರುವ ಹಲವಾರು ಯೋಜನೆಗಳಿಂದ ಕೂಡಿಹಾಕಬಹುದಾಗಿದೆ. ಇದರಿಂದ ಹಲವಾರು ಯೋಜನೆಗಳಡಿ ಅಲ್ಪ ಸ್ವಲ್ಪ ನಡೆಯುವ ಅಭಿವೃದ್ಧಿಕಾರ್ಯಗಳ ಬದಲು ಪೂರ್ಣಾಭಿವೃದ್ಧಿಯಾಗುತ್ತದೆ. ಒಂದೇ ಸಮಗ್ರ ಯೋಜನೆಯಾದರೆ ಹಲವಾರು ಸಂಸ್ಥೆಗಳು ಹಲವಾರು ಯೋಜನೆ ಗಳಡಿಯಲ್ಲಿ ಮಾಡುವ ಕಾರ್ಯಗಳನ್ನು ತಡೆದು ಒಂದೇ ಇಲಾಖೆಯಡಿ ದಲಿತೋದ್ಧಾರ ಕಾರ್ಯಗಳನ್ನು ಕೈಗೊಳ್ಳಬಹುದು. ಈ ಸಮಗ್ರ ಯೋಜನೆಯಡಿಯಲ್ಲಿ ಫಲಾನು ಭವಿಗಳಿಗೆ ಸಾಕಷ್ಟು ತಿಳುವಳಿಕೆ ನೀಡಿ ಅವರು ಅಭಿವೃದ್ಧಿ ಕಾರ್ಯಗಳಲ್ಲಿ ಭಾಗವಹಿಸುವಂತೆ ಮಾಡಬೇಕು.

ಇಂತಹ ಕಾರ್ಯಕ್ರಮಗಳು ಫಲಾನುಭವಿಗಳಿಗೆ ಶಾಶ್ವತ ಆಸ್ತಿಗಳನ್ನು ಮತ್ತು ಪರಿವಾರ ಆಧಾರಿತ ಆರ್ಥಿಕ ಚಟುವಟಿಕೆಗಳನ್ನು ಅಭಿವೃದ್ಧಿಪಡಿಸುವಲ್ಲಿ ಸಹಾಯ ಮಾಡುತ್ತದೆ. ಹಾಗೆಯೇ ಸಣ್ಣ ರೈತರ ಕೃಷಿ ಚಟುವಟಿಕೆಗಳನ್ನು ವೈಜ್ಞಾನಿಕ ಉಪಕರಣಗಳು, ನೀರಾವರಿ ಸೌಲಭ್ಯಗಳು, ರಿಯಾಯ್ತಿ ದರದಲ್ಲಿ ರಾಸಾಯನಿಕ ಗೊಬ್ಬರಗಳು, ದೃಢೀಕೃತ ಬಿತ್ತನೆ ಬೀಜ, ಸುಧಾರಿತ ಕೃಷಿಯಲ್ಲಿ ತರಬೇತಿ ಮತ್ತು ಕೃಷಿ ಚಟುವಟಿಗಳಿಲ್ಲದಾಗ ಇತರೆ ಕ್ಷೇತ್ರಗಳಲ್ಲಿ ಉದ್ಯೋಗಾವಕಾಶಗಳನ್ನು ಒದಗಿಸಿಕೊಡಬೇಕು. ಕೌಶಲ್ಯತೆ, ಅಭಿವೃದ್ಧಿ ಉದ್ಯೋಗಾರ್ಹತೆಯನ್ನು ಹೆಚ್ಚಿಸುವ ಸಲುವಾಗಿ ತರಬೇತಿ ಹಾಗೂ ಉದ್ಯೋಗಗಳಲ್ಲಿ ತೊಡಗಿಸುವಿಕೆಯನ್ನು ಪ್ರೋತ್ಸಾಹಿಸಿ ವಿದ್ಯಾವಂತ ದಲಿತರಲ್ಲಿರುವ ನಿರುದ್ಯೋಗವನ್ನು ಹೋಗಲಾಡಿಸಬೇಕಾಗಿದೆ. ಅಂತಿಮವಾಗಿ ದಲಿತ ಮಕ್ಕಳನ್ನು ವೈಜ್ಞಾನಿಕ ಮತ್ತು ತಾಂತ್ರಿಕ ವಿಷಯಗಳಡಿ ಪಳಗಿಸಲು ಉತ್ತಮ ವಾತಾವರಣವಿರುವ ವಸತಿ ಶಾಲೆಗಳನ್ನು ನಿರ್ಮಿಸಬೇಕಾಗಿದೆ. ಇಂತಹ ಕಾರ್ಯಕ್ರಮಗಳಿಂದ ದಲಿತರು ಸ್ವತಃ ತಮ್ಮ ಕಾಲಿನ ಮೇಲೆ ನಿಂತುಕೊಳ್ಳುವಂತಾಗುತ್ತದೆ.

ಸಮಗ್ರ ಯೋಜನೆಯಡಿಯಲ್ಲಿ ವಸತಿ ಜೊತೆಗೆ, ಶುದ್ಧ ಕುಡಿಯುವ ನೀರು, ವಿದ್ಯುತ್‌ಚಕ್ತಿ ಮತ್ತು ಶೌಚಾಲಯ ಸೌಲಭ್ಯಗಳನ್ನು ಒದಗಿಸಬೇಕಾಗುತ್ತದೆ. ವಿವಿಧ ಯೋಜನೆಗಳಡಿಯಲ್ಲಿರುವ ವಸತಿಯ ವೆಚ್ಚದ ಮಿತಿಯನ್ನು ಹೆಚ್ಚು ಮಾಡಿದರೆ ಈ ಎಲ್ಲಾ ಸೌಲಭ್ಯಗಳನ್ನು ನೀಡಲು ಸಾಧ್ಯವಾಗುತ್ತದೆ. ಇದರಿಂದ ಅಭಿವೃದ್ಧಿ ಕಾರ್ಯದಲ್ಲಿ ದಕ್ಷತೆ ಹೆಚ್ಚುತ್ತದೆ ಮತ್ತು ಒಟ್ಟಾರೆ ಯೋಜನೆಯ ವೆಚ್ಚ ಕಡಿಮೆಯಾಗುತ್ತದೆ.

ಇಂತಹ ಸಮಗ್ರ ಯೋಜನೆಗಳು ದಲಿತರಲ್ಲಿ ಆರ್ಥಿಕ ಮತ್ತು ಸಾಮಾಜಿಕ ಭದ್ರತೆಯನ್ನು ತಂದು ಈಗಿರುವ ಅಸಮಾನತೆಗಳನ್ನು ದೂರ ಮಾಡುತ್ತದೆ. ಆದರೆ ದಲಿತರನ್ನು ಮುಖ್ಯವಾಹಿನಿಗೆ ತರುವ ಪ್ರಯತ್ನಗಳು ರಾಜಕಾರಣಗಳ ನಿರ್ಧಾರ ಮತ್ತು ಈ ಕಾರ್ಯಗಳಿಗೆ ಸರ್ಕಾರ ಮಂಜೂರು ಮಾಡುವ ಮೊತ್ತವನ್ನಾಧರಿಸಿರುತ್ತವೆ. ●

ಹೋಗೆಂದು ಪ್ರಭಾತ

ಗರಿಮುರಿದ ಹಕ್ಕಿಯಂತೆ
ಬದುಕೆಂಬ ಮೂಲೆಯಲ್ಲಿ
ಅಳುತ್ತಿಹೆನು ಕತ್ತಲ ನೋಡಿ.

ಸಮಾಧಿಯೊಳಗಿನಿಂದ
ಚಿಗುರೊಡೆದು ಬಂದ
ಹಚ್ಚಹಸುರಿನ ಗಿಡಕ್ಕೆ
ಸತ್ತವನದೇ ಬುದ್ಧಿಯೇ?

ಅದೇನು 'ಸಾವು' ಅಂತಾರಲ್ಲ?
(ನಿಶ್ಚಿಂತೆಯೇ?)
ದೂರದಿಂದ ಕೇಳಿತು
ಬಾಂಗ್, ಶಂಖ, ಗಂಟೆ
ಮುಂಜಾನೆಯ ಮಂಜಿನೊಂದಿಗೆ
ಹತ್ತಿತ್ತು ಚುಮುಚುಮು ಚಳಿ.

ಪ್ರಬುದ್ಧ ನೋಟ



ಸಂಸ್ಕಾರದ ನಡುವೆ
ಸಮಾಧಿಯಲ್ಲಿ ಅಕಸ್ಮಾತ್
ಶವಪೆಟ್ಟಿಗೆ ಮೇಲೆ ಕೂತ
ಕಪ್ಪೆ
ಅದರೊಳಗೇ ಮಣ್ಣು ಸೇರಿತು

○ಹರ್ಷಾದ್ ವರ್ಕಾಡಿ

ಶಿವಶಕ್ತಿ + ಭೀಮಶಕ್ತಿ = ದಲಿತರ ಸರ್ವನಾಶ

(31ನೇ ಪುಟದಿಂದ)

ಖಂಡಿತ. ಅಂಬೇಡ್ಕರ್ ಸ್ಥಾಪಿಸಿದಂತಹ ಸಂಘಟನೆಯನ್ನ ಶಿವಸೇನೆಯೊಂದಿಗೆ ಮೈತ್ರಿ ಮಾಡಿಕೊಂಡು ಅಧಿಕಾರಕ್ಕಾಗಿ ಹವಣಿಸುತ್ತಿರುವುದು ದುರಂತ.

ಜಾಗತೀಕರಣದ ಈ ಹೊತ್ತಿನಲ್ಲಿ ಜನರಿಂದು ಹಸಿವು, ಅವಮಾನ ಅಜ್ಞಾನ ಕಷ್ಟ-ಕಾರ್ಪಣ್ಯಗಳಲ್ಲಿ ನೇಣಿಗೆ ಕೊರಳೊಡ್ಡುತ್ತಿರುವಾಗ ಸಂಸದೀಯ ರಾಜಕೀಯ ಪಕ್ಷಗಳು ಹಲವು ತಂತ್ರಗಳನ್ನ ಹೂಡುತ್ತಿವೆ. ದಲಿತರು ನಿರಂತರವಾಗಿ ಎಲ್ಲಾ ಪಕ್ಷಗಳಿಗೆ ಓಟ್ ಬ್ಯಾಂಕ್ ಆಗಿ ಕೆಲಸಮಾಡಿದ್ದಾರೆ. ದಲಿತರ ಮತಗಳೇ ನಿರ್ಣಾಯಕ ಮತ್ತು ಬಹುಬೇಗ ಆಮಿಷಗಳಿಗೆ ಬಲಿ ಬೀಳುವ ಜನರೆಂದು ತಿಳಿದುಕೊಂಡಿದ್ದಾರೆ.

ಆದರೆ ದಲಿತರು ಇಂದು ಇವರ ಆಸೆ ಆಮಿಷಗಳಿಗೆ ಕುತಂತ್ರಗಳಿಗೆ ಬಲಿಯಾಗಲು ಸಾಧ್ಯವಿಲ್ಲ. ರಾಜಕೀಯ ಪಕ್ಷಗಳ ಜನವಿರೋಧಿತನವನ್ನ ಬಯಲುಗೊಳಿಸಲು ಸಂಘಟಿತ ರಾಗುತ್ತಿದ್ದಾರೆ. ಇದರಿಂದ ಉನ್ನತ ಜಾತಿಯ ಮುಖಂಡ ರಿಗೆ ತೊಡೆ ನಡುಕ ಆರಂಭವಾಗಿದೆ.

ಆದ್ದರಿಂದ ಇಂದು ಗೋಹತ್ಯೆ, ಅಂಬೇಡ್ಕರ್, ಮತಾಂತರ, ಮಸೀದಿ ಮತ್ತಿತರ ಭಾವನಾತ್ಮಕ ವಿಷಯಗಳನ್ನಿಟ್ಟು ಜನರ ಮತಗಳಿಸಲು ಹವಣಿಸುತ್ತಿದ್ದಾರೆ. ಇವರ ಕುತಂತ್ರಗಳಿಗೆ ಅಂಬೇಡ್ಕರ್‌ರನ್ನ ಬಲಿಕೊಡಲು ಕೋಮುವಾದಿಗಳು ಸಂಚು ನಡೆಸಿದ್ದಾರೆ.

ಕೋಮುವಾದಿಗಳು ಇಂದು ಮಹಾರಾಷ್ಟ್ರದ ತಂತ್ರಗಳನ್ನೇ ದೇಶದೆಲ್ಲೆಡೆ ದಲಿತರ ಮತಗಳಿಕೆಗಾಗಿ ಪ್ರಯೋಗಕ್ಕೆ ತರುತ್ತಿದ್ದಾರೆ. ಆದ್ದರಿಂದ ದಲಿತ ದಮನಿತರು ಈ ಕುತಂತ್ರಗಳನ್ನ ಅರಿತು ಸಂಘ ಪರಿವಾರಿಗಳ ವಿರುದ್ಧ ಹೋರಾಡುವ ಅಗತ್ಯ ಹಿಂದೆಂದಿಗಿಂತಲೂ ಇಂದು ಬಹಳ ತುರ್ತಿನದಾಗಿದೆ. ●



ಹಿಂದೂ ನಾವೆಲ್ಲಾ ಒಂದು

ಹಿಂದು ನಾವೆಲ್ಲ ಒಂದು
ಎಂಥ ಮಧುರ ವಾಣಿ
ಇಂಥ ವಾಣಿ ನುಡಿದ ಜ್ಞಾನಿ
ವಿಪ್ರ ಕುಲದ ತತ್ವ ಜ್ಞಾನಿ ॥

ಊರು ಕಸವ ಗುಡಿಸುವಾಗ
ನಾಡು ಕೊಳೆಯ ತೊಳೆಯುವಾಗ
ಮನುಜ ಹೊಲಸು ಬಳಿಯುವಾಗ
ಹಿಂದು ನಾವೆಲ್ಲ ಒಂದು ॥

ಊರು ಗುಡಿಯ ಕಟ್ಟುವಾಗ
ಇಷ್ಟ ದೈವ ಕೆತ್ತುವಾಗ
ಹುಂಡಿ ಹಣವು ತುಂಬುವಾಗ
ಹಿಂದು ನಾವೆಲ್ಲ ಒಂದು ॥

ಉತ್ತು ಬಿತ್ತು ಬೆಳೆಯುವಾಗ
ಸೂಟು ಬೂಟು ಹೊಲೆಯುವಾಗ
ಮಾಡಿ ಮಹಲು ಕಟ್ಟುವಾಗ
ಹಿಂದು ನಾವೆಲ್ಲ ಒಂದು ॥

ಊರು ಪಹರೆ ಕಾಯುವಾಗ
ಸತ್ತ ಪ್ರಾಣಿ ಎಳೆಯುವಾಗ
ಶತ್ರು ಧಾಳಿ ತಡೆಯುವಾಗ
ಹಿಂದು ನಾವೆಲ್ಲ ಒಂದು ॥

ಮಸೀದಿ ಮೈಕು ಮೊಳಗುವಾಗ
ಕತ್ತಿ ಹೊಳಪು ಮಿಂಚುವಾಗ
ಚರ್ಚ್ ಘಂಟೆ ಬಡಿಯುವಾಗ
ಶಿಲುಬೆ ಕಾಂತಿ ಬೆಳಗುವಾಗ
ಹಿಂದು ನಾವೆಲ್ಲ ಒಂದು ॥

ಆದರೆ.....................
ಬೆಳಕ ಹಿಂದೆ ಕತ್ತಲುಂಟು
ಅದಕು-ಇದಕು ಬಹಳ ನಂಟು ॥
ಗುಡಿಯ ಕದವು ತೆರೆಯುವಾಗ

ಶಿಲೆಯ ಮುಂದೆ ನಿಲ್ಲುವಾಗ
ಇಷ್ಟ ಪೂಜೆಗೈಯುವಾಗ
ವಿಪ್ರ ಒಳಗೆ, ಶೂದ್ರ ಹೊರಗೆ, ದಲಿತ ಆಚೆ
ಅಂದು ವಿಪ್ರರೆಲ್ಲ ಒಂದು
ಶೂದ್ರ ದಲಿತರೆಲ್ಲ ಹಿಂದು ॥

ಹುಂಡಿ ನಿಧಿಯ ಹಂಚುವಾಗ
ಮೃಷ್ಟಾನ್ನ ಸವಿಯ ಸವಿಯುವಾಗ
ಗಿಂಢಿ ರಸವ ಕುಡಿಯುವಾಗ
ವಿಪ್ರ ಒಳಗೆ, ಶೂದ್ರ ಹೊರಗೆ, ದಲಿತ ಆಚೆ
ಅಂದು ವಿಪ್ರರೆಲ್ಲ ಒಂದು
ಶೂದ್ರ ದಲಿತರೆಲ್ಲ ಹಿ...ಂ...ದು! ॥

ಯಜ್ಞೋಪವೀತ ಧರಿಸುವಾಗ
ಗಾಯತ್ರಿ ಮಂತ್ರ ಪಠಿಸುವಾಗ
ವೇದ ಶಾಸ್ತ್ರ ಕಲಿಯುವಾಗ
ಜಪವ ತಪವ ಮಾಡುವಾಗ
ವಿಪ್ರ ಒಳಗೆ, ಶೂದ್ರ ಹೊರಗೆ, ದಲಿತ ಆಚೆ
ಅಂದು ವಿಪ್ರರೆಲ್ಲ ಒಂದು
ಶೂದ್ರ ದಲಿತರೆಲ್ಲ ಹಿ..ಂ...ದು! ॥

ದೇಶ ಕೋಶ ತಿಳಿಯುವಾಗ
ಮಠದ ಪೀಠ ಏರುವಾಗ
ರಾಜ್ಯ ಪದವಿ ಪಡೆಯುವಾಗ
ವಿಪ್ರ ಒಳಗೆ, ಶೂದ್ರ ಹೊರಗೆ, ದಲಿತ ಆಚೆ
ಅಂದು ವಿಪ್ರರೆಲ್ಲ ಒಂದು
ಶೂದ್ರ ದಲಿತರೆಲ್ಲ ಹಿ...ಂ...ದು! ॥

ನುಡಿವುದೊಂದು ನಡೆವುದೊಂದು
ವಿಪ್ರ ಜನರ ಜ್ಞಾನ ಸಿಂಧು
ವಿಪ್ರ ನುಡಿವ ಹಿಂದು ಮಂತ್ರ
ಶೂದ್ರ ಮನವ ಸೆಳೆವ ತಂತ್ರ
ದಲಿತ ತನುವ ಸುಡುವ ಯಂತ್ರ
ಇದುವೇ ಸತ್ಯ ಮರೆಯಬೇಡಿ ನಿತ್ಯ ॥

○ ದೇವದಾಸ್ ಮೊದಲಿಗ



ದೀಪದ ಕೆಳಗೆ

ಲೇ. : ಅಮೃತ ಸೋಮೇಶ್ವರ

ಬೆಲೆ : ರೂ. 30/-

ದೇಶದ ಸಾಮಾಜಿಕ ಶಾಂತಿಗೆ ವಿರುದ್ಧವಾಗಿ ನಡೆಯುತ್ತಿರುವ ವಿದ್ಯಮಾನಗಳ ಬಗ್ಗೆ ಹಾಗೂ ಮಾನವ ವಿರೋಧಿ ಘಟನೆಗಳಿಗೆ ನಾಡಿನ ಪ್ರಗತಿಪರ ಚಿಂತಕ/ಲೇಖಕ ಅಮೃತ ಸೋಮೇಶ್ವರವರು ನಿಷ್ಠುರವಾಗಿ ಖಂಡಿಸಿ ವಿವಿಧ ಪತ್ರಿಕೆಗಳಿಗೆ ಪತ್ರ ಬರೆದ ಲೇಖನಗಳ ಸಂಗ್ರಹವೇ 'ದೀಪದ ಕೆಳಗೆ' ಕೃತಿ.

ಪ್ರಕಾಶಕರು : ಪ್ರಕೃತಿ ಪ್ರಕಾಶನ, ಕೋಟೆಕಾರು, ದಕ್ಷಿಣ ಕನ್ನಡ - 575 022

ಸಂಬೋಳಿ

ಲೇ. : ಲಕ್ಷ್ಮಣ್

ಬೆಲೆ : ರೂ. 100/-

ದಲಿತ ಲೇಖಕ-ಚಿಂತಕ ಹಾಗೂ ಸಂಘಟಕ ಲಕ್ಷ್ಮಣ್‌ರವರ ಆತ್ಮಕಥೆಯನ್ನು ಹೇಳುವ 'ಸಂಬೋಳಿ' ಅನೇಕ ಕಾರಣಗಳಿಗಾಗಿ ಗಮನ ಸೆಳೆಯುತ್ತಿದೆ. ತಿರಸ್ಕರಿಸಲ್ಪಟ್ಟ ಸಮುದಾಯದ ಪ್ರಜ್ಞಾವಂತನೊಬ್ಬ ಅನುಭವಗಳಿಂದಾಗಿ 'ಸಂಬೋಳಿ' ಕೃತಿ, ಓದುಗರಿಗೆ ಇಷ್ಟವಾಗುತ್ತದೆ.

ಪ್ರಕಾಶಕರು ; ಆನಂದಕಂದ ಗ್ರಂಥಮಾಲೆ, 'ಬಲರಾಮ', ಟೀಚರ್ಸ್ ಕಾಲೋನಿ, ಮಲ್ಲಾಡಿಹಳ್ಳಿ-577531

ಜಾನಪದ ಸಮಾಚಾರ

ಪ್ರಧಾನ ಸಂಪಾದಕರು :

ಡಾ|| ಹಿ.ಶಿ. ರಾಮಚಂದ್ರೇಗೌಡ

ಕರ್ನಾಟಕದ ಕಲಾ ಪರಂಪರೆಯಲ್ಲಿ ಗ್ರಾಮೀಣ ಭಾಗದ ಜಾನಪದ ಕಲೆಗಳಿಗೆ ಇರುವ ಮಹತ್ವವನ್ನು ಎತ್ತಿಹಿಡಿದು-ಪುನಶ್ಚೇತನಗೊಳಿಸಲು ಪ್ರಯತ್ನಿಸುತ್ತಿರುವ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಯೋಜನೆ ಹಾಗೂ ಕಾರ್ಯಕ್ರಮಗಳ ಪರಿಚಯದ ಕೈಪಿಡಿಯೇ ಜಾನಪದ ಸಮಾಚಾರ. ಜಾನಪದ ಆಸಕ್ತರಿಗೆ ಇದು ಮಾಹಿತಿಪೂರ್ಣ ಕೃತಿಯಾಗಬಹುದು.

ಪ್ರಕಾಶಕರು.: ರಿಜಿಸ್ಟ್ರಾರ್, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಕನ್ನಡ ಭವನ, ಜೆ.ಸಿ.ರಸ್ತೆ ಬೆಂಗಳೂರು-560 002



ಕಡ್ಡಾಯದ ಪ್ರಾಥಮಿಕ ಶಿಕ್ಷಣ

ಲೇ. : ಜಯಕುಮಾರ್ ಅನಗೋಳ್

ಬೆಲೆ : ರೂ. 35/-

ಭಾರತ ಇಂದಿಗೂ ವಿಶ್ವದ ಅತಿ ದೊಡ್ಡ ನಿರಕ್ಷರಿಗಳ ನಾಡೆಂಬ ಅಪಕೀರ್ತಿಗೆ ಒಳಗಾಗಿದ್ದು ಸಾಕ್ಷರತೆ ಸಾಧನೆಗೆ ಇರುವ ಅಡ್ಡಿ-ಆತಂಕಗಳು ಹಾಗೂ ಕಡ್ಡಾಯದ ಪ್ರಾಥಮಿಕ ಶಿಕ್ಷಣ ಎಂದರೇನು? ಇತ್ಯಾದಿಗಳ ಬಗ್ಗೆ ಮಾಹಿತಿ ನೀಡುವ ಕೃತಿ 'ಕಡ್ಡಾಯದ ಪ್ರಾಥಮಿಕ ಶಿಕ್ಷಣ'. ಪ್ರಾಥಮಿಕ ಶಿಕ್ಷಣದ ಮಹತ್ವದ ಬಗ್ಗೆ ಸಮಗ್ರ ಮಾಹಿತಿ ನಿರೀಕ್ಷಿಸುವವರಿಗೆ ಇದೊಂದು ಅತ್ಯುತ್ತಮ ಕೃತಿ.

ಪ್ರಕಾಶಕರು : ನವಕರ್ನಾಟಕ ಪ್ರಕಾಶನ, ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ ಬೆಂಗಳೂರು-560 001



ಧರ್ಮ ನಿರಪೇಕ್ಷತೆ ಮತ್ತು ಅಲ್ಪಸಂಖ್ಯಾತರು

ಲೇ. : ಡಾ|| ಬದರಿನಾಥ್ ಕೆ. ರಾವ್

ಬೆಲೆ : ರೂ. 65/-

ಧಾರ್ಮಿಕ ಅಲ್ಪಸಂಖ್ಯಾತರ ಮೇಲೆ ನಡೆಯುತ್ತಿರುವ ಅಮಾನವೀಯ ಘಟನೆಗಳು ಮತ್ತು ಅವುಗಳಿಗೆ ಪೂರಕವಾದ ಘಟನೆಗಳು ಮತ್ತು ಅವುಗಳಿಗೆ ಪೂರಕವಾದ ಕಾರಣಗಳನ್ನೂ ನೀಡುತ್ತಲೇ ಧರ್ಮ ನಿರಪೇಕ್ಷತೆಯ ಅನಿವಾರ್ಯತೆ ಮಹತ್ವ ಕುರಿತು ಬೆಳಕು ಚೆಲ್ಲುವ ಪ್ರಯತ್ನದ ಫಲವೇ ಈ ಕೃತಿ.

ಪ್ರಕಾಶಕರು : ನವಕರ್ನಾಟಕ ಪ್ರಕಾಶನ, ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ ಬೆಂಗಳೂರು-560 001

ಫಲ ಜ್ಯೋತಿಷ ನಂಬುವಿರಾ?

ಲೇ. : ಡಾ|| ಎಸ್. ಬಾಲಚಂದ್ರರಾವ್

ಬೆಲೆ : ರೂ. 40/-

ವಿದ್ಯಾವಂತ / ಅವಿದ್ಯಾವಂತರೆಲ್ಲರೂ ಒಂದಲ್ಲಾ ಒಂದು ಕಾರಣಕ್ಕಾಗಿ ಜ್ಯೋತಿಷ್ಯವನ್ನು ಅವಲಂಭಿಸಿಯೇ ದೈನಂದಿನ ಚಟುವಟಿಕೆಗಳನ್ನು ಆರಂಭಿಸುವಂತಾಗಿರುವ ಪರಿಸ್ಥಿತಿಯಿರುವಾಗ 'ಫಲ ಜ್ಯೋತಿಷ ನಂಬುವಿರಾ?' ಕೃತಿ ಜೋತಿಷ ಮತ್ತದರ ಪರಿಕಲ್ಪನೆ ಹಾಗೂ ಸಾಧಕ\ಬಾಧಕಗಳನ್ನು ಕುರಿತು ಜಿಜ್ಞಾಸೆ ನಡೆದಿದೆ.

ಪ್ರಕಾಶಕರು : ನವಕರ್ನಾಟಕ ಪ್ರಕಾಶನ, ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ ಬೆಂಗಳೂರು-560 001

ಹೇಳು

ಬೇರೆ ಬೇರೆ ಗುರುಗಳು ಹೀಗೆ ಬೇರೆ
ಬೇರೆಯಾಗಿ ಹೇಳಿದ್ದಾರೆ :
ಬುದ್ಧ ಎಂದರೆ, ಬಂಗಾರದ ಎಲೆ
ಕೊನರಿಕೊಂಡಿರುವ ಮಣ್ಣಿನಚೂರು.
ಬುದ್ಧ ಎಂದರೆ, ವಿಹಾರ ಶಾಲೆಯಲ್ಲಿರುವ
ವಸ್ತು ವಿಶೇಷ.
ಬುದ್ಧ ಎಂದರೆ, - ಅದಲ್ಲ
ಬುದ್ಧ ಎಂದರೆ, ಸಮುದ್ರದ ಮೇಲೆ
ಪರ್ವತಗಳು ಯಾತ್ರೆ ಹೊರಟಿವೆ.
ಬುದ್ಧ ಯಾರು? ಮೂರು ಕಾಲಿನ ಕತ್ತೆಯನ್ನು
ನೋಡಿ.
ಬುದ್ಧ ಎಂದರೆ, ಒಣಗಿದ ಅಮೇಧ್ಯ.
ಬುದ್ಧ ಎಂದರೆ, ಹೊರಗೆ ಹಿತ್ತಲಲ್ಲಿರುವ ಬಿದಿರುಮೆಳೆ.
ಬುದ್ಧ ಯಾರೆಂದು ಹೇಳುತ್ತೇನೆ-ಮಾತು ಯಾತನೆಯ ದಿಡ್ಡಿಬಾಗಿಲು.



ಏಸೆಯ-ಬೇಕು



ಒಮ್ಮೆ ಒಬ್ಬ ಭಿಕ್ಷು ಗುರು ಜೊಶುನ ಹತ್ತಿರ ಬಂದು ಹೀಗೆ ಕೇಳಿದ-

'ನನ್ನ ಮನಸ್ಸಿನಲ್ಲಿ ಯಾವುದೇ ಚಿಂತನವಿಲ್ಲ, ಹಾಗಿರುವುದೇ ಸರಿಯಾದ್ದು ಅಲ್ಲವೆ?'

'ಚಿಂತನವನ್ನು ತೆಗೆದು ಹೊರಗೆ ಬಿಸಾಕು 'ಎಂದ,ಜೊಶು.

'ಯಾವುದೇ ಚಿಂತನವೂ ಇಲ್ಲವಲ್ಲ, ಬಿಸಾಕುವುದು ಏನನ್ನು?' ಎಂಧು ಆತ, ಮರುಪ್ರಶ್ನೆ ಮಾಡಿದ.

ಆಗ ಜೊಶು ಹೇಳಿದ-

'ನನ್ನ ಮನಸ್ಸಿನಲ್ಲಿ ಚಿಂತನವೇ ಇಲ್ಲ ಎಂದು ಚಿಂತಿಸಿಕೊಳ್ಳುತ್ತಿದ್ದೀಯಲ್ಲವೆ? ಅದನ್ನು ಬಿಸಾಕದೆ ಇಟ್ಟುಕೊಳ್ಳುತ್ತೇನೆ ಎನ್ನುವುದಾದರೆ, ನಿನ್ನ ಇಷ್ಟ.

ಲಂಗದ ಹಿಂಭಾಗದ ಚಿತ್ರ

ಗೆಸ್ಸೆನ್ ಎಂಬ ಭಿಕ್ಷು ಒಳ್ಳೆಯ ಕಲಾವಿದನಾಗಿದ್ದ. ಯಾರಾದರೂ ಚಿತ್ರ ರಚಿಸಿ ಕೊಡಲು ಕೇಳಿದರೆ ಆತ, ಭಾರಿ ಹಣ ಕೇಳುತ್ತಿದ್ದ; ಅದೂ ಮುಂಗಡವಾಗಿಯೇ ಕೊಡಬೇಕು ಎನ್ನುತ್ತಿದ್ದ. ಹಾಗಾಗಿ, 'ದುರಾಶೆಯ ಮಾರಿ' ಎನ್ನಿಸಿಕೊಂಡಿದ್ದ.

ಒಂದು ಸಲ ಒಬ್ಬ ಗೆಯಿಶಾ ಆತನನ್ನು ಕರೆದು ಒಂದು ಚಿತ್ರ ಬರೆದುಕೊಡಲು ಹೇಳಿದಳು, 'ಎಷ್ಟು ಹಣ ಕೊಡುತ್ತೀಯೆ?' ಎಂದು ಗೆಸ್ಸೆನ್ ಪ್ರಶ್ನೆ ಮಾಡಿದ. 'ನೀನು ಕೇಳಿದಷ್ಟು'ಎಂದಳು ಆಕೆ.

ಆತ ಒಳ್ಳೆಯ ಚಿತ್ರವನ್ನೇ ರಚಿಸಿಕೊಟ್ಟ, ಆದರೆ, ಭಾರೀ ಮೊತ್ತದ ಹಣವನ್ನು ಕೇಳಿದ. ಆಕೆ, ಅವನು ಕೇಳಿದಷ್ಟು ಹಣ ಕೊಟ್ಟು ಆಮೇಲೆ ಹೇಳಿದಳು- 'ನೀನು ಒಳ್ಳೆಯ ಚಿತ್ರ ಬರೆಯುತ್ತೀಯೆ ನಿಜ. ಆದರೆ ನಿನ್ನ ಮನಸ್ಸು ಕ್ಷುದ್ರವಾದ್ದು. ಕ್ಷುದ್ರ ಮನಸ್ಸಿನಿಂದ ರಚಿತವಾದ ನಿನ್ನ ಕೃತಿ ಉತ್ಕೃಷ್ಟವಿದ್ದರೂ ಕ್ಷುದ್ರವೇ. ಅದು ಉತ್ತಮವಾದ ಸ್ಥಳದಲ್ಲಿಟ್ಟು ಪ್ರದರ್ಶಿಸಲಿಕ್ಕೆ ಯೋಗ್ಯವಾಗಲಾರದು. ನನ್ನ ಲಂಗದ ಹಿಂಭಾಗವನ್ನು ಅಲಂಕರಿಸಲು ಬಳಸಬಹುದು, ಅಷ್ಟೇ'. ಹೀಗೆಂದು ಆಕೆ, ತನ್ನ ಲಂಗದ ಹಿಂಭಾಗದಲ್ಲಿ ಒಂದು ಚಿತ್ರ ರಚಿಸಿಕೊಡಲು ಕೇಳಿಕೊಂಡಳು. 'ಎಷ್ಟು ಹಣ ಕೊಡುತ್ತೀಯೆ?' ಎಂದು ಕೇಳಿದ ಆತ. ಯಥಾಪ್ರಕಾರ 'ನೀನು ಕೇಳಿದಷ್ಟು' ಎಂದಳು ಆಕೆ. ಅವಳಿಂದ ಭಾರಿ ಮೊತ್ತದ ಹಣ ಕಿತ್ತುಕೊಂಡು, ಅವಳ ಲಂಗದ ಹಿಂಭಾಗಕ್ಕೆ ಒಂದು ಚಿತ್ರ ರಚಿಸಿಕೊಟ್ಟ



ಗೆಸ್ಸೆನ್ ವಾಸಮಾಡಿಕೊಂಡಿದ್ದ ಪ್ರಾಂತದಲ್ಲಿ ಆಗಾಗ ಕ್ಷಾಮ ವುಂಟಾಗುತ್ತಿತ್ತು. ಅಂಥ ಸಮಯ ದಲ್ಲಿ ಉಳ್ಳ ಶ್ರೀಮಂತರು ಬಡವರಿಗೆ ಸಹಾಯ ಮಾಡುತ್ತಿರ ಲಿಲ್ಲ. ಗೆಸ್ಸೆನ್ ಒಂದು ಗುಪ್ತ ಉಗ್ರಾಣವನ್ನು ಕಟ್ಟಿಸಿ ಅದರಲ್ಲಿ ಧಾನ್ಯ ಸಂಗ್ರಹಿಸಿದ್ದ. ಕ್ಷಾಮದ ಸಮಯದಲ್ಲಿ ಬಡಜನರಿಗೆ ಹಂಚುವ ಬಗ್ಗೆ ಅದನ್ನು ಮೀಸ ಲಿಟ್ಟಿದ್ದ.

ಅವನ ಹಳ್ಳಿಯಿಂದ ರಾಷ್ಟ್ರದ ಕೇಂದ್ರ ದೇವಾಲಯಕ್ಕೆ ಹೋಗಲು ಒಳ್ಳೆಯ ರಸ್ತೆ ಇರಲಿಲ್ಲ. ಅದರಿಂದ ಯಾತ್ರಾರ್ಥಿಗಳು ಕಷ್ಟ ಅನುಭವಿಸುತ್ತಿದ್ದರು. ಆತ ಆ ಮಾರ್ಗ ವನ್ನು ನಿರ್ಮಿಸಿದ.

ಆತನ ಗುರು, ಒಂದು ದೇವಾಲಯವನ್ನು ಕಟ್ಟಬೇಕೆಂದು ಹಂಬಲಿಸಿ ಅದು ಕೈಗೂಡದೇ ತೀರಿಕೊಂಡಿದ್ದ. ಗೆಸ್ಸೆನ್ ಆ ದೇವಾಲಯವನ್ನು ಕಟ್ಟಿ ಮುಗಿಸಿದ.

ಈ ಮೂರು ಕೆಲಸಗಳನ್ನು ಮುಗಿಸಿದ ಮರುದಿನ ಆತ ತನ್ನ ಕುಂಚವನ್ನು ಬಿಸಾಕಿ ಯಾರಿಗೂ ತಿಳಿಯದ ಹಾಗೆ ಪರ್ವತ ಪ್ರಾಂತದಲ್ಲಿ ಹೋಗಿ ಏಕಾಂಗಿಯಾಗಿ ವಾಸಮಾಡ ತೊಡಗಿದ. ಮತ್ತೆ ಎಂದೂ ಆತ ಕುಂಚವನ್ನು ಕೈಯಲ್ಲಿ ಮುಟ್ಟಲಿಲ್ಲ.

ಏಟಿನ ಒಡಪು



ಗೊಸೊ, ತನ್ನ ಶಿಷ್ಯರಿಗೆ ಹಾಕಿದ ಪ್ರಶ್ನೆ ಇದು-

'ದಾರಿಯ ಮೇಲೆ ಒಬ್ಬ ಝೆನ್ ನಿಮಗೆ ಭೇಟಿಯಾಗುತ್ತಾನೆ. ಎನ್ನಿ ನೀವು ಅವನ ಹತ್ತಿರ ಮಾತಾಡಬಾರದು. ಹಾಗಂತ, ಗುರುವಿನ ಎದುರು ಮೌನವಾಗಿ ನಿಂತಿರುವುದೂ ಸರಿಯಲ್ಲ, ಹೇಳಿ, ಏನು ಮಾಡುತ್ತೀರಿ?'

ಈ ಒಡಪಿಗೆ, ಮುಮೊನ್ ಎಂಬಾತ ಕೊಟ್ಟ ಉತ್ತರ ಹೀಗೆ-

'ಆತನ ಕೆನ್ನೆಗೆ ಬಲವಾಗಿ ಒಂದು ಏಟು ಬಾರಿಸುತ್ತೇನೆ'.

ಭಾರತದ 'ಉನ್ನತ' ನ್ಯಾಯಾಂಗ ಉತ್ತಮವಾಗಿದೆಯೇ?

ನೂರು ಕೋಟಿ ಜನರ ಬೇಡಿಕೆಗಳಿಗೆ ಸ್ಪಂಧಿಸುತ್ತಿರುವ ಭಾರತ ನ್ಯಾಯಾಂಗ ಪದ್ದತಿ 'ಅಸೂಯೆ' ಪಡುವಂತದ್ದು. ಜತೆಗೆ ರಾಜ್ಯಾಂಗದ ವಿಷಯದಲ್ಲಿ ಅದರಲ್ಲೂ ಸಾರ್ವಜನಿಕ ,ಹಿತಾಶಕ್ತಿಯ ಕಟ್ಟಳೆಗಳಲ್ಲಿ ತೀಕ್ಷ್ಣ ಬುದ್ಧಿವಂತಿಕೆಯನ್ನು ತೋರಿಸಿದೆ.

ನ್ಯಾಯಾಧೀಶರುಗಳ ವಿರುದ್ಧ ಹಗರಣಗಳಿದ್ದಾಗ್ಯೂ, ಹೆಚ್ಚಿನ ಮತ್ತು ಹಿಂದೆಯೂ ಕೇಳರಿಯದ ಕೆಲಸದ ಭಾರವನ್ನು ನಿಭಾಯಿಸುವ ಸಾಮರ್ಥ್ಯವನ್ನು ತೋರಿದೆ.

ಆದರೆ ನ್ಯಾಯಾಂಗ ಪದ್ಧತಿಗಳು ಪ್ರತ್ಯೇಕವಾದ ಸಮಾಜದ ತಪ್ಪುಗಳನ್ನು ಏಕರೂಪವಾದ ತೀರ್ಪುಗಳಿಂದ ನಿಭಾಯಿಸುವುದಿಲ್ಲ. ಮಲೇಶಿಯಾದ ನ್ಯಾಯಾಂಗ ಪದ್ಧತಿ ವಾಣಿಜ್ಯಾತ್ಮಾಕ ಮೊಕದಮ್ಮೆಗಳಿಗೆ ಹೆಚ್ಚು ಪ್ರಶಂಸನೀಯವಾಗಿದೆ. ಆದರೆ ನಾಗರೀಕ ಹಕ್ಕುಗಳಿಗೆ ಮತ್ತು ರಾಜಕೀಯ ವಿಷಯಗಳನ್ನು ನಿಭಾಯಿಸುವ ಸಾಮರ್ಥ್ಯದ ಬಗ್ಗೆ ಸಂಶಯ ವ್ಯಕ್ತಪಡಿಸಲಾಗಿದೆ.

ರಾಜಕೀಯ ಕಟ್ಟಳೆ ಹಾಗೂ ಮಾಜಿ ಉಪಪ್ರಧಾನಿ ಅನ್ವರ್ ಇಬ್ರಾಹಿಂ ವಿಚಾರಣೆಗೆ ಸಂಬಂಧಿಸಿದಂತೆ ಮಲೇಶಿಯಾದ ನ್ಯಾಯಾಂಗ ಪದ್ಧತಿಯ ಬಗ್ಗೆ ತೀವ್ರ ಸ್ವರೂಪದ ಸಂಶಯಗಳನ್ನು ವ್ಯಕ್ತ ಪಡಿಸಿದೆ.

ಇಂದು, ನ್ಯಾಯಾಂಗ ನಿಂದನಾ ಕಾನೂನನ್ನು ನ್ಯಾಯಾಲಯದಲ್ಲಿ ಬಳಸಲಾಗುತ್ತಿದೆ. ಒಮ್ಮೆ ಒಂದು ನ್ಯಾಯಾಂಗ ಪದ್ಧತಿಗೆ ಅಸಮರ್ಥ್ಯತೆಯ ಮತ್ತು ವಕ್ರದೃಷ್ಟಿಯ ಅಪಕೀರ್ತಿ ಅಂಟಿಕೊಂಡರೆ, ಅದು ಬಹಳ ಬೇಗನೆ ಹೋಗುವುದಿಲ್ಲ. ತನ್ನ ಮೇಲಿದ್ದ ಬಡವರ ವಿರೋಧಿ, ಬಿಳಿಯರ ಪರ ಹಾಗೂ ಜನಾಂಗವಾದಿ ಎಂಬ ಆರೋಪಗಳನ್ನು ಅಲ್ಲಗೆಳೆಯಲು ಅಮೇರಿಕಾ ಉಚ್ಛನ್ಯಾಯಾಲಯಕ್ಕೆ ಸುಮಾರು ವರ್ಷಗಳೇ ಬೇಕಾದವು. 1948ರಲ್ಲಿ, ವೆಸ್ಟ್ ಇಂಡಿಯನ್ ಕ್ರಿಕೆಟ್ ಆಟಗಾರ ಲಿಯರೀ ಕಾನ್‌ಸ್ಟ್ಯಾಂಟೈನ್‌ನನ್ನು ಹೋಟೆಲೊಂದರಿಂದ ದಬ್ಬಿಹಾಕಿದ ಮಾನನಷ್ಟ ಪ್ರಕರಣದಲ್ಲಿ ಮಾನನಷ್ಟ ಪರಿಹಾರ ಕೇವಲ 5 ಡಾಲರ್ ಎಂದು ಆದೇಶಿಸಲಾಗಿತ್ತು. ಇದು ಕೂಡ ವರ್ಣಭೇದ ಮಾಡಿದ್ದಕ್ಕಲ್ಲ. ಆದರೆ ಹೋಟೆಲ್ ನೌಕರ ಮಲಗಲು ಹಾಸಿಗೆ ನಿರಾಕರಿಸಿದಕ್ಕಾಗಿ. 1960ರ ನಂತರ ಬ್ರಿಟಿಷ್ ಸರ್ಕಾರ ಏಷಿಯ ಮತ್ತು ವೆಸ್ಟ್ ಇಂಡಿಯನ್ನರ ವಿಚಾರದಲ್ಲಿ ನ್ಯಾಯಸಮ್ಮತವಾಗಿ ನಡೆದುಕೊಳ್ಳದೆ ನಂಬಿಕೆ ಕಳೆದುಕೊಂಡಿದೆ.

ಒಳ್ಳೆಯದಕ್ಕೂ ಅಥವಾ ಕೇಡಿಗೂ ಕೋಮು ಗಲಭೆಗಳ ವಿಚಾರದಲ್ಲಿ ಅಲ್ಪಸಂಖ್ಯಾತರನ್ನು ರಕ್ಷಿಸದಿರುವುದಕ್ಕೆ ಭಾರತ ಸರ್ಕಾರ ಹೆಸರುವಾಸಿಯಾಗುತ್ತಿದೆ. ಗುಲ್ಷನ್ ಕುಮಾರನ ಹತ್ಯೆಯ ವಿಚಾರದಲ್ಲಿ ಭಾರತ ಸರ್ಕಾರ ನದೀಮ್‌ನನ್ನು ಭಾರತಕ್ಕೆ ಕರೆತರಲಾಗಲಿಲ್ಲ. ಕಾರಣ ಮುಸಲ್ಮಾನ ಆಪಾದಿತನಿಗೆ ಭಾರತದಲ್ಲಿ ಸರಿಯಾದ ನ್ಯಾಯ ದೂರಕುವುದೇ ಎಂಬ ಸಂಶಯ ಪಡಲಾಯಿತು. ಪೂರ್ಚುಗಲ್‌ನಲ್ಲಿ ಬಂಧಿಯಾಗಿರುವ ಅಬು ಸಲೇಂ ಬಗ್ಗೆಯೂ ಇದೇ ವಾದವನ್ನು ಎತ್ತಲಾಗಿದೆ. ಈ ಆರೋಪ ನ್ಯಾಯಾಲಯಗಳ ಬಗ್ಗೆಯೇ ಅಲ್ಲದೆ ಒಟ್ಟಾರೆ ಭಾರತೀಯ ಆಡಳಿತ ವ್ಯವಸ್ಥೆಯ ಬಗ್ಗೆ ಅನುಮಾನಮೂಡಿಸುತ್ತದೆ. ನಿಷ್ಪಕ್ಷಪಾತ ಭಯೋತ್ಮಾದಕ ಮತ್ತು ವಿಚ್ಛಿದ್ರಾಕಾರಿ ಚಟುವಟಿಕೆ (ತಡೆಗಟ್ಟುವಿಕೆ) ಕಾನೂನಿನ ಮುಖವಾಡ ಕಳಚಿದಾಗ ಭಯೋತ್ಪಾದನೆಗೂ ಈ ಕಾನೂನಿಗೂ ಯಾವುದೇ ಸಂಬಂಧವಿರಲಿಲ್ಲ.

ಬೆಸ್ಟ್ ಬೇಕರಿಯ ನರಮೇಧ ಯಾರಿಗೂ ತಿಳಿಯದ ಅಪರಾಧಿಯ ಮೇಲಿನ ಆರೋಪವಾಯಿತು. ಭಾರತೀಯ ತನಿಖಾ ಮತ್ತು ವಿಚಾರಣಾ ಪೀಠಗಳಿಗೆ ಸಾರ್ವಜನಿಕರ ಕಣ್ಣುಮುಂದೆ ನಡೆದ ಕೃತ್ಯದ ಜವಾಬ್ದಾರಿಯನ್ನು ಗುರುತಿಸುವ ಶಕ್ತಿಯೇ ಇಲ್ಲವೇ? ಭಾರತೀಯ ನ್ಯಾಯಾಂಗ ಸೋತುಹೋಯಿತೆ? ನಿಜವಾಗಿಯೂ, ಉನ್ನತ ನ್ಯಾಯಾಲಯಗಳು ಈಗ ಮಧ್ಯೆಪ್ರವೇಶಿಸಬೇಕಾದ ಪ್ರಮೇಯ ಹೆಚ್ಚಾಗಿದೆ? ಇಲ್ಲವೆಂದರೆ, ನ್ಯಾಯಾಲಯದ ಸೋಲು ಖಚಿತವಾಗಿ ಬಿಡುತ್ತದೆ.

ಮೂಲ: ರಾಜೀವ್ ಧವನ್

ಅನು: ಡಾ|| ಮಹದೇವ

ಕೋಮುವಾದದಡಿಯಲ್ಲಿ ಅಲ್ಪಸಂಖ್ಯಾತರನ್ನು ಗುರಿಯಾಗಿಟ್ಟುಕೊಂಡು ಬಹುತೇಕ ರಾಜ್ಯ ಸರ್ಕಾರಗಳು ಈ ಕಾಯಿದೆಯನ್ನು ದುರುಪಯೋಗಪಡಿಸಿಕೊಳ್ಳುತ್ತಿದ್ದವು. 'ಕೋಮುಗಲಬೆ'ಗಳ ವಿಷಯದಲ್ಲೂ ಭಾರತದ ನಡುವಳಿಕೆ ಅಪ್ಷರಲ್ಲಿಯೇ ಇದೆ. ಕೋಮುಗಲಭೆ ನಡೆದಾಗಲೆಲ್ಲಾ ಅಲ್ಪಸಂಖ್ಯಾತರು ಹೆಚ್ಚಿನ ಸಾವು ನೋವು ಅನುಭವಿಸಿದ್ದಾರೆ. ಪ್ರತಿಷ್ಠಿತ ನ್ಯಾಯಾಧೀಶರು ಕೋಮುಗಲಭೆಗಳ ಬಗ್ಗೆ ನೀಡಿರುವ ಹಲವಾರು ವರದಿಗಳಿವೆ. 1961ರ ಜಬಲ್‌ಪುರದ ಗಲಭೆ ಬಗ್ಗೆ ಶ್ರೀವಾಸ್ತವ ಆಯೋಗದ ವರದಿ, 1967ರ ಜಲಂಗಾಂವ್ ಗಲಭೆ ಬಗ್ಗೆ ಮೇಡನ್ ಆಯೋಗದ ವರದಿ, 1969ರ ಅಲಹಬಾದ್ ಗಲಭೆ ಬಗ್ಗೆ ಜಗಮೋಹನ್ ರೆಡ್ಡಿ ಆಯೋಗದ ವರದಿ, 1984ರ ಸಿಖ್ಖರ ವಿರುದ್ಧದ ದಂಗೆಯ ವಿಚಾರಗಳು ಮತ್ತು 1992-93ರ ಬಾಂಬೆ ಗಲಭೆಯ ಶ್ರೀಕೃಷ್ಣ ವರದಿಯಂತ ಕೆಲವು ವರದಿಗಳು ದ್ವಂದ್ವಗಳಿಂದ ಕೂಡಿವೆ. ಶ್ರೀಕೃಷ್ಣ ವರದಿಯಂತೆ ಕೆಲ ವರದಿಗಳು ಸರ್ಕಾರಗಳ ವಿಫಲತೆಯನ್ನು ನೇರವಾಗಿ ವರದಿಮಾಡಿವೆ. ಗ್ರಹಾಂಸ್ಟೇನ್‌ರ ಕೊಲೆಯ ಮೇಲಿನ ವಾಧ್ವಾ ಆಯೋಗದ ವರದಿ ಹಲವಾರು ವಿಷಯಗಳ ಬಗ್ಗೆ ಸ್ಪಷ್ಟವಾಗಿಲ್ಲ. ಬಾಬ್ರಿ ಮಸೀದಿಯ ಧ್ವಂಸದ ಮೇಲಿನ ಲಿಬರ್‌ಹಾನ್ಸ್ ವರದಿ ಎಳೆದಾಡುತ್ತಿದೆ. 2002ರ ಗುಜರಾತ್ ಗಲಭೆಯ ಬಗ್ಗೆಯ ನಾನಾವತಿ ಆಯೋಗದ ವರದಿ ಈಗಾಗಲೆ ವಿವಾದದ ಸುಳಿಯಲ್ಲಿದೆ.

ಹೀಗೆ ಕೋಮುಗಲಭೆಗಳಿಗೆ ಆಯೋಗಗಳ ಮೂಲಕ ನ್ಯಾಯ ದೊರಕಿಸುವ ಧೋರಣೆ ಈಗಾಗಲೆ ದುಸ್ಥಿರ ವಾಗಿ ಸೋತಿದೆ. ಗುಜರಾತ್ ಗಲಭೆಗಳ ನಂತರ ಬಹು ತೇಕ ವರದಿಗಳು ಪ್ರಕಟಗೊಂಡಿವೆ. ಇವು ಭಯಾನಕ ವಾಸ್ತವಾಂಶಗಳನ್ನಲ್ಲದೆ ರಾಜ್ಯ ಸರ್ಕಾರದ ಕ್ರೂರ ಬೇಜವಾಬ್ದಾರಿತನವನ್ನು ಚಿತ್ರಿಸುತ್ತವೆ. ಸರ್ಕಾರದ ವಿವಿಧ ಅಂಗಗಳು ಬೇರೆ ಕಡೆ ನೋಡುತ್ತಿವೆ. ಗುಜರಾತ್‌ನಲ್ಲಿ

ಹಿಂಸಾಚಾರ ಮುಂದುವರಿಯುತ್ತಿದ್ದರೂ ಗಲಭೆ ಸಂತ್ರಸ್ತರಿಗೆ ನೀಡಬೇಕಾದ ಪರಿಹಾರಧಾಮಗಳು ಸಾಕಷ್ಟಿರಲಿಲ್ಲ. ಜತೆಗೆ ಮನಬಂದಂತೆ ಕೆಲವನ್ನು ಮುಚ್ಚಲಾಗಿತ್ತು. ಈ ಸ್ವತಂತ್ರ ವರದಿಗಳು ಭಾರತದ ಸರ್ಕಾರದ ವೈಫಲ್ಯಗಳನ್ನು ಚಿಂತಾಜನಕವಾಗಿ ಚಿತ್ರಿಸುತ್ತವೆ. ಭಯದ ಬೆನ್ನಲ್ಲಿ ರಕ್ತಪಾತ ನಡೆಯಿತು. ಆದರೂ ಭಾರತ ಸರ್ಕಾರ ವಿಚಲಿತವಾಗಲಿಲ್ಲ.

ಇತ್ತೀಚಿನ ವರ್ಷಗಳಲ್ಲಿ, ಎಂ.ಎಫ್ ಹುಸೇನ್‌ರ ಚಿತ್ರಕಲೆಗಳನ್ನು ನಾಶಮಾಡುವುದೂ ಅಲ್ಲದೆ, ಅಪರಾಧಗಳ ಆರೋಪ ಹೊರಿಸಿದ್ದಾರೆ. ರಾಮಾಯಣದ ಹಲವು ಪ್ರಕಾರಗಳನ್ನು ತೋರಿಸುವ 'ಸಹಮತ್'ನ ಚಟುವಟಿಕೆಗಳನ್ನು ಅಂದಿನ ದೆಹಲಿಯ ಬಿಜೆಪಿ ಸರ್ಕಾರ ಏಳು ವರ್ಷಗಳ ಕಾಲ ರದ್ದು ಮಾಡಿತು. ಅಲ್ಪಸಂಖ್ಯಾತರನ್ನೆ ಗುರಿಯಾಗಿಟ್ಟುಕೊಂಡು ತಮಿಳುನಾಡು ಸರ್ಕಾರ ಮತಾಂತರ ಪ್ರತಿಬಂಧಕ ಶಾಸನ ರಚಿಸಿತು. ಬಾಬ್ರಿ ಮಸೀದಿ ಸಂಬಂಧದ ವಿವಾದ ಮುಂದುವರೆಯುತ್ತಲೇ ಇದೆ. ಮುಸಲ್ಮಾನರು ತಲೆತಗ್ಗಿಸುವಂತ ಒತ್ತಡ ಅತಿಯಾಗುತ್ತಿದೆ. ಕೋಮುವಾದದ ರಾಜಕೀಯದಿಂದ ಸರ್ಕಾರವನ್ನು ನಿರಂತರವಾಗಿ ಹರಾಜುಗಿಡುತ್ತಿದ್ದಾರೆ.

ಈಗ ಉಪಪ್ರಧಾನಿ ಎಲ್.ಕೆ.ಅಡ್ವಾಣಿ ಮತ್ತು ಅಧಿಕಾರದಲ್ಲಿರುವ ಮತ್ತೆ ಹಲವರು, ಬರೇ ಪ್ರೇಕ್ಷಕರೋ, ಪ್ರಚೋದನೆಯ ಕೃತ್ಯವೆಸಗಿದವರೋ ಅಥವಾ ಬಾಬ್ರಿಮಸೀದಿ ಧ್ವಂಸಮಾಡುವ ಪಿತೂರಿಯಲ್ಲಿ ಭಾಗಿಯಾದವರೋ ಎನ್ನುವ ಬಗ್ಗೆ ಈಗ ವಿವಾದ ನಡೆಯುತ್ತಿದೆ. ಇದೊಂದು ಗಂಭೀರವಾದ ವಿಷಯ. ಬಾಬರಿ ಮಸೀದಿ ಧ್ವಂಸದಲ್ಲಿ ಅವರು ಪಾಲ್ಗೊಂಡಿದ್ದರೆ ರಾಜ್ಯಾಂಗಕ್ಕೆ ಅಪಚಾರ ಮತ್ತು ಅಪಮಾನವಾಗಿದೆ. ಮಾಜಿ ಬ್ರಿಟಿಷ್ ಪ್ರಧಾನಿ ಹೆರಾಲ್ಡ್ ವಿಲ್ಸನ್ 1965ರಲ್ಲಿ ಸಂಸತ್ತಿನ ಜನಾಂಗವಾದಿ ಸದಸ್ಯನೊಬ್ಬನನ್ನು 'ಸಂಸತ್ತಿನ ಕುಷ್ಠರೋಗಿ' ಎಂದು ಟೀಕಿಸಿದ್ದನು. ಭಾರತದ ಕೋಮುವಾದಿ 'ಮಸೀದಿ ಧ್ವಂಸ' ಮಾಡಿದವರೆಂದು ಸಾಬೀತಾಗಿರುವ ಸಂಸತ್ತು ಸದಸ್ಯರನ್ನು ಇದಕ್ಕಿಂತ ಬೇರೆಯಾಗಿ ಏನು ಕಾಣಬೇಕಾಗಿಲ್ಲ. ಅಧಿಕೃತ ಸರ್ಕಾರಿ ಮಂಜೂರಾತಿಯ ತಾಂತ್ರಿಕ ವಿವರಣೆಗಳ ಬಗ್ಗೆ ಅಥವಾ ಅಪರಾಧಗಳನ್ನು ಮಾಡುವ, ಸೇರ್ಪಡಿಸುವ ಬಗ್ಗೆ ಹೊಡೆದಾಡುವ ಬದಲು ಅಡ್ವಾಣಿ ಮತ್ತು ಇನ್ನುಳಿದವರು ತಮ್ಮ ಹೆಸರುಗಳನ್ನು ಬಿಡಿಸಿಕೊಳ್ಳುವುದರಲ್ಲಿ ಆಸಕ್ತಿ ತೋರಿಸಬೇಕು.

ತಾಂತ್ರಿಕ ವಿಷಯಗಳು ರಾಜಕೀಯ ಆಶ್ರಯ ನೀಡಲಾರವು. ಅಥವಾ ಅಡ್ವಾಣಿ ತಮ್ಮ ಹೆಸರನ್ನು ಹೊರತೆಗೆಸಲು ಇಷ್ಟವೇ ಇಲ್ಲವೇ? ಅಡ್ವಾಣಿ ಬಾಬ್ರಿ ಮಸೀದಿ ಧ್ವಂಸಕ್ಕೆ ಪಿತೂರಿ ನಡೆಸಿದರು ಎನ್ನುವ ಆರೋಪ ಸತ್ಯವಾದರೆ, ಅದಕ್ಕೆ ಉತ್ತರ ಕೊಡಬೇಕಾಗಿದೆ. ಇದು ಎಲ್ಲಾ ರಾಜಕಾರಣಿಗಳಿಗೆ, ಕೇಂದ್ರ ಗೂಢಚಾರಿ ಸಂಸ್ಥೆಗೆ ಮತ್ತು ನ್ಯಾಯಾಲಯಗಳಿಗೆ ಸಂಬಂಧಿಸಿದ ವಿಷಯ. ಎಲ್ಲದಕ್ಕೂ ಮಿಗಿಲಾಗಿ, ವಿಚಾರಣೆಯ ಮೂಲಕ ಸತ್ಯ ಹೊರಬರುತ್ತಿರುವುದನ್ನು ತಡೆಗಟ್ಟಲು ಸಂಬಂಧಪಟ್ಟ ರಾಜಕಾರಣಿಗಳು ತೆರೆಮರೆಯ ಹಿಂದೆ ನಡೆಸುತ್ತಿರುವ ಪ್ರಯತ್ನವನ್ನು ಮರೆಮಾಡುವುದು ಸಾಧ್ಯವಾಗಿಲ್ಲ.

ಭಾರತೀಯ ನ್ಯಾಯಾಂಗ ಬೆಸ್ಟ್ ಬೇಕರಿ ಪ್ರಕರಣದಲ್ಲಿ ಪರೀಕ್ಷೆಗೆ ಒಳಗಾಯಿತು. 2002ರ ಮಾರ್ಚ್‌ನಲ್ಲಿ 14 ಜನರನ್ನು ವಡೋದರದ ಬೇಕರಿಯಲ್ಲಿ ಹತ್ಯೆಗೆಯ್ಯಲಾಯಿತು. ಮೇ. 9ರಂದು ಬಿರುಸಿನ ವಿಚಾರಣೆ ಆರಂಭಗೊಂಡು ಜೂನ್ 29, 2003ರಂದು ಮುಕ್ತಾಯಗೊಂಡಿತು. ಬಿರುಸಿನ ವೇಗದ ನ್ಯಾಯ ದಕ್ಷವಾಗಿರುತ್ತದೆ. ಆದರೆ ಅದು ನ್ಯಾಯಯುತವಾಗಿರುತ್ತದೆಯೇ? ಎಂದು ಹೇಳಲು ಬರುವುದಿಲ್ಲ. ಘಟನೆಯ ಬಗ್ಗೆ ಸಾಕ್ಷ್ಯ ಹೇಳಲು ಮುಂದೆ ಬಂದಿದ್ದ ಹಲವಾರು ಮುಗ್ಧ ಯುವಕರು, ನಡೆದ ಘಟನೆಗಳಿಂದ ಮಾನಸಿಕ ಹಿಂಸೆ ಅನುಭವಿಸಿದ್ದು ಮತ್ತು ಭವಿಷ್ಯದ ಬಗ್ಗೆ ಭಯಪಟ್ಟು, ತಮ್ಮ ಹೇಳಿಕೆಗಳನ್ನು ಹಿಂತೆಗೆದುಕೊಂಡರು. ಹಿಂಸೆಗೊಳಗಾದವರ ಕುಟುಂಬಗಳಿಗೆ ಯಾವುದೇ ರಕ್ಷಣೆಯಿರಲಿಲ್ಲ, ಸಾಂತ್ವನ ಅಥವ ಬೆಂಬಲವಿರಲಿಲ್ಲ. ಸುಮಾರು 70 ಪ್ರತ್ಯಕ್ಷದರ್ಶಿಗಳಲ್ಲಿ 36 ಜನ ಭಯದಿಂದ ಹಿಂದೆ ಸರಿದರು. ನಿಜವಾದ ತಪ್ಪಿತಸ್ಥರು ಯಾರು ಎಂಬುದು ನಮಗೆ ತಿಳಿದೇ ಇಲ್ಲ.

ಗೋಧ್ರಾ ನರಮೇಧದ ನಂತರ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ ಗುಜರಾತ್‌ಗೆ ಭೇಟಿ ನೀಡಿತು. ಅದು ಸಿಬಿಐನಿಂದ ವಿಚಾರಣೆ ಆಗಬೇಕೆಂದು ಸಲಹೆ ನೀಡಿತು. ಸಿಬಿಐ ತನಿಖೆ ಎಂದರೆ ನರೇಂದ್ರಮೋದಿ ಮತ್ತು ಅಟಲ್ ಬಿಹಾರಿ ವಾಜಪೇಯಿ ಇಬ್ಬರೂ ಬಿಜೆಪಿಗಳು ಒಪ್ಪಿಕೊಂಡಂತೆ. ಕೇಂದ್ರ ಸರ್ಕಾರ ಚುನಾವಣಾ ರಾಜಕೀಯಕ್ಕೆ ತನ್ನ ಜವಾಬ್ದಾರಿಯನ್ನು ಒಪ್ಪಿಸಿಬಿಟ್ಟಿತು. ಜುಲೈ-ಆಗಸ್ಟ್ 2002ರಲ್ಲಿ, ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ ಮೌನವಹಿಸಿರುವುದರ ಬಗ್ಗೆ ಹೆಚ್ಚು ಸುದ್ದಿಯೂ ಆಗುತ್ತಿಲ್ಲ. ಉನ್ನತ ನ್ಯಾಯಾಲಯಗಳು ಸಿಬಿಐ ತನಿಖೆ ಆಗಬೇಕೆಂದು ಆದೇಶಿಸಿಬಹುದಿತ್ತು. 2003ರ ಜುಲೈನ ತಾಜ್ ಕಾರಿಡಾರ್ ಹಗರಣದ ಬಗ್ಗೆ ನಿಜವಾಗಲು ನ್ಯಾಯಾಲಯ ಸಿಬಿಐ ತನಿಖೆ ಆದೇಶಿಸಿದೆ. ಗುಜರಾತಿನ ಹಿಂಸಾಚಾರಗಳ ಬಗ್ಗೆ ಸಿಬಿಐ ತನಿಖೆಯಾಗಬೇಕು. ಸರಿಯಾದ ಪರಿಹಾರ ದೊರೆಯಬೇಕು ಮತ್ತು ಪುನರ್ವಸತಿಯಾಗಬೇಕು ಎನ್ನುವ ಮನವಿಗಳು ಸರ್ವೋನ್ನತ ನ್ಯಾಯಾಲಯದ ಮುಂದೆ ಬಾಕಿ ಬಿದ್ದಿವೆ. ಸರ್ವೋನ್ನತ ನ್ಯಾಯಾಲಯಕ್ಕೆ ನಿಸ್ಸಂದೇಹವಾಗಿ ಬಿಡುವಿಲ್ಲ. ಆದರೆ ಸಿಬಿಐ ಈ ಕಣವನ್ನು ಪ್ರವೇಶಿಸದೇ ಇರುವ ಪರಿಣಾಮ ಸುಸ್ಪಷ್ಟವಾಗುತ್ತಿದೆ.

ಬೇಕರಿ ಪ್ರಕರಣದಲ್ಲಿ ನಿಜವಾಗಿ ನಡೆದಿದ್ದೇನು? ನ್ಯಾಯಾಮೂರ್ತಿಗಳು ವಿಚಾರಣೆಯ ಬಗ್ಗೆ ಛೀಮಾರಿ ಹಾಕಿದರು. ವಿಚಾರಣಾಧಿಕಾರಿಗಳು ಸಾಕ್ಷಿದಾರರುಗಳನ್ನು ಬೈದರು. ಸಾಕ್ಷಿದಾರರುಗಳು ಭಯದ ಭೀತಿಯಲ್ಲಿ ಸಿಕ್ಕಿಕೊಂಡಿದ್ದಾರೆ. ಪ್ರತ್ಯಕ್ಷ ಮತ್ತು ಪರೋಕ್ಷ ಮಾರ್ಗದ ಒತ್ತಡ ಮತ್ತು ಸತ್ಯ ಹೇಳಿದರೆ ಅವರ ಬದುಕು ನರಕ ಸದೃಶವಾಗುವುದೆಂಬ ಮುನ್ಸೂಚನೆಯ ಪರಿಣಾಮ ನ್ಯಾಯಾಲಯದ ಅಪೂರ್ಣ ತೀರ್ಪಿಗೆ ಕಾರಣವಾಯಿತು. ಅರ್ಥಾತ್, ಬೆಸ್ಟ್ ಬೇಕರಿಯ ನರಮೇಧ ಯಾರಿಗೂ ತಿಳಿಯದ ಅಪರಾಧಿಯ ಮೇಲಿನ ಆರೋಪವಾಯಿತು. ಭಾರತೀಯ ತನಿಖಾ ಮತ್ತು ವಿಚಾರಣಾ ಪೀಠಗಳಿಗೆ ಸಾರ್ವಜನಿಕರ ಕಣ್ಣುಮುಂದೆ ನಡೆದ ಕೃತ್ಯದ ಜವಾಬ್ದಾರಿಯನ್ನು ಗುರುತಿಸುವ ಶಕ್ತಿಯೇ ಇಲ್ಲವೇ? ಭಾರತೀಯ ನ್ಯಾಯಾಂಗ ಸೋತುಹೋಯಿತೆ? ನಿಜವಾಗಿಯೂ, ಉನ್ನತ ನ್ಯಾಯಾಲಯಗಳು ಈಗ ಮಧ್ಯೆಪ್ರವೇಶಿಸಬೇಕಾದ ಪ್ರಮೇಯ ಹೆಚ್ಚಾಗಿದೆ? ಇಲ್ಲವೆಂದರೆ, ನ್ಯಾಯಾಲಯದ ಸೋಲು ಖಚಿತವಾಗಿ ಬಿಡುತ್ತದೆ.

ಭಾರತದ 'ಉನ್ನತ' ನ್ಯಾಯಾಂಗ ವ್ಯವಸ್ಥೆ ಉತ್ತಮವಾಗಿದೆಯೆ? ವಿಧಿವಶಾತ್, ಇದು ಸಂಶಯಾಸ್ಪದವಾಗಿ ಬಿಟ್ಟಿದೆ. ಭಾರತದ ಆಡಳಿತ ವ್ಯವಸ್ಥೆಗೆ ಅಲ್ಪಸಂಖ್ಯಾತರನ್ನು ರಕ್ಷಿಸುವ ಮತ್ತು ಕೋಮು ಗಲಭೆಗಳನ್ನು ನಿಭಾಯಿಸುವ ಶಕ್ತಿ ಇಲ್ಲ ಎಂದು ತೋರ್ಪಡುತ್ತಿದೆ. ಇದು ತುಂಬ ಗಂಭೀರದ ಅಪವಾದ ಮತ್ತು ಅಲ್ಪಸಂಖ್ಯಾತರುಗಳ ಮನಸ್ಸಿನಲ್ಲಿರುವ ತೀರ ಗಂಭೀರವಾದ ಭಯಗಳ ಪ್ರತಿಬಿಂಬ. ಅನೇಕ ಧರ್ಮ, ಅನೇಕ ಸಂಸ್ಕೃತಿಗಳ ಸ್ವತಂತ್ರ ಬೃಹತ್ ರಾಷ್ಟ್ರವೊಂದರ ಪ್ರಜೆಗಳು ಈ ಅಲ್ಪಸಂಖ್ಯಾತರು. ಇದು ಒಂದು ಕಾನೂನಿನ ವಿಷಯವಾಗಿ ವಿದೇಶಗಳಲ್ಲಿ ಅಪರಾಧಿಗಳನ್ನು ಒಪ್ಪಿಸುವ ವಿಚಾರಗಳ ಸಂದರ್ಭದಲ್ಲಿ ಪ್ರಸ್ತಾವಗೊಳ್ಳುತ್ತದೆ. ಪ್ರಜಾತಂತ್ರ ವ್ಯವಸ್ಥೆಯ ನ್ಯಾಯಯುತ ಆಳ್ವಿಕೆಯು ಒಂದು ವಿಷಯವಾಗಿ ಆಗಾಗ ಇದು ತಲೆಯೆತ್ತುತ್ತಲೆ ಇರುತ್ತದೆ.

ಕೆಲವು ವರ್ಷಗಳ ಹಿಂದೆ, ಫಾಲಿ ನಾರಿಮನ್ ಅಮೇರಿಕಾದ ಮರಣದಂಡನೆಯ ವಿಷಯದ ಬಗ್ಗೆ ವರದಿಯೊಂದನ್ನು ಬರೆದು, ಅಮೇರಿಕಾದಲ್ಲಿ ಮರಣದಂಡನೆಯ ಪಟ್ಟಿಯಲ್ಲಿರುವ ಹೆಚ್ಚಿನವರು ಬಡಕರಿಯರಾಗಿರುತ್ತಾರೆ ಎಂದು ತಿಳಿಸಿದರು. ಎರಡು ದಶಮಾನಗಳ ಹಿಂದೆ, ಪ್ರೊಫೆಸರ್ ಗ್ರಿಫಿತ್ಸ್ ಇಂಗ್ಲೀಷ್ ನ್ಯಾಯಾಂಗ ಅಪಾರವಾದ ವರ್ಗಪಕ್ಷಪಾತದಿಂದ ಕೂಡಿದೆ ಎಂದು ಹೇಳಿದ್ದನು. ರಾಜಕೀಯ ವಿಷಯಗಳನ್ನು ನಿಭಾಯಿಸುವ ಶಕ್ತಿ ಮಲೇಷಿಯಾ ನ್ಯಾಯಾಂಗಕ್ಕಿಲ್ಲ ಎಂದು 2000ದ ಮಲೇಷಿಯಾ ವರದಿ ಹೇಳುತ್ತದೆ.

ಒಂದು ರಾಷ್ಟ್ರದ ಆಡಳಿತ ವ್ಯವಸ್ಥೆಗೆ ಒಂದು ಅಪವಾದ ಅಂಟಿಕೊಂಡರೆ, ಅರ್ಬುದ ರೋಗದಂತೆ ವ್ಯವಸ್ಥೆಯನ್ನೆ ರೋಗಗ್ರಸ್ಥವನ್ನಾಗಿ ಮಾಡಿಬಿಡುತ್ತದೆ. ಭಾರತೀಯರು ಲೌಕಿಕರು ಅಥವಾ ಧರ್ಮನಿರಪೇಕ್ಷಿತರು. ಭಾರತ ಆಡಳಿತ ವ್ಯವಸ್ಥೆ ಮತ್ತು 'ಉನ್ನತ' ನ್ಯಾಯಾಂಗ ಪದ್ಧತಿ ಅಲ್ಪಸಂಖ್ಯಾತರುಗಳ ನಂಬಿಕೆಗೆ ಪಾತ್ರವಾಗಿಲ್ಲ ಮತ್ತು ಅಲ್ಪಸಂಖ್ಯಾತರು ಬಂಧನದಲ್ಲಿ ಬದುಕುತ್ತಿದ್ದಾರೆ ಎಂಬ ಅಪವಾದ ಪಡೆದುಕೊಳ್ಳುತ್ತಿರುವುದು ಸರಿಯಲ್ಲ. ಅಲ್ಪಸಂಖ್ಯಾತರುಗಳ ಈ 'ಬಂಧನ' ಬಾಬ್ರಿ ಮಸೀದಿಯ ಧ್ವಂಸದ ನಂತರ ಸ್ಪಷ್ಟ ರೂಪ ಪಡೆದುಕೊಂಡಿದೆ. ಭಾರತೀಯ ಆಡಳಿತ ಕ್ರಮ ಮತ್ತು ನ್ಯಾಯಾಂಗ ಪದ್ಧತಿ ತನ್ನ ತಪ್ಪುಗಳಿಂದ ವಿಮೋಚನೆ ಪಡೆಯಬೇಕಾಗಿದೆ. ವಿದೇಶಿ ಬಂಡವಾಳ ಹೂಡಿಕೆದಾರರಿಗೆ ಅನುಕೂಲ ಕಲ್ಪಿಸಲು ನಾವು ಕಾನೂನು ರಚಿಸುತ್ತೇವೆ, ಆದರೆ ನಾವು ನಮ್ಮ ಜನರಿಗೆ ಉತ್ತಮ ವ್ಯವಸ್ಥೆ ಕಲ್ಪಿಸುವಲ್ಲಿ ಎಡುವುತ್ತಿದ್ದೇವೆಯೇ? ●

(ಸೌಜನ್ಯ : ದಿ ಹಿಂದೂ)

ಬೌದ್ಧಧಮ್ಮದ ಮೂಲ ಪರಿಕಲ್ಪನೆಗಳು

ಪರಸ್ಪರ ಪ್ರೀತಿ-ಗೌರವ ಶಾಂತಿ-ಸಮಾನತೆ ಮುಂತಾದ ಮಾನವೀಯ ಮೌಲ್ಯಗಳ ಪ್ರತೀಕವಾದ ಬೌದ್ಧಧಮ್ಮ ಜಗತ್ತಿನಲ್ಲೆಡೆ ವ್ಯಾಪಿಸುತ್ತಿರುವ ಈ ಸಂದರ್ಭದಲ್ಲಿ ಅದರ ಮೂಲ ಸ್ವರೂಪ ಮತ್ತು ಆಚರಣೆಗಳನ್ನು ಕುರಿತ ತಿಳುವಳಿಕೆ ಕೂಡ ಅನಿವಾರ್ಯ. ಇದನ್ನು ಮನಗಂಡಿರುವ 'ಸಂವಾದ'ವು ಬುದ್ಧ ಜ್ಯೋತಿ ಪ್ರಕಾಶನ ಪ್ರಕಟಿಸಿರುವ ಪೂಜ್ಯ ಎಸ್. ಧಮ್ಮಿಕರವರ ಪುಸ್ತಕ ಕನ್ನಡಾನುವಾದವನ್ನು ಓದಿಗರಿಗಾಗಿ ನೀಡುತ್ತಿದೆ. ಅನುವಾದಿಸಿರುವವರು

ಡಾ|| ಪಿ.ವಿ. ನಾರಾಯಣ್

1) ಇತರ ಧರ್ಮಗಳಲ್ಲಿ ಸರಿ ತಪ್ಪುಗಳ ಕಲ್ಪನೆ ಯನ್ನು ಅವರವರ ದೇವರು ಅಥವಾ ದೇವತೆಗಳು ನೀಡಿದ ಆಜ್ಞೆಗಳಿಂದ ರೂಪಿಸಿಕೊಳ್ಳುತ್ತಾರೆ. ಆದರೆ ಬೌದ್ಧರು ದೇವರನ್ನು ನಂಬುವವರಲ್ಲ, ಹಾಗಾಗಿ ನಿಮ್ಮಲ್ಲಿ ಸರಿ ತಪ್ಪುಗ್ಳ ನಿರ್ಧಾರಕ್ಕೆ ಆಧಾರವೇನು?

ನಿರ್ವಾಣದಿಂದ ನಮ್ಮನ್ನು ದೂರ ಮಾಡುವ ದುರಾಸೆ, ದ್ವೇಷ ಹಾಗೂ ಮೋಹಮೂಲವಾದ ಯಾವುದೇ ಆಲೋಚನೆ, ಮಾತು ಅಥವಾ ಕಾರ್ಯವು ತಪ್ಪು; ಹಾಗೆಯೇ ನಿರ್ವಾಣದೆಡೆಗೆ ನಮ್ಮನ್ನು ಕೊಂಡೊಯ್ಯುವ ದಾನಶೀಲತೆ, ಪ್ರೇಮ ಹಾಗೂ ವಿವೇಕಗಳ ಮೇಲೆ ನಿಂತಿರುವ ಯಾವುದೇ ಆಲೋಚನೆ, ಮಾತು ಅಥವಾ ಕಾರ್ಯವು ಸರಿ.

ದೇವಕೇಂದ್ರಿತ ಧರ್ಮಗಳಲ್ಲಿ, ಸರಿ ಯಾವುದು ತಪ್ಪು ಯಾವುದು ಎಂದು ತಿಳಿಯುವುದೆಂದರೆ ಹೇಳಿದ ಹಾಗೆ ಅನುಸರಿಸುವುದು. ಆದರೆ ಮಾನವಕೇಂದ್ರಿತ ಧರ್ಮವಾದ ಬೌದ್ಧಧಮ್ಮದಲ್ಲಿ, ಸರಿ ಯಾವುದು ತಪ್ಪು ಯಾವುದು ಎಂದು ತಿಳಿಯುವುದೆಂದರೆ, ವ್ಯಕ್ತಿಯ ಆಳವಾದ ಪ್ರಜ್ಞೆ ಹಾಗೂ ಜ್ಞಾನವನ್ನು ಪಡೆಯಬೇಕಾಗುತ್ತದೆ.

ಹಾಗಾಗಿ ಸರಿ ತಪ್ಪುಗಳನ್ನು ನಿರ್ಣಯಿಸುವಾಗ ಬೌದ್ಧನಾದವನು ಮೂರು ವಿಷಯಗಳನ್ನುಗಮನದಲ್ಲಿ ಇರಿಸಿಕೊಳ್ಳುತ್ತಾರೆ: ಉದ್ದೇಶ, ತನ್ನ ಕ್ರಿಯೆಯು ತನ್ನ ಮೇಲೆ ಹಾಗೂ ಇತರರ ಮೇಲೆ ಉಂಟುಮಾಡುವ ಪರಿಣಾಮವನ್ನು ಅರಿಯುವುದು. ಉದ್ದೇಶವು ಒಳ್ಳೆಯದಾದರೆ (ಅಂದರೆ, ಅದು ದಾನಶೀಲತೆ, ಪ್ರೇಮ ಹಾಗೂ ಪ್ರಜ್ಞೆಯ ಮೇಲೆ ಅವಲಂಬಿತವಾಗಿದ್ದರೆ,) ತನಗೆ ಒಳಿತನ್ನು ಉಂಟುಮಾಡುವುದಾಗಿದ್ದರೆ (ಅಂದರೆ, ಅವನನ್ನು ಹೆಚ್ಚು ದಾನಶೀಲನಾಗಿ, ಹೆಚ್ಚು ಪ್ರೇಮವುಳ್ಳವನಾಗಿ ಹಾಗೂ ಹೆಚ್ಚು ವಿವೇಕವನ್ನು ಪಡೆಯುವುದಕ್ಕೆ ಸಹಾಯಕವಾದರೆ), ಆಗ ಅವನ ಕಾರ್ಯಗಳು ಹಾಗೂ ಕ್ರಿಯೆಗಳು ಆರೋಗ್ಯಕರವಾದವು ಎಂದರ್ಥ. ಇದರಲ್ಲಿ ಅನೇಕ ವ್ಯತ್ಯಾಸಗಳಿರುವುದು ನಿಜ. ಕೆಲವು ವೇಳೆ ನಾವು ಮಾಡುವ ಕ್ರಿಯೆಯ ಹಿಂದೆ ತುಂಬ ಉದಾತ್ತವಾದ ಉದ್ದೇಶವೇ ಇರಬಹುದು, ಆದರೆ ಅದರಿಂದ ನಮಗಾಗಲೀ ಇತರರಿಗಾಗಲೀ ಯಾವುದೇ ಒಳಿತು ಆಗದೇ ಹೋಗಬಹುದು. ಇನ್ನೂ ಕೆಲವು ವೇಳೆ ನಮ್ಮ ಕ್ರಿಯೆಯು ಸದುದ್ದೇಶದಿಂದ ಪ್ರೇರಿತವಾಗದೇ ಹೋಗಿದ್ದರೂ ಇತರರಿಗೆ ಒಳ್ಳೆಯದನ್ನು ಉಂಟುಮಾಡಬಹುದು. ಮತ್ತೂ ಕೆಲವು ವೇಳೆ ನಮ್ಮ ಕ್ರಿಯೆಯು ಉದಾತ್ತ ಧ್ಯೇಯದಿಂದ ಕೂಡಿದ್ದರೂ ಅದು ನಮಗೆ ಮಾತ್ರ ಒಳ್ಳೆಯದನ್ನು ಮಾಡಿ ಇತರರಿಗೆ ಹಾನಿಕಾರಕವಾಗಬಹುದು. ಇಂಥ ಸನ್ನಿವೇಶಗಳಲ್ಲಿ, ನಮ್ಮ ಕ್ರಿಯೆಗಳು ಸಂಮಿಶ್ರವಾಗಿರುತ್ತವೆ; ಒಳಿತು ಕೆಡುಕಗಳ ಮಿಶ್ರಣವಾಗಿರುತ್ತವೆ. ಉದ್ದೇಶವೇ ಕೆಟ್ಟದಾಗಿದ್ದು ಕ್ರಿಯೆ ಮಾಡಿದವನಿಗಾಗಲೀ ಇತರರಿಗಾಗಲೀ ಒಳಿತನ್ನು ಮಾಡದಿದ್ದರೆ, ಅಂಥ ಕ್ರಿಯೆಯು ಕೆಟ್ಟದ್ದು. ನಮ್ಮ ಉದ್ದೇಶವು ಒಳ್ಳೆಯದಾಗಿದ್ದು ಅದರಿಂದ ನಮಗೂ ಇತರರಿಗೂ ಒಳ್ಳೆಯದಾದರೆ, ಅಂಥ ಕ್ರಿಯೆಯು ಹೆಚ್ಚು ಒಳ್ಳೆಯದು.

2) ಅಂದರೆ ಬೌದ್ಧಮತವು ಒಂದು ನೀತಿಸಂಹಿತೆಯನ್ನು ಪಡೆದಿದೆ ಎಂದಂತಾಯಿತು?

ಹೌದು, ಪಡೆದಿದೆ. ಪಂಚಶೀಲವು ಬೌದ್ಧ ನೀತಿ ಸಂಹಿತೆಯ ಬುನಾದಿಯಾಗಿದೆ. ಮೊದಲನೆಯ ಶೀಲವೆಂದರೆ, ಜೀವಿಗಳನ್ನು ಕೊಲ್ಲದಿರುವುದು ಅಥವಾ ಹಾನಿ ಮಾಡದಿರುವುದು. ಎರಡನೆಯದೆಂದರೆ, ಕಳ್ಳತನ ಮಾಡದಿರುವುದು. ಮೂರನೆಯದು, ಲೈಂಗಿಕ ದುರಾಚಾರಗಳಲ್ಲಿ ತೊಡಗದಿರುವುದು. ನಾಲ್ಕನೆಯದು, ಸುಳ್ಳು ಹೇಳದಿರುವುದು ಮತ್ತು ಐದನೆಯದು, ಮದ್ಯದಂತಹ ಮತ್ತೇರಿಸುವ ವಸ್ತುಗಳನ್ನು ಸೇವಿಸದಿರುವುದು.

3) ಆದರೆ ಕೆಲವು ವೇಳೆ ಕೊಲ್ಲುವುದರಿಂದ ಒಳ್ಳೆಯ ಪರಿಣಾಮವಾಗುತ್ತದಲ್ಲ, ಉದಾಹರಣೆಗೆ, ರೋಗಗಳನ್ನು ಹರಡುವ ಕೀಟಗಳನ್ನು ಅಥವಾ ನಿಮ್ಮನ್ನೇ ಕೊಲ್ಲ ಬಂದ ವ್ಯಕ್ತಿಯನ್ನು ಕೊಲ್ಲುವುದು.

ಇದರಿಂದ ನಿಮಗೆ ಒಳ್ಳೆಯದಾಗಬಹುದು. ಆದರೆ ಇದಕ್ಕೊಳಗಾಗುವ ಕೀಟ ಅಥವಾ ವ್ಯಕ್ತಿಗೆ ಆಗುವುದೇನು? ಅವಕ್ಕೂ ನಿಮ್ಮ ಹಾಗೆಯೇ ಬದುಕುವ ಆಸೆಯಿರುವುದಿಲ್ಲವೇ? ರೋಗ ಹರಡುವ ಕೀಟವನ್ನು ಕೊಲ್ಲಲು ನೀವು ನಿರ್ಧರಿಸಿದರೆ, ಅದರಲ್ಲಿ ಸ್ವಯಂ ರಕ್ಷಣೆ (ಒಳ್ಳೆಯದು) ಹಾಗೂ ದ್ವೇಷ (ಕೆಟ್ಟದ್ದು) ಎರಡೂ ಬೆರೆತಿರುತ್ತದೆ. ಇದರಿಂದ ನಿಮಗೆ ಒಳೆಯ ದಾಗಬಹುದಾದರೂ (ಒಳಿತು), ಇತರ ಜೀವಕ್ಕೆ ಒಳ್ಳೆಯ ದಾಗಲಾರದು (ಕೆಟ್ಟದ್ದು). ಹೀಗಾಗಿ ಕೆಲವು ವೇಳೆ ಕೊಲ್ಲು ವುದರಿಂದ ಒಳ್ಳೆಯದಾಗಬಹುದಾದರೂ, ಸಂಪೂರ್ಣ ವಾಗಿ ಒಳ್ಳೆಯದಾಗಿರುವುದಿಲ್ಲ.

4) ಬೌದ್ಧರು ಇರುವೆ, ತಿಗಣೆಗಳ ಬಗ್ಗೆ ತುಂಬ ಕಾಳಜಿ ತೋರಿಸುತ್ತಾರಲ್ಲ.

ತಮ್ಮ ಕರುಣೆಯು ವ್ಯಾಪಕವೂ ಪಕ್ಷಪಾತರಹಿತವೂ ಆಗಿರಬೇಕೆಂದು ಬೌದ್ಧರು ಪ್ರಯತ್ನಿಸುತ್ತಾರೆ. ಪ್ರಪಂಚವನ್ನು ಇಡಿಯಾಗಿ ನೋಡುತ್ತಾರೆ ಹಾಗೂ ಅದರಲ್ಲಿನ ಪ್ರತಿ ಜೀವಿಗೂ ತನ್ನದೇ ಆದ ಸ್ಥಾನ ಮತ್ತು ಮಾನವಿದೆಯೆಂದು ಅವರು ಭಾವಿಸುತ್ತಾರೆ. ಪ್ರಕೃತಿಯನ್ನು ನಾಶಮಾಡುವ ಅಥವಾ ಅದರ ಸಮತೋಲನವನ್ನು ಹಾಳುಮಾಡುವ ಮುಂಚೆ ಎಚ್ಚರದಿಂದಿರಬೇಕೆಂದು ಅವರು ನಂಬುತ್ತಾರೆ. ಪ್ರಕೃತಿಯನ್ನು ಆದಷ್ಟೂ ಶೋಷಣೆ ಮಾಡಬೇಕೆನ್ನುವ, ಯಾವುದನ್ನೂ ಬಿಡದೆ ಎಲ್ಲವನ್ನೂ ಗೆದ್ದು ತಮ್ಮ ಅಡಿಯಾಳಾಗಿಕೊಂಡು ಕೊನೆತನಕ ಹೀರಿ ಬಿಡುವ ಪ್ರವೃತ್ತಿಯುಳ್ಳ ಸಂಸ್ಕೃತಿಗಳನ್ನು ನೋಡಿ, ಪ್ರಕೃತಿ ತಿರುಗಿ ಬಿದ್ದಿದೆ. ಗಾಳಿಯೇ ವಿಷಮಯವಾಗುತ್ತಿದೆ. ನದಿಗಳು ಮಲಿನಗೊಂಡಿವೆ, ಅನೇಕ ಸುಂದರ ಜೀವಜಾತಗಳು ಲುಪ್ತಗೊಳ್ಳುತ್ತಿವೆ. ಪರ್ವತಗಳ ಇಳಿಜಾರುಗಳು ಬರಡಾಗುತ್ತಿವೆ ಮತ್ತು ಸವೆಯುತ್ತಿವೆ. ಹವಾಮಾನವೂ ಬದಲಾಗುತ್ತಿದೆ. ಮಾನವರಲ್ಲಿನ ಈ ತುಳಿಯುವ, ವಿನಾಶ ಮಾಡುವ ಹಾಗೂ ಕೊಲ್ಲುವ ಪ್ರವೃತ್ತಿ ಸ್ವಲ್ಪ ಕಡಿಮೆ ಮಟ್ಟದಲ್ಲಿದ್ದಿದ್ದರೆ, ಇಂತಹ ಭಯಂಕರ ಪರಿಸ್ಥಿತಿ ಉಂಟಾಗುತ್ತಿರಲಿಲ್ಲ. ಜೀವದ ಬಗ್ಗೆ ನಾವೆಲ್ಲ ಸ್ವಲ್ಪ ಹೆಚ್ಚಿನ ಗೌರವವನ್ನು ರೂಢಿಸಿಕೊಳ್ಳಬೇಕಾಗಿದೆ. ಇದನ್ನೇ ಮೊದಲ ಶೀಲವು ಬೋಧಿಸುವುದು.

5) ಮೂರನೆಯ ಶೀಲವು ಲೈಂಗಿಕ ದುರಾಚಾರವನ್ನು ದೂರೀಕರಿಸುವ ಬಗ್ಗೆ ಹೇಳುತ್ತದೆ. ಲೈಂಗಿಕ ದುರ್ವ್ಯವಹಾರ ಎಂದರೇನು?

ನಮ್ಮೊಡನೆ ಲೈಂಗಿಕ ಸಂಪರ್ಕ ಹೊಂದಲು ಇತರರ ಮೇಲೆ ಕುತಂತ್ರವನ್ನೋ ಬೆದರಿಕೆಯನ್ನೋ ಬಲವಂತದ ಮಾರ್ಗವನ್ನೋ ಅನುಸರಿಸಿದರೆ ಅದು ಲೈಂಗಿಕ ದುರಾಚಾರವಾಗುತ್ತದೆ. ವ್ಯಭಿಚಾರವೂ ಒಂದು ಬಗೆಯ ಲೈಂಗಿಕ ದುರಾಚಾರವೇ; ಯಾಕೆಂದರೆ, ಮದುವೆಯಾದಾಗ ನಮ್ಮ ಸಂಗಾತಿಗೆ ನಿಷ್ಠೆಯಿಂದಿರುವುದಾಗಿ ಮಾತು ಕೊಟ್ಟಿರುತ್ತೇವಲ್ಲ, ವ್ಯಭಿಚಾರವನ್ನು ಎಸಗಿದಾಗ ನಾವು ಆ ಮಾತನ್ನು ಮುರಿದಿರುತ್ತೇವೆ. ನಂಬಿಕೆದ್ರೋಹ ಮಾಡಿರುತ್ತೇವೆ. ಲೈಂಗಿಕ ಕ್ರಿಯೆಯು ಇಬ್ಬರ ನಡುವಣ ಪ್ರೇಮ ಮತ್ತು ಆತ್ಮೀಯತೆಗಳ ಅಭಿವ್ಯಕ್ತಿಯಾಗಿರಬೇಕು; ಹಾಗಿರುವುದು ನಮ್ಮ ಮಾನಸಿಕ ಹಾಗೂ ಭಾವನಾತ್ಮಕ ಆರೋಗ್ಯಕ್ಕೆ ಕಾರಣವಾಗುತ್ತದೆ.

6) ಮದುವೆಗೆ ಮುಂಚೆ ಹೊಂದುವ ಲೈಂಗಿಕ ಸಂಬಂಧವು ಲೈಂಗಿಕ ದುರಾಚಾರ ವಾಗುತ್ತದೆಯೇ?

ಇಬ್ಬರೂ ವ್ಯಕ್ತಿಗಳ ನಡುವೆ ಪ್ರೀತಿ ಮತ್ತು ಪರಸ್ಪರ ತಿಳುವಳಿಕೆಗಳಿದ್ದರೆ ಅದು ಲೈಂಗಿಕ ದುರಾಚಾರವಾಗುವುದಿಲ್ಲ. ಆದರೆ ಲೈಂಗಿಕ ಕ್ರಿಯೆಯು ಜೈವಿಕ ಉದ್ದೇಶವು ಸಂತಾನಪ್ರಾಪ್ತಿ ಎಂಬುದನ್ನೂ ಅವಿವಾಹಿತ ಹೆಂಗಸು ಗರ್ಭಿಣಿಯಾದರೆ ಅದರಿಂದ ಅನೇಕ ಸಮಸ್ಯೆಗಳು ಉದ್ಭವಿಸಬಹುದು ಎಂಬುದನ್ನೂ ನಾವು ನೆನಪಿಡಬೇಕು. ಆದ್ದರಿಂದಲೇ ಅನೇಕ ಪ್ರಬುದ್ಧರೂ ವಿಚಾರವಂತರೂ ಆದ ಜನ ಮದುವೆಯಾಗುವವರೆಗೆ ಲೈಂಗಿಕ ಸಂಪರ್ಕದಿಂದ ದೂರವಿರಬೇಕೆಂದು ಭಾವಿಸುತ್ತಾರೆ.

7) ಆದರೆ ಸುಳ್ಳು ಹೇಳುವುದರ ಬಗ್ಗೆ, ಜೀವನಪೂರ್ತಿ ಸುಳ್ಳು ಹೇಳದೆಯೇ ಇರಲು ಸಾಧ್ಯವೇ?

ಸುಳ್ಳು ಹೇಳದೆ ಏಳಿಗೆಯಾಗಲು ನಿಜವಾಗಿಯೂ ಸಾಧ್ಯವಾಗದ ಪರಿಸ್ಥಿತಿ ಸಮಾಜದಲ್ಲಾಗಲೀ ವ್ಯವಹಾರದಲ್ಲಾಗಲೀ ಇರದಿದ್ದರೆ, ಅಂಥ ಆಘಾತಕರ ಭ್ರಷ್ಟ ಪರಿಸ್ಥಿತಿಯನ್ನು ಬದಲಿಸಬೇಕು. ಹೆಚ್ಚು ನಿಷ್ಠೆ ಮತ್ತು ಪ್ರಾಮಾಣಿಕತೆಗಳಿಂದ ಅಂಥ ಸಮಸ್ಯೆಯ ನಿವಾರಣೆಗೆ ಬೌದ್ಧನು ಕಾರ್ಯಸಾಧ್ಯವಾದ ಪ್ರಯತ್ನ ಮಾಡುತ್ತಾನೆ.

8) ಅದು ಸರಿ. ಆದರೆ ಮದ್ಯಪಾನ ಬಗ್ಗೆ ಏನು? ಅಲ್ಪಸ್ವಲ್ಪ ಸೇವಿಸಿದರೆ ಹಾನಿಯಿಲ್ಲ ಅಲ್ಲವೇ?

ಜನ ಕುಡಿಯುವುದು ರುಚಿಗಾಗಿ ಅಲ್ಲ. ಒಬ್ಬರೇ ಇದ್ದಾಗ ಕುಡಿಯುವುದು ತಮ್ಮ ಮಾನಸಿಕ ಜಂಜಡದಿಂದ ಪಾರಾಗಲು; ಇತರರ ಜೊತೆ ಕುಡಿಯುವುದು ಅನುರೂಪವಾಗಿರಲು. ಸ್ವಲ್ಪ ಮದ್ಯಸೇವನೆಯೂ ಪ್ರಜ್ಞೆಯನ್ನು ಕಲಕಿ ಜಾಗೃತಿಯನ್ನು ಕದಡುತ್ತದೆ. ಹೆಚ್ಚು ಪ್ರಮಾಣದಲ್ಲಿ ಸೇವಿಸಿದರೆ, ಆಗುವ ಪರಿಣಾಮ ವಿನಾಶಕಾರಕವಾಗಬಹುದು.

ಬುದ್ಧ ಬೆಳಕು

ಒಂದು ದಿನ ಬುದ್ಧ ಭಿಕ್ಷೆಬೇಡುತ್ತಾ ಒಂದು ಮನೆಯ ಬಳಿ ನಿಂತ. ಸ್ವಲ್ಪ ಸಮಯದ ನಂತರ ಆ ಮನೆಯ ಒಡತಿ ಕೋಪದಿಂದ ಹೊರಬಂದು ಬುದ್ಧನ್ನನ್ನು ಕುರಿತು-

"ನೋಡಲು ದಾಂಡಿಗನಂತೆ ಇದ್ದೀಯಾ... ದುಡಿದುಗಳಿಸಿ ತಿನ್ನಬಾರದೆ....

ಭಿಕ್ಷೆ ಬೇಡಲು ನಿನಗೆ ನಾಚಿಕೆಬಾರದೆ... ಥೂ ನಿನ್ನ"- ಎಂದು ಬಾಯಿಗೆ ಬಂದಂತೆ ಬೈದಳಂತೆ. ಸ್ವಲ್ಪವೂ ವಿಚಲಿತನಾಗದ ಬುದ್ಧ ಶಾಂತಚಿತ್ತದಿಂದ ಆಕೆಯ ಕೋಪದ ಬೈಗುಳವನ್ನು ಕೇಳಿಸಿಕೊಂಡು ಹಾಗೇ ನಿಂತ. ಆ ಮನೆಯ ಒಡತಿ ಮನೆ ಒಳಗೆ ಹೋಗಿ ಭಿಕ್ಷೆ ತಂದು ತುಂಭಾ ಅಸಡ್ಡೆ ಕೋಪದಿಂದ

"ತಕೋ..ಹಾಳಾಗಿ ಹೋಗು...ಮತ್ತೆ ಬರಬೇಡ"- ಎಂದು ಭಿಕ್ಷೆ ನೀಡಲು ಹೋದಳಂತೆ. ಬುದ್ಧ ಗಂಭೀರವಾಗಿ-

"ಅಮ್ಮ ನಿನ್ನ ಭಿಕ್ಷೆಬೇಡ ಅದನ್ನು ನೀನೆ ವಾಪಸ್ಸು ತೆಗೆದುಕೋ..." ಎಂದು ಮುಂದೆ ಸಾಗಿದ.

'ಅಂತೆಯೇ ಇದುವರೆಗೆ ಕೋಪದಿಂದ ಆಡಿದ ಬೈಗುಳಗಳನ್ನು ನಿನಗೆ ವಾಪಸ್ಸು ಕೊಟ್ಟಿದ್ದೇನೆ ತೆಗೆದುಕೋ'- ಎಂದು ಮುಂದೆ ಸಾಗಿದ.

ಭಿಕ್ಷುಕನ ಮಾತುಗಳ ಅರ್ಥವನ್ನು ತಿಳಿದುಕೊಂಡ ಅವಳಲ್ಲಿ ಒಂದು ಬಗೆಯ ಅರಿವು ಮೂಡಿತು. ನಾನು ಭಿಕ್ಷುನ ಜೊತೆ ನಡೆದುಕೊಂಡ ರೀತಿ ತಪ್ಪು ಅನಿಸಿತು. ತಕ್ಷಣ ಭಿಕ್ಷುಕನ ಬಳಿ ಹೋಗಿ ಕ್ಷಮೆ ಕೇಳಿಕೊಂಡಳು. ಭಿಕ್ಷುಕ ಬುದ್ಧನೆಂದು ತಿಳಿದಾಗ ಆಕೆ ತಕ್ಷಣ ಬುದ್ಧನ ಕಾಲಿಗೆ ನಮಸ್ಕಾರ ಮಾಡಿ ಬುದ್ಧನ ಮಾರ್ಗದಲ್ಲಿ ನಡೆಯಲಾರಂಭಿಸಿದಳು. ಬುದ್ಧನ ತತ್ವಗಳಲ್ಲಿ ಬೆಳಕು ಕಂಡಳಂತೆ.

ಸಂಗ್ರಹ : ಡಾ|| ಬಾನಂದೂರು ಕೆಂಪಯ್ಯ

9) ಅತ್ಯಲ್ಪ ಪ್ರಮಾಣದ ಸೇವನೆಯಿಂದ ಶೀಲವನ್ನು ಮುರಿದಂತಾಗುತ್ತದೆಯೇ? ಅದು ಸಣ್ಣ ವಿಷಯವಲ್ಲವೇ?

ನಿಜ, ಇದು ಸಣ್ಣ ವಿಷಯವೇ. ಇಂಥ ಸಣ್ಣ ಅವಿವೇಕವನ್ನೂ ನೀವು ತಿದ್ದಿಕೊಳ್ಳುವುದಕ್ಕೆ ಸಾಧ್ಯವಿಲ್ಲವಾದರೆ, ನಿಮ್ಮ ಬದ್ಧತೆಯಾಗಲೀ ನಿರ್ಧಾರವಾಗಲೀ ಗಟ್ಟಿ ಇಲ್ಲ ಎಂದಾಂತಾಯಿತು, ಅಲ್ಲವೇ?

10) ಪಂಚಶೀಲಗಳು ಅಕ್ರಿಯ ಪರಿಕಲ್ಪನೆಗಳು. ಏನು ಮಾಡಬಾರದೆಂಬುದನ್ನು ಅವು ಬೋಧಿಸುತ್ತವೆಯೇ ಹೊರತು ಏನು ಮಾಡಬೇಕು ಎಂಬುದನ್ನಲ್ಲ.

ಪಂಚಶೀಲಗಳು ಬೌದ್ಧ ನೈತಿಕತೆಯ ಆಧಾರ ಸ್ತಂಭಗಳು. ಆದರೆ ಅಷ್ಟೇ ಅಲ್ಲ. ನಮ್ಮ ಕೆಟ್ಟ ನಡತೆಯನ್ನು ಗುರುತಿಸಿಕೊಂಡು ಅದನ್ನು ನಿಲ್ಲಿಸಲು ಹೆಣಗುತ್ತೇವೆ. ಅದಕ್ಕಾಗಿಯೇ ಪಂಚಶೀಲಗಳಿರುವುದು. ಕೆಟ್ಟದಾಗಿ ನಡೆದುಕೊಳ್ಳುವುದನ್ನು ನಿಲ್ಲಿಸಿದ ಮೇಲೆ, ಒಳ್ಳೆಯದನ್ನು ಮಾಡಲು ಪ್ರಾರಂಭಿಸುತ್ತೇವೆ. ಉದಾಹರಣೆ ಕೊಡುವುದಾದರೆ, ಮಾತನ್ನು ತೆಗೆದುಕೊಳ್ಳಿ. ಸುಳ್ಳು ಹೇಳುವುದನ್ನು ತಡೆದುಕೊಳ್ಳುವುದರಿಂದ ಆರಂಭಿಸಬೇಕೆಂದು ಬುದ್ಧ ಹೇಳುತ್ತಾನೆ. ಆಮೇಲೆ ನಾವು ಸತ್ಯ ಹೇಳಲು, ಮೆಲುವಾಗಿಯೂ ಸೌಜನ್ಯದಿಂದಲೂ ಮಾತನಾಡಲು, ಸೂಕ್ತ ಸಮಯದಲ್ಲಿ ಮಾತನಾಡಲು ತೊಡಗಬೇಕು. ಅವನು ಹೇಳುವುದೇನೆಂದರೆ:

ಸುಳ್ಳು ಹೇಳುವುದನ್ನು ನಿಲ್ಲಿಸಿದವನು ಸತ್ಯವನ್ನು ನಡಿಯುವವನಾಗುತ್ತಾನೆ, ನಂಬಿಕೆಗೆ ಅರ್ಹನಾಗುತ್ತಾನೆ, ವಿಶ್ವಾಸಾರ್ಹನಾಗುತ್ತಾನೆ, ನೆಚ್ಚಿಕೆಗೆ ಪಾತ್ರನಾಗುತ್ತಾನೆ; ಅವನು ಪ್ರಪಂಚಕ್ಕೆ ಮೋಸ ಮಾಡಲಾರ. ಚಾಡಿ ಮಾತಾಡುವುದನ್ನು ನಿಲ್ಲಿಸಿದವನು ಅಲ್ಲಿ ಕೇಳಿದ್ದನ್ನು ಇಲ್ಲಿ ಹೇಳಿ ಮತ್ತು ಇಲ್ಲಿ ಕೇಳಿದ್ದನ್ನು ಅಲ್ಲಿ ಹೇಳಿ ಜನರ ಮಧ್ಯೆ ವಿರಸವನ್ನು ಉಂಟುಮಾಡಲಾರ. ಬದಲು, ಅವನು ವಿಮುಖಗೊಂಡವರನ್ನು ಒಗ್ಗೂಡಿಸಲು ಪ್ರಯತ್ನಿಸುತ್ತಾನೆ, ಈಗಾಗಲೇ ಗೆಳೆಯರಾಗಿರುವವರನ್ನು ಇನ್ನೂ ಹತ್ತಿರ ಬರುವಂತೆ ಮಾಡುತ್ತಾನೆ. ಸಾಮರಸ್ಯವೇ ಅವನಿಗೆ ಸಂತಸಕರ, ಸಾಮರಸ್ಯವೇ ಅವನ ಆನಂದ, ಸಾಮರಸ್ಯವೇ ಅವನ ಪ್ರೀತಿ; ಅದೇ ಅವನ ಮಾತಿಗೆ ಪ್ರೇರಕವಾಗುತ್ತದೆ. ಗಡಸುತನವನ್ನು ಬಿಡುವುದರಿಂದ ಅವನ ಮಾತು ಬೈಗುಳದಿಂದ ದೂರವಾಗುತ್ತದೆ,ಕೇಳಲು ಹಿತಕರವಾಗುತ್ತದೆ, ಆಹ್ಲಾದಕರವಾಗುತ್ತದೆ, ನೇರವಾಗಿ ಹೃದಯವನ್ನು ತಲುಪುತ್ತದೆ, ವ್ಯಕ್ತಿಯನ್ನು ಮೃದುಗೊಳಿಸುತ್ತದೆ, ಅವನು ಬಹುಜನರಿಗೆ ಇಷ್ಟವಾಗುತ್ತಾನೆ. ಕಾಡು ಹರಟೆಯನ್ನು ಬಿಟ್ಟು ಅವನು ಸೂಕ್ತ ಸಮಯದಲ್ಲಿ ಮಾತಾಡುತ್ತಾನೆ, ಸರಿಯಾದುದನ್ನು ಹಾಗೂ ವಿಷಯಕ್ಕೆ ಸಂಬಂಧ ಪಟ್ಟದನ್ನು ಧಮ್ಮ ಮತ್ತು ಶಿಸ್ತನ್ನು ಕುರಿತು ಮಾತಾಡುತ್ತಾನೆ. ಅವನ ಮಾತುಗಳು ಅಣಿಮುತ್ತುಗಳಾಗುತ್ತವೆ, ಸಂದರ್ಭೋಚಿತವಾಗುತ್ತವೆ, ಸಕಾರಣವಾಗಿರುತ್ತವೆ ಖಚಿತವಾಗಿರುತ್ತವೆ ಮತ್ತು ವಿಷಯಕ್ಕೆ ಅನುಗುಣವಾಗಿರುತ್ತವೆ.

(ಮುಂದುವರಿಯುವುದು)

ಪುಸ್ತಕ ಬೇಕಾದಲ್ಲಿ
ಬುದ್ಧಜ್ಯೋತಿ ಪ್ರಕಾಶನ
ನೆರೆಗ್ಯಾತನಹಳ್ಳಿ, ಟಿ. ನರಸೀಪುರ ತಾಲೂಕು
ಮೈಸೂರು ಜಿಲ್ಲೆ
ಇವರಿಗೆ ಬರೆದು ತರಿಸಿಕೊಳ್ಳಬಹುದು
ಬೆಲೆ ರೂ. 30/-

'SAMVADA' Kannada Monthly, OCTOBER - 2003 RNI-KAR KAN/2002/9246 CPMG/KA/BGW-706/2003-0



ಸಂವಾದ

ವಾರ್ಷಿಕ ವಿಶೇಷಾಂಕ

ಸಹೃದಯರೆ,

ನಿಮ್ಮೆಲ್ಲರ ಪ್ರೀತಿ-ಅಭಿಮಾನ ಮತ್ತು ಸಹಕಾರದಿಂದಾಗಿ ತನ್ನೆಲ್ಲಾ ಅಡೆ-ತಡೆಗಳನ್ನು ಮೀರಿಯೂ ತಪ್ಪದೇ ತಮ್ಮ ಜತೆ ಸಂವಾದಿಸುತ್ತಿರುವ 'ಸಂವಾದ' ಮಾಸ ಪತ್ರಿಕೆಗೆ ಇದೀಗ ಒಂದು ವರ್ಷ (ನವೆಂಬರ್ 2003) ಸಮೀಪಿಸುತ್ತಿದ್ದು,ಅದರ ನೆನಪಿನಲ್ಲಿ 'ಸಂವಾದ ವಿಶೇಷಾಂಕ'ವೊಂದನ್ನು ಹೊರತರಲು ತೀರ್ಮಾನಿಸಿರುತ್ತೇವೆ.

ಬದಲಾಗುತ್ತಿರುವ ಸಾಮಾಜಿಕ ಮೌಲ್ಯಗಳು, ಮರೆಯಾಗುತ್ತಿರುವ ಜೀವನಕ್ರಮಗಳು, ತಲ್ಲಣಗೊಳ್ಳುತ್ತಿರುವ ಸಿದ್ಧಾಂತಗಳು, ಖಾಸಗೀಕರಣಗೊಂಡು ವ್ಯಕ್ತಿಸ್ವಾಮ್ಯಕ್ಕೆ ಒಳಪಡುತ್ತಿರುವ ಉದ್ಯಮಗಳು, ಅನುಕೂಲಸಿಂಧುಗಳಾಗುತ್ತಿರುವ ದಲಿತರು ಮತ್ತು ಶೂದ್ರರ ಮನಸ್ಸಿನಲ್ಲಿ ನಡೆಯುತ್ತಿರುವ ಚೌಕಾಸಿಗಳು, ಬಿಕ್ಕಟ್ಟಿಗೆ ಒಳಗಾಗುತ್ತಿರುವ ಬಹುರೂಪಿ ಸಂಸ್ಕೃತಿಯ ಜತೆಗೆ ಈ ನಾಡಿನ ಕೃಷಿ ಕಾರ್ಮಿಕರು, ವಿದ್ಯಾರ್ಥಿ ಯುವ ಜನರು, ಮಹಿಳೆಯರು, ಸಂಘ-ಸಂಸ್ಥೆಗಳು ಹಾಗೂ ಉದ್ಯೋಗಸ್ಥರು ಎದುರಿಸುತ್ತಿರುವ ಹೊಸ ಪರಿಕಲ್ಪನೆಗಳ ಸವಾಲುಗಳನ್ನು ಕುರಿತ ಲೇಖನಗಳನ್ನು 'ಸಂವಾದ ವಿಶೇಷಾಂಕ'ದಲ್ಲಿ ಪ್ರಕಟಿಸಲು ಯೋಜಿಸಲಾಗಿದೆ.

ಇಂಥ ಗಂಭೀರ ವಿಚಾರಗಳನ್ನೊಳಗೊಂಡ ವಿಶ್ಲೇಷಣಾತ್ಮಕ ಲೇಖನಗಳಲ್ಲದೆ ಕಥೆ, ಕವನ, ವಿಡಂಬನೆ, ವ್ಯಕ್ತಿ ಚಿತ್ರ, ಛಾಯಾಚಿತ್ರಗಳ ನುಡಿಬರಹ ಮುಂತಾದ ಲೇಖನಗಳನ್ನು ಬರೆದು ಕಳುಹಿಸಿಕೊಡುವುದರ ಮೂಲಕ 'ಸಂವಾದದ ವಿಶೇಷಾಂಕ' ಸುಂದರವಾಗಿ ಮೂಡಿಬರಲು ಸಹಕರಿಸಬೇಕೆಂದು ಕೋರುತ್ತೇವೆ.

ನಿಮ್ಮ ಲೇಖನಗಳು ನಮಗೆ ತಲುಪಲು ಕೊನೆಯ ದಿನಾಂಕ : 15 -11-2003

ವಿಳಾಸ : ಸಂಪಾದಕರು, ಸಂವಾದ ಮಾಸಪತ್ರಿಕೆ,
ಸ್ಫೂರ್ತಿಧಾಮ, ಅಂಜನಾನಗರ,
ವಿಶ್ವನೀಡಂ ಅಂಚೆ, ಬೆಂಗಳೂರು-*560 091*

* * * * *